ಬುಧವಾರ, ಆಗಸ್ಟ್ 20, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 231 | ಪುಟ 16

prajavani.net prajavani www.prajavani.net



ಎತ್ತರದ ರಾಕೆಟ್
75,000 ಕೆ.ಜಿ. ಪೇ ಲೋಡ್ ಹೊತ್ತೊಯ್ಯುವ ಸಾಮರ್ಥ್ಯದ, 40 ಅಂತಸ್ತಿನ ಕಟ್ಟಡದಷ್ಟು ಎತ್ತರದ ರಾಕೆಟ್ ಅನ್ನು ಇಸ್ರೊ ನಿರ್ಮಿಸುತ್ತಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ತಿಳಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಗಿಲ್ ಉಪನಾಯಕ
ಶುಭಮನ್ ಗಿಲ್ ಅವರನ್ನು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಗೆ ಭಾರತ ತಂಡದ ಉಪನಾಯಕರನ್ನಾಗಿ ನೇಮಕ ಮಾಡಲಾಗಿದೆ. ಸೂರ್ಯಕುಮಾರ್ ಯಾದವ್ ತಂಡವನ್ನು ಮುನ್ನಡೆಸಲಿದ್ದಾರೆ

ಸೆನ್ಸೆಕ್ಸ್ 81,644 | ನಿಫ್ಟಿ 24,980 | $/₹ 87.13 | ಚಿನ್ನ (Std. 10g) ₹1,04,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,20,600 (ಬೆಂಗಳೂರು)

ಎಡಗೈಗೂ 6 ಬಲಗೈಗೂ 6

ಒಳ ಮೀಸಲು: ಸಚಿವ ಸಂಪುಟ ಸಭೆಯಲ್ಲಿ ಹೊಸ ಸೂತ್ರಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯೊಳಗೆ ಒಳಮೀಸಲಾತಿ ಕಲ್ಪಿಸಬೇಕು ಎಂಬ ಬಹುವರ್ಷಗಳ ಆಗ್ರಹಗಳಿಗೆ ಮನ್ನಣೆ ನೀಡಿರುವ ರಾಜ್ಯ ಸರ್ಕಾರ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗ ಸಲ್ಲಿಸಿರುವ ವರದಿಯಲ್ಲಿರುವ ಜಾತಿವಾರು ವರ್ಗೀಕರಣವನ್ನು ತುಸು ಪರಿಷ್ಕರಿಸಿ ಜಾರಿ ಮಾಡುವ ಮಹತ್ವದ ತೀರ್ಮಾನ ಕೈಗೊಂಡಿದೆ.

ಮಂಗಳವಾರ ತಡರಾತ್ರಿಯ ವರೆಗೆ ನಡೆದ ಸಚಿವ ಸಂಪುಟದ ವಿಶೇಷ ಸಭೆಯಲ್ಲಿ ಒಳಮೀಸಲಾತಿ ಜಾರಿ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ.

101 ಪರಿಶಿಷ್ಟ ಜಾತಿಗಳನ್ನು ಮೂರು ಗುಂಪುಗಳಾಗಿ ಅಂದರೆ ಎಡಗೈ, ಬಲಗೈ ಮತ್ತು ಸ್ಪೃಶ್ಯ ಎಂದು ವರ್ಗೀಕರಿಸಲು ಸಚಿವ ಸಂಪುಟದಲ್ಲಿ ನಿರ್ಣಯ ತೆಗೆದು-ಕೊಳ್ಳಲಾಗಿದೆ. ಪರಿಶಿಷ್ಟ ಜಾತಿಯವರಿಗೆ ಶೇ 17ರಷ್ಟಿರುವ ಮೀಸಲಾತಿಯನ್ನು ಎಡಗೈ, ಬಲಗೈ ಸಂಬಂಧಿತ ಜಾತಿಗಳ ಗುಂಪಿಗೆ ತಲಾ ಶೇ 6, ಕೊರಚ, ಕೊರಮ, ಭೋವಿ, ಲಂಬಾಣಿ ಜಾತಿಗಳನ್ನು ಒಳಗೊಂಡ ಸ್ಪೃಶ್ಯ' ಗುಂಪುಗಳಿಗೆ ಶೇ 5 ಮೀಸಲಾತಿ ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ಗೊತ್ತಾಗಿದೆ.

ಪರಿಶಿಷ್ಟ ಜಾತಿಯಲ್ಲಿ 101 ಮೂಲ

> **ಪರಿಶಿಷ್ಟ ಜಾತಿಯ ನೂರೊಂದು ಜಾತಿಗಳಿಗೂ ಸಾಮಾಜಿಕ ನ್ಯಾಯ ಸಿಕ್ಕಿದ್ದು, ಯಾವ ಜಾತಿಗೂ ಅನ್ಯಾಯವಾಗದ ರೀತಿಯಲ್ಲಿ ತೀರ್ಮಾನವಾಗಿದೆ. ಇದರ ವಿವರವನ್ನು ಮುಖ್ಯಮಂತ್ರಿ ಪ್ರಕಟಿಸಲಿದ್ದಾರೆ**
> **ಕೆ.ಎಚ್. ಮುನಿಯಪ್ಪ,** ಆಹಾರ ಸಚಿವ

> **ಸಚಿವ ಸಂಪುಟ ಸಭೆಯಲ್ಲಿ ಎಲ್ಲರೂ ಒಪ್ಪುವಂತಹ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಈ ಬಗ್ಗೆ ಸದನದಲ್ಲಿ ಹೇಳಿಕೆ ನೀಡಲಿದ್ದಾರೆ**
> **ಎಚ್.ಕೆ.ಪಾಟೀಲ,** ಕಾನೂನು ಸಚಿವ

ಜಾತಿಗಳನ್ನು ಆಯೋಗವು ಐದು ಗುಂಪುಗಳಾಗಿ ವರ್ಗೀಕರಿಸಿ, ಲಭ್ಯವಿರುವ ಶೇ 17 ಮೀಸಲಾತಿಯನ್ನು ಪ್ರವರ್ಗ 'ಎ'ಗೆ ಶೇ 1 (ಒಟ್ಟು 59 ಜಾತಿಗಳು), ಪ್ರವರ್ಗ 'ಬಿ'ಗೆ ಶೇ 6 (18 ಜಾತಿಗಳು), ಪ್ರವರ್ಗ 'ಸಿ'ಗೆ ಶೇ 5 (17 ಜಾತಿಗಳು), ಪ್ರವರ್ಗ 'ಡಿ'ಗೆ ಶೇ 4 (4 ಜಾತಿಗಳು), ಪ್ರವರ್ಗ 'ಇ'ಗೆ ಶೇ 1ರಂತೆ (3 ಜಾತಿಗಳು) ಹಂಚಿಕೆ ಮಾಡಿತ್ತು.

ಆಯೋಗದ ವರದಿಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆ ಸಿದ್ಧಪಡಿಸಿದ್ದ ಟಿಪ್ಪಣಿಯನ್ನು ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಅವರು ಸಚಿವ ಸಂಪುಟ ಸಭೆಯಲ್ಲಿ ವಿವರಿಸಿದರು ಎಂದು ಮೂಲಗಳು ತಿಳಿಸಿವೆ.

'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ನೀಡಲು ರಾಜ್ಯದಾದ್ಯಂತ ನಡೆದ ಸಮೀಕ್ಷೆಯ ದತ್ತಾಂಶಗಳ ಕುರಿತಂತೆ ಆಯೋಗದ ವರದಿಯ-ಲ್ಲಿರುವ ಅಂಶಗಳ ಪ್ರಾತ್ಯಕ್ಷಿಕೆ ನೀಡಿದ ಮಣಿವಣ್ಣನ್, ಎಲ್ಲರನ್ನೂ ಸಮನಾಗಿ ಕಾಣುವ ಸಾಮಾಜಿಕ ನ್ಯಾಯದ ವರದಿ ಬಂದಿದೆ ಎಂದು ಸಭೆಗೆ ಮಾಹಿತಿ ನೀಡಿದರು' ಎಂದು ಗೊತ್ತಾಗಿದೆ.

▶7

ಸಂಪುಟ ನಿರ್ಣಯ: ಯಾರಿಗೆಷ್ಟು?

ಪ್ರವರ್ಗ ಎ	ಪ್ರವರ್ಗ ಬಿ	ಪ್ರವರ್ಗ ಸಿ
ಬಲಗೈ ಜಾತಿಗಳು 6%	ಎಡಗೈ ಜಾತಿಗಳು 6%	ಸ್ಪೃಶ್ಯ ಅಲೆಮಾರಿ 5%

ಒಳಮೀಸಲು: 35 ವರ್ಷಗಳ ಸುದೀರ್ಘ ಹೋರಾಟ

ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅಧ್ಯಕ್ಷತೆಯ ಏಕಸದಸ್ಯ ವಿಚಾರಣಾ ಆಯೋಗದ ವರದಿಯಲ್ಲಿ ಶಿಫಾರಸು ಮಾಡಲಾಗಿರುವ ಒಳಮೀಸಲಾತಿ ಹಂಚಿಕೆಯನ್ನು ಎಡಗೈ ಜಾತಿ ಸಮುದಾಯಗಳು ಸ್ವಾಗತಿಸಿದ್ದರೆ, ಬಲಗೈ ಜಾತಿ ಸಮುದಾಯಗಳು ವಿರೋಧ ವ್ಯಕ್ತಪಡಿಸಿದ್ದವು.

ಮಾದಿಗ ಮತ್ತು ಮಾದಿಗ ಸಂಬಂಧಿ ಎಡಗೈ ಜಾತಿ ಸಮುದಾಯಗಳು ಒಳಮೀಸಲಾತಿಗಾಗಿ ಆಗ್ರಹಿಸಿ 35 ವರ್ಷಗಳ ಸುದೀರ್ಘ ಹೋರಾಟ ನಡೆಸಿದ್ದವು. ಒಳಮೀಸಲಾತಿಗಾಗಿ ನಡೆಸಲಾದ ಸಮೀಕ್ಷೆಯ ವೇಳೆ ಈ ಸಮುದಾಯಗಳ ಜನರು ಸರಿಯಾದ ವಿವರ ನೀಡುವಂತೆ ಜಾಗೃತಿ ಸಭೆಗಳನ್ನು ನಡೆಸಿದ್ದವು. ಸರ್ಕಾರಕ್ಕೆ ವರದಿ ಸಲ್ಲಿಕೆಯಾದ ನಂತರ, ಅದರಲ್ಲಿನ ಶಿಫಾರಸುಗಳ ಯಥಾವತ್ ಜಾರಿಗೆ ಒತ್ತಾಯಿಸಿ-ದ್ದವು.

ಇನ್ನೊಂದೆಡೆ ಬಲಗೈ ಜಾತಿ ಸಮುದಾಯಗಳು, ವರದಿ ಸಲ್ಲಿಕೆಯಾದ ನಂತರ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದವು. ತಮ್ಮ ಜಾತಿ ಸಮುದಾಯಗಳ ಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ, ದತ್ತಾಂಶಗಳನ್ನು ಸರಿಯಾಗಿ ಕಲೆ ಹಾಕಿಲ್ಲ. ಹೀಗಾಗಿ ವರದಿಯನ್ನು ಪರಿಷ್ಕರಿಸಬೇಕು ಎಂದು ಒತ್ತಾಯಿಸಿದ್ದವು.

ಗಣಿ ನಷ್ಟ: ಉಪಸಮಿತಿ ವರದಿಗೆ ಒಪ್ಪಿಗೆ

ಅಕ್ರಮ ಗಣಿಗಾರಿಕೆಯಿಂದ ಬೊಕ್ಕಸಕ್ಕೆ ಉಂಟಾಗಿರುವ ಕೋಟ್ಯಂತರ ರೂಪಾಯಿ ಆರ್ಥಿಕ ನಷ್ಟವನ್ನು ವಸೂಲಿ ಮಾಡಲು ರಾಜ್ಯವ್ಯಾಪಿ ಒಂದೇ ವಸೂಲಾತಿ ಪ್ರಾಧಿಕಾರ ರಚಿಸಬೇಕು, ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ತ್ವರಿತ ನ್ಯಾಯಾಲಯ ಸ್ಥಾಪಿಸಬೇಕು ಎನ್ನುವುದೂ ಸೇರಿ ಒಟ್ಟು 12 ಶಿಫಾರಸುಗಳ ಒಳಗೊಂಡ ಸಂಪುಟ ಉಪ ಸಮಿತಿ ಸಲ್ಲಿಸಿರುವ ವರದಿಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಅಕ್ರಮ ಗಣಿಗಾರಿಕೆಯಿಂದ ಬೊಕ್ಕಸಕ್ಕೆ ಉಂಟಾಗಿರುವ ಕೋಟ್ಯಂತರ ರೂಪಾಯಿ ಆರ್ಥಿಕ ನಷ್ಟವನ್ನು ವಸೂಲಿ ಮಾಡುವ ಸಂಬಂಧ ಉಪಸಮಿತಿ ರಚಿಸಲಾಗಿತ್ತು. ಸಮಿತಿಯು ಮೂರು ಸಭೆಗಳನ್ನು ನಡೆಸಿ 35 ಪುಟಗಳ ವರದಿಯನ್ನು ಸಲ್ಲಿಸಿತ್ತು.

ಜೋಗದ ಸಿರಿ..

ಪ್ರಜಾವಾಣಿ ಚಿತ್ರ: ರಂಜನ್ ಘನಾತೆ



ಶಿವಮೊಗ್ಗ ಜಿಲ್ಲೆ ಕಾರ್ಗಲ್ ಬಳಿಯಿರುವ ಲಿಂಗನಮಕ್ಕಿ ಜಲಾಶಯದಿಂದ ಮಂಗಳವಾರ ಶರಾವತಿ ನದಿಗೆ 20,000 ಕ್ಯೂಸೆಕ್ ನೀರು ಹರಿಸಲಾಗಿದೆ. ಜೋಗ ಜಲಪಾತದ ವೈಭವ ಕಳೆಗಟ್ಟಿದ್ದು, ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ

ಪ್ರಧಾನಿ, ಸಿಎಂ ಪದಚ್ಯುತಿಗೆ ಅವಕಾಶ

ಸಂವಿಧಾನ ತಿದ್ದುಪಡಿಯ 3 ಮಸೂದೆಗಳ ಮಂಡನೆ ಇಂದು

● ಶೆಮಿನ್ ಜಾಯ್

ನವದೆಹಲಿ: ಸತತವಾಗಿ 30 ದಿನ ಬಂಧನದಲ್ಲಿರುವ ಅಥವಾ ಕನಿಷ್ಠ ಐದು ವರ್ಷಗಳ ಜೈಲು ಶಿಕ್ಷೆಗೊಳಗಾಗುವ ಪ್ರಧಾನಿ, ಮುಖ್ಯಮಂತ್ರಿ, ಕೇಂದ್ರ ಹಾಗೂ ರಾಜ್ಯಗಳ ಸಚಿವರನ್ನು ಹುದ್ದೆಯಿಂದ ಪದಚ್ಯುತಗೊಳಿಸಲು ಅವಕಾಶ ಕಲ್ಪಿಸುವ ಮೂರು ಸಂವಿಧಾನ ತಿದ್ದುಪಡಿ ಮಸೂದೆಗಳನ್ನು ಲೋಕಸಭೆಯಲ್ಲಿ ಬುಧವಾರ ಮಂಡಿಸಲಾಗುತ್ತದೆ.

ಮಸೂದೆಯ ಪ್ರಕಾರ, 30 ದಿನ ನಿರಂತರ ಬಂಧನದಲ್ಲಿ ಇದ್ದವರನ್ನು 31ನೇ ದಿನ ಪದಚ್ಯುತಗೊಳಿಸಲು ಅವಕಾಶ ಕಲ್ಪಿಸಲಾಗುತ್ತದೆ. ಆದರೆ, ಬಂಧನದಿಂದ ಬಿಡುಗಡೆ ಆದವರನ್ನು ಪ್ರಧಾನಮಂತ್ರಿ, ಮುಖ್ಯಮಂತ್ರಿ ಅಥವಾ ಸಚಿವರನ್ನಾಗಿ ನೇಮಿಸಲು ನಿರ್ಬಂಧ ಇರುವುದಿಲ್ಲ.

ಸಂವಿಧಾನ (130ನೇ ತಿದ್ದುಪಡಿ) ಮಸೂದೆ 2025, ಕೇಂದ್ರಾಡಳಿತ ಸರ್ಕಾರ (ತಿದ್ದುಪಡಿ) ಮಸೂದೆ ಮತ್ತು ಜಮ್ಮು ಮತ್ತು ಕಾಶ್ಮೀರ ಪುನರ್‌ರಚನೆ (ತಿದ್ದುಪಡಿ) ಮಸೂದೆ– 2025 ಅನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಮಂಡಿಸಲಿದ್ದಾರೆ. ಈ ಮೂರೂ ಮಸೂದೆಗಳನ್ನು ಹೆಚ್ಚಿನ ಪರಿಶೀಲನೆಗಾಗಿ ಸಂಸತ್ತಿನ ಜಂಟಿ ಸಮಿತಿಗೆ ಒಪ್ಪಿಸುವ ಗೊತ್ತುವಳಿಯನ್ನೂ ಶಾ ಅವರು ಮಂಡಿಸಲಿದ್ದಾರೆ.

ಅಪರಾಧ ಚಟುವಟಿಕೆಯಲ್ಲಿ ಭಾಗಿಯಾದ ಆರೋಪದ ಮೇಲೆ ಪ್ರಧಾನಿ, ಮುಖ್ಯಮಂತ್ರಿ, ಕೇಂದ್ರ ಅಥವಾ ರಾಜ್ಯಗಳ ಸಚಿವರನ್ನು ಬಂಧಿಸಿ, ನ್ಯಾಯಾಂಗ ಬಂಧನದಲ್ಲಿ ಇರಿಸಿದಾಗ ಅಂಥವರನ್ನು ಹುದ್ದೆಗಳಿಂದ ಪದಚ್ಯುತಗೊಳಿಸುವ ಪ್ರಕ್ರಿಯೆಗೆ ಕಾನೂನು ಚೌಕಟ್ಟು ವಿಧಿಸಲು ಈ ಮಸೂದೆಗಳನ್ನು ರೂಪಿಸಲಾಗಿದೆ ಎಂದು ಕಾರಣಗಳು ಮತ್ತು ಉದ್ದೇಶಗಳಲ್ಲಿ ತಿಳಿಸಲಾಗಿದೆ.

▶13

ರಾಜ್ಯಪಾಲರಿಗೆ ಅಧಿಕಾರ

ರಾಜ್ಯಗಳಲ್ಲಿ ರಾಜ್ಯಪಾಲರು ಪದಚ್ಯುತಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ. ದೆಹಲಿ ಮತ್ತು ಇತರ ಕೇಂದ್ರಾಡಳಿತ ಪ್ರದೇಶಗಳಿಗೆ ಸಂಬಂಧಿಸಿದಂತೆ ರಾಷ್ಟ್ರಪತಿಯವರು ಹಾಗೂ ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದಂತೆ ಅಲ್ಲಿನ ಲೆಫ್ಟಿನೆಂಟ್ ಗವರ್ನರ್ ಅವರು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ ಎಂಬ ಉಲ್ಲೇಖ ಮಸೂದೆಯಲ್ಲಿದೆ.

ದೆಹಲಿ ಮುಖ್ಯಮಂತ್ರಿಯಾಗಿದ್ದ ಅರವಿಂದ ಕೇಜ್ರಿವಾಲ್, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತು ತಮಿಳುನಾಡಿನ ಸಚಿವ ವಿ. ಸೆಂಥಿಲ್ ಬಾಲಾಜಿ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿತ್ತು. ನ್ಯಾಯಾಂಗ ಬಂಧನದಲ್ಲಿದ್ದರೂ ಅವರು ಹುದ್ದೆಯಲ್ಲಿ ಮುಂದುವರಿದಿದ್ದರು. ಅಂತಹ ಪ್ರಕರಣಗಳಲ್ಲಿ ಪದಚ್ಯುತಗೊಳಿಸುವುದಕ್ಕಾಗಿಯೇ ಈ ತಿದ್ದುಪಡಿ ಪ್ರಸ್ತಾವಗಳನ್ನು ಮಂಡಿಸಲಾಗುತ್ತಿದೆ.

ನ್ಯಾ.ಸುದರ್ಶನ ರೆಡ್ಡಿ ವಿಪಕ್ಷ ಅಭ್ಯರ್ಥಿ



ನವದೆಹಲಿ: ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಸುದರ್ಶನ ರೆಡ್ಡಿ ಅವರು ಉಪರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಜಂಟಿ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ಮಂಗಳವಾರ ನಡೆದ 'ಇಂಡಿಯಾ' ಕೂಟದ ಸಭೆಯಲ್ಲಿ ರೆಡ್ಡಿ ಅವರನ್ನು ಕಣಕ್ಕಿಳಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಈ ನಡೆಯು ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿರುವ ಎನ್‌ಡಿಎ ವಿರುದ್ಧದ ಸೈದ್ಧಾಂತಿಕ ಯುದ್ಧ ಎಂದು ವಿಪಕ್ಷ ಮೈತ್ರಿಕೂಟ ಹೇಳಿಕೊಂಡಿದೆ. ಮುಂಬರುವ ತಮಿಳುನಾಡು ಚುನಾವಣೆ ಗಮನದಲ್ಲಿಟ್ಟುಕೊಂಡು ರಾಧಾಕೃಷ್ಣನ್ ಅವರನ್ನು ಬಿಜೆಪಿ ಅಭ್ಯರ್ಥಿಯನ್ನಾಗಿ ಮಾಡಿದೆ.

▶11

ಬಳಸದ ಭೂಮಿಗೂ ಬಾಡಿಗೆ: ಆಕ್ಷೇಪ

ಪಾವಗಡ ಸೋಲಾರ್ ಪಾರ್ಕ್: 1,897 ಎಕರೆ ನಿರುಪಯುಕ್ತ ಜಮೀನು

ಪ್ರಜಾವಾಣಿ ವಾರ್ತೆ

ನವದೆಹಲಿ: ತುಮಕೂರು ಜಿಲ್ಲೆಯ ಪಾವಗಡದ ಸೋಲಾರ್ ಪಾರ್ಕ್‌ನಲ್ಲಿ 1,897 ಎಕರೆ 'ನಿರುಪಯುಕ್ತ ಭೂಮಿ'ಗೂ ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮವು (ಕೆಎಸ್‌ಪಿಡಿಸಿಎಲ್) 2015-16ರಿಂದ ಬಾಡಿಗೆ ಪಾವತಿಸುತ್ತಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಆಕ್ಷೇಪ ವ್ಯಕ್ತಪಡಿಸಿದೆ.

ಸೋಲಾರ್ ಪಾರ್ಕ್‌ಗಳ ಕಾರ್ಯ-ನಿರ್ವಹಣೆ ಕುರಿತ ಸಿಎಜಿ ವರದಿಯನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ. ಅನುಪಯುಕ್ತ ಭೂಮಿಗೆ ಬಾಡಿಗೆ ನೀಡಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ಆಗಿರುವ ಭಾರಿ ನಷ್ಟದ ಕುರಿತು ವರದಿಯಲ್ಲಿ ವಿವರಿಸಲಾಗಿದೆ.

1,897 ಎಕರೆ ಭೂಮಿಯಲ್ಲಿ 1,531 ಎಕರೆಯನ್ನು ಯೋಜನೆ ಅಭಿವೃದ್ಧಿಪಡಿ-ಸುವವರಿಗೆ ಹಂಚಿಕೆಯನ್ನೇ ಮಾಡಿಲ್ಲ. ಈ ಭೂಮಿ ಸೌರಶಕ್ತಿ ಯೋಜನೆಗಳಿಗೆ ಸೂಕ್ತವಾಗಿಲ್ಲ ಎಂಬುದು ಕಾರಣ. ಆದರೂ, ಈ ಜಾಗಕ್ಕೆ ನಿಗಮವು ಪ್ರತಿ ವರ್ಷ ಬಾಡಿಗೆ ಪಾವತಿಸುತ್ತಿದೆ. ಅಷ್ಟೇ ಅಲ್ಲದೇ, ಗುತ್ತಿಗೆ ಅವಧಿಯನ್ನು 28 ವರ್ಷಗಳಿಗೆ ವಿಸ್ತರಿಸಲಾಗಿದೆ. ಪ್ರತಿ ಎರಡು ವರ್ಷಕ್ಕೊಮ್ಮೆ ಈ ಭೂಮಿಗೆ ಬಾಡಿಗೆ ಶೇ 5ರಷ್ಟು ಹೆಚ್ಚಲಿದೆ. ಯೋಜನೆಗೆ ಅಗತ್ಯವಿರುವ ಏಕರೂಪದ ಭೂಮಿ ಪಡೆಯುವುದು ಸವಾಲಿನ ಕೆಲಸ. ಆದರೆ, ವಿಸ್ತೃತ ಯೋಜನಾ ವರದಿ ತಯಾರಿಗೆ ಮುನ್ನ ವಿವರವಾದ ಸಮೀಕ್ಷೆ ನಡೆಸಿದ್ದರೆ ಈ ಲೋಪ ತಪ್ಪಿಸಬಹುದು ಎಂದು ಸಿಎಜಿ ವರದಿಯಲ್ಲಿ ಅಭಿಪ್ರಾಯ ಪಡಲಾಗಿದೆ.

ಅನಗತ್ಯ ಭೂಸ್ವಾಧೀನ ವೆಚ್ಚವು ಒಟ್ಟು ಯೋಜನಾ ವೆಚ್ಚ ಹೆಚ್ಚಳಕ್ಕೆ ಕಾರಣವಾಯಿತು. ಕೊನೆಗೆ, ಇದರ ಹೊರೆ ಗ್ರಾಹಕರಿಗೆ ವರ್ಗಾವಣೆ-ಯಾಯಿತು. ಸ್ವಲ್ಪ ಜಾಣ್ಮೆ ವಹಿಸಿದ್ದರೆ ನಿರುಪಯುಕ್ತ ಭೂಮಿಯ ಭೂಸ್ವಾಧೀನ ತಪ್ಪಿಸಬಹುದಿತ್ತು ಎಂದೂ ವರದಿಯಲ್ಲಿ ಹೇಳಲಾಗಿದೆ.

ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಯೋಜನೆ ಅಭಿವೃದ್ಧಿಪಡಿಸುವವರಿಗೆ ನಿಗಮವು 10,811 ಎಕರೆಯನ್ನು ಉಪಗುತ್ತಿಗೆ ನೀಡಿದೆ. 2015-16ರಿಂದ ಯೋಜನೆಯನ್ನು ಅಭಿವೃದ್ಧಿಪಡಿಸುವವರು ನಿಗಮಕ್ಕೆ ಭೂಗುತ್ತಿಗೆ ಶುಲ್ಕ ಪಾವತಿಸುತ್ತಿದ್ದಾರೆ.

ರಾಜ್ಯದ ಸಾಧನೆಗೆ ಮೆಚ್ಚುಗೆ: ಸೌರ ವಿದ್ಯುತ್ ಉತ್ಪಾದನೆಯಲ್ಲಿ ಇತರ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಸಾಧನೆ ಉತ್ತಮವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

▶7

ಅಂಕಿ ಅಂಶಗಳು

12,708 ಎಕರೆ 5 ಹಳ್ಳಿಗಳಲ್ಲಿ ಸೋಲಾರ್ ಪಾರ್ಕ್‌ಗಾಗಿ ಗುತ್ತಿಗೆ ಆಧಾರದಲ್ಲಿ ಸ್ವಾಧೀನ	**10,811** ಎಕರೆ ಉಪ ಗುತ್ತಿಗೆ ನೀಡಲಾದ ಜಮೀನು
₹21,000 ಪ್ರತಿ ಎಕರೆಗೆ ಭೂಮಾಲೀಕರಿಗೆ ವಾರ್ಷಿಕ ಬಾಡಿಗೆ	**₹3.22** ಕೋಟಿ ಬಳಕೆಯಾಗದ ಈ ಭೂಮಿಗೆ ಪ್ರತಿವರ್ಷ ಪಾವತಿಸುವ ಬಾಡಿಗೆಯ ಮೊತ್ತ

ತಿರುಪತಿಗೆ 121 ಕೆ.ಜಿ. ಚಿನ್ನ ಕಾಣಿಕೆ



ಅಮರಾವತಿ (ಪಿಟಿಐ): 121 ಕೆ.ಜಿ. ಚಿನ್ನವನ್ನು ತಿರುಪತಿ ವೆಂಕಟೇಶ್ವರ ಸ್ವಾಮಿಗೆ ದೇಣಿಗೆಯಾಗಿ ನೀಡಲು ಭಕ್ತರೊಬ್ಬರು ಮುಂದೆ ಬಂದಿದ್ದಾರೆ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಮಂಗಳವಾರ ತಿಳಿಸಿದ್ದಾರೆ.

ತಮ್ಮ ಉದ್ಯಮವು ಯಶಸ್ವಿಯಾಗಿ-ರುವ ಕಾರಣಕ್ಕೆ ದೇವರಿಗೆ ಕೃತಜ್ಞತೆ ಸಲ್ಲಿಸಲು ಸುಮಾರು ₹140 ಕೋಟಿ ಮೌಲ್ಯದ ಈ ಚಿನ್ನವನ್ನು ಅವರು ನೀಡಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಮಂಗಳಗಿರಿಯಲ್ಲಿ ನಡೆದ 'ಬಡತನ ನಿರ್ಮೂಲನೆ' ಕಾರ್ಯಕ್ರಮ ಪಿ4ನಲ್ಲಿ ಮಾತನಾಡಿದ ನಾಯ್ಡು, 'ಕಂಪನಿಯೊಂದನ್ನು ಸ್ಥಾಪಿಸಲು ಬಯಸಿದ್ದ ಭಕ್ತರೊಬ್ಬರು, ಅದನ್ನು ಪ್ರಾರಂಭಿಸಿ ಉದ್ಯಮದಲ್ಲಿ ಯಶಸ್ವಿಯಾದರು. ಹಾಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಲು ಈ ದೇಣಿಗೆ ನೀಡುತ್ತಿದ್ದಾರೆ' ಎಂದಿದ್ದಾರೆ.

ದೇಣಿಗೆ ನೀಡಲಿರುವ ಭಕ್ತ ಅನಾಮಧೇಯರಾಗಿ ಉಳಿಯಲು ಬಯಸಿದ್ದಾರೆ ಎಂದು ಹೇಳಿದ ಅವರು, 'ತಮ್ಮ ಕಂಪನಿಯ ಶೇ 60ರಷ್ಟು ಷೇರುಗಳನ್ನು ಮಾರಿ ಸುಮಾರು ₹6 ಸಾವಿರದಿಂದ ₹7 ಸಾವಿರ ಕೋಟಿ ಗಳಿಸಿದ್ದಾರೆ' ಎಂದೂ ಮಾಹಿತಿ ನೀಡಿದ್ದಾರೆ.

ಸರಣಿ ಕೊಲೆ ಆರೋಪ 'ಆಧಾರರಹಿತ': ಹೆಗ್ಗಡೆ

ಬೆಂಗಳೂರು (ಪಿಟಿಐ): ಸೌಜನ್ಯ ಕೊಲೆ ಪ್ರಕರಣ ಮತ್ತು ಎರಡು ದಶಕಗಳಲ್ಲಿ ಧರ್ಮಸ್ಥಳ ಗ್ರಾಮದಲ್ಲಿ ನಡೆದಿರುವ ಕೊಲೆ, ಅತ್ಯಾಚಾರ ಹಾಗೂ ಮೃತ-ದೇಹಗಳನ್ನು ಹೂತು ಹಾಕಿರುವ ಕುರಿತಾದ ಆರೋಪಗಳು 'ಆಧಾರರಹಿತ ಮತ್ತು ಸುಳ್ಳು' ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಹೇಳಿದ್ದಾರೆ.

ಆರೋಪಗಳ ಕುರಿತು ಎಸ್‌ಐಟಿ ತನಿಖೆಯನ್ನು ಸ್ವಾಗತಿಸಿರುವ ಅವರು, ಸತ್ಯ ಹೊರಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಹೆಗ್ಗಡೆ, 'ಇದೀಗ ಕೇಳಿಬಂದಿರುವ ಆರೋಪಗಳು ಆಧಾರರಹಿತ ಮತ್ತು ಸುಳ್ಳು. ಇಂತಹ ಆರೋಪಗಳಿಂದ ನನಗೆ ನೋವಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಈ ವಿಷಯಗಳನ್ನು ಬಿಂಬಿಸಿದ ರೀತಿ ನೈತಿಕವಾಗಿ ತಪ್ಪು' ಎಂದು ಹೇಳಿದರು.

ಗೃಹ ಸಚಿವ ಜಿ.ಪರಮೇಶ್ವರ ಅವರು 'ಎಸ್‌ಐಟಿ ತನಿಖೆಯಿಂದ ಸತ್ಯ ಹೊರಬರಲಿದೆ' ಎಂದು ವಿಧಾನಸಭೆ-ಯಲ್ಲಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ, 'ತನಿಖೆಗೆ ಎಸ್‌ಐಟಿ ರಚಿಸಿದ್ದನ್ನು ನಾವು ಅದೇ ದಿನ ಸ್ವಾಗತಿಸಿದ್ದೇವೆ. ಸರ್ಕಾರ ಎಸ್‌ಐಟಿ ರಚಿಸಿರುವುದು ಒಳ್ಳೆಯದು. ಏಕೆಂದರೆ ಸತ್ಯ ಹೊರಬರಬೇಕಿದೆ. ಈಗ ಕೇಳಿಬಂದಿರುವ ಆರೋಪಗಳು ಹಾಗೆಯೇ ಉಳಿಯುವುದು ಒಳ್ಳೆಯದಲ್ಲ' ಎಂದರು.

'ಎಸ್‌ಐಟಿ ತನಿಖೆ ಆದಷ್ಟು ಬೇಗ ಪೂರ್ಣಗೊಂಡು ವಿವಾದ ಬಗೆಹರಿಯಬೇಕೆಂದು ಬಯಸುತ್ತೇವೆ. ನಾವು ಎಲ್ಲವನ್ನೂ ಮುಕ್ತವಾಗಿ ಇಟ್ಟುಕೊಂಡಿದ್ದೇವೆ. ಎಸ್‌ಐಟಿ ಸಮಗ್ರ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು' ಎಂದರು.

▶6



> **ಧರ್ಮಸ್ಥಳ ಕ್ಷೇತ್ರ ಮತ್ತು ಟ್ರಸ್ಟ್ ಅನ್ನು ಗುರಿಯಾಗಿಸಿಕೊಂಡು ವಿವಿಧ ಆರೋಪ ಮಾಡುವ 'ವ್ಯವಸ್ಥಿತ ಪಿತೂರಿ' ಕಳೆದ 14 ವರ್ಷಗಳಿಂದಲೂ ನಡೆಯುತ್ತಿದೆ**
> **ವೀರೇಂದ್ರ ಹೆಗ್ಗಡೆ,** ಧರ್ಮಸ್ಥಳದ ಧರ್ಮಾಧಿಕಾರಿ

ಚಿನಕುರುಳಿ ಪ್ರಕಾಶ್ ಶೆಟ್ಟಿ



ವರಮಾನ ನಷ್ಟ ₹85 ಸಾವಿರ ಕೋಟಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿ ತರಲು ಉದ್ದೇಶಿಸಿರುವ ಸುಧಾರಣೆಗಳಿಂದಾಗಿ ಸರ್ಕಾರಗಳಿಗೆ ವಾರ್ಷಿಕ ₹85 ಸಾವಿರ ಕೋಟಿ ವರಮಾನ ನಷ್ಟ ಆಗಲಿದೆ ಎಂದು ಎಸ್‌ಬಿಐ ರಿಸರ್ಚ್ ಅಂದಾಜು ಮಾಡಿದೆ.

ಆದರೆ ಈ ಸುಧಾರಣೆಗಳ ಪರಿಣಾಮವಾಗಿ ಮಾರುಕಟ್ಟೆಯಲ್ಲಿ ₹1.98 ಲಕ್ಷ ಕೋಟಿ ಮೌಲ್ಯದ ಬೇಡಿಕೆಯು ಹೊಸದಾಗಿ ಸೃಷ್ಟಿ ಆಗಲಿದೆ ಎಂದು ಅದು ಅಂದಾಜಿನಲ್ಲಿ ಹೇಳಿದೆ. ಕೇಂದ್ರ ಸರ್ಕಾರವು ಪ್ರಸ್ತಾವ ಮಾಡಿರುವ 'ಹೊಸ ತಲೆಮಾರಿನ ಜಿಎಸ್‌ಟಿ' ವ್ಯವಸ್ಥೆಯು ಎರಡು ಹಂತಗಳ ತೆರಿಗೆಗಳನ್ನು ಮಾತ್ರ ಉಳಿಸಿಕೊಳ್ಳಲಿದೆ

▶12

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಇದೆ

ಚಿಟಿಕೆ ಸುದ್ದಿ

ಕೈಲಾಸ ಪಾಟೀಲ ಆಯ್ಕೆ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸಂಘಟನಾ ಕಾರ್ಯದರ್ಶಿಯಾಗಿ ಕಲಬುರಗಿಯ ಕೈಲಾಸ ಪಾಟೀಲ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಕೋಟಿ ಸದಸ್ಯತ್ವ ಅಭಿಯಾನವನ್ನು ಕಲ್ಯಾಣ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಹಮ್ಮಿಕೊಂಡಿದ್ದು, ಪರಿಷತ್ತಿನ ಕಾರ್ಯವ್ಯಾಪ್ತಿ ಹಿಗ್ಗಿಸುವ ದೃಷ್ಟಿಯಿಂದ ಈ ನಾಮನಿರ್ದೇಶನ ಮಾಡಲಾಗಿದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಚಂದ್ರಹಾಸ ರಮೇಶಗೆ ಬಿ.ಎಂ.ಶ್ರೀ. ಪ್ರತಿಷ್ಠಾನ ಪ್ರಶಸ್ತಿ



ರಮೇಶ



ಚಂದ್ರಹಾಸ ರೈ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 2025ನೇ ಸಾಲಿನ 'ಬೆ.ಸು.ನ. ಮಲ್ಯ ಪ್ರಶಸ್ತಿ'ಗೆ ಪತ್ರಕರ್ತ ರಮೇಶ ದೊಡ್ಡಪುರ ಮತ್ತು 'ಮಹಾಮಾನವ ಅಗೋಳಿ ಮಂಜಣ್ಣ ಪ್ರಶಸ್ತಿ'ಗೆ ಕ್ರೀಡಾಪಟು ಚಂದ್ರಹಾಸ ರೈ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ತಲಾ ₹5 ಸಾವಿರ ನಗದು ಒಳಗೊಂಡಿದೆ. ಇದೇ 31ರಂದು ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ನಡೆಯುವ ಸಮಾರಂಭದಲ್ಲಿ ಕೆ. ಮೋಹನ್‌ದೇವ್ ಆಳ್ವ ಪ್ರಶಸ್ತಿ ಪ್ರದಾನ ಮಾಡುವರು.

'ಐದು ವರ್ಷ ಹಳ್ಳಿಗಳ ಸೇರ್ಪಡೆ ಇಲ್ಲ'

ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ಮಸೂದೆಗೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಐದು ವರ್ಷದವರೆಗೆ ಹೊಸದಾಗಿ ಯಾವುದೇ ಹಳ್ಳಿಗಳನ್ನು ಸೇರ್ಪಡೆ ಮಾಡುವುದಿಲ್ಲ. ಚುನಾವಣೆ ನಡೆದು ಮೊದಲ ಚುನಾಯಿತ ಸದಸ್ಯರ ಅವಧಿ ಮುಗಿದ ನಂತರವೇ ಈ ಕುರಿತು ತೀರ್ಮಾನಿಸಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸಭೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ಮಸೂದೆ ಮಂಡಿಸಿ ಮಾತನಾಡಿದ ಅವರು, ಕಾಯ್ದೆಯಲ್ಲಿ ಬೆಂಗಳೂರು ವ್ಯಾಪ್ತಿಯ ನಗರ ಪಾಲಿಕೆಗಳ ಆಡಳಿತ ಅಧಿಕಾರದ ಕೆಲ ಅಂಶಗಳಿಗೆ ಸ್ಪಷ್ಟತೆ ಬೇಕಿದ್ದ ಕಾರಣ ಸಣ್ಣ ತಿದ್ದುಪಡಿ ತರಲಾಗಿದೆ ಎಂದರು.

'ಕಾಯ್ದೆ ಜಾರಿಯಾಗಿದ್ದರೂ ಕೆಲವರು ನ್ಯಾಯಾಲಯದಲ್ಲಿ ಅರ್ಜಿ ಹಾಕಿದ್ದರು. ಹೀಗಾಗಿ ಈ ಮಸೂದೆಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಸಂವಿಧಾನದ 74ನೇ ತಿದ್ದುಪಡಿ ಅಡಿಯಲ್ಲಿ ಬರುವ ಪಾಲಿಕೆಗಳ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಲಾಗಿದೆ' ಎಂದು ತಿಳಿಸಿದರು.

'ಪಾಲಿಕೆಗಳನ್ನು ಸರ್ಕಾರದ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗುತ್ತಿದೆ ಎಂದೂ ಆಕ್ಷೇಪ ವ್ಯಕ್ತಪಡಿಸಿದ್ದರು. ಹೀಗಾಗಿ ಈ ಅಂಶವನ್ನು ಪ್ರಸ್ತುತ ತಿದ್ದುಪಡಿ ವಿಧೇಯಕದಲ್ಲಿ ತೆಗೆದು ಹಾಕಲಾಗಿದೆ. ಪಾಲಿಕೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲಿವೆ. ಪಾಲಿಕೆಗಳ ಕಾರ್ಯಚಟುವಟಿಕೆಯಲ್ಲಿ ಜಿಬಿಜಿಎ ಹಸ್ತಕ್ಷೇಪ ಇಲ್ಲ ಎಂಬ ಸ್ಪಷ್ಟನೆ ನೀಡಲು ಈ ತಿದ್ದುಪಡಿ ತರಲಾಗಿದೆ' ಎಂದು ಬಿಜೆಪಿಯ ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರ ನೀಡಿದರು.

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಯಾಗುವ ಮೇಯರ್ ಹಾಗೂ ಪಾಲಿಕೆ ಸದಸ್ಯರಿಗೆ ಸಂಪೂರ್ಣ ಅಧಿಕಾರ ಇರಬೇಕು ಎಂಬುದು ನಮ್ಮ ಉದ್ದೇಶ. ಮುಂದೆ ನಾನು, ನೀವು ಅಧಿಕಾರದಲ್ಲಿ ಇರುತ್ತೇವೋ ಇರುವುದಿಲ್ಲವೋ ಗೊತ್ತಿಲ್ಲ. ಆದರೆ ಗೊಂದಲಗಳಿಗೆ ಅವಕಾಶ ನೀಡಬಾರದು ಎಂದು ಅದನ್ನು ತೆಗೆದುಹಾಕಿದ್ದೇವೆ' ಎಂದು ಬಿಜೆಪಿಯ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ ಅವರಿಗೆ ಶಿವಕುಮಾರ್ ಮಾಹಿತಿ ನೀಡಿದರು.


'ಕಾಂಗ್ರೆಸ್ ಪಕ್ಷವು ರಾಜೀವ್ ಗಾಂಧಿ ಅವರು ಸಂವಿಧಾನಕ್ಕೆ ತಂದಿರುವ 73, 74ನೇ ತಿದ್ದುಪಡಿಯನ್ನು ಯಾವುದೇ ಕಾರಣಕ್ಕೂ ಮುಟ್ಟಲು ಬಿಡುವುದಿಲ್ಲ. ನಗರ ಪಾಲಿಕೆಗಳ ಹಿತ ಕಾಪಾಡಲು ಕಾಯ್ದೆ ತರಲಾಗಿದೆ' ಎಂದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, 'ಗ್ರೇಟರ್ ಬೆಂಗಳೂರು ಎಂಬ ಆಂಗ್ಲ ಪದ ಬಳಕೆ ಮಾಡಲಾಗಿದೆ. ಸಭಾಧ್ಯಕ್ಷರ ಕನ್ನಡವೇ ಎಪ್ಪೋ ವಾಸಿ. ಡಿ.ಕೆ. ಶಿವಕುಮಾರ್ ಅವರು ಕನ್ನಡವನ್ನು ಮುಳುಗಿಸುತ್ತಿದ್ದಾರೆ' ಎಂದು ದೂಷಿಸಿದರು. 'ಮಹಾನ್ ಬೆಂಗಳೂರು' ಎಂದು ಹೆಸರು ಬದಲಿಸಲು ಬಿಜೆಪಿಯ ಎಸ್.ಸುರೇಶ್‌ಕುಮಾರ್ ಸಲಹೆ ನೀಡಿದರು.

'ನಮ್ಮ ವ್ಯಾಪ್ತಿಯ ಹಳ್ಳಿಗಳನ್ನು ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ (ಜಿಬಿಎ) ಸೇರಿಸಿಲ್ಲ ಎಂದು ಬಿಜೆಪಿಯ ಸತೀಶ್ ರೆಡ್ಡಿ ಕೇಳಿದರು. 'ಈಗ ಹಳ್ಳಿಗಳನ್ನು ಸೇರಿಸಿದರೆ ಪಂಚಾಯಿತಿ ಸದಸ್ಯ ಪಾಲಿಕೆ ಸದಸ್ಯನಾಗಬೇಕಾಗುತ್ತದೆ. ಇದಕ್ಕೆ ಮತ್ತೆ ಆಕ್ಷೇಪಣೆಗಳು ಬರುತ್ತವೆ. ಮೊದಲು ನಾವು ಈಗಿರುವ ಪಾಲಿಕೆ ವ್ಯಾಪ್ತಿಯಲ್ಲಿ ಚುನಾವಣೆ ನಡೆಸಿ, ನಂತರ ಚರ್ಚೆ ಮಾಡಿ ಯಾವ ಯಾವ ಪ್ರದೇಶಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿ ಸೇರಿಸಬೇಕು ಎಂದು ತೀರ್ಮಾನ ಮಾಡೋಣ' ಎಂದು ಶಿವಕುಮಾರ್ ಹೇಳಿದರು.

'ಬೆಂಗಳೂರು ಅಷ್ಟೇ ಅಲ್ಲ, ವಿಧಾನಸಭಾ ಕ್ಷೇತ್ರಗಳನ್ನೂ ವಿಭಜಿಸಿ, ಬೇರೆ ಬೇರೆ ನಗರ ಪಾಲಿಕೆಗಳಿಗೆ ಹಂಚಿಕೆ ಮಾಡಲಾಗಿದೆ. ಹಲವು ಲೋಪಗಳಿವೆ' ಎಂಬ ವಿರೋಧ ಪಕ್ಷಗಳ ಆರೋಪ, ವಿರೋಧದ ಮಧ್ಯೆ ಮಸೂದೆ ಅಂಗೀಕಾರವಾಯಿತು.

'ಮುನಿರತ್ನ, ನಿಮ್ಮನ್ನು ತಯಾರು ಮಾಡಿದ್ದು ನಾವೇ'



'ಬೆಂಗಳೂರಿನ ಭವಿಷ್ಯದ ವಿಚಾರದಲ್ಲಿ ರಾಜಕಾರಣ ಮಾಡಲು ಇಷ್ಟವಿಲ್ಲ. ತೆರಿಗೆ ಸಂಗ್ರಹಕ್ಕೆ ಅಧಿಕಾರ, ಆರ್ಥಿಕ ಸ್ವಾಯತ್ತತೆ, ಚುನಾವಣೆ, ಮೀಸಲಾತಿ ಸೇರಿದಂತೆ ಯಾವುದೇ ವಿಚಾರದಲ್ಲಿ ಪಾಲಿಕೆಗಳ ಅಧಿಕಾರದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ. ಸಂವಿಧಾನದ 74ನೇ ತಿದ್ದುಪಡಿಯನ್ನು ಸಂಪೂರ್ಣವಾಗಿ ರಕ್ಷಣೆ ಮಾಡಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಈ ವೇಳೆ ಮಾತನಾಡಲು ಮುಂದಾದ ಬಿಜೆಪಿಯ ಮುನಿರತ್ನ ಅವರಿಗೆ ಪ್ರತಿಕ್ರಿಯೆ ನೀಡಿದ ಶಿವಕುಮಾರ್, 'ಮುನಿರತ್ನ ಅವರೇ ನಿಮಗೂ ಚರ್ಚೆ ಮಾಡಲು ಅವಕಾಶ ನೀಡುತ್ತೇವೆ. ನಿಮ್ಮನ್ನು ತಯಾರು ಮಾಡಿದ್ದು ನಾವೇ. ನಿಮ್ಮ ಮಾತನ್ನೂ ಆಲಿಸುತ್ತೇವೆ. ನೀನು ತನಿಖೆ ಮಾಡಲು ಎಲ್ಲೆಲ್ಲೋ ಸುತ್ತುತ್ತಿದ್ದೀಯಾ, ಹೀಗಾಗಿ ನಿನ್ನ ಹೆಸರು ಮರೆತಿದ್ದೇವೆ. ನಿನ್ನ ಬಗ್ಗೆಯೂ ನಾವು ತನಿಖೆ ಮಾಡಬೇಕಿದೆ' ಎಂದು ಕುಟುಕಿದರು. 'ನನ್ನ ಹಾಗೂ ಅವರೂ ಸೇರಿದಂತೆ ಇಬ್ಬರ ಬಗ್ಗೆಯೂ ತನಿಖೆ ನಡೆಸಲು ಸಿಬಿಐಗೆ ಒಪ್ಪಿಸಿಬಿಡಿ ಸಭಾಧ್ಯಕ್ಷರೇ' ಎಂದು ಮುನಿರತ್ನ ನುಡಿದರು.

ಜಿಬಿಜಿಎ ಕಾಯ್ದೆಗೆ 3.4 ಅಂಕ: ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿಬಿಜಿಎ)- 2024 ಪರಿಣಾಮ ಬೀರುವಲ್ಲಿ 10 ಅಂಕದಲ್ಲಿ 3.4 ಅಂಕ ಮಾತ್ರ ಗಳಿಸಿದೆ ಎಂದು ಜನಾಗ್ರ ಸಂಸ್ಥೆಯ ಅಧ್ಯಯನ ವರದಿ ತಿಳಿಸಿದೆ.

'ಬೆಂಗಳೂರು ಆಡಳಿತವನ್ನು ಪರಿವರ್ತಿಸಲು ಸರ್ಕಾರ ಜಿಬಿಜಿಎ ಕಾಯ್ದೆಯನ್ನು ಜಾರಿಗೆ ತಂದಿತ್ತು. ಕಾಯ್ದೆ ಸುಧಾರಣೆ ಹಾಗೂ ಕೊರತೆಗಳನ್ನು ಗುರುತಿಸಲು ಜನಾಗ್ರಹ ಸಮಗ್ರ ವಿಶ್ಲೇಷಣೆ ನಡೆಸಿತು. 33 ವಿಷಯಗಳೊಂದಿಗೆ ಬಿಬಿಎಂಪಿ ಕಾಯ್ದೆ- 2020, ಕರ್ನಾಟಕ ಮುನಿಸಿಪಲ್ ಕಾಯ್ದೆಯೊಂದಿಗೆ ಹೋಲಿಕೆ ಮಾಡಿ ಅಧ್ಯಯನ ಮಾಡಿದೆ.

ಅಧ್ಯಯನ ವರದಿಯನ್ನು ಸಂಸ್ಥೆ ಮಂಗಳವಾರ ಬಿಡುಗಡೆ ಮಾಡಿದ್ದು, 10 ಅಂಕಗಳಲ್ಲಿ 3.4 ಅಂಕಗಳನ್ನು ಮಾತ್ರ ಜಿಬಿಜಿಎ ಕಾಯ್ದೆ ಪಡೆದುಕೊಂಡಿದೆ. ಪಾಲಿಕೆಗಳ ಹಣಕಾಸು, ಸಿಬ್ಬಂದಿ ನೇಮಕಾತಿಯಲ್ಲಿ ಸ್ವಲ್ಪಮಟ್ಟಿನ ಪ್ರಗತಿ ಸಾಧಿಸಿದ್ದು, ಯೋಜನೆ ಸಬಲೀಕರಣ, ರಾಜಕೀಯ ನಾಯಕತ್ವ, ನಾಗರಿಕರ ಭಾಗವಹಿಸುವಿಕೆಯಂತಹ ನಿರ್ಣಾಯಕ ಅಂಶಗಳಲ್ಲಿ ಕಾಯ್ದೆ ವಿಫಲವಾಗಿದೆ ಎಂದು ವರದಿ ತಿಳಿಸಿದೆ.

ಮೂರು ಸಲಹೆ ನೀಡಿದ ಜನಾಗ್ರಹ

'ವರದಿಯಿಂದ ಹೊರಬಂದಿರುವ ನ್ಯೂನತೆಗಳನ್ನು ಬಹಿರಂಗಪಡಿಸುವ ಜೊತೆಗೆ, ಶೀಘ್ರ ಚುನಾವಣೆ ನಡೆಸಲು ಜನಾಗ್ರಹ ಮೂರು ಸಲಹೆಗಳನ್ನೂ ನೀಡಿದೆ' ಎಂದು ಜನಾಗ್ರಹದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕಾಂತ್ ವಿಶ್ವನಾಥನ್ ತಿಳಿಸಿದರು.

'ಬೆಂಗಳೂರಿನ ನಾಗರಿಕರಿಗೆ ಕಾನೂನುಬದ್ಧ ಪ್ರಜಾಸತ್ತಾತ್ಮಕ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ನಗರ ಪಾಲಿಕೆಗಳನ್ನು ಸ್ಥಾಪಿಸಿ, ವಾರ್ಡ್ ವಿಂಗಡಿಸಿ, ಮೀಸಲಾತಿಯನ್ನು ಪೂರ್ಣಗೊಳಿಸಿ 2026ರ ಮಾರ್ಚ್‌ನೊಳಗೆ ಚುನಾವಣೆ ನಡೆಸಬೇಕು. ಮೇಯರ್ ಚುನಾವಣೆ, ವಾರ್ಡ್ ಸಮಿತಿ ಕಾರ್ಯ-ನಿರ್ವಹಣೆ, ಬಜೆಟ್, ಸ್ಥಾಯಿ ಸಮಿತಿಗಳ ರಚನೆ, ಬೆಂಗಳೂರು ಮಹಾನಗರ ಯೋಜನಾ ಸಮಿತಿ ಸ್ಥಾಪನೆಯ ನಿಬಂಧನೆಗಳನ್ನು ಆರು ತಿಂಗಳೊಳಗೆ ತಿಳಿಸಬೇಕು' ಎಂದರು.

'ಮೂರನೆಯದಾಗಿ, ಕಾಯ್ದೆಗೆ ನಿರ್ಣಾಯಕ ತಿದ್ದುಪಡಿಗಳನ್ನು ತರಬೇಕು. ಅದರಲ್ಲಿ, ನಗರ ಪಾಲಿಕೆಗೆ ಪೂರ್ಣಾವಧಿ ಮೇಯರ್ ವ್ಯವಸ್ಥೆ ಇರಬೇಕು. ವಾರ್ಡ್ ಸಮಿತಿಗಳಿಗೆ ನಿಧಿ ಮತ್ತು ಯೋಜನಾ ಅಧಿಕಾರವನ್ನು ನೀಡಬೇಕು. ವಾರ್ಡ್ ಸಭೆಗಳನ್ನು ಕಡ್ಡಾಯಗೊಳಿಸಬೇಕು' ಎಂದು ತಿಳಿಸಿದರು.

ಚರ್ಮದ ಉತ್ಪನ್ನಗಳಿಗೆ ರಿಯಾಯಿತಿ

ಬೆಂಗಳೂರು: ಗೌರಿ-ಗಣೇಶ ಹಬ್ಬದ ಪ್ರಯುಕ್ತ ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ರಾಜಾಜಿನಗರದಲ್ಲಿರುವ ಲಿಡ್ಕರ್ ಮಾರಾಟ ಮಳಿಗೆಯಲ್ಲಿ (ಇಎಸ್‌ಐ ಆಸ್ಪತ್ರೆ ಬಳಿ) ರಿಯಾಯಿತಿ ದರದಲ್ಲಿ ಚರ್ಮದ ಉತ್ಪನ್ನಗಳ ಮಾರಾಟ ಪ್ರಾರಂಭಿಸಿದೆ.

ಇದೇ 26ರವರೆಗೆ ಶೇ 15ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ನಡೆಯಲಿದೆ. ಚರ್ಮದ ಶೂಗಳು, ಚಪ್ಪಲಿಗಳು, ಮಹಿಳೆಯರ ವ್ಯಾನಿಟಿ ಬ್ಯಾಗ್‌ಗಳು ಸೇರಿ ಇತರೆ ಚರ್ಮದ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ರಾಜಾಜಿನಗರದ ಮಾರಾಟ ಮಳಿಗೆಯ ವ್ಯವಸ್ಥಾಪಕ ಟಿ. ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕಾನೂನು ವಿದ್ಯಾರ್ಥಿಗಳಿಂದ ಅಧಿಕ ಶುಲ್ಕ ಸಂಗ್ರಹ: ನೋಟಿಸ್

ಬೆಂಗಳೂರು: 'ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ (ಕೆಎಸ್‌ಎಲ್‌ಯು) 2025-2026ನೇ ಸಾಲಿನ ಪ್ರವೇಶಾತಿಗೆ ವಿದ್ಯಾರ್ಥಿಗಳಿಂದ ಕಾನೂನು ಬಾಹಿರವಾಗಿ ಅಧಿಕ ಶುಲ್ಕ ಸಂಗ್ರಹಿಸಲಾಗಿದೆ' ಎಂದು ಆರೋಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಕುಲಪತಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ನಗರದ ಬಿಎಂಎಸ್ ಕಾನೂನು ಕಾಲೇಜಿನ ವಿದ್ಯಾರ್ಥಿನಿ ಎನ್.ಪ್ರಿಯಾಂಕ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಚ್.ಪವನಚಂದ್ರ ಶೆಟ್ಟಿ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಕೆಎಸ್‌ಎಲ್‌ಯು ಕುಲಪತಿ ಹಾಗೂ ಕುಲಸಚಿವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ಆಕ್ಷೇಪ ಏನು?: 'ಕರ್ನಾಟಕ ಕಾನೂನು ವಿಶ್ವವಿದ್ಯಾಲಯ 2025-26ನೇ ಸಾಲಿನ ಪ್ರವೇಶ ಶುಲ್ಕ ಪರಿಷ್ಕರಿಸಿ ಸುತ್ತೋಲೆ ಹೊರಡಿಸಿದ್ದು, ವಿದ್ಯಾರ್ಥಿಗಳಿಂದ ವಿವಿಧ ಬಗೆಯ ಶುಲ್ಕಗಳ ಹೆಸರಿನಲ್ಲಿ ಕಾನೂನು ಬಾಹಿರವಾಗಿ ಅಧಿಕ ಪ್ರವೇಶ ಶುಲ್ಕ ಸಂಗ್ರಹಿಸಿದೆ. ಈ ರೀತಿ ಶುಲ್ಕ ವಿಧಿಸುವ ಅಧಿಕಾರ ಶೈಕ್ಷಣಿಕ ಮಂಡಳಿಗಾಗಲಿ, ಕುಲಪತಿಗಾಗಲಿ ಇಲ್ಲ. ಈ ಹಿಂದಿನ ಶೈಕ್ಷಣಿಕ ಸಾಲಿಗೆ ಹೋಲಿಸಿದರೆ 2025-26ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಅತ್ಯಧಿಕ ಮೊತ್ತದ ಹೆಚ್ಚುವರಿ ಶುಲ್ಕ ಸಂಗ್ರಹಿಸಲಾಗಿದೆ' ಎಂದು ಆಕ್ಷೇಪಿಸಿದ್ದಾರೆ.



'ಮೀಸಲಾತಿ ಶೇ 50ಕ್ಕೆ ಮಿತಿಗೊಳಿಸಿ'

ಬೆಂಗಳೂರು: ರಾಜ್ಯದಲ್ಲಿ ಮೀಸಲಾತಿ ಪ್ರಮಾಣವನ್ನು ಶೇಕಡ 50ಕ್ಕೆ ಮಿತಿಗೊಳಿಸಬೇಕು. ಆದರೆ, ರಾಜ್ಯ ಸರ್ಕಾರ ಈ ಪ್ರಮಾಣವನ್ನು ಶೇ 56ಕ್ಕೆ ಹೆಚ್ಚಿಸಿರುವುದು ಅವೈಜ್ಞಾನಿಕವಾಗಿದೆ ಎಂದು ಅಹಿಂಸಾ ಸಂಸ್ಥೆ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಎಂ. ನಾಗರಾಜ್, 'ರಾಜ್ಯ ಸರ್ಕಾರ 2023ರಲ್ಲಿ ಪರಿಶಿಷ್ಟ ಜಾತಿ ಮೀಸಲಾತಿ ಪ್ರಮಾಣವನ್ನು ಶೇ 15 ರಿಂದ ಶೇ 17ಕ್ಕೆ ಹೆಚ್ಚಿಸಿರುವುದು ಅಸಾಂವಿಧಾನಿಕವಾಗಿದೆ. ಇತ್ತೀಚೆಗೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ರಾಜ್ಯ ಸರ್ಕಾರವು ಒಟ್ಟು ಮೀಸಲಾತಿ ಪ್ರಮಾಣವನ್ನು ಶೇ 56ಕ್ಕೆ ಹೆಚ್ಚಿಸಿದ್ದ ಆದೇಶವನ್ನು ರದ್ದುಗೊಳಿಸಿ, ಶೇ 50ಕ್ಕೆ ಮಿತಿಗೊಳಿಸಬೇಕೆಂದು ಆದೇಶಿಸಿದೆ. ಹೀಗಾಗಿ ಸರ್ಕಾರ ಓಲೈಕೆಗಾಗಿ ಅವೈಜ್ಞಾನಿಕ ಕ್ರಮಗಳಿಗೆ ಮುಂದಾಗಬಾರದು' ಎಂದು ಒತ್ತಾಯಿಸಿದರು.

'ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಪ್ರಮಾಣ ಹಂಚಿಕೆ ಮಾಡುವ ಸಂದರ್ಭದಲ್ಲಿ ಒಟ್ಟು ಮೀಸಲಾತಿಯ ಪ್ರಮಾಣವನ್ನು ಶೇ 50ಕ್ಕೆ ಮಿತಿಗೊಳಿಸಬೇಕು ಎಂದರು.

ಶೇ 20ರಷ್ಟು ಮೊತ್ತ ಠೇವಣಿ ಕಡ್ಡಾಯ

ಬೆಂಗಳೂರು: ಸೌಹಾರ್ದ ಸಹಕಾರಿ ಸಂಸ್ಥೆಗಳು ಸಂಗ್ರಹಿಸಿದ ಠೇವಣಿಯಲ್ಲಿ ಶೇ 20ರಷ್ಟು ಮೊತ್ತವನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಡಿಸಿಸಿ) ಅಥವಾ ಅಪೆಕ್ಸ್ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವುದನ್ನು ಕಡ್ಡಾಯಗೊಳಿಸುವ 'ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಮಸೂದೆಯನ್ನು ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು.



ಬೆಂಗಳೂರು ನಗರ ಜಿಲ್ಲೆಯ ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಎಸ್‌ಬಿಐ ಆಯೋಜಿಸಿದ್ದ ಶಿಬಿರದಲ್ಲಿ ಖಾತೆಗಳ ಕೆವೈಸಿ, ಪಿಎಂಜೆಜೆಬಿವೈ ನೋಂದಣಿ, ಡಿಜಿಟಲ್ ವಂಚನೆ ಕುರಿತು ಗ್ರಾಹಕರಿಗೆ ಜಾಗೃತಿ ಮೂಡಿಸಲಾಯಿತು. ಆರ್‌ಬಿಐನ ಪ್ರಾದೇಶಿಕ ನಿರ್ದೇಶಕಿ ಸೋನಾಲಿ ಸೇನ್ ಗುಪ್ತಾ, ಆರ್‌ಬಿಐ ವ್ಯವಸ್ಥಾಪಕಿ ವಿಜಯಶ್ರೀ, ಡಿಜಿಎಂ ವೆಂಕಟ ರಘುರಾಮ್, ಈ.ಯದುಕೊಂಡಲು, ಮಹೇಶ್ ಎಂ. ಪೈ ಹಾಜರಿದ್ದರು

ಸರ್ಕಾರಿ ಶಾಲೆ ಬಲಪಡಿಸಲು ಆಗ್ರಹ

ಬೆಂಗಳೂರು: ಕಡಿಮೆ ದಾಖಲಾತಿ ಕಾರಣದಿಂದ ರಾಜ್ಯದಲ್ಲಿ ಒಂದೇ ಒಂದು ಸರ್ಕಾರಿ ಶಾಲೆಯನ್ನೂ ಮುಚ್ಚಿಲ್ಲ ಮತ್ತು ಭವಿಷ್ಯದಲ್ಲೂ ಯಾವುದೇ ಶಾಲೆಗಳನ್ನು ಮುಚ್ಚುವುದಿಲ್ಲ ಎಂಬ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಹೇಳಿಕೆಯನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಒ) ಸ್ವಾಗತಿಸಿದೆ.

ಎಐಡಿಎಸ್‌ಒ ಹಮ್ಮಿಕೊಂಡಿದ್ದ 50 ಲಕ್ಷ ಸಹಿ ಸಂಗ್ರಹ ಅಭಿಯಾನಕ್ಕೆ ವಿದ್ಯಾರ್ಥಿಗಳು, ಪೋಷಕರು ಬೆಂಬಲ ನೀಡಿದ್ದಾರೆ ಎಂದು ಸಂಘಟನೆಯ ಅಜಯ್ ಕಾಮತ್ ಹೇಳಿದ್ದಾರೆ.

ನೆಲಮಂಗಲ: ವಿಸಿಎನ್‌ಆರ್ ಆಸ್ಪತ್ರೆ ಸೇವೆಗೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಆಸ್ಪತ್ರೆಗಳು ವ್ಯಾಪಾರ ಮನೋಭಾವದಿಂದ ಕಾರ್ಯ-ನಿರ್ವಹಿಸದೆ ರೋಗಿಗಳ ಆರೈಕೆ, ಚಿಕಿತ್ಸೆಗೆ ಪ್ರಾಮುಖ್ಯತೆ ನೀಡಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ನೂರು ಹಾಸಿಗೆಗಳ ವಿಸಿಎನ್‌ಆರ್ ಆಸ್ಪತ್ರೆ ಉದ್ಘಾಟಿಸಿ ಮಾತನಾಡಿದ ಅವರು, 'ಗ್ರಾಮೀಣ ಭಾಗದಲ್ಲಿ ನೂರು ಹಾಸಿಗೆಗಳ ಸಾಮರ್ಥ್ಯದ, ಸಕಲ ಸೌಲಭ್ಯಗಳುಳ್ಳ ಆಸ್ಪತ್ರೆ ಅವಶ್ಯಕತೆ ಇತ್ತು. ಬದಲಾದ ಜೀವನಶೈಲಿ, ಒತ್ತಡದ ಜೀವನದಿಂದ ಹೃದಯ ಸಂಬಂಧಿ ಹಾಗೂ ಇತರೆ ಕಾಯಿಲೆಗಳು ಹೆಚ್ಚುತ್ತಿವೆ. ಉತ್ತಮ ಆರೋಗ್ಯಕ್ಕಾಗಿ ವ್ಯಾಯಾಮ, ಪೌಷ್ಟಿಕ ಆಹಾರಗಳ ಸೇವನೆ ಅಗತ್ಯ' ಎಂದು ಸಲಹೆ ನೀಡಿದರು.

ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ, ಪಟ್ಟನಾಯಕನಹಳ್ಳಿ ನಂಜಾವಧೂತ ಸ್ವಾಮೀಜಿ, ಸಂಸದ ಡಾ.ಕೆ.ಸುಧಾಕರ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾ-ಲಯದ ಕುಲಪತಿ ಡಾ.ಭಗವಾನ್, ಸಂಸ್ಥಾಪಕರಾದ ಪುಟ್ಟಮ್ಮ ವೆಂಕಟರಾಮಯ್ಯ, ವಿ.ಚಂದ್ರಶೇಖರ್, ವಿ.ನರಸಿಂಹಮೂರ್ತಿ, ವಿ.ರಾಮಸ್ವಾಮಿ, ಆಸ್ಪತ್ರೆ ಮುಖ್ಯಸ್ಥ ಡಾ.ವಿನಯ್ ಇದ್ದರು.



ನೆಲಮಂಗಲ ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ನೂರು ಹಾಸಿಗೆಗಳ ಸಾಮರ್ಥ್ಯದ ವಿಸಿಎನ್‌ಆರ್ ಆಸ್ಪತ್ರೆಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ನಗರಸಭೆ ಅಧ್ಯಕ್ಷ ಎನ್‌.ಗಣೇಶ್, ವಿ.ನರಸಿಂಹಮೂರ್ತಿ, ಶಾಸಕ ಎನ್‌.ಶ್ರೀನಿವಾಸ್, ವಿ.ರಾಮಸ್ವಾಮಿ ಇದ್ದಾರೆ

ವಿಧಾನ ಪರಿಷತ್ತಿಗೆ ಶಿಕ್ಷಕರ ಮತ ಕ್ಷೇತ್ರದಿಂದ ಎಂಟು ಬಾರಿ ನಿರಂತರವಾಗಿ ಆಯ್ಕೆ

ಸಭಾಪತಿ ಹೊರಟ್ಟಿಗೆ ಮೇಲ್ಮನೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ತಿಗೆ ಶಿಕ್ಷಕರ ಮತ ಕ್ಷೇತ್ರದಿಂದ ಎಂಟು ಬಾರಿ ನಿರಂತರವಾಗಿ ಆಯ್ಕೆಯಾಗಿ 45 ವರ್ಷ ಪೂರೈಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ, ಪರಿಷತ್ತಿನ ಸದಸ್ಯರು ಕಲಾಪದ ವೇಳೆ ಮೆಚ್ಚುಗೆ ಸೂಚಿಸಿದರು.

ಮಂಗಳವಾರ ಕಲಾಪದ ಶೂನ್ಯವೇಳೆಯ ನಂತರ ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಅವರು ಅಭಿನಂದನಾ ನಿರ್ಣಯ ಮಂಡಿಸಿದರು. ಬಿ.ಕೆ.ಹರಿಪ್ರಸಾದ್ ಅವರು ಅದನ್ನು ಬೆಂಬಲಿಸಿದರು. ಆ ನಂತರ ಆಡಳಿ ಮತ್ತು ವಿರೋಧ ಪಕ್ಷಗಳ ಹಲವು ಸದಸ್ಯರು ಬಸವರಾಜ ಹೊರಟ್ಟಿ ಅವರ ಬಗ್ಗೆ ಸುಮಾರು ನಾಲ್ಕು ತಾಸು ಮಾತನಾಡಿದರು.

ಸಚಿವರಾದ ಎಚ್‌.ಕೆ.ಪಾಟೀಲ, ಎಂ.ಬಿ.ಪಾಟೀಲ, ಮಧು ಬಂಗಾರಪ್ಪ, ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಕಾಂಗ್ರೆಸ್‌ನ ಪುಟ್ಟಣ್ಣ, ಬಲ್ಕೀಸ್ ಬಾನು, ಐವನ್ ಡಿಸೋಜ, ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಎನ್‌.ರವಿಕುಮಾರ್, ಭಾರತಿ ಶೆಟ್ಟಿ, ಟಿ.ಎ.ಶರವಣ ಸೇರಿ ಹಲವರು ಮಾತನಾಡಿದರು.

ಹೊರಟ್ಟಿ ಅವರು ಉತ್ತಮ ಸಂಸದೀಯ ಪಟು. ವಿರೋಧ ಮತ್ತು ಆಡಳಿತ ಪಕ್ಷಗಳ ಸದಸ್ಯರನ್ನು ಸರಿದೂಗಿಸಿಕೊಂಡು ಸದನವನ್ನು ನಡೆಸಿಕೊಂಡು ಹೋಗುತ್ತಾರೆ. ಗದರುವಾಗ ಗದರುತ್ತಾರೆ, ನಗಿಸುವಾಗ ನಗಿಸುತ್ತಾರೆ, ಕಲಾಪ ಸರಿದಾರಿಯಲ್ಲಿರುವಂತೆ ಎಚ್ಚರಿಕೆ ವಹಿಸುತ್ತಾರೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

'ಮೌಲ್ಯಾಧಾರಿತ ರಾಜಕಾರಣಿ'



ಸೀತಾರಾಂ

'ಸಭಾಪತಿ ಹೊರಟ್ಟಿ ಅವರು ರಾಜಕಾರಣದಲ್ಲಿ 45 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿರುವುದು ಪ್ರಶಂಸನೀಯ. ಪ್ರಾಮಾಣಿಕತೆ, ದಕ್ಷತೆ, ನೇರ ನಡೆ ನುಡಿಗಳ ಮೂಲಕ ಮೌಲ್ಯಾಧಾರಿತ ರಾಜಕಾರಣಿಯಾಗಿ ಇತರರಿಗೂ ಮಾದರಿಯಾಗಿದ್ದಾರೆ' ಎಂದು ಕಾಂಗ್ರೆಸ್‌ನ ಎಂ.ಆರ್.ಸೀತಾರಾಂ ಹೇಳಿದರು.

'ಹೊರಟ್ಟಿ ಅವರು ಹುಬ್ಬಳ್ಳಿ-ಧಾರವಾಡ ವ್ಯಾಪ್ತಿಯಲ್ಲಿ ಹಲವಾರು ಸಂಸ್ಥೆಗಳಿಗೆ ಸಹಾಯ ಮಾಡುವ ಮೂಲಕ ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ನಮ್ಮ ರಾಜ್ಯದಲ್ಲಿ ವಿಧಾನ ಪರಿಷತ್ ಹಾಗೂ ವಿಧಾನಸಭೆ ಸದಸ್ಯರು ಒಳಗೊಂಡು ಹೆಚ್ಚಿನ ಸಾರ್ಥಕ ಸೇವೆ ಮಾಡಿ-ರುವವರಲ್ಲಿ ಅವರು ಕೂಡ ಒಬ್ಬರು. ಅವರ ಸುದೀರ್ಘ ಆಡಳಿತ ಆದರ್ಶನೀಯ' ಎಂದರು.

'ಪ್ರೀತಿ ನನ್ನನ್ನು ಕಟ್ಟಿಹಾಕಿದೆ'



ಹೊರಟ್ಟಿ

'ನನ್ನ ಜೀವನದ ಶ್ರೇಷ್ಠ ದಿನ ಇಂದು. ನಿಮ್ಮ ಪ್ರೀತಿ-ವಿಶ್ವಾಸ, ಪಕ್ಷಾತೀತವಾದ ಮಾತುಗಳು ನನ್ನನ್ನು ಕಟ್ಟಿಹಾಕಿವೆ. ನಾಳೆಯಿಂದ ಹೇಗೆ ಸದನ ನಡೆಸಬೇಕು ಎಂಬುದೇ ಇದೀಗ ನನ್ನ ಪ್ರಶ್ನೆಯಾಗಿದೆ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

'ನಾನು ಮೊದಲು 1978ರಲ್ಲಿ ಚುನಾವಣೆಗೆ ನಿಂತಾಗ ₹12 ಸಾವಿರ ವೆಚ್ಚ ಮಾಡಿದ್ದೆ. 17 ಮುಖ್ಯ-ಮಂತ್ರಿಗಳನ್ನು ನೋಡಿದ್ದೇನೆ. ಎಂಟು ಬಾರಿ ನನ್ನನ್ನು ಆರಿಸಿರುವ ಶಿಕ್ಷಕರ ಋಣ ತೀರಿಸಲು 24 ಗಂಟೆಯೂ ಕೆಲಸ ಮಾಡುತ್ತಿದ್ದೇನೆ. ನಾಲ್ಕೈದು ತಾಸು ನೀವೆಲ್ಲರೂ ಮಾತನಾಡಿದ್ದನ್ನು ಎಂದಿಗೂ ಮರೆಯುವುದಿಲ್ಲ' ಎಂದರು.

‘ಕ್ರೀಡೆಗಳಿಗೆ ಜೀವನ ರೂಪಿಸುವ ಶಕ್ತಿ ಇದೆ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ಕ್ರೀಡೆಗಳಿಗೆ ಶಿಕ್ಷಣದಷ್ಟೇ ಪ್ರಾಮುಖ್ಯತೆ ದೊರಕಬೇಕು. ಪ್ರಸ್ತುತ ಕ್ರೀಡೆಗಳಿಗೂ ಜೀವನ ರೂಪಿಸುವ ಶಕ್ತಿ ಒದಗಿ ಬಂದಿದೆ ಎಂದು ಬಿಜೆಪಿ ಯಶವಂತಪುರ ಕ್ಷೇತ್ರ ಘಟಕದ ಮಾಜಿ ಅಧ್ಯಕ್ಷ ಸಿ.ಎಂ. ಮಾರೇಗೌಡ ಹೇಳಿದರು.

ಶ್ರೀ ಪೂಜ್ಯ ಭಾರತ ಜನಜಾಗೃತಿ ವೇದಿಕೆ ವತಿಯಿಂದ ಆಯೋಜಿಸಲಾಗಿದ್ದ ಕ್ರಿಕೆಟ್ ಹಾಗೂ ವಾಲಿಬಾಲ್ ಪಂದ್ಯಾವಳಿಯ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದರು.

‘ಕೇಂದ್ರ ಸರ್ಕಾರವು ಕ್ರೀಡೆಗಳಿಗೆ ಉತ್ತಮ ಸಹಕಾರ ನೀಡುವುದರ ಜತೆಗೆ ಕ್ರೀಡಾಪಟುಗಳಿಗೆ ಬೆಂಬಲ ನೀಡುತ್ತಿದೆ. ಮನುಷ್ಯನ ಸರ್ವತೋಮುಖ ಬೆಳವಣಿಗೆಯಲ್ಲಿ ಕ್ರೀಡೆಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ’ ಎಂದರು.

ಇದೇ ವೇಳೆ ವೇದಿಕೆ ವತಿಯಿಂದ ಬೀದಿಬದಿ ವ್ಯಾಪಾರಿಗಳಿಗೆ ಕೊಡೆಗಳನ್ನು ವಿತರಿಸಲಾಯಿತು. ಸರ್ಕಾರಿ ಶಾಲಾ ಮಕ್ಕಳಿಗೆ ಪುಸ್ತಕ, ಅಂಗವಿಕಲರಿಗೆ ಗಾಲಿ ಕುರ್ಚಿ, ವಾಕರ್ ಸ್ಟ್ಯಾಂಡ್‌ಗಳನ್ನು ನೀಡಲಾಯಿತು.



ಕ್ರಿಕೆಟ್ ಹಾಗೂ ವಾಲಿಬಾಲ್ ಪಂದ್ಯಾವಳಿಯ ವಿಜೇತರಿಗೆ ಸಿ.ಎಂ.ಮಾರೇಗೌಡ ಬಹುಮಾನ ವಿತರಿಸಿದರು. ಟೊಯೊಟಾ ಕಾರ್ಮಿಕ ಸಂಘದ ಅಧ್ಯಕ್ಷ ದೀಪಕ್ ಎಸ್‌.ಆರ್‌., ಬಿಬಿಎಂಪಿ ಮಾಜಿ ಸದಸ್ಯ ರಾ.ಆಂಜಿನಪ್ಪ ಹನುಮಂತೇಗೌಡ, ದೇವರಾಜು, ನಾಗರಾಜು, ಜೆ.ರಮೇಶ್ ಇದ್ದಾರೆ.

ಚಿಟಿಕೆ ಸುದ್ದಿ

ಅಪಪ್ರಚಾರ ಖಂಡಿಸಿ ಧರ್ಮಸ್ಥಳ ಯಾತ್ರೆ

ನೆಲಮಂಗಲ: ಸೌಜನ್ಯಾ ಕೊಲೆ ವಿಚಾರ ಮತ್ತು ಧರ್ಮಸ್ಥಳದ ಆಸುಪಾಸಿನಲ್ಲಿ ನೂರಾರು ಶವಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಿ ಶ್ರೀ ಕ್ಷೇತ್ರ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಬಗ್ಗೆ ನಡೆಯುತ್ತಿರುವ ಅಪಪ್ರಚಾರ ಖಂಡಿಸಿ ಕಾಂಗ್ರೆಸ್ ವತಿಯಿಂದ ಯಾತ್ರೆ ಕೈಗೊಳ್ಳಲಾಗಿದೆ ಎಂದು ಶಾಸಕ ಎನ್‌.ಶ್ರೀನಿವಾಸ್ ಹೇಳಿದರು.

ವೀರೇಂದ್ರ ಹೆಗ್ಗಡೆ ಅವರಿಗೆ ನೈತಿಕ ಸ್ಥೈರ್ಯ ತುಂಬಲು 150ಕ್ಕೂ ಹೆಚ್ಚು ಕಾರುಗಳಲ್ಲಿ ಯಾತ್ರೆ ಕೈಗೊಳ್ಳಲಾಗಿದೆ. ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಬಹುದು. ಅದರ ಬದಲು ಧಾರ್ಮಿಕ ಕ್ಷೇತ್ರ ಮತ್ತು ಜನರ ಧಾರ್ಮಿಕ ಭಾವನೆಗೆ ಧಕ್ಕೆ ತರಲು ಅಪಪ್ರಚಾರ ನಡೆಸುತ್ತಿರುವುದು ಸರಿಯಲ್ಲ ಎಂದರು.

ಯಾತ್ರೆಯಲ್ಲಿ ಪಾಲ್ಗೊಳ್ಳುವವರು ಕೆಡಿಪಿ ಸದಸ್ಯ ನಾರಾಯಣಗೌಡ (ಮೊಬೈಲ್ ಸಂಖ್ಯೆ 9886605343) ಹಾಗೂ ಯುವ ಮುಖಂಡ ಕಾಚನಹಳ್ಳಿ ಮನು (ಮೊಬೈಲ್ ಸಂಖ್ಯೆ 8105027095) ಅವರನ್ನು ಸಂಪರ್ಕಿಸಿ, ನೋಂದಣಿ ಮಾಡಿಕೊಳ್ಳಲು ಕೋರಲಾಗಿದೆ.

ಜಲಜಾಕ್ಷಿ ಅಮಾನತು ಆದೇಶ ರದ್ದು

ಬೆಂಗಳೂರು: ‘ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮದ ವೇಳೆ ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ ಫೋಟೋ ಹಾಕಿಲ್ಲ’ ಎಂಬ ಆರೋಪದಡಿ ವಿಧಾನಪರಿಷತ್ತಿನ ಉಪ ಕಾರ್ಯದರ್ಶಿ ಕೆ.ಜೆ.ಜಲಜಾಕ್ಷಿ ಅವರನ್ನು ಅಮಾನತುಗೊಳಿಸಿ ವಿಧಾನಪರಿಷತ್ ಕಾರ್ಯದರ್ಶಿ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಜಲಜಾಕ್ಷಿ ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಚ್‌.ಟಿ.ನರೇಂದ್ರ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘2024ರ ನವೆಂಬರ್ 26ರಂದು ಹಮ್ಮಿಕೊಂಡಿದ್ದ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಹಾಕಿಲ್ಲ’ ಎಂಬ ಆರೋಪದಡಿ ಕೆ.ಜೆ.ಜಲಜಾಕ್ಷಿ ಅವರನ್ನು ಅಮಾನತುಗೊಳಿಸಿ ವಿಧಾನ ಪರಿಷತ್ತಿನ ಕಾರ್ಯದರ್ಶಿ ಆದೇಶ ಹೊರಡಿಸಿದ್ದರು.

ವಿದೇಶಿ ಭಾಷೆಗಳ ಅಧ್ಯಯನಕ್ಕೆ ಪ್ರವೇಶ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರವು 2025–26ನೇ ಶೈಕ್ಷಣಿಕ ಸಾಲಿನ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಜಪನೀಸ್, ಚೈನೀಸ್, ಕೊರಿಯನ್ ಮತ್ತು ರಷ್ಯನ್ ಭಾಷಾ ವಿಷಯಗಳಲ್ಲಿ 8 ತಿಂಗಳ ಅವಧಿಯ ಸರ್ಟಿಫಿಕೇಟ್ ಕೋರ್ಸ್‌ಗಳು, ಡಿಪ್ಲೊಮಾ ಮತ್ತು ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದು.

ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 27 ಕೊನೆ ದಿನ. ದಂಡ ಶುಲ್ಕದೊಂದಿಗೆ ಅಕ್ಟೋಬರ್ 3ರವರೆಗೂ ಅರ್ಜಿ ಸಲ್ಲಿಸಬಹುದು ಎಂದು ಜಾಗತಿಕ ಭಾಷಾ ಕೇಂದ್ರದ ನಿರ್ದೇಶಕಿ ಜ್ಯೋತಿ ವೆಂಕಟೇಶ್ ತಿಳಿಸಿದ್ದಾರೆ.

ಮಾಹಿತಿಗಾಗಿ: 080-29572019 / 6361756549

ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಆಗ್ರಹ

ಬೆಂಗಳೂರು: ಆಸ್ತಿ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಕೇವಲ ಆಂಗ್ಲಭಾಷೆಯಲ್ಲಿ ವಿಡಿಯೊ ಮಾಡಿ ಕನ್ನಡವನ್ನು ನಿರ್ಲಕ್ಷಿಸಿರುವ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.

ಆಸ್ತಿ ತೆರಿಗೆ ಪಾವತಿಸುವಂತೆ ಸಾರ್ವಜನಿಕರಿಗೆ ಬಿಬಿಎಂಪಿ ನೋಟಿಸ್ ನೀಡುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಮೇಲ್ಮನವಿ ಸಲ್ಲಿಸುವ ವಿಧಾನಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಮೂಲಕ ಮಾಹಿತಿ ನೀಡಲಾಗಿದೆ. ಅದು ಪೂರ್ಣ ಆಂಗ್ಲಮಯವಾಗಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಕನ್ನಡಕ್ಕೆ ಆದ್ಯತೆ ಕಲ್ಪಿಸುವುದು ಬಿಬಿಎಂಪಿಯ ಜವಾಬ್ದಾರಿ ಆಗಿದ್ದರೂ ಆಂಗ್ಲಭಾಷೆಯಲ್ಲಿ ಮಾಹಿತಿ ನೀಡಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಪಾಲಿಕೆಯ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅವರಿಗೆ ಬಿಳಿಮಲೆ ಪತ್ರ ಬರೆದಿದ್ದಾರೆ.


ಕಾರ್ಯಕ್ರಮದಲ್ಲಿ ಕೆ.ಎನ್‌.ಶಾಂತಕುಮಾರ್ ಮತ್ತು ಆಯೇಷಾ ಖಾನುಂ ಸಮಾಲೋಚನೆ ನಡೆಸಿದರು. ಕೆ.ವಿ.ಪ್ರಭಾಕರ್ ಉಪಸ್ಥಿತರಿದ್ದರು

‘ಫೋಟೋಗ್ರಫಿಯನ್ನು ಸುಲಭಗೊಳಿಸಿದ ತಂತ್ರಜ್ಞಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಧುನಿಕ ಯುಗದಲ್ಲಿ ಡಿಜಿಟಲ್ ತಂತ್ರಜ್ಞಾನವು ಫೋಟೋಗ್ರಫಿಯನ್ನು ಸುಲಭಗೊಳಿಸಿದೆ’ ಎಂದು ‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಪತ್ರಿಕಾ ಸಮೂಹದ ನಿರ್ದೇಶಕ ಕೆ.ಎನ್. ಶಾಂತಕುಮಾರ್ ಹೇಳಿದರು.

‘ಬೆಂಗಳೂರು ಫೋಟೋ ಜರ್ನಲಿಸ್ಟ್‌ಗಳ ಸಂಘ’ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿಶ್ವ ಛಾಯಾಗ್ರಹಣ ದಿನದ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಫೋಟೋಗ್ರಫಿ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಈ ಹಿಂದೆ ಛಾಯಾಚಿತ್ರವನ್ನು ಸೆರೆಹಿಡಿಯುವುದರಿಂದ ಹಿಡಿದು, ಅದನ್ನು ಅಭಿವೃದ್ಧಿಪಡಿಸುವುದು ಮತ್ತು ಮುದ್ರಿಸುವವರೆಗೆ ಹೆಚ್ಚು ಸಮಯ ಹಾಗೂ ಶ್ರಮ ಬೇಕಾಗುತ್ತಿತ್ತು. ಆಧುನಿಕ ಯುಗವು ಫೋಟೋಗ್ರಫಿಯನ್ನು ಸುಲಭಗೊಳಿಸಿದೆ. ಛಾಯಾಗ್ರಾಹಕರು ವಿಮರ್ಶಾತ್ಮಕವಾಗಿ ಯೋಚಿಸಲು ಮತ್ತು ಉತ್ತಮ ಚಿತ್ರಗಳನ್ನು ಸೆರೆ ಹಿಡಿಯಲು ಹೆಚ್ಚಿನ ಸಮಯಾವಕಾಶವೂ ದೊರೆಯುತ್ತಿದೆ’ ಎಂದರು.

‘ಪ್ರತಿಯೊಬ್ಬರ ಬಳಿ ಇರುವ ಮೊಬೈಲ್‌ನಲ್ಲಿ ಕ್ಯಾಮೆರಾ ಇದ್ದರೂ, ಎಲ್ಲರೂ ಛಾಯಾಗ್ರಾಹಕರಾಗಲು ಸಾಧ್ಯವಿಲ್ಲ. ಒಬ್ಬ ಒಳ್ಳೆಯ ಛಾಯಾಗ್ರಾಹಕ ಬೆಳಕನ್ನು ಅರ್ಥಮಾಡಿಕೊಳ್ಳಬೇಕು. ಕ್ಯಾಮೆರಾ ಸೆಟ್ಟಿಂಗ್‌ಗಳನ್ನು ತಿಳಿದುಕೊಳ್ಳಬೇಕು. ಜನರ ಕಥೆಗಳನ್ನು ಹೇಳುವಾಗ ನೈತಿಕತೆ, ಸಮಗ್ರತೆ, ಸತ್ಯ ಮತ್ತು ಸಹಾನುಭೂತಿಗೆ ಬದ್ಧರಾಗಿರಬೇಕು. ಛಾಯಾಗ್ರಹಣದಲ್ಲಿ ಸಮಯವು ನಿರ್ಣಾಯಕ’ ಎಂದರು.

ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ‘ನೋಟಕ್ಕೆ ಹೃದಯವಂತಿಕೆಯ ಸ್ಪರ್ಶ ಸಿಕ್ಕಾಗ ಅದ್ಭುತ ಫೋಟೋ ಜರ್ನಲಿಸ್ಟ್ ಹುಟ್ಟುತ್ತಾನೆ. ಆತ ಆ ಕ್ಷಣದಲ್ಲಿ ತೆಗೆದ ಚಿತ್ರ ಚರಿತ್ರೆಯಾಗುತ್ತದೆ. ಮಗು ಮಾತನಾಡುವುದಕ್ಕಿಂತ ಮೊದಲು ನೋಟದಿಂದಲೇ ಜಗತ್ತನ್ನು ಗ್ರಹಿಸುತ್ತದೆ. ನೋಟಕ್ಕೆ ಭಾಷೆಯ, ಪದಗಳ, ವಾಕ್ಯಗಳಹಂಗಿಲ್ಲ’ ಎಂದುಅಭಿಪ್ರಾಯಪಟ್ಟರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನುಂ, ಪತ್ರಕರ್ತ ಸದಾಶಿವ ಶೆಣೈ, ಸಂಘದ ಅಧ್ಯಕ್ಷ ಬಿ.ಎನ್. ಮೋಹನ್ ಕುಮಾರ್, ಛಾಯಾಗ್ರಾಹಕ ಭಾಗ್ಯ ಪ್ರಕಾಶ್ ಉಪಸ್ಥಿತರಿದ್ದರು.

ಕೋಲ್ಕತ್ತ ರೇಸ್

ಪಂಟಾಜಿ ಗೆಲ್ಲುವ ನಿರೀಕ್ಷೆ

ಬೆಟ್‌ಬ್ರಿಕ್ಸ್ 7 ರೈಸಿಂಗ್ ಸ್ಟಾರ್ಸ್ ಹ್ಯಾಂಡಿಕ್ಯಾಪ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪಂಟಾಜಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ವಿನ್ಸ್‌ಏಂಜೆಲ್ 1, ಎನ್‌ಆರ್‌ಐ ಫ್ಯಾಂಟಸಿ 3, ಯುವಿ 8
2ನೇ ರೇಸ್: ಜಾಜರ 3, ಸೀ ಈಗಲ್ 4, ಟ್ರೂ ಫೈಟ್ 2
3ನೇ ರೇಸ್: ಪಂಟಾಜಿ 1, ಸ್ಟಾರ್ ಪ್ರೈಡ್ 2
4ನೇ ರೇಸ್: ಕೆರ್ರಿಗೋಲ್ಡ್ 7, ಬಂಡಲ್ ಆಫ್ ಚಾರ್ಮ್ 5, ಕೂಲ್ ಡ್ಯಾಡಿ 11
5ನೇ ರೇಸ್: ನ್ಯಾಚುರಲ್ ಗ್ರೇಸ್ 10, ಸ್ನೋಪಿಯರ್ಸರ್ 7, ಮೈನ್ ಸ್ಟ್ರೀಟ್ 5
6ನೇ ರೇಸ್: ಎನೋಲ ಹೋಮ್ಸ್ 6, ವಂಡರ್‌ಫುಲ್ 1, ಕೆಷಲಾಯ್ಕ 4

ಉತ್ತಮ ಬೆಟ್: ಎನೋಲ ಹೋಮ್ಸ್

ಜಾಕ್‌ಪಾಟ್‌ಗೆ	1ನೇ ಟ್ರೆಬಲ್	2ನೇ ಟ್ರೆಬಲ್
2,3,4,5,6	1,2,3	4,5,6

ಪ್ರತೀಕ್ ಚವಾಣ್‌ಗೆ ಮಧ್ಯಂತರ ನಿರೀಕ್ಷಣಾ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಮಾಡಿಕೊಳ್ಳುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿ, ಔರಾದ ಕ್ಷೇತ್ರದ ಬಿಜೆಪಿ ಶಾಸಕ ಪ್ರಭು ಚವಾಣ್ ಪುತ್ರ ಪ್ರತೀಕ್ ಚವಾಣ್‌ಗೆ ಹೈಕೋರ್ಟ್ ಷರತ್ತುಬದ್ಧ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಪ್ರತೀಕ್ ಚವಾಣ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮೊಹಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.


ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಅವರ ವಾದ ಆಲಿಸಿದ ನ್ಯಾಯಪೀಠ, ‘ಪ್ರತೀಕ್ ಚವಾಣ್ ₹2 ಲಕ್ಷ ಮೊತ್ತದ ಬಾಂಡ್ ಮತ್ತು ಭದ್ರತೆ ಒದಗಿಸಬೇಕು. ಸಾಕ್ಷ್ಯ ನಾಶ ಮಾಡಬಾರದು‘ ಎಂಬುದೂ ಸೇರಿದಂತೆ ಸಾಂಪ್ರದಾಯಿಕ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಿದೆ.

‘ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಿ’ ಎಂದು ಪ್ರಾಸಿಕ್ಯೂಷನ್ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಮುಂದೂಡಿದೆ. ಹೈಕೋರ್ಟ್ ವಕೀಲೆ ಮೊನಿಕಾ ಪಾಟೀಲ್, ಪ್ರತೀಕ್ ಪರ ವಕಾಲತ್ತು ವಹಿಸಿದ್ದಾರೆ.



ವರ್ಣವೈವಿಧ್ಯವೆಂದರೆ ನವಿಲುಗರಿಗಳೇ ನೆನಪಾಗುತ್ತವೆ. ಈ ಗರಿಗಳಿಗೆ ಹಲವು ಬಾರಿ ಕೃತಕ ಬಣ್ಣವನ್ನು ಲೇಪಿಸಿದರೆ, ಅದು ಲೇಸರ್‌ನಂಥ ಬೆಳಕನ್ನು ಹೊರಸೂಸುತ್ತವೆಯಂತೆ

ವಯಸ್ಸಿನ ವೇಗಕ್ಕೆ ಬ್ರೇಕ್ ಬಿದ್ದೀತೆ?



• ಎಸ್.ಎನ್.ಹೆಗಡೆ

ಹುಟ್ಟಿನಿಂದ ಸಾಯುವವರೆಗೆ ನಮ್ಮ ವಯಸ್ಸು ಮುಂದೆ ಸಾಗುತ್ತಲೇ ಇರುತ್ತದೆ. ಓರ್ವ ವ್ಯಕ್ತಿಗೆ ಎಷ್ಟು ವಯಸ್ಸಾಗಿದೆ ಎಂಬುದನ್ನು ಆತ/ಆಕೆಯ ಮುಖ ಚಹರೆಗಳನ್ನು ನೋಡಿ ಊಹಿಸ ಬಹುದಲ್ಲವೇ? ಹುಟ್ಟಿನಿಂದ ಪ್ರಾರಂಭವಾಗುವ ವಯಸ್ಸು ಶಾರೀರಿಕ, ಆಂಗಿಕ ಬದಲಾವಣೆಗಳನ್ನು ತರುತ್ತದೆ. ಈ ಬದಲಾವಣೆಗಳು ಸಾವಿನೊಂದಿಗೆ ಅಂತ್ಯಗೊಳ್ಳುತ್ತದೆ. ಅಪಘಾತ, ರೋಗರುಜಿನ ಮುಂತಾದ ಆಕಸ್ಮಿಕಗಳನ್ನು ಹೊರತುಪಡಿಸಿದರೆ ಯಾವುದೇ ವ್ಯಕ್ತಿಯ ವಯಸ್ಸಿಗೆ ಹಾಗೂ ಸಾಮಾನ್ಯ ಬೆಳವಣಿಗೆಗೆ ಒಂದು ಮಿತಿ ಇದೆ. ಕೆಲವರು ಆರಂಭಿಕ ಹಂತದಲ್ಲಿಯೇ ಜೀವನವನ್ನು ಪೂರೈಸುತ್ತಾರೆ; ಕೆಲವರು ಶತಾಯುಷಿಗಳೂ ಆಗುತ್ತಾರೆ. ಹುಟ್ಟಿದಾಗಲೇ ಅಥವಾ ಮನುಷ್ಯನ ಜೀವಿತದ ಯಾವುದೇ ಹಂತದಲ್ಲಿ ಆತನ/ಆಕೆಯ ವಯಸ್ಸು ಯಾವ ವೇಗದಲ್ಲಿ ಸಾಗುತ್ತಿದೆ ಎಂದು ಕಂಡುಹಿಡಿಯಲು ಸಾಧ್ಯವೇ? 'ಹೌದು' ಎನ್ನುತ್ತಾರೆ, ಉತ್ತರ ಕೆರೊಲಿನಾದ ಡರ್‍ಹ್ಯಾಂನಲ್ಲಿರುವ ಡ್ಯೂಕ್ ವಿಶ್ವವಿದ್ಯಾಲಯದಲ್ಲಿ ಮಿದುಳಿನ ಮೇಲೆ ಸಂಶೋಧನೆ ನಡೆಸುತ್ತಿರುವ ಎಥಾನ್ ವಿಟ್‌ಮನ್ ಮತ್ತು ಸಹೋದ್ಯೋಗಿಗಳು.

ಮಾನವನ ಮಿದುಳಿನಲ್ಲಿ ಮುಮ್ಮೆದುಳು ಅರೆಗೋಲ (ಸೆರೆಬ್ರಲ್ ಹೆಮಿಸ್ಫಿಯರ್), ಮಧ್ಯಮೆದುಳು (ಮಿಡ್ ಬ್ರೇನ್), ಹಾಗೂ ಹಿಮ್ಮೆದುಳು (ಸೆರೆಬ್ರಂ ಮತ್ತು ಮೆಡುಲ ಒಬ್‌ಲಾಂಗೆಟಾ) ಎಂಬ ಮೂರು ಮುಖ್ಯ ಭಾಗಗಳಿವೆ. ವಿವಿಧ ಕ್ರಿಯೆಗಳ ನಿಯಂತ್ರಣ ಕೇಂದ್ರಗಳು ಈ ಭಾಗಗಳಲ್ಲಿ ಹಂಚಿಕೆಯಾಗಿರುತ್ತವೆ. ಈ ಕೇಂದ್ರಗಳ ರಚನೆ, ದಪ್ಪ ಮುಂತಾದ ಭೌತಿಕ ಅಂಶಗಳು ಆಯಾ ಭಾಗಗಳ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುತ್ತವೆ ಎಂದು ಅಧ್ಯಯನಗಳು ತಿಳಿಸಿವೆ.

ಮುಮ್ಮೆದುಳಿನ ತೊಗಟೆಯ ಭಾಗವು ನಾವು ಆಡುವ ಭಾಷೆ ಮತ್ತು ಆಲೋಚನೆಗಳನ್ನು ನಿಯಂತ್ರಿಸುತ್ತವೆ. ಆ ಭಾಗದಲ್ಲಿರುವ ಬೂದು ದ್ರವ್ಯ - 'ಗ್ರೇ ಮಾಟರ್'ನ (ಇದು ನರಕೋಶಗಳ ಮುಖ್ಯ ಭಾಗವನ್ನು ಒಳಗೊಂಡಿರುತ್ತದೆ) ಪರಿಮಾಣವು ವ್ಯಕ್ತಿಯ ಯೋಚಿಸುವ ಮತ್ತು ನೆನಪಿನ ಸಾಮರ್ಥ್ಯವನ್ನು ನಿರ್ಧರಿಸುತ್ತದೆ. ವಯಸ್ಸಾದಂತೆ ವ್ಯಕ್ತಿಯ ಯೋಚಿಸುವ ಹಾಗೂ ನೆನಪಿಡುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಈ ಬದಲಾವಣೆ ಮುಮ್ಮೆದುಳಿನ ತೊಗಟೆಯ ದಪ್ಪದ ಮೇಲೂ ಪರಿಣಾಮವನ್ನು ಬೀರುತ್ತದೆ. ತೊಗಟೆಯ ದಪ್ಪ ವ್ಯಕ್ತಿಯ ದೌರ್ಬಲ್ಯ, ರೋಗ ಮತ್ತು ಸಾವಿನ ಅಪಾಯಗಳನ್ನು ಕೂಡ ಸೂಚಿಸುತ್ತದೆ ಎನ್ನುತ್ತದೆ, ಈ ಅಧ್ಯಯನ.

ಪ್ರತಿಯೊಂದು ಜೀವಕೋಶದಲ್ಲಿಯೂ ಆಂತರಿಕ ಗಡಿಯಾರದಂತಹ ಒಂದು ವ್ಯವಸ್ಥೆ ಇರುತ್ತದೆ. ಈ ವ್ಯವಸ್ಥೆಯು ಜೀವಕೋಶಗಳಲ್ಲಿ ವಿವಿಧ ಕಾರ್ಯಗಳು ಸಮಯಕ್ಕೆ ಸರಿಯಾಗಿ ಸಾಗುವಂತೆ ನೋಡಿಕೊಳ್ಳುತ್ತದೆ. ಕೋಶಗಳ ವಯಸ್ಸಾಗುವಿಕೆಯನ್ನೂ ಈ ಗಡಿಯಾರಗಳೇ ನಿರ್ಧರಿಸುತ್ತವೆ. ಜಾಫ್ರಿ ಹಾಲ್, ಮೈಖೆಲ್ ರಾಸ್‌ಬಾಶ್ ಮತ್ತು ಮೈಖೆಲ್ ಯಂಗ್ ಎಂಬುವವರು, ಈ ಗಡಿಯಾರದ ಅಸ್ತಿತ್ವವನ್ನು ಕಂಡುಹಿಡಿದು 2017ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದರು. ವಯಸ್ಸಿನ ವೇಗವನ್ನು ಕಂಡುಹಿಡಿಯಲು ಇವರ ಸಂಶೋಧನೆಗಳೇ ಆಧಾರ. ಈ ಗಡಿಯಾರದ ಕಾರ್ಯನಿರ್ವಹಣೆಯ ವೇಗ ವಯಸ್ಸಿನ ವೇಗವನ್ನು ಸೂಚಿಸುತ್ತದೆ ಎನ್ನುತ್ತಾರೆ, ವಿಜ್ಞಾನಿಗಳು.




ಈ ಗಡಿಯಾರದ ಓಟದ ವೇಗವನ್ನು ಕಂಡು ಹಿಡಿಯುವುದು ಹೇಗೆ? ವಿಜ್ಞಾನಿಗಳು ಅದಕ್ಕೂ ಒಂದು ವಿಧಾನವನ್ನು ಅಭಿವೃದ್ಧಿ ಪಡಿಸಿದ್ದಾರೆ. ಈಗಿನ ದಿನಗಳಲ್ಲಿ ಎಂಆರ್‌ಐ ಹಾಗೂ ಸಿಟಿ ಯಂತ್ರಗಳ ಮೂಲಕ ಮಿದುಳಿನ ಆಂತರಿಕ ಚಿತ್ರಣವನ್ನು (ಸ್ಕ್ಯಾನ್) ಪಡೆಯುವುದು ಸಾಧ್ಯವಿದೆ. ಈ ಸ್ಕ್ಯಾನ್‌ಗಳ ಮೂಲಕ ಪಡೆದ ಚಿತ್ರಗಳನ್ನು ಕಂಪ್ಯೂಟರ್ ಮೂಲಕ ವಿಶ್ಲೇಷಿಸಿ ಯಾವುದೇ ವ್ಯಕ್ತಿಯ ವಯಸ್ಸಿನ ವೇಗವನ್ನು ಕಂಡುಹಿಡಿಯಬಹುದು ಎನ್ನುತ್ತವೆ, ಸಂಶೋಧನೆಗಳು. ಅಮೆರಿಕದ ಮ್ಯಾಸಚೂಸೆಟ್ಸ್‌ನ ಬೋಸ್ಟನ್‌ನಲ್ಲಿರುವ ಹಾರ್ವರ್ಡ್ ವೈದ್ಯಕೀಯ ಶಾಲೆಯ ಕಂಪ್ಯೂಟೇಷನಲ್ ಜೀವವಿಜ್ಞಾನಿ ಮಹ್ದಿ ಮೊಕ್ರಿ ಅವರು ಐವತ್ತು ಸಾವಿರ ವ್ಯಕ್ತಿಗಳ ಮಿದುಳಿನ ಸ್ಕ್ಯಾನ್‌ಅನ್ನು ಪಡೆದು ವಿಶ್ಲೇಷಿಸಿ ಅದರ ಫಲಿತಾಂಶಗಳನ್ನು ಇತ್ತೀಚೆಗೆ 'ನೇಚರ್' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅವರು ಮುಮ್ಮೆದುಳಿನ ತೊಗಟೆಯ ದಪ್ಪ ಮತ್ತು ಅದರಲ್ಲಿನ ಕೆಲವು ವಿಶಿಷ್ಟ ಭಾಗಗಳು ವಯಸ್ಸಾಗುವಿಕೆಯ ವೇಗವನ್ನು ತಿಳಿಸುತ್ತವೆ ಎನ್ನುತ್ತಾರೆ. ಮಿದುಳಿನಲ್ಲಿ ರಚನಾತ್ಮಕವಾಗಿ ವಯಸ್ಸಾಗುತ್ತಿರುವುದರ ಬಗ್ಗೆ ಅನನ್ಯವಾದ ಮಾಹಿತಿಯನ್ನು ಈ ಛಾಯಾಚಿತ್ರಣ (ಇಮೇಜಿಂಗ್) ಒದಗಿಸುತ್ತದೆ. ರಕ್ತ ಆಧಾರಿತ ಆಣ್ವಿಕ ಬಯೋಮಾರ್ಕರ್‌ಗಳು ಕೂಡ ಸೆರೆಹಿಡಿಯಲು ಸಾಧ್ಯವಾಗದ ಮಾಹಿತಿಯನ್ನು ಒದಗಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಗಡಿಯಾರ ಕುರಿತ ಮಾಹಿತಿ ಪಡೆಯಲು ಎಥಾನ್ ವಿಟ್‌ಮನ್ ಸಂಗಡಿಗರು 1972-1973ರ ನಡುವೆ ನ್ಯೂಜಿಲೆಂಡ್‌ನ ಡ್ಯೂನೆಡಿನ್‌ನಲ್ಲಿ ಜನಿಸಿದ ಸಾವಿರಕ್ಕೂ ಹೆಚ್ಚು ಜನರನ್ನು ಅಧ್ಯಯನಕ್ಕೆ ಒಳಪಡಿಸಿ ಎಂಆರ್‌ಐ ಬಳಸಿ, ಅವರು ಹುಟ್ಟಿದಾಗಿನಿಂದ ವಿವಿಧ ವಯಸ್ಸಿನಲ್ಲಿ ಅವರೆಲ್ಲರ ಮಿದುಳಿನ ಚಿತ್ರಣ ಮಾಡಿ ಅವುಗಳನ್ನು ಕಂಪ್ಯೂಟರಿನ ಆಲ್ಗಾರಿದಂಗೆ ಸೇರಿಸಿದರು. ಅವುಗಳಲ್ಲಿ 860 ಚಿತ್ರಗಳಿಂದ ಪಡೆದ ಅಳತೆಗಳನ್ನು ಹೋಲಿಕೆ ಮಾಡಿದರು. ಇದರಿಂದ ಒಬ್ಬರ ವಯಸ್ಸಿನ ವೇಗ ಇನ್ನೊಬ್ಬರಿಗಿಂತ ಭಿನ್ನವಾಗಿರುವುದು ಕಂಡುಬಂತು. ಹೊರನೋಟಕ್ಕೆ ಹೃದಯರಕ್ತನಾಳಗಳ ಕಾರ್ಯ, ರೋಗನಿರೋಧಕ ಸಾಮರ್ಥ್ಯ, ಚಯಾಪಚಯ ಕ್ರಿಯೆಗಳು, ಪರಿಸರ ಮತ್ತು ಸಾಂಕ್ರಾಮಿಕ ರೋಗಗಳೆಲ್ಲವೂ ವಯಸ್ಸಾಗುವ ವೇಗವನ್ನು ನಿರ್ಧರಿಸುತ್ತವೆ ಎನಿಸಿದರೂ ಅನುವಂಶೀಯತೆ ವಯಸ್ಸಾಗುವಿಕೆಯ ವೇಗದ ಮೇಲೆ ಹೆಚ್ಚು ಪ್ರಭಾವ ಹೊಂದಿದೆ ಎಂದು ಈ ಅಧ್ಯಯನಗಳು ತಿಳಿಸಿದವು.

ಇದಕ್ಕೆ ಪೂರಕವಾಗಿ ವಯಸ್ಸಿನ ವೇಗವನ್ನು ನಿಯಂತ್ರಿಸುವ ಮೂರು ಜೀನ್‌ಗಳನ್ನು (ಲಾಂಜಿವಿಟಿ ಜೀನ್ಸ್) ಕಂಡುಹಿಡಿಯಲಾಗಿದೆ. ಈ ಮೂರು ಜೀನ್‌ಗಳು ಶರೀರದ 1800 ಇತರ ಜೀನ್‌ಗಳ ಕ್ರಿಯೆಗಳ ಮೇಲೆ ಪರಿಣಾಮ ಬೀರುವ ಮೂಲಕ ಅಂಗಾಂಗಳ ಮೇಲೆ ಪರಿಣಾಮ ಬೀರುತ್ತವೆ, ಇವು ಮಿದುಳಿನ ಗಾತ್ರದ ಮೇಲೂ ಪರಿಣಾಮ ಬೀರುವುದರಿಂದ ಮಿದುಳಿನ ಭಾಗಗಳ ಹಾಗೂ ಇತರ ಶಾರೀರಿಕ ಅಳತೆಗಳ ಮೂಲಕ ವಯಸ್ಸಾಗುವಿಕೆಯ ವೇಗವನ್ನು ಅಳೆಯಬಹುದು ಎಂದು ಊಹಿಸಲಾಗಿದೆ. ಹೀಗೆ ವಯಸ್ಸಾಗುವಿಕೆಯ ವೇಗವನ್ನು ವಿಜ್ಞಾನಿಗಳು ಕಂಡುಹಿಡಿಯುವುದಾದರೆ ಮುಂದೊಂದು ದಿನ ಈ ವೇಗವನ್ನು ತಗ್ಗಿಸಿ, ಮರಣವನ್ನು ಮುಂದೂಡುವರೇ? ಸದ್ಯಕ್ಕಂತೂ ಇದು ಊಹೆಯೇ! ಮುಂದೊಂದು ದಿನ ಸಾಧ್ಯವಾಗಬಹುದೇನೊ?

ಪೇಪರ್ ಕ್ಲಿಪ್ ಅಂತರಿಕ್ಷ ನೌಕೆ



• ನೇಸರ ಕಾಡನಕುಪ್ಪೆ

ಅಂತರಿಕ್ಷ ನೌಕೆಗಳೆಂದರೆ ಟನ್‌ಗಟ್ಟಲೇ ತೂಕದ, ಹತ್ತಾರು ಅಡಿಗಳಷ್ಟು ಉದ್ದದ ವಾಹನಗಳೆನ್ನುವುದು ಹಳೆಯ ಲೆಕ್ಕಾಚಾರ. ಇದೀಗ ಕೇವಲ ಒಂದು ಪೇಪರ್ ಕ್ಲಿಪ್ ಗಾತ್ರದ ಅಂತರಿಕ್ಷ ನೌಕೆಯೊಂದು ಸಿದ್ಧವಾಗಿದೆ. ಅದೂ ಅಲ್ಲದೇ, ಆ ನೌಕೆಯು ಅಂತರಿಕ್ಷದ ಅತಿ ವಿಸ್ಮಯಕಾರಿ ಗುಣಲಕ್ಷಣಗಳನ್ನು ಹೊಂದಿರುವ ಕಪ್ಪುರಂಧ್ರದ (ಬ್ಲ್ಯಾಕ್ ಹೋಲ್) ಮೂಲಕ ಸಂಚರಿಸಲಿದೆಯಂತೆ . ಈ ಸಂಶೋಧನೆಯನ್ನು ಬಾಹ್ಯಾಕಾಶ ಕ್ಷೇತ್ರದ ಬಹು ಮಹತ್ತರವಾದ ಸಂಶೋಧನೆ ಎಂದೇ ಈಗ ಭೌತವಿಜ್ಞಾನಿಗಳು ವಿಶ್ಲೇಷಿಸುತ್ತಿದ್ದಾರೆ.

ನಮ್ಮ ತಿಳಿವಳಿಕೆಯ ಪ್ರಕಾರ ನಮ್ಮ ಸೂರ್ಯ ಅತಿ ಚಿಕ್ಕ ನಕ್ಷತ್ರಗಳಲ್ಲಿ ಒಂದು. ಹಲವು ದೈತ್ಯ ನಕ್ಷತ್ರಗಳೂ ಅಂತರಿಕ್ಷದಲ್ಲಿವೆ. ಅವು ಸೂರ್ಯನಿಗಿಂತ ಸುಮಾರು ಒಂದು ಸಾವಿರದಿಂದ ಒಂದು ಲಕ್ಷ ಪಟ್ಟು ದೊಡ್ಡ ಗಾತ್ರವನ್ನು ಹೊಂದಿರುವುದಾಗಿ ಸಂಶೋಧನೆಗಳನ್ನು ಹೇಳುತ್ತವೆ.

ನಕ್ಷತ್ರಗಳಲ್ಲಿರುವ ಜಲಜನಕವೆಲ್ಲಾ ಉರಿದು ಖಾಲಿಯಾದ ಮೇಲೆ, ಇಂತಹ ಬೃಹತ್ ನಕ್ಷತ್ರಗಳಲ್ಲಿ ಒತ್ತಡ ಹೆಚ್ಚಾಗಿ ಅವು ಸ್ಫೋಟಿಸುತ್ತವೆ. ಅದನ್ನು 'ಸೂಪರ್‌ನೋವಾ' ಎಂದು ಕರೆಯುತ್ತಾರೆ. ಈ ಸ್ಫೋಟದ ಬಳಿಕ ನಕ್ಷತ್ರದ ತಿರುಳು ಮಾತ್ರ ಉಳಿದು, ಅದು ಮತ್ತಷ್ಟು ಕುಸಿಯಲಾರಂಭಿಸುತ್ತದೆ. ಅದರ ಗುರುತ್ವಬಲ ಅತೀವವಾದುದು. ಅದು ಬೆಳಕನ್ನೂ ಹೊರಹೋಗಲು ಬಿಡುವುದಿಲ್ಲ. ಇದೇ ಕಪ್ಪುರಂಧ್ರ. ಅದರ ಅತೀವ ಗುರುತ್ವದ ಬಲದಿಂದಾಗಿ ಅಂತರಿಕ್ಷದಲ್ಲಿ ಕಾಲ, ದೇಶ ಮತ್ತು ವಸ್ತುಗಳನ್ನು ಬದಲಿಸುವಂಥ ಅಥವಾ ಮಾರ್ಪಾಟು ಮಾಡುವಂಥ ಶಕ್ತಿಯನ್ನು ಹೊಂದಿರುತ್ತವೆ. ಅಂತಹ ಕಪ್ಪುರಂಧ್ರದ ಮೂಲಕವೇ ಈ ಪೇಪರ್ ಕ್ಲಿಪ್ ಗಾತ್ರದ ಅಂತರಿಕ್ಷ ನೌಕೆ ಸಂಚರಿಸಲು ಸಿದ್ಧವಾಗಿದೆ!

ಏನಿದು ಹೊಸ ನೌಕೆ?

ಕಪ್ಪುರಂಧ್ರಗಳಲ್ಲಿ ಗುರುತ್ವ ಅತೀವವಾಗಿರುವ ಕಾರಣ, ಅದು ಎಲ್ಲವನ್ನೂ 'ಸ್ವಾಹ' ಮಾಡಿಬಿಡಬಲ್ಲದು. ಹೀಗಿರುವಾಗ ದೊಡ್ಡ ಗಾತ್ರದ ಅಂತರಿಕ್ಷ ನೌಕೆಗಳಿಗೂ ಅದರ ಹತ್ತಿರ ಹೋಗಲೂ ಸಾಧ್ಯವಾಗುವುದಿಲ್ಲ. ಈ ಪೇಪರ್ ಕ್ಲಿಪ್ ಗಾತ್ರದ ಅಂತರಿಕ್ಷ ನೌಕೆಯು ಅತಿ ಸೂಕ್ಷ್ಮಾತಿಸೂಕ್ಷ್ಮವಾಗಿರುವ ಕಾರಣ, ಅದನ್ನು ಕಪ್ಪುರಂಧ್ರದ ಮೂಲಕ ಏಕೆ ಸಂಚರಿಸುವಂತೆ ಮಾಡಬಾರದು ಎಂಬ ಕುತೂಹಲ ವಿಜ್ಞಾನಿಗಳಿಗೆ ಮೂಡಿದೆ.

ಜಗತ್ಪ್ರಸಿದ್ಧ ಭೌತವಿಜ್ಞಾನಿ ಕೊಸಿಮೊ ಬಾಂಬಿ ಅವರ ತಂಡವು 'ಸೆಲ್ ಪ್ರೆಸ್ ಐಸೈನ್ಸ್' ವಿಜ್ಞಾನ ನಿಯತಕಾಲಿಕೆಯಲ್ಲಿ ತಮ್ಮ ಸಂಶೋಧನೆಯನ್ನು ಪ್ರಕಟಿಸಿದ್ದಾರೆ.

ಇದು ನ್ಯಾನೊ ತಂತ್ರಜ್ಞಾನದಲ್ಲಿ ತಯಾರಾದ ವಿಶೇಷ ಅಂತರಿಕ್ಷ ನೌಕೆ. ಅಂತರಿಕ್ಷ ನೌಕೆಯೊಂದರಲ್ಲಿ ಇರಬೇಕಾದ ಸಂವಹನ ಸಾಧನಗಳು, ಕ್ಯಾಮೆರಾಗಳು, ಮೈಕ್ರೋಫೋನ್, ಎಕ್ಸ್‌-ರೇ, ಇನ್‌ಫ್ರಾರೆಡ್ ಸಂವೇದಕಗಳು – ಇಂಥವನ್ನು ಈ ಅಂತರಿಕ್ಷ ನೌಕೆ ಹೊಂದಿರಲಿದೆ. ಆದರೆ ಎಲ್ಲವೂ ಅತಿ ಸೂಕ್ಷ್ಮ ಗಾತ್ರದಲ್ಲಿ. ನ್ಯಾನೋ ಎಂದರೆ ಮಾನವನ ಕೂದಲನ್ನು ಒಂದು ಸಾವಿರ ಭಾಗಗಳಾಗಿ ಸೀಳಿದರೆ ಸಿಗುವ ಒಂದು ಸೀಳಿನ ಭಾಗ. ಈ ನ್ಯಾನೊ ಸಾಮಗ್ರಿಗಳನ್ನು ಬಳಸಿ ಈ ಮೇಲೆ ಉಲ್ಲೇಖಿಸಿದ ಎಲ್ಲ ಸಾಧನಗಳೂ ಈ ಅಂತರಿಕ್ಷ ನೌಕೆಯಲ್ಲಿ ಇರುತ್ತವೆ. ಅಂತಿಮವಾಗಿ ಎಲ್ಲ ಸಾಧನಗಳನ್ನೂ ಸೇರಿಸಿ ಒಂದು ಪೇಪರ್ ಕ್ಲಿಪ್ ಗಾತ್ರಕ್ಕೆ ಈ ನೌಕೆ ಬರುತ್ತದೆ.

ಏನು ಇದರ ಕೆಲಸ?

ಅಂತರಿಕ್ಷ ನೌಕೆಗಳಿಗೆ ನಮ್ಮ ಸಾಮಾನ್ಯ ವಾಹನಗಳಿಗೆ ಇರಬೇಕಾದ ಆಕಾರವೇ ಇರಬೇಕಿಲ್ಲ. ಅಂದರೆ ಏರೋಡೈನಾಮಿಕ್ಸ್ ಅಗತ್ಯ ಇರುವುದಿಲ್ಲ. ಬಾಹ್ಯಾಕಾಶದಲ್ಲಿ ಗಾಳಿಯ ಪ್ರತಿರೋಧ ಕಾರಣ, ಯಾವುದೇ ಗಾತ್ರದ ಆಕಾರದ ನೌಕೆಯೂ ವೇಗವಾಗಿ ಸಂಚರಿಸಬಲ್ಲದು. ಹಾಗಾಗಿಯೇ, ಈಗ ಅಂತರಿಕ್ಷದಲ್ಲಿ ಸಂಚರಿಸುತ್ತಿರುವ ಎಲ್ಲ ನೌಕೆಗಳೂ ಕೃತಕ ಉಪಗ್ರಹದಂತೆ ಡಬ್ಬಿಯಂತೆಯೋ, ಆ್ಯಂಟನಾಗಳನ್ನು ಹೊಂದಿರುವ ಸಂಕೀರ್ಣವಾದ ಆಕೃತಿಯಂತೆಯೋ ಇರುತ್ತವೆ. ಈ ಪೇಪರ್ ಕ್ಲಿಪ್ ಗಾತ್ರದ ಅಂತರಿಕ್ಷ ನೌಕೆ ಸಹ ಇದೇ ರೀತಿ ಸಂಕೀರ್ಣವಾದ ಆಕಾರವನ್ನು ಹೊಂದಿದೆ.

ಇದರ ಮುಖ್ಯ ಕೆಲಸ, ರಹಸ್ಯಮಯ ಗುಣಗಳನ್ನು ಹೊಂದಿರುವ ಕಪ್ಪುರಂಧ್ರಗಳನ್ನು ಅಧ್ಯಯನ ಮಾಡುವುದು. ಈ ಅಂತರಿಕ್ಷ ನೌಕೆಯ ವಿಶೇಷತೆಯೆಂದರೆ, ಇದು ಸಂಚರಿಸಲು ಪ್ರತ್ಯೇಕವಾದ ಶಕ್ತಿಮೂಲದ ಅಗತ್ಯವೇ ಇಲ್ಲ. ಇದರಲ್ಲಿರುವ ಸೌರ ಫಲಕಗಳೇ ಶಕ್ತಿಯನ್ನು ಉತ್ಪಾದಿಸುತ್ತವೆ. ಇದಕ್ಕೆ ಅಂತರಿಕ್ಷದ ಯಾವುದೇ ರೀತಿಯ ಬೆಳಕು ಸಾಕು. ಸೂರ್ಯನ ಬೆಳಕು, ನಕ್ಷತ್ರಗಳ ಬೆಳಕು, ಗ್ರಹಗಳು ಪ್ರತಿಫಲಿಸುವ ಬೆಳಕು – ಹೀಗೆ. ಆದರೆ, ಸಂಪರ್ಕಕ್ಕೆ ಮಾತ್ರ ಇದು ಲೇಸರ್ ಆಧಾರಿತ ಶಕ್ತಿ ಮೂಲವನ್ನು ಬಳಸುತ್ತದೆ. ಇದರ ಹಿಂದಿರುವ ತರ್ಕ ಮಾತ್ರ ಸರಳವಾಗಿದೆ. ಲೇಸರ್ ಅತಿ ನೇರವಾಗಿ ಸಂಚರಿಸಬಲ್ಲ ಹಾಗೂ ಹೆಚ್ಚು ಶಕ್ತಿಯನ್ನು ಹೊಂದಿರುವ ಬೆಳಕಿನ ವಿಧ. ಅದು ಅತಿ ನಿಖರವಾಗಿ ದತ್ತಾಂಶವನ್ನು ರವಾನೆ ಮಾಡುತ್ತದೆ. ತಾನು ಕ್ಲಿಕ್ಕಿಸುವ ಚಿತ್ರಗಳು, ದಾಖಲಿಸುವ ಶಬ್ದಗಳು, ಇನ್‌ಫ್ರಾರೆಡ್ ಸಂಜ್ಞೆಗಳನ್ನು ಈ ನೌಕೆಯು ಲೇಸರ್ ಕಿರಣಗಳಿಗೆ ಬದಲಾಯಿಸಿ ಭೂಮಿಗೆ ಕಳುಹಿಸುವ ಸಾಮರ್ಥ್ಯವನ್ನೂ ಹೊಂದಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

CHEMISTRY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ


ಜೀವ ಕ್ರಿಯೆಗಳು

27) **ದುಗ್ಧರಸದ ಕಾರ್ಯವೇನು?**

ಉತ್ತರ: ದುಗ್ದರಸವು ಜೀರ್ಣವಾದ ಮತ್ತು ಕರುಳಿನಿಂದ ಹೀರಲ್ಪಟ್ಟ ಕೊಬ್ಬನ್ನು ಸಾಗಿಸುತ್ತದೆ ಮತ್ತು ಜೀವಕೋಶದ ಹೊರಗಿರುವ ಅಧಿಕ ದ್ರವ ಪದಾರ್ಥವನ್ನು ಮರಳಿ ರಕ್ತಕ್ಕೆ ಹರಿಯುವಂತೆ ಮಾಡುತ್ತದೆ.

28) 'ಹೃದಯವು ಒಂದು ಪಂಪ್' ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ:– ಹೃದಯವು ಸ್ನಾಯುವಿನಿಂದಾದ ಒಂದು ಅಂಗವಾಗಿದ್ದು ನಮ್ಮ ಮುಷ್ಟಿಯಷ್ಟು ದೊಡ್ಡದಿದೆ. ಆಕ್ಸಿಜನ್ ಮತ್ತು ಕಾರ್ಬನ್ ಡೈಆಕ್ಸೈಡ್ ಎರಡನ್ನೂ ರಕ್ತದ ಮೂಲಕ ಸಾಗಾಣಿಕೆ ಮಾಡಬೇಕಿರುವುದರಿಂದ, ಹೃದಯವು ಆಕ್ಸಿಜನ್ ಸಮೃದ್ಧ ರಕ್ತವನ್ನು ಕಾರ್ಬನ್ ಡೈ ಆಕ್ಸೈಡ್‌ಯುಕ್ತ ರಕ್ತದೊಂದಿಗೆ ಮಿಶ್ರಣವಾಗದಂತೆ ತಡೆಯಲು ವಿಭಿನ್ನ ಕೋಣೆಗಳನ್ನು ಹೊಂದಿದೆ.



ಕಾರ್ಬನ್ ಡೈಆಕ್ಸೈಡ್ ಅನ್ನು ತೆಗೆದುಹಾಕಲು ಕಾರ್ಬನ್ ಡೈಆಕ್ಸೈಡ್ ಸಮೃದ್ಧ ರಕ್ತವು ಶ್ವಾಸಕೋಶವನ್ನು ತಲುಪಬೇಕು ಮತ್ತು ಆಕ್ಸಿಜನ್‌ಪೂರಿತ ರಕ್ತವನ್ನು ಶ್ವಾಸಕೋಶಗಳಿಂದ ಮರಳಿ ಹೃದಯಕ್ಕೆ ತರಬೇಕು. ಈ ಆಕ್ಸಿಜನ್‌ಸಮೃದ್ಧ ರಕ್ತವನ್ನು ನಂತರ ದೇಹದ ಉಳಿದ ಭಾಗಗಳಿಗೆ ಪಂಪ್ ಮಾಡಲಾಗುತ್ತದೆ. (ಅಭಿಧಮನಿ ಅಪಧಮನಿ ಚಿತ್ರ ನೋಡಿ)

ಆಕ್ಸಿಜನ್ ಸಮೃದ್ಧ ರಕ್ತವು ಶ್ವಾಸಕೋಶಗಳಿಂದ ತೆಳುವಾದ ಭಿತ್ತಿಯಿರುವ ಹೃದಯದ ಮೇಲಿನ ಕೋಣೆ, ಎಡ ಹೃತ್ಕರ್ಣಕ್ಕೆ ಬರುತ್ತದೆ. ಈ ರಕ್ತವನ್ನು ಪಡೆದಾಗ ಎಡ ಹೃತ್ಕರ್ಣವು ಸಡಿಲಗೊಳ್ಳುತ್ತದೆ ನಂತರ ಇದು ಸಂಕುಚಿಸುತ್ತದೆ. ಆಗ ಪಕ್ಕದ ಕೋಣೆ, ಎಡ ಹೃತ್ಕುಕ್ಷಿ ಹಿಗ್ಗುತ್ತದೆ. ಇದರಿಂದಾಗಿ ರಕ್ತವು ಇದಕ್ಕೆ ವರ್ಗಾವಣೆಗೊಳ್ಳುತ್ತದೆ. ಯಾವಾಗ ಸ್ನಾಯುವಿನಿಂದಾದ ಎಡಹೃತ್ಕುಕ್ಷಿಯು ಸಂಕುಚಿಸುತ್ತದೆಯೋ, ರಕ್ತವು ದೇಹದೊಳಗೆ ಪಂಪ್ ಮಾಡಲ್ಪಡುತ್ತದೆ. ಬಲಭಾಗದ ಮೇಲಿನ ಕೋಣೆ, ಬಲಹೃತ್ಕರ್ಣವು ಹಿಗ್ಗಿದಾಗ ಆಕ್ಸಿಜನ್‌ರಹಿತ ರಕ್ತವು ದೇಹದಿಂದ ಅದಕ್ಕೆ ಬರುತ್ತದೆ. ಬಲಹೃತ್ಕರ್ಣವು ಸಂಕುಚಿಸಿದಂತೆ ಅದಕ್ಕನುಗುಣವಾಗಿ ಕೆಳಗಿನ ಕೋಣೆ, ಬಲಹೃತ್ಕುಕ್ಷಿಯು ಹಿಗ್ಗುತ್ತದೆ. ಇದು ಬಲಹೃತ್ಕುಕ್ಷಿಗೆ ರಕ್ತವನ್ನು ವರ್ಗಾಯಿಸುತ್ತದೆ. ಅದು ಈ ರಕ್ತವನ್ನು ಆಕ್ಸಿಜನ್‌ಪೂರಿತಗೊಳಿಸಲು ಶ್ವಾಸಕೋಶಗಳಿಗೆ ಪಂಪ್ ಮಾಡುತ್ತದೆ. ಹೃತ್ಕುಕ್ಷಿಗಳು ರಕ್ತವನ್ನು ಹಲವಾರು ಅಂಗಗಳಿಗೆ ಪಂಪ್ ಮಾಡಬೇಕಿರುವುದರಿಂದ ಅವು ಹೃತ್ಕರ್ಣಗಳಿಗಿಂತ ದಪ್ಪವಾದ ಸ್ನಾಯುವಿನ ಭಿತ್ತಿಗಳನ್ನು ಹೊಂದಿವೆ. ಹೃತ್ಕರ್ಣಗಳು ಅಥವಾ ಹೃತ್ಕುಕ್ಷಿಗಳು ಸಂಕುಚಿಸಿದಾಗ ರಕ್ತವು ಹಿಮ್ಮುಖವಾಗಿ ಹರಿಯದಂತೆ ಕವಾಟಗಳು ನಿಯಂತ್ರಿಸುತ್ತವೆ.

ಹೀಗಾಗಿಯೇ ಹೃದಯ ಒಂದು ಪಂಪ್ ಎಂದು ಹೇಳಬಹುದು

29) ಸಸ್ಯಗಳಲ್ಲಿ ಸಾಗಾಣಿಕೆಗಳ ಬಗ್ಗೆ ಬರೆಯಿರಿ

ಉತ್ತರ:– ಸಸ್ಯಗಳ ದೇಹ ನಿರ್ಮಾಣಕ್ಕೆ ಅಗತ್ಯವಾದ ಇತರ ಕಚ್ಚಾವಸ್ತುಗಳನ್ನೂ ಕೂಡಾ ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಸಸ್ಯಗಳಿಗೆ ಮಣ್ಣು, ನೈಟ್ರೋಜನ್, ಫಾಸ್ಫರಸ್ ಮತ್ತು ಇತರ ಖನಿಜಗಳಂಥ ಕಚ್ಚಾವಸ್ತುಗಳ ಹತ್ತಿರದ ಮತ್ತು ಶ್ರೀಮಂತ ಆಕರವಾಗಿದೆ. ಆದ್ದರಿಂದ, ಈ ವಸ್ತುಗಳ ಹೀರುವಿಕೆಯು ಮಣ್ಣಿನೊಂದಿಗೆ ಸಂಪರ್ಕದಲ್ಲಿರುವ ಭಾಗವಾದ ಬೇರಿನ ಮೂಲಕ ನಡೆಯುತ್ತದೆ. ಮಣ್ಣಿನೊಂದಿಗೆ ಸಂಪರ್ಕದಲ್ಲಿರುವ ಅಂಗಗಳು ಮತ್ತು ಕ್ಲೋರೋಫಿಲ್ ಹೊಂದಿರುವ ಅಂಗಗಳ ನಡುವಿನ ಅಂತರವು ಕಡಿಮೆ ಇದ್ದರೆ ಶಕ್ತಿ ಮತ್ತು ಕಚ್ಚಾವಸ್ತುಗಳು ಸಸ್ಯ ದೇಹದ ಎಲ್ಲಾ ಭಾಗಗಳಿಗೆ ಸುಲಭವಾಗಿ ವಿಸರಣೆಗೊಳ್ಳುತ್ತವೆ. ಆದರೆ ಸಸ್ಯ ದೇಹದ ವಿನ್ಯಾಸದಲ್ಲಿನ ಬದಲಾವಣೆಯಿಂದಾಗಿ ಈ ಅಂತರವು ಹೆಚ್ಚಾದರೆ ಎಲೆಗಳಿಗೆ ಕಚ್ಚಾಪದಾರ್ಥಗಳನ್ನು ಮತ್ತು ಬೇರುಗಳಿಗೆ ಶಕ್ತಿಯನ್ನು ಒದಗಿಸಲು ವಿಸರಣ ಪ್ರಕ್ರಿಯೆಯು ಸಾಲುವುದಿಲ್ಲ. ಆದ್ದರಿಂದ, ಇಂತಹ ಸಂದರ್ಭಗಳಲ್ಲಿ ಒಂದು ಸಮರ್ಪಕ ಸಾಗಾಣಿಕಾ ವ್ಯವಸ್ಥೆಯು ಅಗತ್ಯವಾಗುತ್ತದೆ. ವಿಭಿನ್ನ ದೇಹ ವಿನ್ಯಾಸಗಳ ನಡುವೆ ಶಕ್ತಿ ಅವಶ್ಯಕತೆಯು ಭಿನ್ನವಾಗಿರುತ್ತದೆ. ಸಸ್ಯಗಳು ಚಲಿಸುವುದಿಲ್ಲ ಮತ್ತು ಸಸ್ಯ ದೇಹವು ಅನೇಕ ಅಂಗಾಂಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಿರ್ಜೀವ ಜೀವಕೋಶಗಳನ್ನು ಹೊಂದಿವೆ. ಇದರ ಪರಿಣಾಮವಾಗಿ ಸಸ್ಯಗಳ ಶಕ್ತಿ ಅವಶ್ಯಕತೆ ಕಡಿಮೆ ಮತ್ತು ಅವು ನಿಧಾನಗತಿಯ ಸಾಗಾಣಿಕಾ ವ್ಯವಸ್ಥೆಯನ್ನು ಬಳಸುತ್ತವೆ. ಆದರೆ ಅತ್ಯಂತ ಎತ್ತರದ ಮರಗಳಲ್ಲಿ ಸಾಗಾಣಿಕಾ ವ್ಯವಸ್ಥೆಯು ಮಾಡಬೇಕಾದ ಕೆಲಸವು ಅತಿ ಹೆಚ್ಚಿನದಾಗಿರುತ್ತದೆ. ಸಸ್ಯ ಸಾಗಾಣಿಕಾ ವ್ಯವಸ್ಥೆಗಳು ಸಂಗ್ರಾಹಕ ಶಕ್ತಿಯನ್ನು ಎಲೆಗಳಿಂದ ಮತ್ತು ಕಚ್ಚಾ ಪದಾರ್ಥಗಳನ್ನು ಬೇರುಗಳಿಂದ ಸಂಗ್ರಹಿಸುತ್ತವೆ. ಈ ಎರಡೂ ಮಾರ್ಗಗಳು ಸ್ವತಂತ್ರವಾಗಿ ಸಂಘಟಿಸಿದ ಸಾಗಾಣಿಕಾ ಕೊಳವೆಗಳಂತೆ ನಿರ್ಮಿಸಲ್ಪಟ್ಟಿವೆ. ಮೊದಲನೆಯದು ಕ್ಸೈಲಂ, ಮಣ್ಣಿನಿಂದ ಪಡೆದ ನೀರು ಮತ್ತು ಲವಣಗಳನ್ನು ಸಾಗಿಸುತ್ತದೆ. ಇನ್ನೊಂದು ಫ್ಲೋಯಂ, ಎಲೆಗಳಲ್ಲಿ ಸಂಶ್ಲೇಷಿಸಲ್ಪಟ್ಟ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳನ್ನು ಸಸ್ಯದ ಉಳಿದ ಭಾಗಗಳಿಗೆ ಸಾಗಿಸುತ್ತದೆ. ನೀರಿನ ಸಾಗಾಣಿಕೆ ಸಸ್ಯದ ಎಲ್ಲಾ ಭಾಗಗಳನ್ನು ತಲುಪುವ ನೀರು ಸಾಗಿಸುವ ಕಾಲುವೆಗಳ ನಿರಂತರ ವ್ಯವಸ್ಥೆಯನ್ನು ನಿರ್ಮಿಸಲು ಕ್ಸೈಲಂ ಅಂಗಾಂಶದಲ್ಲಿ ಬೇರು, ಕಾಂಡ ಮತ್ತು ಎಲೆಗಳ ನಳಿಕೆಗಳು ಮತ್ತು ಟ್ರೇಕಿಡ್‌ಗಳು ಪರಸ್ಪರ ಸಂಪರ್ಕ ಹೊಂದಿವೆ. ಬೇರುಗಳಲ್ಲಿ ಮಣ್ಣಿನ ಸಂಪರ್ಕದಲ್ಲಿರುವ ಜೀವ ಕೋಶಗಳು ಸಕ್ರಿಯವಾಗಿ ಅಯಾನುಗಳನ್ನು ಹೀರಿಕೊಳ್ಳುತ್ತವೆ. ಇದು ಬೇರು ಮತ್ತು ಮಣ್ಣಿನ ನಡುವೆ ಈ ಅಯಾನುಗಳ ಸಾರತೆಯಲ್ಲಿ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಈ ವ್ಯತ್ಯಾಸವನ್ನು ನಿವಾರಿಸಲು ಮಣ್ಣಿನಿಂದ ಬೇರುಗಳಿಗೆ ನೀರು ಚಲಿಸುತ್ತದೆ. ಅಲ್ಲಿ ಬೇರುಗಳ ಕ್ಸೈಲಂನೊಳಕ್ಕೆ ನೀರಿನ ಸ್ಥಿರವಾದ ಚಲನೆಯು ನೀರಿನ ಒಂದು ಸ್ತಂಭವನ್ನು ಉಂಟುಮಾಡಿ ಅದು ನೀರನ್ನು ನಿರಂತರವಾಗಿ ಮೇಲಕ್ಕೆ ತಳ್ಳುತ್ತಿರುತ್ತದೆ. ಆದರೂ, ಸಸ್ಯಗಳಲ್ಲಿ ನಾವು ನೋಡುವಂತೆ ಅತ್ಯಂತ ಎತ್ತರಕ್ಕೆ ನೀರನ್ನು ಚಲಿಸುವಂತೆ ಮಾಡಲು ಈ ಒತ್ತಡವೊಂದಕ್ಕೇ ಆಗುವುದಿಲ್ಲ. ಕ್ಸೈಲಂನೊಳಗಿನ ನೀರನ್ನು ಸಸ್ಯದೇಹದ ಅತ್ಯಂತ ಎತ್ತರದ ಭಾಗಗಳಿಗೆ ಮೇಲಕ್ಕೆ ಹರಿಸಲು ಸಸ್ಯಗಳು ಇನ್ನೊಂದು ತಂತ್ರವನ್ನು ಬಳಸುತ್ತವೆ.

(ಮುಂದುವರಿಯುವುದು)

The d- and f-Block Elements

9. Write the general electronic configuration of the d-block elements.

Ans:- The general electronic configuration of the d-block elements $(n-1)d^{1-10}ns^{1-2}$

10. What are d-block elements?

Ans: The elements in which the added electron enters into $(n-1)$d orbitals are called d-block elements.

11. What are transition elements?

Ans: The elements which possess partially filled d-subshell either in the atomic state or in the oxidation state are called transition elements.

12. What is the position of d-block elements in the periodic table?

Ans: d-Block elements are placed in the middle of the periodic table i.e., between the s- and p-block elements.

13. Give reason: d-block elements are called transition elements.

Ans: Because their properties are intermediate between s- and p-block elements.

14. Give the group number of d-block elements in the periodic table.

Ans: Groups 3-12.

15. Write the general electronic configuration of d-block elements.

Ans: [Noble gas] $(n-1)d^{1-10}ns^{1-2}$.

16. Write the valence shell electronic configuration of d-block elements.

Ans: $(n-1)d^{1-10}ns^{1-2}$.

17. Write the general electronic configuration of 3d series of elements.

Ans: $[Ar]3d^{1-10}4s^{1-2}$.

18. Write the electronic configuration of elements of 3d series.

Ans:

Name of elements	Symbol	Atomic number	Electronic configuration
Scandium	Sc	21	$[Ar]3d^1 4s^2$
Titanium	Ti	22	$[Ar]3d^2 4s^2$
Vandium	V	23	$[Ar]3d^3 4s^2$
*Chromium	Cr	24	$[Ar]3d^5 4s^1$
Manganese	Mn	25	$[Ar]3d^5 4s^2$
Iron	Fe	26	$[Ar]3d^6 4s^2$
Cobalt	Co	27	$[Ar]3d^7 4s^2$
Nickel	Ni	28	$[Ar]3d^8 4s^2$
*Copper	Cu	29	$[Ar]3d^{10} 4s^1$
Zinc	Zn	30	$[Ar]3d^{10} 4s^2$

19. Explain the exceptional electronic configuration of d-block elements.

Ans: Since energy difference between ns and (n–1)d is less, some d-block elements show some exceptional electronic configuration. This is due to extra stability of half filled and completely filled orbitals.

20. Why Zn, Cd and Hg are not regarded as transition elements?

Ans: They contain completely filled d-orbitals in the ground state as well as in their common oxidation states. So they are not considered as transition elements.

21. Why Zn, Cd and Hg are included under transition elements even though they contain completely filled d-orbitals both in ground state and common oxidation state?

Ans: Because they resemble other transition elements in some of their properties.

22. On what ground can you say that Sc (Scandium) (Z = 21) is transition element but Zn is not (Z = 30)?

Ans: Sc contain partially filled d-orbitals $(3d^1)$. So it is considered as transition element. Zn contain completely filled d-orbitals $(3d^{10})$ in its ground state and oxidation state. Hence it is not considered as a transition element.

23. Silver atom has completely filled d-orbitals $(4d^{10})$ in its ground state. How can you say that it is a transition element? (NCERT Intext question)

Ans: Silver (Z = 47) can exhibit +2 oxidation state wherein it will have incompletely filled d-orbitals (4d), hence Ag is a transition element.

24. Explain the metallic character of transition elements.

Ans: Transition metals can lose valence electrons and form cations; $M \longrightarrow M^{n+} + ne^-$. Therefore all transition elements show metallic properties such as high tensile strength, ductility, malleability, high thermal and electrical conductivity and metallic lusture. They have simple cubic, hcp, ccp and bcc lattice. Except Hg all transition elements are solids.

25. The melting and the boiling points of Zn, Cd and Hg are low, why?

Ans:- In Zn, Cd and Hg, all the electrons in the d – subshell are paired. Hence, the metallic bonds present in them are weak. Therefore, they have low melting and boiling points.

26. The melting and boiling points of the transition metals are maximum at the middle of each series. Why?

Ans: Due to the presence of more number of unpaired electrons in the middle of each series, metallic bonding between the atoms is very stron due to the involvement of more number of unpaired electrons from both $(n-1)d$ and ns is intermetallic bonding. Therefore they have high melting and boiling points.

27. Melting points of transition metals increases upto d^5 configuration and then decreases. Explain.

Ans:

(Contd…….)



ಬಾಗಲಕೋಟೆ ಜಿಲ್ಲೆಯ ಕುಳಗೇರಿ ಕ್ರಾಸ್ ಸಮೀಪದ ಗೋವನಕೊಪ್ಪ ಗ್ರಾಮದ ಬಳಿ ಮಲಪ್ರಭಾ ಹಳೆ ಸೇತುವೆ ಮಂಗಳವಾರ ಮುಳುಗಡೆಯಾಗಿದೆ



ಬಳ್ಳಾರಿ ಜಿಲ್ಲೆಯ ಕಂಪ್ಲಿ ಕೋಟೆ ನದಿ ತೀರದ ಸ್ಮಶಾನಕ್ಕೆ ತೆರಳುವ ರಸ್ತೆ ಜಲಾವೃತಗೊಂಡಿದ್ದು, ಅಂತ್ಯಕ್ರಿಯೆಗಾಗಿ ಶವವನ್ನು ತೆಪ್ಪದಲ್ಲಿ ಸಾಗಿಸಲಾಯಿತು



ಕೆಆರ್‌ಎಸ್ ಜಲಾಶಯದಿಂದ ಹೆಚ್ಚಿನ ನೀರನ್ನು ನದಿಗೆ ಹರಿ ಬಿಟ್ಟಿರುವುದರಿಂದ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಸಮೀಪದ ಶಿವನಸಮುದ್ರದ ಗಗನಚುಕ್ಕಿ ಜಲಪಾತ ಮೈದುಂಬಿ ಹರಿಯುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿದೆ

ಭಾರಿ ಮಳೆ: ಎಲ್ಲೆ ಮೀರಿ ಹರಿದ ನದಿಗಳು

ಅಪಾಯದ ಮಟ್ಟದಲ್ಲಿ ಹರಿಯುತ್ತಿರುವ ನದಿಗಳು: ಕಾಳಜಿ ಕೇಂದ್ರಕ್ಕೆ ಜನರ ಸ್ಥಳಾಂತರ, ಶಾಲಾ ಕಾಲೇಜುಗಳಿಗೆ ರಜೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ಹಾವೇರಿ, ಉತ್ತರ ಕನ್ನಡ, ಬೆಳಗಾವಿ ಸೇರಿ ವಿವಿಧ ಜಿಲ್ಲೆಗಳಲ್ಲಿ ಮಂಗಳವಾರವೂ ಭಾರಿ ಮಳೆಯಾಯಿತು. ಬಹುತೇಕ ಕಡೆ ನದಿಗಳು ಅಪಾಯದ ಮಟ್ಟದಲ್ಲಿ ಹರಿಯುತ್ತಿದ್ದು, ಪ್ರವಾಹ ಭೀತಿ ಎದುರಾಗಿದೆ. ಬೆಳಗಾವಿ, ಧಾರವಾಡದಲ್ಲಿ ಬುಧವಾರವೂ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಗೋಕಾಕ ಹೊರವಲಯದ ಘಟಪ್ರಭಾ ನದಿಯ ಗೋಕಾಕ–ಶಿಂಗಳಾಪುರ ಸೇತುವೆ ನದಿ ನೀರಿನಲ್ಲಿ ಮುಳುಗಡೆ ಆಗಿದೆ. ಮಾರ್ಕಂಡೇಯ ನದಿಗೆ ನಿರ್ಮಿಸಿದ ಚಿಕ್ಕೋಳಿ ಸೇತುವೆ ಮುಳುಗಲು ಎರಡು ಅಡಿ ಮಾತ್ರ ಬಾಕಿ ಇದೆ.

'ಘಟಪ್ರಭಾ ಮತ್ತು ಮಾರ್ಕಂಡೇಯ ನದಿಗಳಿಂದ ಗೋಕಾಕ ಸಮೀಪದ ಲೋಳಸೂರ ಸೇತುವೆಯಲ್ಲಿ 43 ಸಾವಿರ ಕ್ಯೂಸೆಕ್ ನೀರು ಹರಿಯುತ್ತಿದೆ. 53 ಸಾವಿರ ಕ್ಯೂಸೆಕ್ ನೀರು ಬಂದರೆ ಪ್ರವಾಹ ಉಂಟಾಗುತ್ತದೆ. ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯಲ್ಲಿ 30 ಕಾಳಜಿ ಕೇಂದ್ರ ತೆರೆಯಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ.

ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ 53 ಸಾವಿರ ಕ್ಯೂಸೆಕ್ ನೀರು ಬಿಡಲಾಗುತ್ತಿದೆ. ಜಿಲ್ಲೆ ತಲುಪಲು 40 ಗಂಟೆ ಬೇಕು. ಅಲ್ಲದೇ, 2 ಲಕ್ಷ ಕ್ಯೂಸೆಕ್ ನೀರು ಬಿಟ್ಟರೆ ಮಾತ್ರ ಜಿಲ್ಲೆಯಲ್ಲಿ ಪ್ರವಾಹ ಆಗುತ್ತದೆ. ಕೃಷ್ಣಾ ನೀರಿನ ಪ್ರಮಾಣ ಹೆಚ್ಚಾದ ಕಾರಣ ಮುನ್ನೆಚ್ಚರಿಕೆ ಕ್ರಮವಾಗಿ ಆಲಮಟ್ಟಿ ಜಲಾಶಯದಿಂದ 1.5 ಲಕ್ಷ ಕ್ಯೂಸೆಕ್ ನೀರನ್ನು ಬಿಡುತ್ತಿರುವುದಾಗಿ ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯಲ್ಲಿ ಕೃಷ್ಣಾ ನದಿಯ ಎಂಟು ಸೇತುವೆಗಳು ಮುಳುಗಿದ್ದು, ಸಂಚಾರ ಬಂದ್ ಆಗಿದೆ. ಹುಕ್ಕೇರಿ ತಾಲ್ಲೂಕಿನ ರಾಜಾ ಲಖಮಗೌಡ ಜಲಾಶಯ ಮತ್ತು ಶಿರೂರ್ ಡ್ಯಾಂ ಪೂರ್ತಿ ಭರ್ತಿಯಾಗಿದ್ದು, ಒಟ್ಟು 41,500 ಕ್ಯೂಸೆಕ್ ನೀರನ್ನು ಘಟಪ್ರಭಾ ನದಿಗೆ ಬಿಡಲಾಗುತ್ತಿದೆ.

ಭೂಕುಸಿತ: ಯಲ್ಲಾಪುರ ತಾಲ್ಲೂಕಿನ ಬೀಗಾರ ಸಮೀಪ ಭೂಕುಸಿತ ಸಂಭವಿಸಿದೆ. ಇದರಿಂದ ತಾರಗಾರ -ಬೀಗಾರ ಗ್ರಾಮಗಳ ಸಂಪರ್ಕ ರಸ್ತೆ ಕುಸಿಯುವ ಭೀತಿ ಕಾಡುತ್ತಿದೆ. ಸತತ ಮಳೆಯಿಂದ ಕಾಳಿನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಕಾರವಾರ ತಾಲ್ಲೂಕಿನ ಕದ್ರಾ ಜಲಾಶಯದಿಂದ 6 ಕ್ರೆಸ್ಟ್‌ಗೇಟ್‌ಗಳನ್ನು ತೆರೆದು 31 ಸಾವಿರ ಕ್ಯೂಸೆಕ್ ಪ್ರಮಾಣದ ನೀರು ನದಿಗೆ ಹರಿಸಲಾಗಿದೆ.

ಹೊನ್ನಾವರ ತಾಲ್ಲೂಕಿನ ಉಪ್ಪೋಣಿ, ಸರಳಗಿ ಸೇರಿ ಶರಾವತಿ ನದಿಪಾತ್ರದಲ್ಲಿನ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಈ ಗ್ರಾಮಗಳ ಜನರನ್ನು ಸಮೀಪದಲ್ಲಿ ತೆರೆದ ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ. ಜೊಯಿಡಾ ಭಾಗದ ಅಣಶಿ, ಕುಂಬಾರವಾಡಾದಲ್ಲಿ ಕಾಳಿನದಿಯ ಉಪನದಿಗಳಲ್ಲಿ ನೀರು ಉಕ್ಕೇರಿದ್ದರಿಂದ ಹಳ್ಳಿರಸ್ತೆಗಳು ಜಲಾವೃತಗೊಂಡಿವೆ.

ಘಟಪ್ರಭಾ ನದಿಯಲ್ಲಿ ನೀರಿನ ಹರಿವು ಹೆಚ್ಚಿದ ಕಾರಣ ಬಾಗಲಕೋಟೆ ಜಿಲ್ಲೆಯ 11 ಬ್ಯಾರೇಜ್‌ಗಳು ಮುಳುಗಡೆಯಾಗಿವೆ. ಮಾಚಕನೂರಿನ ಹೊಳೆ ಬಸವೇಶ್ವರ ದೇವಸ್ಥಾನ ಜಲಾವೃತವಾಗಿದೆ. ಮಿರ್ಜಿ, ಚನ್ನಾಳ, ಜಾಲಿಬೇರಿ, ಜಿರಗಾಳ, ಅಂತಾಪುರ, ಕಸಬಾ ಜಂಬಗಿ, ಆಲಗುಂಡಿ, ತಿಮ್ಮಾಪುರ, ಮುಧೋಳ, ಡವಳೇಶ್ವರ ಹಾಗೂ ಮಾಚಕನೂರ ಬ್ಯಾರೇಜ್ ಮುಳುಗಡೆಯಾಗಿವೆ.

ಹೊಸಪೇಟೆಯಲ್ಲಿ ತುಂಗಭದ್ರಾ ನದಿ ತುಂಬಿ ಹರಿಯುತ್ತಿದೆ. ಅಣೆಕಟ್ಟೆಯಿಂದ ಮಂಗಳವಾರ 1.07 ಲಕ್ಷ ಕ್ಯೂಸೆಕ್ ನೀರನ್ನು 26 ಗೇಟ್‌ಗಳ ಮೂಲಕ ನದಿಗೆ ಹರಿಸಲಾಯಿತು. ಹೂವಿನಹಡಗಲಿ ತಾಲ್ಲೂಕಿನ ನದಿ ತೀರದ ಗ್ರಾಮಗಳಿಗೆ ಪ್ರವಾಹ ಭೀತಿ ಎದುರಾಗಿದೆ.

ಹೂವಿನಹಡಗಲಿ ತಾಲ್ಲೂಕಿನ ಬ್ಯಾಲಹುಣ್ಸಿ, ಹಿರೇಬನ್ನಿಮಟ್ಟಿ, ನಂದಿಗಾವಿ, ಮಕರಬ್ಬಿ, ಕೋಟಿಹಾಳ, ಅಂಗೂರು ಗ್ರಾಮಗಳಲ್ಲಿ 200 ಎಕರೆ ಭತ್ತದ ಗದ್ದೆಗಳು ಮುಳುಗಡೆಯಾಗಿವೆ. ಹರಪನಹಳ್ಳಿ ತಾಲ್ಲೂಕಿನ ಹಲವಾಗಲು ಶಿವನಯ್ಯನಹಳ್ಳದವರೆಗೂ ನದಿ ನೀರು ಹರಿದುಬಂದಿದ್ದು, ಗರ್ಭಗುಡಿಗೆ ಹೋಗುವ ರಸ್ತೆ ಜಲಾವೃತವಾಗಿದೆ. ಹಂಪಿಯಲ್ಲಿ ವಿರೂಪಾಕ್ಷ ದೇವಸ್ಥಾನ ಸಮೀಪದ ಸ್ನಾನಘಟ್ಟದ ಅನುಷ್ಠಾನ ಮಂಟಪಗಳು ಮುಳುಗಡೆಯಾಗಿವೆ. ಹೂವಿನಹಡಗಲಿ ತಾಲ್ಲೂಕಿನಲ್ಲಿ ಐದು ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಗದಗ ಜಿಲ್ಲೆಯಲ್ಲಿ ಮಳೆಯಿಂದ ಹೆಸರು, ಶೇಂಗಾ, ಜೋಳದ ಹೊಲಗಳು ಜಲಾವೃತಗೊಂಡಿವೆ. ನವಿಲುತೀರ್ಥ ಜಲಾಶಯದ ಒಳಹರಿವು ಹೆಚ್ಚಾಗಿದೆ.

ತೆಪ್ಪದಲ್ಲಿ ಮೃತದೇಹ ಒಯ್ದು ಅಂತ್ಯಕ್ರಿಯೆ

ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಕೋಟೆ ವ್ಯಾಪ್ತಿಯ ನದಿ ದಂಡೆ ಪಕ್ಕದ ಸ್ಮಶಾನಕ್ಕೆ ತೆರಳುವ ರಸ್ತೆಗೆ ಪ್ರವಾಹ ನೀರು ನುಗ್ಗಿದೆ. ಅಂತ್ಯಕ್ರಿಯೆಗೆ ಹರಸಾಹಸ ಪಡುವಂತಾಗಿದೆ. ಪಟ್ಟಣದಲ್ಲಿ ಮೃತಪಟ್ಟ ವ್ಯಕ್ತಿಯ ಅಂತ್ಯಕ್ರಿಯೆ ನೆರವೇರಿಸಲು ಕುಟುಂಬದವರು ಮೃತದೇಹವನ್ನು ತೆಪ್ಪದಲ್ಲಿ ಸಾಗಿಸಿ ಅಂತಿಮ ವಿಧಿವಿಧಾನ ನೆರವೇರಿಸಿದರು.

'ಪ್ರವಾಹ ಬಂದಾಗಲೆಲ್ಲ ಈ ರೀತಿ ಕಷ್ಟಪಟ್ಟು ಕುಟುಂಬದ ಕೆಲವರು ತೆರಳಿ ಅಂತ್ಯಕ್ರಿಯೆ ನೆರವೇರಿಸುತ್ತಾರೆ. ಸ್ಮಶಾನಕ್ಕೆ ಹೋಗುವ ರಸ್ತೆಗೆ ಪ್ರವಾಹ ನೀರು ನುಗ್ಗದಂತೆ ಮತ್ತು ಪರ್ಯಾಯ ವ್ಯವಸ್ಥೆ ಕೈಗೊಳ್ಳಬೇಕು' ಎಂದು ಸ್ಥಳೀಯರು ಮನವಿ ಮಾಡಿದರು.



ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ದುಬಾರೆಯಲ್ಲಿ ದೋಣಿ ಹತ್ತುವ ಜಾಗ ನೀರಿನಲ್ಲಿ ಮುಳುಗಡೆಯಾಗಿದ್ದು, ಸಾಕಾನೆ ಶಿಬಿರಕ್ಕೆ ಪ್ರವಾಸಿಗರ ಪ್ರವೇಶವನ್ನು ನಿಷೇಧಿಸಲಾಗಿದೆ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.15	41,930	31,024
ಹಾರಂಗಿ	2,859	2,857.07	6,699	6,479
ಕಬಿನಿ	2,284	2,283.63	30,254	36,350
ಹೇಮಾವತಿ	2,922	2,921.35	30,254	36,350
ಲಿಂಗನಮಕ್ಕಿ	1,819	1,816.20	48,393	20,000
ಸೂಪಾ (ಮೀ)	564	554.62	41,905	229.46
ಮಾಣಿ	595	592.38	10,091	-
ತುಂಗಭದ್ರಾ	1,633	1,624.44	1,25,164	1,31,074
ಮಲಪ್ರಭಾ	2,079.5	2,077.95	15,375	12,794
ಘಟಪ್ರಭಾ	2175	2,175	20,755	17,535
ಭದ್ರಾ *	186	34,742	34,742	38,342
ಆಲಮಟ್ಟಿ (ಮೀ)	519.6	519.05	88,126	2,00,000
ನಾರಾಯಣಪುರ (ಮೀ)	492.25	491.49	1,80,000	2,04,000

* ನೆಲಮಟ್ಟದಿಂದ

ಕಲ್ಯಾಣದಲ್ಲಿ ವರ್ಷಧಾರೆ: ಮುಳುಗಿದ ಸೇತುವೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಮಂಗಳವಾರವೂ ಭಾರಿ ಮಳೆಯಾಗಿದ್ದು, ನದಿ, ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿವೆ. ಸೇತುವೆ, ದೇವಸ್ಥಾನಗಳು ಮುಳುಗಡೆಯಾಗಿವೆ. ನಾರಾಯಣಪುರದ ಬಸವಸಾಗರ ಜಲಾಶಯದಿಂದ ಕೃಷ್ಣಾ ನದಿಗೆ 2 ಲಕ್ಷ ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದೆ.

ಜಲಾಶಯದಿಂದ ನೀರು ಬಿಟ್ಟಿರುವ ಕಾರಣ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಸೇತುವೆ ಮುಳುಗಿದೆ. ಇದರಿಂದಾಗಿ ಯಳಗುಂದಿ, ಹಂಚಿನಾಳ, ಕಡದರಗಡ್ಡಿ, ಯರಗೋಡಿ ಗ್ರಾಮಗಳ ನೇರ ಸಂಪರ್ಕ ಕಡಿದು ಹೋಗಿದೆ.

ಹೊಸಪೇಟೆಯ ತುಂಗಭದ್ರಾ ಜಲಾಶಯದಿಂದ 1.40 ಲಕ್ಷ ಕ್ಯೂಸೆಕ್ ನೀರು ತುಂಗಭದ್ರಾ ನದಿಗೆ ಹರಿಬಿಟ್ಟಿರುವುದರಿಂದ ಮಾನ್ವಿ ತಾಲ್ಲೂಕಿನ ತುಂಗಭದ್ರಾ ನದಿಪಾತ್ರದ ಗ್ರಾಮಗಳ ಗ್ರಾಮಸ್ಥರಿಗೆ ಪ್ರವಾಹ ಭೀತಿ ಉಂಟಾಗಿದೆ. ಯಾದಗಿರಿ ತಾಲ್ಲೂಕಿನ ಪಗಲಾಪುರ–ಕೋಯಿಲೂರ ನಡುವಿನ ಹಳ್ಳದ ತಾತ್ಕಾಲಿಕ ರಸ್ತೆ ಕೊಚ್ಚಿ ಹೋಗಿದೆ.

ಸತತ ಮಳೆಗೆ ಬೀದರ್ ಜಿಲ್ಲೆಯ ಕಾರಂಜಾ ಜಲಾಶಯ ಸಂಪೂರ್ಣ ಭರ್ತಿಯಾಗಿದ್ದು, ಮಂಗಳವಾರ ನದಿಗೆ ನೀರು ಹರಿಸಿದ ಕಾರಣ ಭಾಲ್ಕಿ ತಾಲ್ಲೂಕಿನ ಕಟ್ಟಿ ತೂಗಾಂವ್ ಗ್ರಾಮದ ಮಲ್ಲಿಕಾರ್ಜುನ ದೇವಾಲಯ ಸಂಪೂರ್ಣ ಮುಳುಗಡೆಯಾಗಿದೆ.



ಕಾರಂಜಾ ಜಲಾಶಯದಿಂದ ಮಂಗಳವಾರ ನದಿಗೆ ನೀರು ಹರಿಸಿದ ಕಾರಣ ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಕಟ್ಟಿ ತೂಗಾಂವ್ ಗ್ರಾಮದ ಮಲ್ಲಿಕಾರ್ಜುನ ದೇವಾಲಯ ಮುಳುಗಡೆಯಾಗಿದೆ

ಬೀದರ್, ಬಸವಕಲ್ಯಾಣ, ಹುಲಸೂರ ಹಾಗೂ ಭಾಲ್ಕಿಯಲ್ಲಿ ಮಳೆಯಾಗಿದೆ. ಕಮಲನಗರ ತಾಲ್ಲೂಕಿನಲ್ಲಿ 2 ಸಾವಿರ ಹಾಗೂ ಔರಾದ್ ತಾಲ್ಲೂಕಿನಲ್ಲಿ 1,500 ಹೆಕ್ಟೇರ್ ಬೆಳೆ ಹಾಳಾಗಿದೆ. ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ನೀರು ಹರಿಸುತ್ತಿರುವ ಕಾರಣ ಜಿಲ್ಲೆಯ ಮಾಂಜ್ರಾ ನದಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ. ಭಾಲ್ಕಿ ತಾಲ್ಲೂಕಿನ ಲಖನಗಾಂವ ಗ್ರಾಮದ ಬಳಿ ಮಾಂಜ್ರಾ ನದಿಗೆ ನಿರ್ಮಿಸಿರುವ ಸೇತುವೆ ಮೇಲಿಂದ ನೀರು ಹರಿಯುತ್ತಿರುವುದರಿಂದ ಸಂಚಾರ ಬಂದ್ ಆಗಿದೆ.

ಕಲಬುರಗಿ ಜಿಲ್ಲೆಯಲ್ಲಿ ಮಳೆ ಅಬ್ಬರ ಮುಂದುವರಿದಿದ್ದು, ಕಾಳಗಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ಬೆಣ್ಣೆತೊರಾ ಜಲಾಶಯದ ಹಿನ್ನೀರು ಗ್ರಾಮಕ್ಕೆ ನುಗ್ಗಿದೆ. ಇದರಿಂದಾಗಿ ಗ್ರಾಮಸ್ಥರು ತಮ್ಮ ಮನೆ, ಅಂಗಡಿಗಳನ್ನು ತೊರೆದು ಬೇರೆಡೆ ಸ್ಥಳಾಂತರಗೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ಭೀಮಾ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಅಫಜಲಪುರ ತಾಲ್ಲೂಕಿನ ಸೊನ್ನ ಭೀಮಾ ಬ್ಯಾರೇಜಿನಿಂದ ನದಿಗೆ 15 ಸಾವಿರ ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದೆ.

ಕಡಗರವಳ್ಳಿ ಕುಸಿದ ಶಾಲಾ ಚಾವಣಿ

ಮೈಸೂರು: ಮೈಸೂರು ಭಾಗದ ಕೊಡಗು ಮತ್ತು ಹಾಸನದಲ್ಲಿ ಮಳೆ ನಿಯಂತ್ರಣಕ್ಕೆ ಬಂದರೂ, ನದಿ, ತೊರೆಗಳು ಭೋರ್ಗರೆಯುತ್ತಿವೆ.

ಸಕಲೇಶಪುರ ತಾಲ್ಲೂಕಿನ ಹೆಗ್ಗದ್ದೆ ಬಳಿ ಹೆದ್ದಾರಿ ಪಕ್ಕ ನಿರಂತರ ಭೂಕುಸಿತವಾಗುತ್ತಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿಲ್ಲ. ಕಡಗರವಳ್ಳಿಯಲ್ಲಿ ಶಾಲೆಯ ಚಾವಣಿ ಕುಸಿದಿದೆ. ಶಾಲೆಗೆ ರಜೆ ಘೋಷಿಸಿದ್ದರಿಂದ ಅನಾಹುತ ತಪ್ಪಿದೆ. ಅರಕಲಗೂಡು ತಾಲ್ಲೂಕಿನ ವಿವಿಧೆಡೆ 10 ಮನೆಗಳಿಗೆ ಹಾನಿಯಾಗಿದೆ. ನಾಪೋಕ್ಲು ಸಮೀಪದ ಮರಂದೋಡ ಗ್ರಾಮದ ಅನ್ನಾಡಿಯಂಡ ಕುಟುಂಬಸ್ಥರ ಐನ್‌ಮನೆಯ ಒಂದು ಭಾಗ ಸಂಪೂರ್ಣ ಬಿದ್ದಿದೆ.

ಕಾವೇರಿ, ಕಬಿನಿ ಜಲಾಶಯದಿಂದ ನೀರನ್ನು ಹರಿಸಿರುವುದರಿಂದ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕಾವೇರಿ ನದಿಪಾತ್ರದ ಮುಳ್ಳೂರು, ಹಳೆ ಹಂಪಾಪುರ, ದಾಸನಪುರ, ಸತ್ತೇಗಾಲ ಅಗ್ರಹಾರ ಭಾಗದ ರೈತರ ಜಮೀನುಗಳು ಭಾಗಶಃ ಜಲಾವೃತವಾಗಿವೆ.

ಹೊರ ಹರಿವು 2 ಲಕ್ಷ ಕ್ಯೂಸೆಕ್‌ಗೆ ಹೆಚ್ಚಳ

ಆಲಮಟ್ಟಿ: ಮಹಾರಾಷ್ಟ್ರ ಹಾಗೂ ಕರ್ನಾಟಕದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಮುಂಜಾಗ್ರತೆಯ ಕ್ರಮವಾಗಿ ಮಂಗಳವಾರ ಸಂಜೆಯಿಂದ ಆಲಮಟ್ಟಿ ಜಲಾಶಯದ ಹೊರಹರಿವನ್ನು 2 ಲಕ್ಷ ಕ್ಯೂಸೆಕ್‌ಗೆ ಹೆಚ್ಚಿಸಲಾಗಿದೆ. ಬೆಳಿಗ್ಗೆ 1.50 ಲಕ್ಷ ಕ್ಯೂಸೆಕ್ ಇದ್ದ ಹೊರಹರಿವನ್ನು ಬೆಳಿಗ್ಗೆ 10ಕ್ಕೆ 1.75 ಲಕ್ಷ ಕ್ಯೂಸೆಕ್‌ಗೆ ಹಾಗೂ ಸಂಜೆ 6ಕ್ಕೆ 2 ಲಕ್ಷ ಕ್ಯೂಸೆಕ್‌ಗೆ ಹೆಚ್ಚಿಸಲಾಗಿದೆ. ಇದು ಈ ವರ್ಷದ ಗರಿಷ್ಠ ಹೊರಹರಿವು.



ಹೊಸಪೇಟೆ ಸಮೀಪದ ತುಂಗಭದ್ರಾ ಅಣೆಕಟ್ಟೆಯ 26 ಗೇಟ್‌ಗಳನ್ನು ತೆರೆದು ಮಂಗಳವಾರ ನದಿಗೆ ನೀರು ಹರಿಸಲಾಯಿತು ಪ್ರಜಾವಾಣಿ ಚಿತ್ರ/ ಲವ ಕೆ.



ಬೆಳಗಾವಿ ತಾಲ್ಲೂಕಿನ ಹುಚ್ಚಾವ– ಸುಳಗಾ ಗ್ರಾಮಗಳ ಮಧ್ಯೆ ಅಪಾರ ಪ್ರಮಾಣ ನೀರು ಭತ್ತದ ಗದ್ದೆಗಳಿಗೆ ನುಗ್ಗಿದೆ ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

102 ವರ್ಷದ ತಾಯಿಯನ್ನು ಹೆಗಲ ಮೇಲೆ ಹೊತ್ತು ಕೆಂಪಟ್ಟಿ ಗ್ರಾಮದಿಂದ 220 ಕಿ.ಮೀ ಪಾದಯಾತ್ರೆ

ತಾಯಿ ಹೊತ್ತುಕೊಂಡು ವಿಠಲನ ದರ್ಶನ ಮಾಡಿಸಿದ ಮಗ

ಪ್ರಜಾವಾಣಿ ವಾರ್ತೆ

ರಾಯಬಾಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಕೆಂಪಟ್ಟಿ ಗ್ರಾಮದ ಸದಾಶಿವ ಬಾನೆ ಎಂಬುವರು ತಮ್ಮ 102 ವರ್ಷದ ತಾಯಿ ಸತ್ಯವ್ವ ಅವರನ್ನು ಹೆಗಲ ಮೇಲೆ ಹೊತ್ತುಕೊಂಡು 220 ಕಿ.ಮೀ ದೂರದ ಪಂಢರಪುರದ ವಿಠಲನ ದರ್ಶನ ಮಾಡಿಸಿದ್ದಾರೆ.

ಪಂಡರಾಪುರ ವಿಠಲನ ಭಕ್ತರಾದ ಸದಾಶಿವ ಬಾನೆ ಅವರು 15 ವರ್ಷಗಳಿಂದ ದಿಂಡಿಪಾದಯಾತ್ರೆ ಮೂಲಕ ಪಂಢರಪುರಕ್ಕೆ ಹೋಗುತ್ತಾರೆ. ಶತಾಯುಷಿ ತಾಯಿಯನ್ನು ಒಮ್ಮೆಯಾದರೂ ಪಂಡರಾಪುರ ದಿಂಡಿ ಪಾದಯಾತ್ರೆ ಮೂಲಕ ಹೆಗಲ ಮೇಲೆ ಹೊತ್ತು ವಿಠಲನ ದರ್ಶನ ಮಾಡಿಸುವ ಆಸೆ ಹೊಂದಿದ್ದರು. ಭಾರಿ ಮಳೆಯಲ್ಲೂ ಕುಗ್ಗದೇ ತಾಯಿಯನ್ನು ಸತತ ಒಂಬತ್ತು ದಿನ ಪಂಡರಾಪುರ ದಿಂಡಿ ಪಾದಯಾತ್ರೆ ಮೂಲಕ, ಒಬ್ಬರೇ ತಾಯಿಯನ್ನು ಹೆಗಲ ಮೇಲೆ ಹೊತ್ತು ವಿಠಲನ ದರ್ಶನ ಮಾಡಿಸಿದ್ದಾರೆ.

'ತಾಯಿಯೇ ನಿಜವಾದ ದೇವರು. ಅವರ ಆಸೆ ಈಡೇರಿಸುವುದು ಮಕ್ಕಳ ಕರ್ತವ್ಯ. ಅದಕ್ಕೆ ನಮ್ಮ ಕೆಂಪಟ್ಟಿ ಗ್ರಾಮದಿಂದ ಹೊರಟು ಪಾಂಡುರಂಗ ವಿಠಲನ ದರ್ಶನ ಮಾಡಿಸಿದೆ. ಹೋಗುವಾಗ ವಿಠಲನ ದಯೆಯಿಂದ ಯಾವುದೇ ರೀತಿಯ ಆಯಾಸ, ತೊಂದರೆ ಆಗಲೇ ಇಲ್ಲ' ಎಂದು ಸದಾಶಿವ ಬಾನೆ ತಿಳಿಸಿದರು.

'ನನ್ನ ಜನ್ಮ ಸಾರ್ಥಕವಾಯಿತು. ನನ್ನ ಕಿರಿಯ ಮಗ ನನ್ನ ಜೀವನದ ಕೊನೆಯ ಆಸೆ ಈಡೇರಿಸಿದ. ನನ್ನ ಮುಂದಿನ ಜನ್ಮ ಎಂಬುದು ಇದ್ದರೆ, ಮತ್ತೆ ಅವನ ತಾಯಿಯಾಗಿ ಹುಟ್ಟುವ ಆಸೆ' ಎಂದು ಸತ್ಯವ್ವ ಬಾನೆ ತಿಳಿಸಿದರು.

ಮುಖ್ಯಾಂಶಗಳು
- ಪಂಢರಪುರ ವಿಠಲನ ಭಕ್ತರಾದ ಸದಾಶಿವ ಬಾನೆ
- ಸತತ ಒಂಬತ್ತು ದಿನ ದಿಂಡಿ ಪಾದಯಾತ್ರೆ



ರಾಯಬಾಗ ತಾಲ್ಲೂಕಿನ ಕೆಂಪಟ್ಟಿ ಗ್ರಾಮದ ಸದಾಶಿವ ಬಾನೆ ತಮ್ಮ ತಾಯಿ ಸತ್ಯವ್ವ ಬಾನೆ ಅವರನ್ನು ಹೆಗಲ ಮೇಲೆ ಹೊತ್ತುಕೊಂಡು ಪಂಢರಪುರ ವಿಠಲನ ದರ್ಶನ ಮಾಡಿಸಿದರು

ಹೆಬ್ಬಾಳ ಜಂಕ್ಷನ್: ಕೊಂಚ ತಗ್ಗಿದ ದಟ್ಟಣೆ

ದಟ್ಟಣೆ ಅವಧಿಯಲ್ಲಿ ಸಂಚಾರ ನಿಧಾನ, ಕಾಯುವ ಅವಧಿ ಇಳಿಕೆ
ಸರ್ವೀಸ್ ರಸ್ತೆಯಲ್ಲೇ ಸಾಗುತ್ತಿರುವ ಬಹುತೇಕ ಸವಾರರು

• ಕೆ.ಎಸ್.ಸುನಿಲ್

ಬೆಂಗಳೂರು: ಹೆಬ್ಬಾಳ ಜಂಕ್ಷನ್ ಬಳಿ ಸಂಚಾರಕ್ಕೆ ಮುಕ್ತವಾಗಿರುವ ಲೂಪ್‌ನಿಂದಾಗಿ (ಪಥ) ಕೊಂಚ ಮಟ್ಟಿಗೆ ಸಂಚಾರ ದಟ್ಟಣೆ ತಗ್ಗಿದೆ. ದಟ್ಟಣೆ ಅವಧಿಯಾದ ಬೆಳಿಗ್ಗೆ ಮತ್ತು ಸಂಜೆ ವಾಹನಗಳು ನಿಧಾನಗತಿಯಲ್ಲಿ ಸಾಗುತ್ತಿವೆ.

ನಾಗವಾರ– ಕೆ.ಆರ್.ಪುರ ಕಡೆಯಿಂದ ಮೇಖ್ರಿ ವೃತ್ತದ ಕಡೆ ಸಾಗುವ ವಾಹನಗಳ ಸುಗಮ ಸಂಚಾರಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ ಲೂಪ್ ಅನ್ನು ಸೋಮವಾರ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಯಿತು. ದಟ್ಟಣೆ ಅವಧಿಯಲ್ಲಿಯೇ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಹಾಗಾಗಿ ಸಮಾರಂಭ ಮುಗಿಯುತ್ತಿದ್ದಂತೆಯೇ ವಾಹನಗಳು ಸಾಲುಗಟ್ಟಿ ನಿಂತ ಕಾರಣ ಸವಾರರು ಪರದಾಡಿದ್ದರು.

ಎರಡನೇ ದಿನವಾದ ಮಂಗಳವಾರ ಬೆಳಿಗ್ಗೆ ಸ್ಥಳಕ್ಕೆ ಭೇಟಿ ನೀಡಿದ ವೇಳೆ ಹೊಸ ಪಥದಲ್ಲಿ ವಿಪರೀತ ವಾಹನ ದಟ್ಟಣೆಯ ಕಾರಣ ನಿಧಾನಗತಿಯಲ್ಲಿ ಸಂಚರಿಸುತ್ತಿರುವುದು ಕಂಡುಬಂತು. ಹೆಬ್ಬಾಳ ಮೇಲ್ಸೇತುವೆ, ಬಳ್ಳಾರಿ ರಸ್ತೆ, ಮೇಖ್ರಿ ವೃತ್ತ ಹಾಗೂ ಪಕ್ಕದ ರಸ್ತೆಗಳಲ್ಲಿ ಅಷ್ಟೇನೂ ವಾಹನದಟ್ಟಣೆ ಕಂಡು ಬರಲಿಲ್ಲ.

ವಾಹನಗಳು ಸುಗಮವಾಗಿ ಬಂದರೂ ಮೇಲ್ಸೇತುವೆ ಇಳಿಯುತ್ತಿದ್ದಂತೆಯೇ ಸರ್ವೀಸ್ ರಸ್ತೆಯಿಂದಲೂ ವಾಹನಗಳು ಬಂದು ಸೇರಿಕೊಳ್ಳುತ್ತವೆ. ಇದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಮೇಲ್ಸೇತುವೆ ಮತ್ತು ಸರ್ವೀಸ್ ರಸ್ತೆಯಲ್ಲಿ ವಾಹನಗಳು ಸಾಗಿ ಮುಂದೆ ಬರುವ ಹೊತ್ತಿಗೆ ಯಲಹಂಕ, ದೇವನಹಳ್ಳಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಭಾಗಗಳಿಂದ ಬರುವ ನೂರಾರು ಬಸ್‌ಗಳು ಸೇರುತ್ತವೆ. ಈ ವಾಹನಗಳು ಬ್ಯಾಪ್ಟಿಸ್ಟ್ ಆಸ್ಪತ್ರೆ ಎದುರಿನ ಬಸ್ ನಿಲ್ದಾಣದಲ್ಲಿ ನಿಲ್ಲುತ್ತವೆ. ಮುಖ್ಯ ರಸ್ತೆಯಲ್ಲೇ ಪ್ರಯಾಣಿಕರ ದಂಡು ಕಂಡುಬಂತು.

ಹೆಬ್ಬಾಳ ಸುತ್ತಮುತ್ತಲಿನ ನಿವಾಸಿಗಳು ಅಡ್ಡರಸ್ತೆಗಳ ಮೂಲಕ ಬಂದವರು ಸರ್ವೀಸ್ ರಸ್ತೆಯಲ್ಲೇ ಬರುತ್ತಾರೆ. ಇಲ್ಲವಾದರೆ ವಿ. ನಾಗೇನಹಳ್ಳಿ ರಸ್ತೆ ಮಾರ್ಗವಾಗಿ ಬಳಸಿಕೊಂಡು ಬರುವಂತಾಗುತ್ತದೆ. ಹೀಗಾಗಿ, ಬಹುತೇಕ ಸವಾರರು ಸರ್ವೀಸ್ ರಸ್ತೆಯಲ್ಲೇ ಸಾಗುತ್ತಿದ್ದಾರೆ.

ಸಂಚಾರ ಪೊಲೀಸರ ಪ್ರಕಾರ, ಹೆಬ್ಬಾಳ ಜಂಕ್ಷನ್‌ನಲ್ಲಿ ನಿತ್ಯ ಅಂದಾಜು ನಾಲ್ಕು ಲಕ್ಷ ವಾಹನಗಳು ಸಂಚರಿಸುತ್ತವೆ. ಅದರಲ್ಲೂ ಬೆಳಿಗ್ಗೆ ಮತ್ತು ಸಂಜೆ ಅವಧಿಯಲ್ಲಿ ಪ್ರತಿ ಗಂಟೆಗೆ ಸರಾಸರಿ ಐವತ್ತು ಸಾವಿರ ವಾಹನಗಳು ಸಂಚರಿಸುತ್ತವೆ. ಲೂಪ್ ಉದ್ಘಾಟನೆಗೂ ಮುನ್ನ ಜಂಕ್ಷನ್‌ನಲ್ಲಿ ಅರ್ಧ ತಾಸಿಗೂ ಹೆಚ್ಚು ಕಾಯಬೇಕಾಗಿತ್ತು. ಆದರೆ, ಈಗ ಕಾಯುವ ಅವಧಿ 10ರಿಂದ 15 ನಿಮಿಷಕ್ಕೆ ಇಳಿದಿದೆ.

'ಮೇಖ್ರಿ ವೃತ್ತದ ಕಡೆ ಹೋಗುವ ಪ್ರಯಾಣಿಕರಿಗೆ ಹೆಬ್ಬಾಳದ ಪಾಲಿಕೆ ಕಚೇರಿ ಬಳಿ ಬಸ್ ನಿಲ್ದಾಣವಿತ್ತು. ಲೂಪ್ ನಿರ್ಮಾಣದ ಕಾರಣ ಅದನ್ನು ಬ್ಯಾಪ್ಟಿಸ್ಟ್ ಆಸ್ಪತ್ರೆ ಮುಂಭಾಗಕ್ಕೆ ಸ್ಥಳಾಂತರಿಸಲಾಯಿತು. ಈಗ ಬ್ಯಾಪ್ಟಿಸ್ಟ್ ಬಳಿಯೇ ಬಸ್ ನಿಲ್ದಾಣ ಮುಂದುವರಿದರೆ ನಡು ರಸ್ತೆಯಲ್ಲೇ ಬಸ್‌ಗಳು ನಿಲ್ಲುವುದರಿಂದ ಸಂಚಾರ ದಟ್ಟಣೆ ಇನ್ನೂ ಹೆಚ್ಚುತ್ತದೆ. ಹಾಗಾಗಿ ಈ ಸಮಸ್ಯೆ ಬಗೆಹರಿಸಬೇಕು' ಎಂದು ಸ್ಥಳೀಯರು ಆಗ್ರಹಿಸಿದರು.

'ಕೊಡಿಗೇಹಳ್ಳಿ, ಸಹಕಾರ ನಗರ ಒಳಗೊಂಡಂತೆ ವಿಮಾನ ನಿಲ್ದಾಣ ಕಡೆಯಿಂದ ನಗರದ ಕಡೆಗೆ ಸಂಚಾರಕ್ಕೆ ಅನುಕೂಲವಾಗುವಂತೆ ಮೇಲ್ಸೇತುವೆಯಲ್ಲಿ ಎರಡು ಪಥಗಳನ್ನು ನಿರ್ಮಿಸಲಾಗುತ್ತಿದೆ. ತುಮಕೂರು ಕಡೆಯಿಂದ ಕೆ.ಆರ್.ಪುರ ಕಡೆಗೆ ಸಂಚರಿಸಲು ಕೆಳಸೇತುವೆ ಮತ್ತು ಕೆ.ಆರ್.ಪುರ ಕಡೆಯಿಂದ ವಿಮಾನ ನಿಲ್ದಾಣ ಕಡೆಗೆ ಮೇಲ್ಸೇತುವೆ ಕಾಮಗಾರಿ ಆರಂಭಿಸಿದೆ. ಈ ಎಲ್ಲ ಕಾಮಗಾರಿಗಳು ಪೂರ್ಣಗೊಂಡರೆ ವಿಮಾನ ನಿಲ್ದಾಣದಿಂದ ತುಮಕೂರು ಕಡೆಗಿನ ಸಂಚಾರ ಬಹುತೇಕ ಸಿಗ್ನಲ್ ಮುಕ್ತವಾಗಲಿದೆ. ಇದರಿಂದ ಸಂಚಾರ ಸಮಸ್ಯೆಗೂ ಪರಿಹಾರ ಸಿಗಲಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಸಂಚಾರ ದಟ್ಟಣೆ ಶೇಕಡ 25ರಷ್ಟು ಕಡಿಮೆ

'ಲೂಪ್ ಉದ್ಘಾಟನೆಗೂ ಮುನ್ನ ಸಂಚಾರ ದಟ್ಟಣೆ ಹೆಚ್ಚಾಗಿತ್ತು. ಈಗ ಹೆಬ್ಬಾಳ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಶೇಕಡ 25ರಷ್ಟು ತಗ್ಗಿದೆ. ಬೆಳಿಗ್ಗೆ ಮತ್ತು ಸಂಜೆ ವಾಹನ ದಟ್ಟಣೆ ಅಧಿಕ. ಆಗ ಮಾತ್ರ ವಾಹನಗಳ ಸಂಚಾರ ನಿಧಾನವಾಗಿರುತ್ತದೆ. ಇದನ್ನು ಹೊರತುಪಡಿಸಿದರೆ ಉಳಿದ ಅವಧಿಯಲ್ಲಿ ಸುಗಮ ಸಂಚಾರವಿದೆ. ಈಗ ಹೊಸ ಪಥ ಆರಂಭಗೊಂಡಿದೆ. 'ಇನ್ನೊಂದು ಭಾಗದ ಪಥ ಪೂರ್ಣಗೊಂಡರೆ, ಸಂಚಾರ ದಟ್ಟಣೆ ಮತ್ತಷ್ಟು ಕಡಿಮೆ ಆಗಲಿದೆ' ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳು ತಿಳಿಸಿದರು.



ಹೆಬ್ಬಾಳ ಜಂಕ್ಷನ್ ಬಳಿ ನಿರ್ಮಿಸಿರುವ ನೂತನ ಪಥದಲ್ಲಿ ವಾಹನಗಳು ಸಂಚರಿಸಿದವು ಪ್ರಜಾವಾಣಿ ಚಿತ್ರ



ಮಹೇಶ್ವರ್ ರಾವ್ ಅವರು ಯಲಹಂಕದ ರಾಜಕಾಲುವೆಯ ಬಫರ್ ವಲಯದಲ್ಲಿ ನಿರ್ಮಿಸಲಾಗುವ ರಸ್ತೆಯ ಸ್ಥಳ ಪರಿಶೀಲನೆ ನಡೆಸಿದರು

'ರಾಜಕಾಲುವೆ ಬಫರ್: ಶೀಘ್ರ ರಸ್ತೆ ನಿರ್ಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ವಲಯದ ಜಕ್ಕೂರು ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿವರೆಗೆ ರಾಜಕಾಲುವೆ ಬಫರ್ ವಲಯದಲ್ಲಿ ರಸ್ತೆಯನ್ನು ತ್ವರಿತವಾಗಿ ನಿರ್ಮಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಯಲಹಂಕ ವಲಯ ವ್ಯಾಪ್ತಿಯಲ್ಲಿ ವಿವಿಧ ಸ್ಥಳಗಳಲ್ಲಿ ಮಂಗಳವಾರ ಪರಿಶೀಲನೆ ನಡೆಸಿದ ಅವರು, 'ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಈ ಪ್ರದೇಶದಲ್ಲಿ ಹಾದು ಹೋಗಲಿದ್ದು, ಅದಕ್ಕೆ ಸಂಪರ್ಕ ಕಲ್ಪಿಸುವ ಪರ್ಯಾಯ ರಸ್ತೆಗಳನ್ನು ನಿರ್ಮಿಸಬೇಕು' ಎಂದರು.

ಯಲಹಂಕದ ಕೋಗಿಲು ಜಂಕ್ಷನ್‌ನಿಂದ ಜಕ್ಕೂರು ಕೆರೆಯವರೆಗೆ ಹೊಸದಾಗಿ ಸುಮಾರು 15 ಮೀಟರ್ ಅಗಲದ ರಾಜಕಾಲುವೆ ಹಾಗೂ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಅದಕ್ಕೆ ಜಕ್ಕೂರು ರಸ್ತೆಯಿಂದ ಜಲಮಂಡಳಿ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಮೂಲಕ ಸಂಪರ್ಕ ಕಲ್ಪಿಸುವ ಕುರಿತು ಪರಿಶೀಲಿಸಿ ಕ್ರಮವಹಿಸಲು ಸೂಚಿಸಿದರು.

ರೈತರ ಸಂತೆ ಬಳಿ ಕಲ್ಯಾಣಿ ಇದ್ದು, ಅದನ್ನು ಪುನರುಜ್ಜೀವನಗೊಳಿಸಿ ಅದಕ್ಕೆ ನೀರನ್ನು ತುಂಬಿಸಲು ಕ್ರಮವಹಿಸಬೇಕು. ರಸ್ತೆ ಬದಿ ತ್ಯಾಜ್ಯ ಬಿಸಾಡಿರುವುದನ್ನು ತೆರವುಗೊಳಿಸಿ, ಮತ್ತೆ ಕಸ ಬೀಳದಂತೆ ಕ್ರಮವಹಿಸಬೇಕು. ಜಕ್ಕೂರು ಕೆರೆ ಅಂಗಳದಲ್ಲಿ ವಾಯು ವಿಹಾರ ಮಾರ್ಗವನ್ನು ಸರಿಯಾಗಿ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಕ್ಕೂರಿನ ರೈತರ ಸಂತೆ ರಸ್ತೆ 2.5 ಕಿ.ಮೀ ಉದ್ದದ ವೈಟ್ ಟಾಪಿಂಗ್ ರಸ್ತೆ ಕಾಮಗಾರಿ, ಜಕ್ಕೂರು ಬಳಿ ರೈಲ್ವೆ ಮೇಲ್ಸೇತುವೆ ಕಾಮಗಾರಿಯನ್ನು ಶೀಘ್ರ ಮುಗಿಸಲು ಸೂಚಿಸಿದರು.

ಎಸ್‌ಒಪಿ: ನಗರದಲ್ಲಿ ರಸ್ತೆ ಗುಂಡಿ ಮುಚ್ಚಲು ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣಾ ವಿಧಾನದ (ಎಸ್‌ಒಪಿ) ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಎಲ್ಲ ಎಂಜಿನಿಯರ್‌ಗಳಿಗೆ ಸಮಗ್ರ ಮಾಹಿತಿಯನ್ನು ನೀಡಲಾಯಿತು.

ಯೋಜನಾ ವಿಭಾಗದ ವಿಶೇಷ ಆಯುಕ್ತ ಕರೀಗೌಡ, ವಲಯ ಆಯುಕ್ತರಾದ ಸತೀಶ್, ರಮೇಶ್, ಜಂಟಿ ಆಯುಕ್ತ ಸಂಗಪ್ಪ, ದಾಕ್ಷಾಯಿಣಿ ಇದ್ದರು.

PUBLIC NOTICE

BEFORE THE GOA MICRO AND SMALL ENTERPRISES FACILITATION COUNCIL OFFICE OF THE DIRECTORATE OF INDUSTRIES, TRADE AND COMMERCE, UDYOG BRAVAN, PANAJI-GOA

CASE No. GA/01/S/GOA/00376

Rututek Enterprises .....Petitioner
Plot No. D7,Madkaim Industrial Estate, Madkaim, Ponda-Goa. 403404
V/S
Eram Scientific Solutions Private Limited, ...Respondent
727/34-72, Cross, 5"Block, Rajaji Nagar, Bangalore, Karnataka 560010.
AND
Eram Scientific Solutions Private Limited, 707/First Floor, 73 Cross, Opp Dina Thanti. Office, Rajaji Nagar, Bangalore, Karnataka 560010

NOTICE

To,
Eram Scientific Solutions Private Limited,.....Respondent
727/34-72, Cross, 5thBlock, Rajaji Nagar, Bangalore, Karnataka 560010.
AND
Eram Scientific Solutions Private Limited, 707/first Floor, 73 Cross, Opp Dina Thanti. Office, Rajaji Nagar, Bangalore. Karnataka 560010.

WHEREAS, the above name Petitioner has made a request for substituted service and the same was allowed by the Goa Micro and Small Enterprises Facilitation Council.

AND WHEREAS, the application/reference/ notice copies dated 12/12/2022,16/05/2024 and 30/10/2024 were sent by Registered Post A/D through the Office of the Directorate of Industries, Trade, and Commerce, Udyog Bhavan, Panaji, Goa and the same has been returned withendorsement "No such firm in this address hence return to sender 17/12/2022, 21/05/2024 Address Left 20/05/2024 and Left return to sender 08/11/24.

AND WHEREAS, Petitioner has made request to this Council praying that Respondent may be served by substituted service by way of publication of this notice in a daily Newspapers of the area where Respondent is located by circulating in the locality and the Chairperson of this Council is satisfied that this is a fit case for ordering such service.

NOW THEREFORE, notice is hereby given to you under order V Rule 20(1A) of C.P.C to appear before the Council either in person or your duly authorized representative pleader on 12/09/2025 at 3.00 P.M. and to file your reply if any on the above-mentioned application.

TAKE FURTHER, notice that in default of your appearance on the above said date and time, the matter will be heard and determined in your absence and this is last and final opportunity to appear and plead before Goa Micro and Small Enterprises Facilitation Council.

GIVEN under my hand and the seal of the Council, this 12 day of August 2025.

SEAL SD/- (Asvin Chandru A, IAS) Chairperson (Council)

ಚಿಟಿಕೆ ಸುದ್ದಿ

ವಾಗ್ದೇವಿ ಕಲಾ ಉತ್ಸವ 22ರಿಂದ

ಬೆಂಗಳೂರು: ಪುರಾತನ ಸನಾತನ ಭವ್ಯ ಭಾರತ ಶೀರ್ಷಿಕೆ ಅಡಿಯಲ್ಲಿ ಆಗಸ್ಟ್ 22 ಮತ್ತು 23ರಂದು 'ವಾಗ್ದೇವಿ ಕಲಾ ಉತ್ಸವ'ವನ್ನು ಮಾರತ್ತಹಳ್ಳಿಯ ವಾಗ್ದೇವಿ ವಿಲಾಸ ಶಾಲೆಯಲ್ಲಿ ಆಯೋಜಿಸಲಾಗಿದೆ.

ಆ. 22ರಂದು ಇಸ್ರೊದ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಉದ್ಘಾಟಿಸಲಿದ್ದು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ರಮಾನಂದಾಚಾರ್ಯ ಅವರನ್ನು 23ರಂದು ಸನ್ಮಾನಿಸಲಾಗುತ್ತದೆ. ಶತಾವಧಾನಿ ಆರ್. ಗಣೇಶ್ ಭಾಗವಹಿಸಲಿದ್ದಾರೆ.

ಉತ್ಸವದಲ್ಲಿ ಭಾರತೀಯ ಕಲೆ, ಇತಿಹಾಸ ಮತ್ತು ಪರಂಪರೆಯ ಮೇಲೆ 50ಕ್ಕೂ ಹೆಚ್ಚು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶದ 100ಕ್ಕೂ ಹೆಚ್ಚು ಶಾಲೆಗಳ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ. ಹರೀಶ್ ತಿಳಿಸಿದ್ದಾರೆ. ಮಾಹಿತಿಗೆ 80500 05851

ನಗರದಲ್ಲಿ ಇಂದು

ವಚನ ಶ್ರಾವಣ: ವಚನ ಗಾಯನ: ಟಿ.ಎಂ. ಜಾನಕಿ, ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿ: ಮಹೇಶ್ ಸುಂಕದಕಟ್ಟೆ, ಅಧ್ಯಕ್ಷತೆ: ಶಿವಲಿಂಗೇಗೌಡ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸಹನಾ ಇಂಟರ್‌ನ್ಯಾಷನಲ್ ಸ್ಕೂಲ್, ಅಂದ್ರಹಳ್ಳಿ ಮುಖ್ಯರಸ್ತೆ, ಬೆಳಿಗ್ಗೆ 9.15

'ಯುವ ಸಮ್ಮೇಳನ', 'ರಾಷ್ಟ್ರ, ರಾಜ್ಯ ಯುವ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಬಸವರಾಜ ಹೊರಟ್ಟಿ, ಉಪಸ್ಥಿತಿ: ಕೆ.ಎಚ್. ಮುನಿಯಪ್ಪ, ಅತಿಥಿಗಳು: ಈಶ್ವರ ಬಿ. ಖಂಡ್ರೆ, ಡಾ. ನಾಗಲಕ್ಷ್ಮೀ ಚೌಧರಿ, ಅಧ್ಯಕ್ಷತೆ: ವಿಜಯ ಕುಮಾರ್ ಸೋನಾರೆ, ಆಯೋಜನೆ: ಕರ್ನಾಟಕ ಯುವ ಸಂಘ–ಸಂಸ್ಥೆಗಳ ಒಕ್ಕೂಟ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

ಪಿಪಿಇ–ಓಪನ್ ಸೋರ್ಸ್ ಕಿಟ್' ಬಿಡುಗಡೆ: ಶ್ರೀನಿವಾಸಲು, ಆಯೋಜನೆ: ಹಸಿರು ದಳ, ಸ್ಥಳ: ಎಸ್‌ಸಿಎಂಐ, ಮಿಷನ್ ರಸ್ತೆ, ಬೆಳಿಗ್ಗೆ 10

'ಕರ್ನಾಟಕದ ಸಮತೋಲನ ಅಭಿವೃದ್ಧಿಗೆ ಸಮಗ್ರ ಭೂ ಸ್ವಾಧೀನ ನೀತಿ, ನಿಲುವುಗಳು' ಕುರಿತು ಸಂವಾದ: ಅತಿಥಿಗಳು: ಜಿ.ಆರ್. ಗೋಪಿನಾಥ್, ಬಿ.ಆರ್. ಪಾಟೀಲ, ಎಲ್.ಕೆ. ಅತೀಕ್, ಬಡಗಲಪುರ ನಾಗೇಂದ್ರ, ಜೆ.ಸಿ. ಕ್ರಾಸ್ತ, ಎಸ್.ಜಿ. ಸಿದ್ಧರಾಮಯ್ಯ, ಕಾರಳ್ಳಿ ಶ್ರೀನಿವಾಸ್, ಅಧ್ಯಕ್ಷತೆ: ಕೆ. ನಾರಾಯಣಗೌಡ, ಪ್ರಾಸ್ತಾವಿಕ ನುಡಿ: ಪ್ರಕಾಶ್ ಕಮ್ಮರಡಿ, ಆಯೋಜನೆ: ಕರ್ನಾಟಕ ಜನಮುಖಿ ಚಿಂತಕರು ಮತ್ತು ಸಾಂಸ್ಕೃತಿಕ ದನಿಗಳ ವೇದಿಕೆ, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10

ಡಿ. ದೇವರಾಜ ಅರಸು ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಪ್ರಶಸ್ತಿ ಸ್ವೀಕರಿಸುವವರು: ಕಲ್ಲೆ ಶಿವೋತ್ತಮರಾವ್, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.45

'ಚಕೋರ' ಸಾಹಿತ್ಯ ವಿಚಾರ ವೇದಿಕೆ: ಉದ್ಘಾಟನೆ: ನಿರಂಜನ ವಾನಳ್ಳಿ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, 'ಸ್ವಾತಂತ್ರ್ಯ ಹೋರಾಟಗಾರ ಸುಭಾಷ್ ಚಂದ್ರ ಬೋಸ್' ಕುರಿತು ಉಪನ್ಯಾಸ: ಕೆ.ಇ. ರಾಧಾಕೃಷ್ಣ, ಅತಿಥಿ: ಪ್ರತಿಭಾ ಪಾರ್ಶ್ವನಾಥ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪುರ, ಬೆಳಿಗ್ಗೆ 11

ಮಾಸದ ಮಾತು 'ನುಡಿ ಹಮ್ಮುಗೆ' ಉಪನ್ಯಾಸ: ಆನಂದ ಜಿ., ಅತಿಥಿ: ಕುಸುಮಾ ರಾಜಶೇಖರ್, ಆಯೋಜನೆ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ವಿಮಾನಪುರ, ಮಧ್ಯಾಹ್ನ 3.30

'ನೇತಾಜಿ ಸುಭಾಸ್ ಚಂದ್ರ ಬೋಸ್ ಜೀವನ ಚರಿತ್ರೆ' ಕುರಿತು ಉಪನ್ಯಾಸ: ರಾಜಯ್ಯ, ಅಧ್ಯಕ್ಷತೆ: ಆರ್.ಎಸ್. ಶಾಂತಾರಾಮ್, ಆಯೋಜನೆ ಮತ್ತು ಸ್ಥಳ: ದೀಪಾ ಅಂಧ ಮಕ್ಕಳ ವಸತಿ ಪ್ರೌಢಶಾಲೆ, ಅಂಜನಾನಗರ, ಸಂಜೆ 5

ಮದನ್ ಪಟೇಲ್ ಅವರ 'ಪುನೀತ್–ಎ ಪವರ್ ಥ್ರಿಲ್ಲರ್' ಪುಸ್ತಕ ಬಿಡುಗಡೆ: ಡಿ.ವಿ. ಗುರುಪ್ರಸಾದ್, ಅಧ್ಯಕ್ಷತೆ: ಎಚ್.ಟಿ. ಪೋತೆ, ಪುಸ್ತಕದ ಕುರಿತು: ಮಹಿಪಾಲರೆಡ್ಡಿ ಮುನ್ನೂರು, ಅತಿಥಿ: ದೊಡ್ಡೇಗೌಡ, ಆಯೋಜನೆ: ರಾಷ್ಟ್ರೀಯ ಲೋಕ ಕಲಾ ಪರಿಷತ್ತು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, 5.30

ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ. nagaradalli_indu@prajavani.co.in

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
ಅರಮನೆ ರಸ್ತೆ, ಬೆಂಗಳೂರು–01

ಸಂ: ಮಕ್ಲವಿ/ಆ.ವಿ–006 & 007/2025–26/148 ದಿನಾಂಕ : 18.08.2025

ಟೆಂಡರ್ ದರಪಟ್ಟಿ ಸೂಚನೆ

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಮೆಗಾ ಹಾಸ್ಟೆಲ್‌ಗಾಗಿ CCTV ಮತ್ತು ಸಾಮೂಹಿಕ ಅಡುಗೆ ಉಪಕರಣಗಳನ್ನು ಖರೀದಿಸಲು ಟೆಂಡರ್ ಪೂರ್ವಭಾವಿ Rate quotes ಅನ್ನು ಸರಬರಾಜುದಾರರಿಂದ ಆಹ್ವಾನಿಸಲಾಗಿದೆ. ಅಗತ್ಯ ಪರಿಕರಗಳ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ mcu.karnataka.gov.in ನಲ್ಲಿ ಪ್ರಕಟಿಸಲಾಗಿದ್ದು, ಸದರಿ ಮಾಹಿತಿಯನ್ವಯ Rate quotes ಅನ್ನು **ದಿನಾಂಕ: 26.08.2025 ರೊಳಗಾಗಿ** ವಿಶ್ವವಿದ್ಯಾಲಯಕ್ಕೆ ಇ–ಮೇಲ್ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಇ–ಮೇಲ್ ಐಡಿ: mcublr@gmail.com, mcu@karnataka.gov.in

DIPR/CP/2380/SA/2025-26 ಸಹಿ/– ಕುಲಸಚಿವರು

ಇಂದು ಯುವ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಯುವ ಸಂಘ ಸಂಸ್ಥೆಗಳ ಒಕ್ಕೂಟದಿಂದ ಇದೇ 20ರಂದು ಪುರಭವನದಲ್ಲಿ ಯುವ ಸಮ್ಮೇಳನ ಆಯೋಜಿಸಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಎಚ್.ಎಂ. ಶಿವಕುಮಾರ್, 'ಯುವಜನರ ನಡಿಗೆ ರಾಷ್ಟ್ರೀಯತೆಯ ಕಡೆಗೆ' ಎಂಬ ಶೀರ್ಷಿಕೆ ಅಡಿಯಲ್ಲಿ ಈ ಸಮೇಳನ ನಡೆಯಲಿದ್ದು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಸಮ್ಮೇಳನ ಉದ್ಘಾಟಿಸಲಿದ್ದಾರೆ. ಹೊರಟ್ಟಿ ಅವರ ಹೆಸರಿನಲ್ಲಿ 30 ಪ್ರತಿಭಾನ್ವಿತ ಯುವಜನರಿಗೆ ಕರ್ನಾಟಕ ರಾಜ್ಯ ಯುವ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ' ಎಂದು ತಿಳಿಸಿದರು.

ಅಲ್ಪ ಸಂಖ್ಯಾತರ ವ್ಯವಹಾರಗಳ ಸಚಿವಾಲಯ
ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮ
ವಿಳಾಸ : ಒಂದನೇ ಮಹಡಿ, ಕೋರ್–1, ಸ್ಕೋಪ್ ಮಿನಾರ್, ಲಕ್ಷ್ಮೀನಗರ, ದೆಹಲಿ–110092.
ಫೋನ್ : 011–22441442
NMDFC Development with Dignity

ಎನ್‌ಎಂಡಿಎಫ್‌ಸಿ ಯೋಜನೆಗಳ/ಕಾರ್ಯಕ್ರಮಗಳಲ್ಲಿ ಮಾರ್ಪಾಡುಗಳಿಗಾಗಿ/ ಸುಧಾರಣೆಗಾಗಿ/ಹೊಸ ಯೋಜನೆಗಳ/ಉತ್ಪನ್ನಗಳ ಚಾಲನೆಗಾಗಿ ಮತ್ತು ವ್ಯಾಪಾರ ಮಾದರಿ ಬದಲಾವಣೆಗಾಗಿ ಸಲಹೆಗಳನ್ನು ಆಹ್ವಾನಿಸಲಾಗಿದೆ.

ಎನ್‌ಎಂಡಿಎಫ್‌ಸಿ ರವರು ತಮ್ಮ ಯೋಜನೆಗಳ, ಕಾರ್ಯಕ್ರಮಗಳ ಪರಿಶೀಲನೆ/ ಮಾರ್ಪಾಡುಗಳು/ ಸುಧಾರಣೆಗಾಗಿ ಹೊಸ ಯೋಜನೆಗಳ/ಉತ್ಪನ್ನಗಳ ಚಾಲನೆಗಾಗಿ & ವ್ಯಾಪಾರ ಮಾದರಿ ಬದಲಾವಣೆಗಾಗಿ ಸಾಮಾನ್ಯ ಸಾರ್ವಜನಿಕರಿಂದ ಮತ್ತು ಎನ್‌ಜಿಒ / ಪರಿಣಿತರು/ ಪಾಲುದಾರರು ಹಾಗೂ ಮುಖ್ಯವಾಗಿ ಸಂಸ್ಥೆಗಳಿಂದ ಸಲಹೆ / ಸೂಚನೆಗಳನ್ನು ಆಹ್ವಾನಿಸಿದ್ದು, ಈ ಮೂಲಕ ಎನ್‌ಎಂಡಿಎಫ್‌ಸಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ನಿರ್ದಿಷ್ಟ ಸಮೂಹಗಳಿಗೆ ಪರಿಣಾಮಕಾರಿಯಾಗಿ ತಲುಪಿಸಲು ನಿರ್ಧರಿಸಿದೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.nmdfc.org ವೆಬ್‌ಸೈಟ್‌ಗೆ ಭೇಟಿ ನೀಡಿ ವಾಟ್ಸ್ ನ್ಯೂ ವಿಭಾಗವನ್ನು ಪರಿಶೀಲಿಸಿರಿ.

CBC 27104/12/0006/2526

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್
ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು–560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com; ವೆಬ್‌ಸೈಟ್: www.gokaldasexports.com

ಸದಸ್ಯರಿಗೆ ನೋಟೀಸ್

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯಿದೆ, 2013 ("ಕಾಯ್ದೆ") ರಂತೆ ಅನ್ವಯವಾಗುವ ನಿಬಂಧನೆಗಳ ಅನುಗುಣವಾಗಿ ಜೊತೆಗೆ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ (ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗಿದೆ.) ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 08, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024 ದಿನಾಂಕ ಸೆಪ್ಟೆಂಬರ್ 19, 2024 ಮತ್ತು ಇತರೆ ಅನ್ವಯವಾಗುವ ಕಾನೂನಿನಂತೆ ವೀಡಿಯೋ ಕಾನ್ಫರೆನ್ಸ್ / ಅದರ್ ಆಡಿಯೋ ವಿಷುವಲ್ ಮೀನ್ಸ್ ಮೂಲಕ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ("ಕಂಪನಿ")ಯ 22ನೇ ವಾರ್ಷಿಕ ಸಾಮಾನ್ಯ ಸಭೆಯು (ಎಜಿಎಂ) ನಡೆಯಲಿದೆ.

ಮೇಲಿನ ಸುತ್ತೋಲೆಗಳನ್ವಯವಾಗಿ ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳೊಂದಿಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ ಎಜಿಎಂ ನೋಟೀಸ್ ಮತ್ತು ಆರ್ಥಿಕ ವರ್ಷ 2024–25ರ ವಾರ್ಷಿಕ ವರದಿಯನ್ನು ವಿದ್ಯುನ್ಮಾನ ಮೂಲಕವಾಗಿ ರವಾನಿಸಲಾಗುವುದು. ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ಗಳ ಮೂಲಕ ಸಂಬಂಧಿತ ಡಿಪಾಸಿಟರೀಸ್‌ಗಳೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ. ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಕಂಪನಿಯ ರೆಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ("ಆರ್‌ಟಿಎ") ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ರವರಿಗೆ **einward.ris@kfintech.com**ನಲ್ಲಿ ಮಾಹಿತಿಗಳನ್ನು ಕಳುಹಿಸಲು ವಿನಂತಿಸಲಾಗಿದೆ. ಎಜಿಎಂ ನೋಟೀಸ್ ಮತ್ತು ವಾರ್ಷಿಕ ವರದಿಯನ್ನು ಕಂಪನಿಯ ವೆಬ್‌ಸೈಟ್ **www.gokaldasexports.com**ನಲ್ಲಿ, ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳು ಅಂದರೆ, ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್‌ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್‌ಗಳಲ್ಲಿ ಕ್ರಮವಾಗಿ **www.bseindia.com** ಮತ್ತು **www.nseindia.com** ಲಭ್ಯವಾಗುವಂತೆ ಮಾಡಲಾಗುವುದು.


ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಎಜಿಎಂ ನೋಟೀಸ್‌ನಲ್ಲಿ ನೀಡಿರುವ ವ್ಯವಹಾರಗಳಿಗೆ ರಿಮೋಟ್ ಇ–ವೋಟಿಂಗ್ ಮೂಲಕ ಅಥವಾ ಎಜಿಎಂ ಸಂದರ್ಭದಲ್ಲಿ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ಮತಚಲಾಯಿಸುವ ಅವಕಾಶವನ್ನು ಕಲ್ಪಿಸಲಾಗುವುದು. ಡಿಮೆಟೀರಿಯಲೈಸ್ಡ್ ಹಾಗೂ ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ರಿಮೋಟ್ ಮತದಾನದ ವಿಧಾನವನ್ನು ಎಜಿಎಂನ ನೋಟೀಸ್‌ನಲ್ಲಿ ಒದಗಿಸಲಾಗುವುದು.

ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ವಿಳಾಸ ಮತ್ತು ಬ್ಯಾಂಕ್ ಖಾತೆಯ ವಿವರಗಳಲ್ಲಿನ ಬದಲಾವಣೆಗಳನ್ನು ಸಂಬಂಧಿತ ಡೆಪಾಸಿಟರಿ ಪಾರ್ಟಿಸಿಪೆಂಟ್(ಗಳ)ಗೆ ತಿಳಿಸಲು ವಿನಂತಿಸಿದೆ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಂ (ಇಸಿಎಸ್) ವಿಧಾನವನ್ನು ಆಯ್ಕೆ ಮಾಡಿಕೊಳ್ಳಲು ವಿನಂತಿಸಲಾಗಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 19, 2025

'ಅಂತ್ಯಕ್ರಿಯೆ ನಡೆದ ಜಾಗದಲ್ಲೇ ಸ್ಮಾರಕ'



ಕೆ.ಮಂಜು

ಬೆಂಗಳೂರು: 'ನಟ ವಿಷ್ಣುವರ್ಧನ್ ಅವರ ಅಂತ್ಯಕ್ರಿಯೆ ಆದ ಜಾಗದಲ್ಲೇ ಸ್ಮಾರಕವನ್ನು ಖಂಡಿತವಾಗಿಯೂ ಕಟ್ಟುತ್ತೇವೆ' ಎಂದು ನಿರ್ಮಾಪಕ ಕೆ.ಮಂಜು ಹೇಳಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, 'ಅಂತ್ಯಕ್ರಿಯೆ ನಡೆದ ಅಭಿಮಾನ್ ಸ್ಟುಡಿಯೊದ ಸ್ಥಳದಲ್ಲೇ 10–12 ಗುಂಟೆ ಜಾಗ ಕೊಡಲು ನಟ ಟಿ.ಎನ್. ಬಾಲಕೃಷ್ಣ ಅವರ ಮೊಮ್ಮಗ ಕಾರ್ತಿಕ್ ಅವರಿಗೆ ಮನವಿ ಮಾಡಿದ್ದೇವೆ. ಅವರು ಒಂದು ವಾರ ಸಮಯ ತೆಗೆದುಕೊಂಡಿದ್ದಾರೆ. ಅವರು ಜಾಗ ಕೊಡದೇ ಇದ್ದರೆ ಕಾನೂನು ಹೋರಾಟ ಮಾಡುತ್ತೇವೆ. ಅಂತ್ಯಕ್ರಿಯೆ ಆದ ಜಾಗವೇ ಮೂಲ ದೇವಸ್ಥಾನ. ಸರ್ಕಾರ ಈ 20 ಎಕರೆ ಜಾಗ ಕೊಟ್ಟಿರುವುದು ಸ್ಟುಡಿಯೊ ನಿರ್ಮಾಣಕ್ಕೆ. 2004ರಲ್ಲಿ ಯಾವ ಪ್ರಭಾವಿ ಇಲ್ಲಿನ ಭೂಮಿ ಖರೀದಿಸಿದರು ಎಂದು ಗೊತ್ತಿದೆ. ಈ ಜಾಗದ ಮೇಲೆ ಕೇಸ್ ಹಾಕಬಹುದು. ಸರ್ಕಾರವು ಈ ವಿಚಾರಕ್ಕೆ ಸಂಬಂಧಿಸಿದಂತೆ ಮರುಪರಿಶೀಲನೆ ನಡೆಸಿ ಜಿಲ್ಲಾಧಿಕಾರಿಗೆ ತಿಳಿಸಿ ಮುಂದಿನ ಸೆ.18ರಂದು ಪೂಜೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕು' ಎಂದರು.

'ಸುದೀಪ್ ಅವರು ಸ್ಮಾರಕ ನಿರ್ಮಿಸಲು ಜಾಗ ತೆಗೆದುಕೊಂಡಿರುವುದು ಸ್ವಾಗತಾರ್ಹ. ಅವರು ಮನನೊಂದು ಈ ನಿರ್ಧಾರ ಮಾಡಿದ್ದಾರೆ. ನಾವು ಅವರ ಜೊತೆಯಲ್ಲಿ ಇರುತ್ತೇವೆ. ನಮ್ಮ ನಿರ್ಧಾರವನ್ನೂ ಸುದೀಪ್ ಅವರಿಗೆ ತಿಳಿಸುತ್ತೇವೆ. ವಿಷ್ಣುವರ್ಧನ್ ಅವರ ಮನೆಯಲ್ಲಿ ಅನ್ನ ತಿಂದಿದ್ದೇವೆ. ಎಲ್ಲಾ ಹೋರಾಟ ಅವರಿಗೋಸ್ಕರ. ಅವರು ಲಕ್ಷಾಂತರ ಅಭಿಮಾನಿಗಳನ್ನು ಸಂಪಾದನೆ ಮಾಡಿದ್ದರು. ಎಲ್ಲರೂ ಒಗ್ಗಟ್ಟಾಗಿ ಮುಂದುವರಿಯೋಣ' ಎಂದು ಮನವಿ ಮಾಡಿದರು.

ಎಡಗೈ ಸಮುದಾಯ ಸಂಭ್ರಮ
ವಿಧಾನಸೌಧದ ಸುತ್ತ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ನೀಡುವ ಸಂಬಂಧ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ವರದಿ ಅಂಗೀಕರಿಸುವ ಕುರಿತು ಮಂಗಳವಾರ ವಿಶೇಷ ಸಚಿವ ಸಂಪುಟ ಸಭೆ ನಡೆಯುತ್ತಿದ್ದ ವೇಳೆ ವಿಧಾನಸೌಧದ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ವಿಧಾನ ಮಂಡಲದ ದಿನದ ಕಲಾಪ ಮುಗಿಯುತ್ತಿದ್ದಂತೆ ರಾತ್ರಿ 7ರ ಬಳಿಕ ವಿಧಾನಸೌಧಕ್ಕೆ ಸಾರ್ವಜನಿಕರು ಹಾಗೂ ಪತ್ರಕರ್ತರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ಆದರೂ ಕೆಲವು ಸಂಘಟನೆಗಳ ಮುಖಂಡರು ರಾಜಕೀಯ ನಾಯಕರ ಹೆಸರು ಹೇಳಿ, ವಿಧಾನಸೌಧ ಪ್ರವೇಶಿಸಿದರು. ಸರ್ಕಾರ ಕೈಗೊಳ್ಳುವ ತೀರ್ಮಾನಕ್ಕೆ ಕಾದಿದ್ದರು.

ಸಭೆಯ ತೀರ್ಮಾನ ಪ್ರಕಟಿಸುತ್ತಿದ್ದಂತೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಎಡಗೈ ಸಮುದಾಯದವರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಸರ್ಕಾರದ ಪರ ಜಯಘೋಷ ಮೊಳಗಿದವು.

ವರದಿ ಶಿಫಾರಸುಗಳ ಜಾರಿ ಕುರಿತು ಒಂದು ತಿಂಗಳಿನಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಹಲವು ಸಂಘಟನೆಗಳು ಪರ–ವಿರೋಧ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು.

ವರದಿಯ ಪರವಾಗಿದ್ದ ಸಂಘಟನೆಗಳು ತಕ್ಷಣ ವರದಿಯನ್ನು ಅಂಗೀಕರಿಸಿ, ಶಿಫಾರಸುಗಳನ್ನು ಜಾರಿ ಮಾಡಬೇಕೆಂದು ಪಟ್ಟು ಹಿಡಿದಿದ್ದವು. ಮತ್ತೊಂದೆಡೆ ವರದಿಗೆ ವಿರೋಧ ವ್ಯಕ್ತಪಡಿಸಿದ್ದ ಸಂಘಟನೆಗಳು, ವರದಿಯಲ್ಲಿ ಹಲವು ಲೋಪದೋಷಗಳಿದ್ದು, ಪರಿಷ್ಕರಿಸಿ ಇಲ್ಲವೇ ತಿರಸ್ಕರಿಸಬೇಕು ಎಂದು ಆಗ್ರಹಿಸಿದ್ದವು.

ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಫ್ರೀಡಂ ಪಾರ್ಕ್‌ನಲ್ಲಿ ಒಳ ಮೀಸಲಾತಿ ಜಾರಿಗಾಗಿ ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆ ವೇಳೆ ಮಂಗಳವಾರ ವ್ಯಕ್ತಿಯೊಬ್ಬ ಪೆಟ್ರೋಲ್ ಹಿಡಿದು ಬೆಂಕಿ ಹಚ್ಚಿಕೊಳ್ಳಲು ಮುಂದಾದಾಗ ಸ್ಥಳದಲ್ಲಿದ್ದ ಪೊಲೀಸರು ತಡೆದು, ಕರೆದೊಯ್ದರು.

ಅಧ್ವಾನಗೊಂಡ ರಸ್ತೆ, ಪಾದಚಾರಿ ಮಾರ್ಗ

ವಿದ್ಯಾಪೀಠ ವೃತ್ತದಿಂದ ಹೊರ ವರ್ತುಲ ರಸ್ತೆಗೆ ಸಂಪರ್ಕಿಸುವ ಮಾರ್ಗದಲ್ಲಿ 1 ಕಿ.ಮೀ ಸಂಚರಿಸಲು 20 ನಿಮಿಷ ಕಾಯಬೇಕು

● ಖಲೀಲಅಹ್ಮದ ಶೇಖ

ಬೆಂಗಳೂರು: ಬಸವನಗುಡಿಯ ವಿದ್ಯಾಪೀಠ ವೃತ್ತದಿಂದ ಸೀತಾ ವೃತ್ತದ ಮಾರ್ಗವಾಗಿ ಹೊರ ವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಂಡಿದ್ದು, ರಸ್ತೆ ಹಾಗೂ ಪಾದಚಾರಿ ಮಾರ್ಗಗಳು ಅಧ್ವಾನಗೊಂಡಿವೆ. ಮುಖ್ಯ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆಯಾಗಿದ್ದು, ದಟ್ಟಣೆ ಅವಧಿಯಲ್ಲಿ ಒಂದು ಕಿ.ಮೀ. ಸಂಚರಿಸಲು ಕನಿಷ್ಠ 20 ನಿಮಿಷ ಬೇಕಾಗುತ್ತದೆ.

ಈ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಗಿದೆ. ಇದಕ್ಕಾಗಿ ಬೆಸ್ಕಾಂನವರು ಭೂಗತ ಕೇಬಲ್ ಹಾಗೂ ಜಲಮಂಡಳಿಯವರು ಕೊಳವೆಗಳನ್ನು ಅಳವಡಿಸಲು ಎರಡೂ ಬದಿಯ ಪಾದಚಾರಿ ಮಾರ್ಗಗಳಲ್ಲಿ ಚರಂಡಿ ಮೇಲಿನ ಕಾಂಕ್ರೀಟ್ ಸ್ಲ್ಯಾಬ್‌ಗಳು ಹಾಗೂ ಪೇವರ್ಸ್‌ಗಳನ್ನು ತೆಗೆದಿದ್ದಾರೆ. ಕೆಲವು ಕಡೆ ಗುಂಡಿಗಳನ್ನು ತೋಡಲಾಗಿದೆ. ಗುಂಡಿ ಹಾಗೂ ಸ್ಲ್ಯಾಬ್‌ಗಳನ್ನು ತೆಗೆದಿರುವ ಜಾಗದಲ್ಲಿ ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ. ಸುರಕ್ಷತೆಗಾಗಿ ಇಟ್ಟಿರುವ ಬ್ಯಾರಿಕೇಡ್‌ಗಳು ಗುಂಡಿಯೊಳಗೆ ಬಿದ್ದಿವೆ.

ಇನ್ನೊಂದು ಕಡೆಯ ರಸ್ತೆ ಬದಿಯಲ್ಲಿ ಪಾದಚಾರಿ ಮಾರ್ಗವೂ ಸೇರಿದಂತೆ ಅಲ್ಲಲ್ಲಿ ಮಣ್ಣಿನ ರಾಶಿ ಹಾಕಲಾಗಿದೆ. ಹೀಗಾಗಿ ನಡೆದಾಡುವವರು ಪಾದಚಾರಿ ಮಾರ್ಗವನ್ನು ದಾಟಲಾಗದೇ ಮುಖ್ಯ ರಸ್ತೆಯಲ್ಲೇ ಹಾದು ಹೋಗಬೇಕು. ಈ ರಸ್ತೆಯಲ್ಲಿ ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದನ್ನು ಲೆಕ್ಕಿಸದ ದ್ವಿಚಕ್ರ ವಾಹನ ಸವಾರರು, ಆಟೊ ಚಾಲಕರು ವಿರುದ್ಧ ದಿಕ್ಕಿನಲ್ಲಿ ಇದೇ ರಸ್ತೆಯಲ್ಲಿ ಬರುತ್ತಾರೆ. ಸಂಚಾರ ದಟ್ಟಣೆಗೆ ಇದೇ ಮುಖ್ಯ ಕಾರಣ. ಬೆಳಿಗ್ಗೆ 8ರಿಂದ ಮಧ್ಯಾಹ್ನ 12 ಗಂಟೆ ಹಾಗೂ ಸಂಜೆ 4ರಿಂದ ರಾತ್ರಿ 8 ಗಂಟೆಯ ಅವಧಿಯೊಳಗೆ ಈ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ ಎಂದು ಸಾರ್ವಜನಿಕರು ದೂರಿದರು.

‘ಇಲ್ಲಿ ಜವಳಿ, ಎಲೆಕ್ಟ್ರಿಕ್ ಉತ್ಪನ್ನಗಳ ಮಳಿಗೆಗಳು ಹಾಗೂ ಹೋಟೆಲ್‌ಗಳಿವೆ. ಈ ರಸ್ತೆಯಲ್ಲಿ ಬಿಎಂಟಿಸಿ ಬಸ್‌ಗಳು ಸೇರಿದಂತೆ ಲಾರಿ, ದ್ವಿಚಕ್ರ ವಾಹನಗಳು ಸಂಚರಿಸುತ್ತವೆ. ರಸ್ತೆ ಕಾಮಗಾರಿ ಪ್ರಗತಿಯಲ್ಲಿರುವ ಕಾರಣ ಪ್ರತಿನಿತ್ಯ ಸಂಚಾರ ದಟ್ಟಣೆ ಆಗುತ್ತಿದೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಪ್ರತಿದಿನ ಒಂದಿಲ್ಲೊಂದು ಅಪಘಾತಗಳು ಸಂಭವಿಸುತ್ತಿವೆ. ಕಾಮಗಾರಿ ಪೂರ್ಣಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳನ್ನು ಕೇಳಿದರೆ, ಜಲಮಂಡಳಿಯ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದ್ದಾರೆ. ಇದರಿಂದ ಕಾಮಗಾರಿ ವಿಳಂಬವಾಗುತ್ತಿದೆ’ ಎಂದು ವ್ಯಾಪಾರಿಗಳು ದೂರಿದರು.

‘ರಸ್ತೆಯನ್ನು ಅಗೆದು, ಬೃಹತ್ ಕೊಳವೆಗಳನ್ನು ತಂದು ಇಡಲಾಗಿದೆ. ಆದರೆ, ಕಾಮಗಾರಿಗೆ ವೇಗ ಸಿಕ್ಕಿಲ್ಲ. ವಾಹನಗಳು ಓಡಾಡಿದಾಗಲೆಲ್ಲ ದೂಳಿನ ಮಜ್ಜನವಾಗುತ್ತಿದೆ’ ಎಂದು ವೃದ್ಧರೊಬ್ಬರು ಅಳಲು ತೋಡಿಕೊಂಡರು.

ಮುಖ್ಯಾಂಶಗಳು

- ಹೆಚ್ಚಿದ ಅಪಘಾತಗಳ ಸಂಖ್ಯೆ
- ಮಂದಗತಿಯಲ್ಲಿ ಸಾಗಿದ ವೈಟ್ ಟಾಪಿಂಗ್ ಕಾಮಗಾರಿ
- ಸಂಚಾರ ದಟ್ಟಣೆ ಸಾಲುಗಟ್ಟಿ ನಿಲ್ಲುವ ವಾಹನಗಳು

ಗುಂಡಿಯೊಳಗೆ ಬಿದ್ದಿರುವ ಬ್ಯಾರಿಕೇಡ್





ವಿದ್ಯಾಪೀಠದಿಂದ ಹೊರ ವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಪಾದಚಾರಿ ಮಾರ್ಗವನ್ನು ಅಗೆಯಲಾಗಿದೆ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

‘ಅಡಚಣೆ ಆಗದಂತೆ ಕಾಮಗಾರಿ’

‘ಬಿಬಿಎಂಪಿ, ಬೆಸ್ಕಾಂ ಹಾಗೂ ಬೆಂಗಳೂರು ಜಲಮಂಡಳಿ ಸಹಭಾಗಿತ್ವದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗಿದೆ. ಜಲಮಂಡಳಿಯಿಂದ ಇಲ್ಲಿ ಕೊಳವೆಗಳನ್ನು ಅಳವಡಿಸುವ ಕಾಮಗಾರಿ ನಡೆಯುತ್ತಿದ್ದು, ಸಾರ್ವಜನಿಕರಿಗೆ ಅಡಚಣೆ ಆಗದಂತೆ ಕಾಮಗಾರಿ ಪೂರ್ಣಗೊಳಿಸಲಾಗುವುದು’ ಎಂದು ಬೆಂಗಳೂರು ಜಲಮಂಡಳಿಯ ಎಂಜಿನಿಯರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.



ವೈಟ್ ಟಾಪಿಂಗ್ ಕಾಮಗಾರಿ ಕೈಗೊಂಡಿದ್ದರಿಂದ ವಾಹನಗಳು ಸಾಲುಗಟ್ಟಿ ನಿಂತಿವೆ

ಸಾರ್ವಜನಿಕರು ಏನಂತಾರೆ?



ವೈಟ್ ಟಾಪಿಂಗ್ ಕಾಮಗಾರಿಗಾಗಿ ಈ ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗವನ್ನು ಅಗೆದು ಅಲ್ಲಲ್ಲಿ ಮಣ್ಣಿನ ರಾಶಿಗಳನ್ನು ಹಾಕಿದ್ದಾರೆ. ಕೊಳವೆಗಳನ್ನು ರಸ್ತೆಯಲ್ಲಿ ಇಟ್ಟಿದ್ದಾರೆ. ಈ ಬಗ್ಗೆ ಪ್ರಶ್ನಿಸಿದರೆ ಜಲಮಂಡಳಿ ಸಿಬ್ಬಂದಿ ಹಾರಿಕೆ ಉತ್ತರ ನೀಡುತ್ತಿದ್ದಾರೆ. ಇದರಿಂದ ನಮ್ಮ ವ್ಯಾಪಾರ–ವಹಿವಾಟು ಕಡಿಮೆಯಾಗಿದ್ದು, ಕೂಡಲೇ ಕಾಮಗಾರಿ ಪೂರ್ಣಗೊಳಿಸಬೇಕು.

ನೌಶಾದ್, ಜ್ಯೂಸ್ ಅಂಗಡಿ ಮಾಲೀಕ



ಮಳೆಗಾಲದಲ್ಲಿ ಪಾದಚಾರಿ ಮಾರ್ಗವೆಲ್ಲ ಕೆಸರುಗದ್ದೆಯಾಗುತ್ತದೆ. ಮಳೆ ಇಲ್ಲದಿದ್ದಾಗ ದೂಳಿನ ಮಜ್ಜನವಾಗುತ್ತಿದೆ. ಇದರಿಂದ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಗೆ ಬರುವ ಗ್ರಾಹಕರ ಸಂಖ್ಯೆಯೂ ಕಡಿಮೆ ಆಗಿದ್ದು, ವ್ಯಾಪಾರ–ವಹಿವಾಟಿಗೆ ಹೊಡೆತ ಬಿದ್ದಿದೆ.

ಪ್ರಭಾಕರ್, ಹೋಟೆಲ್ ಮಾಲೀಕ



ಅಭಿವೃದ್ಧಿಯ ಹೆಸರಿನಲ್ಲಿ ರಸ್ತೆ ಅಗೆದು ಹಾಗಿಯೇ ಬಿಡಲಾಗಿದೆ. ಇದರಿಂದ, ವ್ಯಾಪಾರಿಗಳಿಗೆ ಆರ್ಥಿಕ ಸಂಕಷ್ಟ ಎದುರಾಗಿದೆ. ಕೂಡಲೇ ಕಾಮಗಾರಿ ಪೂರ್ಣಗೊಳಿಸಬೇಕು.

ರಾಜು, ಪಾನ್‌ಶಾಪ್ ಮಾಲೀಕ



ಭೂಸ್ವಾಧೀನಕ್ಕೆ ವಿರೋಧ ಭುಗಿಲೆದ್ದ ಆಕ್ರೋಶ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಸರ್ಜಾಪುರ ಹೋಬಳಿಯಲ್ಲಿ ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆ ವಿರೋಧಿಸಿ ರೈತರು ತಾಲ್ಲೂಕು ಕಚೇರಿಗೆ ಮಂಗಳವಾರ ಮುತ್ತಿಗೆ ಹಾಕಿದರು.

ಪಟ್ಟಣದ ಎಲ್ಲ ಮುಖ್ಯ ರಸ್ತೆಗಳಲ್ಲಿಯೂ ವಾಹನ ದಟ್ಟಣೆ ಉಂಟಾಗಿತ್ತು. ಹೋರಾಟವನ್ನು ನಿಭಾಯಿಸಲು ಪೊಲೀಸರು ಹರಸಾಹಸಪಟ್ಟರು.

ಕಳೆದ ಒಂದು ತಿಂಗಳಿನಿಂದ ರೈತರು ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದಾರೆ. ಮಂಗಳವಾರ ತಾಲ್ಲೂಕು ಕಚೇರಿ ಮುತ್ತಿಗೆ ಆಯೋಜಿಸಲಾಗಿತ್ತು. ಸಾವಿರಾರು ಮಂದಿ ರೈತರು ಪಟ್ಟಣದ ಶಿವಾಜಿ ವೃತ್ತದಲ್ಲಿ ಜಮಾವಣೆಗೊಂಡರು. ಮತ್ತೊಂದು ತಂಡ ಎಎಸ್‌ಬಿ ಮೈದಾನದಲ್ಲಿ ಜಮಾವಣೆಗೊಂಡಿತು. ಎಲ್ಲ ರೈತರು ಒಗ್ಗೂಡಿ ಪಟ್ಟಣದ ಹೃದಯ ಭಾಗ ದೇವರಕೊಂಡಪ್ಪ ವೃತ್ತದಲ್ಲಿ ಪಾಲ್ಗೊಂಡು ತಮ್ಮ ಬೇಡಿಕೆ ಸಲ್ಲಿಸಿದರು.

ನೂರಾರು ಮಂದಿ ರೈತ ಮಹಿಳೆಯರು ಹೋರಾಟಕ್ಕೆ ಬಲ ನೀಡಿದರು. ‘ಜೈ ಜವಾನ್ ಜೈ ಕಿಸಾನ್, ಪ್ರಾಣ ಕೊಟ್ಟೇವು ಭೂಮಿ ಕೊಡುವುದಿಲ್ಲ’ ಘೋಷಣೆ ಮುಗಿಲು ಮುಟ್ಟಿತು. ಸಿಪಿಐಎಂ, ಕೆಆರ್‌ಎಸ್, ಕನ್ನಡ ಪರ ಸಂಘಟನೆಗಳು, ಗಮನ ಮಹಿಳಾ ಒಕ್ಕೂಟ, ಆನೇಕಲ್ ತಾಲ್ಲೂಕು ವಕೀಲರ ಸಂಘ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಸೇರಿ ವಿವಿಧ ದಲಿತ ಮತ್ತು ಪ್ರಗತಿಪರ ಸಂಘಟನೆಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡು ಹೋರಾಟಕ್ಕೆ ಬೆಂಬಲ ಸೂಚಿಸಿದವು.

₹5.50 ಕೋಟಿ ಮೌಲ್ಯದ ಡ್ರಗ್ಸ್ ವಶ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ, ಎಚ್‌ಎಸ್‌ಆರ್ ಲೇಔಟ್, ಕೋರಮಂಗಲ, ಸಂಪಿಗೆಹಳ್ಳಿ, ಯಲಹಂಕ ಠಾಣೆ ಪೊಲೀಸರು ಹಾಗೂ ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು ನಗರದ ಹಲವೆಡೆ ಕಾರ್ಯಾಚರಣೆ ನಡೆಸಿ, ಅಂದಾಜು ₹5.50 ಕೋಟಿ ಮೌಲ್ಯದ ನೈಸರ್ಗಿಕ ಹಾಗೂ ಸಿಂಥೆಟಿಕ್ ಡ್ರಗ್ಸ್ ಅನ್ನು ಜಪ್ತಿ ಮಾಡಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಕಾರ್ಯಾಚರಣೆ ನಡೆಸಿ, ವಿದ್ಯಾರ್ಥಿ ವೀಸಾದ ಅಡಿ ನಗರಕ್ಕೆ ಬಂದು ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ ಆಫ್ರಿಕಾ ಮೂಲದ ಇಬ್ಬರನ್ನು ಬಂಧಿಸಿದ್ದಾರೆ. ಜೋಯಲ್ ಕಾಬೊಂಗ್ ಹಾಗೂ ಆತನ ಸ್ನೇಹಿತೆ ಜೋಯ್ ಸಂಡೆ ಬಂಧಿತರು.

ಬಂಧಿತರಿಂದ ₹5 ಕೋಟಿ ಮೌಲ್ಯದ 2 ಕೆ.ಜಿ 150 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಅನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ನೈಜೀರಿಯಾ ಮೂಲದ ಆ್ಯಂಗಲೊನಾ ತಲೆಮರೆಸಿಕೊಂಡಿದ್ದು ಹುಡುಕಾಟ ನಡೆಸಲಾಗುತ್ತಿದೆ.



ಜೋಯ್ ಸಂಡೆ



ಜೋಯಲ್ ಕಾಬೊಂಗ್

‘ಜೋಯಲ್ ಕಾಬೊಂಗ್ 12 ವರ್ಷಗಳ ಹಿಂದೆ ವಿದ್ಯಾರ್ಥಿ ವೀಸಾದ ಅಡಿ ಭಾರತಕ್ಕೆ ಬಂದಿದ್ದ. ಜೋಯ್ ಸಂಡೆ ಸಹ ವಿದ್ಯಾರ್ಥಿ ವೀಸಾ ಪಡೆದು ಮೂರು ವರ್ಷಗಳ ಹಿಂದೆ ಭಾರತಕ್ಕೆ ಬಂದಿದ್ದಳು. ಇಬ್ಬರ ವೀಸಾದ ಅವಧಿ ಅಂತ್ಯವಾದ ಬಳಿಕವೂ ಬೆಂಗಳೂರಿನಲ್ಲೇ ಉಳಿದಿದ್ದರು. ಇಬ್ಬರೂ ಅಕ್ರಮವಾಗಿ ನೆಲಸಿ, ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿದ್ದರು’ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾ ಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಅಪರಾಧ ಸುದ್ದಿಗಳು

ಆರೋಪಿಗಳಿಬ್ಬರು ಬೆಟ್ಟದಾಸನಪುರದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮೀದಾರರಿಂದ ಖಚಿತ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಮಾಹಿತಿ ನೀಡಿದರು.

ದೆಹಲಿ ಹಾಗೂ ಆಂಧ್ರಪ್ರದೇಶದಲ್ಲಿರುವ ಮಧ್ಯವರ್ತಿಗಳಿಂದ ಕಡಿಮೆ ಬೆಲೆಗೆ ಡ್ರಗ್ಸ್ ಅನ್ನು ಖರೀದಿಸಿ, ನಗರಕ್ಕೆ ತರುತ್ತಿದ್ದರು. ನಗರದಲ್ಲಿ ನೆಲಸಿರುವ ಟೆಕಿಗಳು, ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಬಂದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದರು ಎಂದರು.

ಸಿಸಿಬಿ ಕಾರ್ಯಾಚರಣೆ: ಪ್ರವಾಸಿ ವೀಸಾ ಪಡೆದು ಭಾರತಕ್ಕೆ ಬಂದು ನಗರದಲ್ಲಿ ಮಾದಕ ಪದಾರ್ಥ ಮಾರಾಟ ಮಾಡುತ್ತಿದ್ದ ಆಫ್ರಿಕಾದ ಆರೋಪಿ ಜಾನ್ ಡಿ ಕೊಸ್ಟಾ ಎಂಬಾತನನ್ನು ಸಿಸಿಬಿಯ ಮಾದಕ ಪದಾರ್ಥ ನಿಗ್ರಹ ದಳದ ಪೊಲೀಸರು ಬಂಧಿಸಿದ್ದಾರೆ.

2024ರಲ್ಲಿ ಪ್ರವಾಸಿ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಆರೋಪಿ, ಆರಂಭದಲ್ಲಿ ದೆಹಲಿಯಲ್ಲಿ ಬಟ್ಟೆ ವ್ಯಾಪಾರ ಆರಂಭಿಸಿದ್ದ. ಬಳಿಕ ಬೆಂಗಳೂರಿಗೆ ಬಂದು ಆವಲಹಳ್ಳಿ ವ್ಯಾಪ್ತಿಯಲ್ಲಿ ಬಟ್ಟೆ ವ್ಯಾಪಾರದ ಜೊತೆಗೆ ಮಾದಕ ವಸ್ತುಗಳ ಮಾರಾಟ ದಂಧೆಯಲ್ಲಿ ತೊಡಗಿದ್ದ. ಆರೋಪಿಯಿಂದ ₹40 ಲಕ್ಷ ಮೌಲ್ಯದ 255 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಹಾಗೂ ಒಂದು ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ತಲೆಮರೆಸಿಕೊಂಡಿದ್ದ ಆರೋಪಿ ಸೆರೆ

ಡ್ರಗ್ಸ್ ಮಾರಾಟ ಮಾಡಿ ಪೊಲೀಸರಿಗೆ ಸಿಕ್ಕಿ ಬೀಳುವ ಭಯದಲ್ಲಿ ಹೊರರಾಜ್ಯಕ್ಕೆ ತೆರಳಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ವಶಕ್ಕೆ ಪಡೆದಿರುವ ಕೋರಮಂಗಲ ಠಾಣೆಯ ಪೊಲೀಸರು, ಆರೋಪಿಯಿಂದ ₹16 ಲಕ್ಷ ಮೌಲ್ಯದ ವಿವಿಧ ಕಂಪನಿಯ 48 ಮಾದರಿಯ ಮೊಬೈಲ್ ಫೋನ್ ಜಪ್ತಿ ಮಾಡಿದ್ದಾರೆ.

ಹೊರ ರಾಜ್ಯದ ಆರೋಪಿಯನ್ನು ಎಚ್‌ಎಸ್‌ಆರ್ ಲೇಔಟ್ ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡು, ₹13.40 ಲಕ್ಷ ಮೌಲ್ಯದ ಗಾಂಜಾವನ್ನು ಜಪ್ತಿ ಮಾಡಿದ್ದಾರೆ. ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ ₹3.40 ಲಕ್ಷ ಮೌಲ್ಯದ ಡ್ರಗ್ಸ್ ಅನ್ನು ಜಪ್ತಿ ಮಾಡಿದ್ದಾರೆ.

ಕೆಲಸ ಮಾಡುತ್ತಿದ್ದ ಮನೆಯಲ್ಲಿ ಕನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲಿ ವಜ್ರ ಹಾಗೂ ಚಿನ್ನಾಭರಣಕ್ಕೆ ಕನ್ನ ಹಾಕಿದ್ದ ತೆಲಂಗಾಣದ ಮಹಿಳೆ ಸೇರಿ ಇಬ್ಬರು ಆರೋಪಿಗಳನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದುರ್ಗಾ ಅನ್ನಾರೆಡ್ಡಿ(40) ಮತ್ತು ಆಕೆಯ ಸಹೋದರಿಯ ಪತಿ ವೆಂಕಟೇಶ್ ರಾವ್(44) ಬಂಧಿತರು.

ಆರೋಪಿಗಳಿಂದ ₹22 ಲಕ್ಷ ಮೌಲ್ಯದ ಚಿನ್ನ ಹಾಗೂ ವಜ್ರದ ಆಭರಣ, ಮೊಬೈಲ್, ವಾಚ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಜಯನಗರದ 1ನೇ ಬ್ಲಾಕ್‌ನಲ್ಲಿ ನೆಲಸಿರುವ ವೈದ್ಯೆಯ ಮನೆಯಲ್ಲಿ ಇತ್ತೀಚೆಗೆ ಕಳ್ಳತನ ನಡೆದಿತ್ತು. ವೈದ್ಯೆ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದರು.

‘ಎರಡು ವರ್ಷಗಳ ಹಿಂದೆ ಏಜೆನ್ಸಿಯ ಮೂಲಕ ತೆಲಂಗಾಣದ ದುರ್ಗಾಳನ್ನು ಮನೆ ಕೆಲಸಕ್ಕೆ ದೂರುದಾರೆ ನೇಮಿಸಿಕೊಂಡಿದ್ದರು. ಈ ಮಧ್ಯೆ ವೈದ್ಯೆ ಅನಾರೋಗ್ಯಕ್ಕೀಡಾಗಿದ್ದರಿಂದ ಅಡುಗೆ ಹಾಗೂ ಮನೆಯ ಎಲ್ಲಾ ಕೆಲಸಗಳನ್ನು ದುರ್ಗಾ ನಿರ್ವಹಣೆ ಮಾಡುತ್ತಿದ್ದಳು. ಮಲಗುವ ಕೋಣೆಯೂ ಸೇರಿ ಎಲ್ಲೆಡೆ ಓಡಾಡುತ್ತಿದ್ದಳು. ಈ ವೇಳೆ ಕಪಾಟುವಿನಲ್ಲಿದ್ದ ಚಿನ್ನಾಭರಣಗಳನ್ನು ಆಕೆ ಆಗಾಗ್ಗೆ ಕಳವು ಮಾಡುತ್ತಿದ್ದಳು’ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

‘ಜುಲೈ 28ರಂದು ಮನೆಯಿಂದ ಆರೋಪಿ ಮಹಿಳೆ ಪರಾರಿ ಆಗಿದ್ದಳು. ಕಪಾಟು ಪರಿಶೀಲಿಸಿದಾಗ ವಜ್ರ, ಚಿನ್ನ ಹಾಗೂ ಬೆಳ್ಳಿಯ ವಸ್ತುಗಳು, ಮೊಬೈಲ್‌ಗಳು, ಬೆಲೆಬಾಳುವ ವಾಚ್‌ಗಳು ಕಾಣಿಸುತ್ತಿರಲಿಲ್ಲ. ಬಳಿಕ ಠಾಣೆಗೆ ಬಂದು ದೂರು ನೀಡಿದರು’ ಎಂದು ಪೊಲೀಸರು ತಿಳಿಸಿದರು.

ತೆಲಂಗಾಣದ ನ್ಯೂ ರಂಗಪುರ ಗ್ರಾಮದಲ್ಲಿರುವ ಸಹೋದರಿ ಮನೆಯಲ್ಲಿ ದುರ್ಗಾ ಆಶ್ರಯ ಪಡೆದುಕೊಂಡಿರುವುದು ಗೊತ್ತಾಗಿತ್ತು. ಅಲ್ಲಿಗೆ ತೆರಳಿದ ವಿಶೇಷ ಪೊಲೀಸ್ ತಂಡವು ಆಕೆಯನ್ನು ಪತ್ತೆಹಚ್ಚಿ ನಗರಕ್ಕೆ ಕರೆತರಲು ಯಶಸ್ವಿಯಾಗಿದೆ ಎಂದು ಪೊಲೀಸರು ಹೇಳಿದರು.

ಚಿನ್ನ ಮಾರಿದ್ದ ಸಹೋದರಿ ಪತಿ

ಕದ್ದ ಚಿನ್ನವನ್ನು ತನ್ನ ಸಹೋದರಿಯ ಪತಿ ವೆಂಕಟೇಶ್ ರಾವ್ ಮೂಲಕ ಮಾರಾಟ ಮಾಡಿಸಿರುವುದಾಗಿ ದುರ್ಗಾ ಅನ್ನಾರೆಡ್ಡಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾಳೆ. ಆಭರಣಗಳನ್ನು ಪಡೆದು, ಮಾರಾಟ ಮಾಡಿದ್ದ ವೆಂಕಟೇಶ್‌ನನ್ನೂ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.



ದುರ್ಗಾ



ವೆಂಕಟೇಶ್

ಅತ್ಯಾಚಾರ ಆರೋಪ: ಮಾಜಿ ಶಾಸಕನ ವಶಕ್ಕೆ ಪಡೆದು ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಹಾಗೂ ಕೊಲೆ ಬೆದರಿಕೆ ಆರೋಪದಡಿ ಉತ್ತರಪ್ರದೇಶದ ಶಿವಸೇನೆಯ ಮಾಜಿ ಶಾಸಕ ಭಗವಾನ್ ಶರ್ಮಾ ಅವರನ್ನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಯ (ಬಿಐಎಎಲ್) ಪೊಲೀಸರು, ಭಾನುವಾರ ರಾತ್ರಿ ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

ಉತ್ತರಪ್ರದೇಶದ 40 ವರ್ಷದ ಮಹಿಳೆ ನೀಡಿದ ದೂರಿನ ಆಧಾರದಲ್ಲಿ ಮಾಜಿ ಶಾಸಕನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಸೆಕ್ಷನ್ 69ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿತ್ತು. ಆರೋಪಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆಗೆ ಬರುವಂತೆ ಸೂಚನೆ ನೀಡಲಾಗಿತ್ತು. ವಿಚಾರಣೆಗೆ ಬಂದಾಗ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳನ್ನು ಕೇಳಿ ಮಾಜಿ ಶಾಸಕರಿಂದ ಹೇಳಿಕೆ ದಾಖಲಿಸಿಕೊಂಡು ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಮದುವೆ ಆಗುವುದಾಗಿ ನಂಬಿಸಿ ಭಗವಾನ್ ಶರ್ಮಾ ಅಲಿಯಾಸ್ ಗುಡ್ಡು ಪಂಡಿತ್ ಅವರು ತನ್ನನ್ನು ಬೆಂಗಳೂರಿಗೆ ಕರೆತಂದು ದೇವನಹಳ್ಳಿಯ ಹೋಟೆಲ್‌ವೊಂದರಲ್ಲಿ ಅತ್ಯಾಚಾರ ಎಸಗಿ, ಕೊಲೆ ಬೆದರಿಕೆ ಹಾಕಿದ್ದಾರೆಂದು ಆರೋಪಿಸಿ ಸಂತ್ರಸ್ತೆ ದೂರು ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಆ.14ರಂದು ಉತ್ತರ ಪ್ರದೇಶದಿಂದ ಕರೆದುಕೊಂಡು ಬಂದಿದ್ದರು. ಬೆಂಗಳೂರು ಹಾಗೂ ಚಿತ್ರದುರ್ಗದಲ್ಲಿ ಸುತ್ತಾಡಿಸಿದ್ದರು. ನಂತರ, ಹೋಟೆಲ್‌ವೊಂದರಲ್ಲಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದರು. ವಿಷಯವನ್ನು ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು’ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದರು.

ಅಪಘಾತ: ಸಾಫ್ಟ್‌ವೇರ್ ಎಂಜಿನಿಯರ್ ಸ್ಥಳದಲ್ಲೇ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜಯನಗರ ಮುಖ್ಯರಸ್ತೆಯಲ್ಲಿ ಬಿಎಂಟಿಸಿ ಬಸ್ ಹಾಗೂ ಸ್ಕೂಟರ್ ನಡುವೆ ಮಂಗಳವಾರ ಸಂಭವಿಸಿದ ಅಪಘಾತದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗೆದ್ದಲಹಳ್ಳಿಯ ನಿವಾಸಿ ರೋಷನ್ (38) ಮೃತಪಟ್ಟವರು. ಮಂಗಳವಾರ ಬೆಳಿಗ್ಗೆ 10.15ರ ಸುಮಾರಿಗೆ ವೈಭವ ಚಿತ್ರಮಂದಿರದ ಕಡೆಯಿಂದ ವೇಗವಾಗಿ ಬಂದ ಬಿಎಂಟಿಸಿ ಬಸ್‌ವೊಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ರೋಷನ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಕೊಡಗಿನ ರೋಷನ್ ಅವರು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಗೆದ್ದಲಹಳ್ಳಿಯ ಆಶೀರ್ವಾದ್ ಅಪಾರ್ಟ್‌ಮೆಂಟ್‌ನಲ್ಲಿ ಕುಟುಂಬದೊಂದಿಗೆ ನೆಲಸಿದ್ದರು. ಮಂಗಳವಾರ ಬೆಳಿಗ್ಗೆ ಕೆಲಸಕ್ಕೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ.

ರೋಷನ್ ಅವರು ಹೆಲ್ಮೆಟ್ ಧರಿಸಿದ್ದರೂ ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು.

ಬಿಎಂಟಿಸಿ ಬಸ್ ಚಾಲಕನ ನಿರ್ಲಕ್ಷ್ಯ ಹಾಗೂ ವೇಗದ ಚಾಲನೆಯಿಂದ ಅಪಘಾತ ಸಂಭವಿಸಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಚಾಲಕ ಕಲ್ಲಪ್ಪ ಮುಚಡಿ(40) ಅವರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಸಿ.ಎ.ರವೀಂದ್ರ ಅವರು ನೀಡಿದ ದೂರು ಆಧರಿಸಿ ಸಂಜಯನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

‘₹80.68 ಕೋಟಿ ನಿವ್ವಳ ಲಾಭ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ 2024–25ನೇ ಆರ್ಥಿಕ ಸಾಲಿನಲ್ಲಿ ₹80.68 ಕೋಟಿ ನಿವ್ವಳ ಲಾಭ ಗಳಿಸಿದೆ’ ಎಂದು ಬ್ಯಾಂಕ್‌ನ ಅಧ್ಯಕ್ಷ ಸದಾಶಿವ ರೆಡ್ಡಿ ತಿಳಿಸಿದರು.



ಇತ್ತೀಚೆಗೆ ನಡೆದ 27ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು ‘ಬ್ಯಾಂಕ್‌ನ ಸದಸ್ಯರ ಷೇರುಗಳಿಗೆ ಶೇಕಡ 14ರಷ್ಟು ಲಾಭಾಂಶವನ್ನು ನೀಡಲಾಗುವುದು’ ಎಂದು ಘೋಷಿಸಿದರು.

‘ಬ್ಯಾಂಕ್‌ನ ಎಂಟು ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ನಮ್ಮ ಬ್ಯಾಂಕ್‌ನಲ್ಲಿ ಮಾರ್ಚ್ ಅಂತ್ಯಕ್ಕೆ ₹446.82 ಕೋಟಿ ಠೇವಣಿ ಹಾಗೂ ₹316.62 ಕೋಟಿ ಸಾಲ ಇದ್ದು, ಒಟ್ಟು ₹763.44 ಕೋಟಿ ವಹಿವಾಟು ನಡೆಸಲಾಗಿದೆ’ ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಬ್ಯಾಂಕ್‌ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಜನರ ಜೀವದ ಜತೆಗೆ ಆಟವಾಡಬೇಡಿ: ಸ್ಥಳೀಯರ ಆಕ್ರೋಶ
ಮಳೆ: 343.41 ಕಿ.ಮೀ. ರಸ್ತೆ ಹಾಳು

● ಸ್ನೇಹಾ ರಮೇಶ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮುಂಗಾರು ಪೂರ್ವ ಮಳೆಯಿಂದಾಗಿ 878 ರಸ್ತೆಗಳಲ್ಲಿ ಸುಮಾರು 343.41 ಕಿ.ಮೀ ಉದ್ದದಷ್ಟು ರಸ್ತೆ ಹಾಳಾಗಿದೆ. ಅಲ್ಲದೇ 1,114 ಮನೆಗಳಿಗೆ ಹಾನಿಯಾಗಿದೆ. ಮಳೆಯಿಂದ ಮೂವರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾಹಿತಿ ನೀಡಿದ್ದಾರೆ.

ವಿಧಾನಮಂಡಲ ಅಧಿವೇಶನದಲ್ಲಿ ಬೆಂಗಳೂರಿನ ಶಾಸಕರೊಬ್ಬರು ಕೇಳಿದ ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಶಿವಕುಮಾರ್ ಈ ಮಾಹಿತಿ ನೀಡಿದ್ದಾರೆ.

ಮಳೆಯಿಂದಾಗಿ ಮರ ಬಿದ್ದು ಪ್ರಾಣ ಕಳೆದುಕೊಂಡ ವ್ಯಕ್ತಿಯ ಕುಟುಂಬದವರಿಗೆ ಬಿಬಿಎಂಪಿಯಿಂದ ಪರಿಹಾರ ವಿತರಿಸಲಾಗಿದೆ. ಇದಲ್ಲದೇ ತಗ್ಗು ಪ್ರದೇಶಗಳಲ್ಲಿ ಪ್ರವಾಹ ತಪ್ಪಿಸಲು ಚರಂಡಿಗಳಿಗೆ ತಡೆ ಗೋಡೆಗಳನ್ನು ನಿರ್ಮಿಸಲಾಗುತ್ತಿದೆ ಎಂದಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರವಾಹದ ಆತಂಕ ಇರುವ 218 ಜಾಗಗಳನ್ನು ಗುರುತಿಸಲಾಗಿದೆ. ಈವರೆಗೂ 169 ಕಡೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲಾಗಿದೆ. ಉಳಿದ 49 ಕಡೆಗಳಲ್ಲಿ ನೀರು ನುಗ್ಗುವುದನ್ನು ತಡೆಯಲು ಯೋಚಿಸಲಾಗಿದೆ ಎಂದಿದ್ದಾರೆ.

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ರಸ್ತೆಗಳು ಹಾನಿಗೊಂಡಿವೆ. ಸುಮಾರು 150 ಕಿ.ಮೀ. ರಸ್ತೆ ಹಾಳಾಗಿರುವ ಬಗ್ಗೆ ಬಿಬಿಎಂಪಿಗೆ ವರದಿ ಸಲ್ಲಿಸಲಾಗಿದೆ. ಆದರೆ, ಮನೆಗಳಿಗೆ ನೀರು ನುಗ್ಗಿರುವ ಪ್ರಕರಣಗಳು ದಕ್ಷಿಣ ಹಾಗೂ ಪೂರ್ವ ವಲಯದಲ್ಲಿ ಹೆಚ್ಚಾಗಿವೆ.

ಬೆಂಗಳೂರಿನ ವಿವಿಧ ಭಾಗಗಳಲ್ಲಿ ಮಳೆಯಿಂದ ರಸ್ತೆ ಹಾಳಾಗಿರುವ ಕುರಿತು ಹಲವರು ಆಕ್ರೋಶ ಹೊರ ಹಾಕಿದರು. ನಗರದ ಯಾವುದೇ ಭಾಗಕ್ಕೆ ಹೋದರೂ ಗುಂಡಿಯಿಲ್ಲದ ಒಂದೇ ಒಂದು ರಸ್ತೆ ಸಿಗದು. ಅಷ್ಟರ ಮಟ್ಟಿಗೆ ರಸ್ತೆಗಳು ಹಾಳಾಗಿವೆ. ಪ್ರತಿ ದಿನ ಇಂತಹ ರಸ್ತೆಯಲ್ಲಿ ಸಂಚರಿಸುವುದೇ ದುಸ್ತರವಾಗಿದೆ. ಮಕ್ಕಳನ್ನು ದ್ವಿಚಕ್ರ ವಾಹನದಲ್ಲಿ ಕರೆ ತರಲು ಹೆದರುವಂತಹ ಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಮಲ್ಲೇಶ್ವರದಿಂದ ದೊಮ್ಮಲೂರಿಗೆ ನಿತ್ಯ ಸಂಚರಿಸುವ ಕೆ.ಕಾವ್ಯಾ ಆಕ್ರೋಶ ಹೊರ ಹಾಕಿದರು.

ಎಲ್ಲೆಲ್ಲಿ ಎಷ್ಟು ಹಾನಿ?

878 ಹಾನಿಯಾದ ರಸ್ತೆಗಳ ಸಂಖ್ಯೆ | 343.41 ಕಿ.ಮೀ. ಉದ್ದ

ವಲಯ	ಹಾನಿಯಾದ ರಸ್ತೆಗಳ ಸಂಖ್ಯೆ	ಉದ್ದ (ಕಿ.ಮೀ.)
ಮಹದೇವಪುರ	144	13.07
ಬೊಮ್ಮನಹಳ್ಳಿ	127	147.20
ಪೂರ್ವ	62	26.75
ಪಶ್ಚಿಮ	106	24.21
ಆರ್‌ಆರ್ ನಗರ	113	30.24
ಯಲಹಂಕ	127	37.80
ದಕ್ಷಿಣ	135	29.79
ದಾಸರಹಳ್ಳಿ	64	34.35

ಗುಂಡಿ ಬಿದ್ದ ರಸ್ತೆಗಳನ್ನು ಸರಿಪಡಿಸುವ ಪ್ರಯತ್ನವನ್ನು ನಿಯಮಿತವಾಗಿ ಮಾಡುತ್ತಿದ್ದೇವೆ. ಇನ್ನೂ ಮಳೆ ಇರುವುದರಿಂದ ರಸ್ತೆಗಳ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲು ಆಗುತ್ತಿಲ್ಲ

ಎಂ.ಮಹೇಶ್ವರರಾವ್, ಬಿಬಿಎಂಪಿ ಮುಖ್ಯ ಆಯುಕ್ತ

‘ಮುನ್ನೆಚ್ಚರಿಕೆ ವಹಿಸಿ’

‘ಮಳೆಗಾಲ ಆರಂಭವಾಗುವ ಮುನ್ನವೇ ರಸ್ತೆ ಗುಂಡಿ ಮುಚ್ಚಲು ಬಿಬಿಎಂಪಿ ಕ್ರಮ ವಹಿಸಬೇಕು. ನಮ್ಮ ಜೀವವನ್ನು ತೊಂದರೆಯಲ್ಲಿ ಇರಿಸಬೇಕು ಎನ್ನುವ ತೀರ್ಮಾನವನ್ನು ಅವರು ಮಾಡಿರುವಂತೆ ಕಾಣುತ್ತಿದೆ. ಮಳೆಗಾಲದಲ್ಲೂ ರಸ್ತೆಗಳು ಹಾಳಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು’ ಎನ್ನುವುದು ಟೆಕಿ ಎಂ.ಸುಮಂತ್ ಆಗ್ರಹ.

ತಿಮರೋಡಿ ವಿರುದ್ಧ ಪ್ರಕರಣ

ಉಡುಪಿ: ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಅವಹೇಳನ ಮಾಡಿದ್ದಾರೆಂಬ ಆರೋಪದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹೇಶ್ ಶೆಟ್ಟಿ ಅವರು ಫೇಸ್‌ಬುಕ್ ಪೇಜ್‌ನಲ್ಲಿ ವಿಡಿಯೊ ಮಾಡಿ, ಸಂತೋಷ್ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಮತ್ತು ಬೇರೆ ಬೇರೆ ಧರ್ಮಗಳ ಹಾಗೂ ಸಮುದಾಯದ ನಡುವೆ ದ್ವೇಷ ಭಾವನೆ ಉಂಟು ಮಾಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಉಡುಪಿ ಗ್ರಾಮಾಂತರ ಬಿಜೆಪಿಯ ಮಂಡಲ ಅಧ್ಯಕ್ಷ ರಾಜೀವ ಕುಲಾಲ್ ಪೊಲೀಸರಿಗೆ ದೂರು ನೀಡಿದ್ದರು.

ಅದರಂತೆ 196 (1),352, 353(2) ಬಿಎನ್‌ಎಸ್ ಅಡಿಯಲ್ಲಿ ಮಹೇಶ್ ಶೆಟ್ಟಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಧರ್ಮದ ಹೆಸರಿನಲ್ಲಿ ರಾಜಕಾರಣ’

ಧರ್ಮಸ್ಥಳ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಾಜ್ಯದಲ್ಲಿ ಮೊದಲಬಾರಿಗೆ ಧರ್ಮದ ಹೆಸರಿನಲ್ಲಿ ರಾಜಕಾರಣ ನಡೆದಿದೆ. ಧರ್ಮಸ್ಥಳ ಕ್ಷೇತ್ರ ಮತ್ತು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಬೆಳವಣಿಗೆ ಸಹಿಸದವರು ಷಡ್ಯಂತ್ರ ನಡೆಸಿದ್ದಾರೆ’ ಎಂದು ರಾಜ್ಯಸಭೆ ಮಾಜಿ ಸದಸ್ಯ ಪ್ರಭಾಕರ ಕೋರೆ ಕಿಡಿ ಕಾರಿದರು.

ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಆರೋಪಿಸಿ ಧರ್ಮಸ್ಥಳ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಮಂಗಳವಾರ ನಡೆದ ಮೌನ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ‘ಧರ್ಮಸ್ಥಳದಲ್ಲಿ ತನಿಖೆ ನಡೆಸುವ ಮುನ್ನವೇ ರಾಜ್ಯ ಸರ್ಕಾರ ಯೋಚಿಸಬೇಕಿತ್ತು’ ಎಂದರು.

‘ಷಡ್ಯಂತ್ರ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ‘ಧರ್ಮಸ್ಥಳ ಚಲೋ’ಗೆ ಕರೆ ಕೊಡುತ್ತೇವೆ. ಪ್ರತಿ ಜಿಲ್ಲೆಯಿಂದ 50 ಸಾವಿರ ಜನ ಭಾಗವಹಿಸಿ, ಕಾನೂನು ಕೈಗೆತ್ತಿಕೊಳ್ಳುತ್ತಾರೆ’ ಎಂದು ಶಾಸಕ ಅಭಯ ಪಾಟೀಲ ಎಚ್ಚರಿಸಿದರು.

ಬೆಳಗಾವಿಯ ರುದ್ರಮಠದ ಹರಿಗುರು ಮಹಾರಾಜ, ಬೈಲಹೊಂಗಲ ಮೂರುಸಾವಿರ ಮಠದ ಪ್ರಭುನೀಲಕಂಠ ಸ್ವಾಮೀಜಿ, ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಪಂಚಾಕ್ಷರಿ ಸ್ವಾಮೀಜಿ ಪಾಲ್ಗೊಂಡಿದ್ದರು.

ಸಾಕ್ಷಿ ದೂರುದಾರನ ವಿಚಾರಣೆ

ಮಂಗಳೂರು: ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ ಸಂಬಂಧ ವಿಶೇಷ ತನಿಖಾ ತಂಡವು ಸಾಕ್ಷಿ ದೂರುದಾರನನ್ನು ಬೆಳ್ತಂಗಡಿಯ ಕಚೇರಿಯಲ್ಲಿ ಮಂಗಳವಾರ ವಿಚಾರಣೆಗೆ ಒಳಪಡಿಸಿತು.

ಅವರು ಇದುವರೆಗೆ ತೋರಿಸಿದ 18 ಜಾಗಗಳಲ್ಲಿ 17 ಕಡೆ ನೆಲ ಅಗೆಯಲಾಗಿದ್ದು, 2 ಕಡೆ ಮೃತದೇಹದ ಅವಶೇಷ ಸಿಕ್ಕಿವೆ. ಜಾಗ ಅಗೆಯುವಾಗ ಸಿಕ್ಕಿರುವ ಮೂಳೆಗಳು, ಮಣ್ಣಿನ ಮಾದರಿಗಳ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.



ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಆರೋಪಿಸಿ ಬೆಳಗಾವಿಯಲ್ಲಿ ಮಂಗಳವಾರ ಧರ್ಮಸ್ಥಳ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಮಳೆಯಲ್ಲಿಯೇ ಮೌನ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

‘ವಿದೇಶಿ ಹಣ: ಇ.ಡಿ. ತನಿಖೆ ನಡೆಸಲಿ’

ಉಡುಪಿ: ‘ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಸ್ಥಾನದ ಕುರಿತು ಕೆಲವು ಯೂಟ್ಯೂಬರ್‌ಗಳ ಅಪಪ್ರಚಾರ-ದಿಂದ ಹಿಂದೂ ಧಾರ್ಮಿಕ ಕೇಂದ್ರದ ಮೇಲಿರುವ ಶ್ರದ್ಧೆಗೆ ಧಕ್ಕೆಯಾಗುತ್ತಿದೆ. ಇದರ ಹಿಂದೆ ವಿದೇಶಿ ಹಣ ಹರಿದು ಬಂದ ಗುಮಾನಿ ಇದ್ದು, ಕೇಂದ್ರ ಸರ್ಕಾರ ಜಾರಿ ನಿರ್ದೇಶನಾಲಯದ (ಇ.ಡಿ.) ಮೂಲಕ ತನಿಖೆ ನಡೆಸಬೇಕು’ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಮನವಿ ಮಾಡಿದ್ದಾರೆ.

ಕೋಟ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಈ ಕುರಿತು ಪತ್ರ ಬರೆದಿದ್ದಾರೆ.

‘ಮಂಜುನಾಥ ಸ್ವಾಮಿ ದೇವಸ್ಥಾನದ ವಿರುದ್ಧ ಷಡ್ಯಂತ್ರ ನಡೆದಿದೆ ಎಂದು ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ನೀಡಿದ್ದು, ಎಡಪಂಥೀಯರ ಒತ್ತಡದಿಂದಾಗಿ ಎಸ್‌.ಐ.ಟಿ. ರಚಿಸಲಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರು ಮಾಧ್ಯಮಗಳಿಗೆ ತಿಳಿಸಿದ್ದಾರೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸರಣಿ ಕೊಲೆ ಆರೋಪ ‘ಆಧಾರರಹಿತ’: ಹೆಗ್ಗಡೆ

ಒಂದನೇ ಪುಟದಿಂದ...

ಪಂಚಾಯಿತಿಗೆ ಮಾಹಿತಿ ನೀಡುತ್ತಿದ್ದೆವು:

ಧರ್ಮಸ್ಥಳದಲ್ಲಿ ಶವಗಳನ್ನು ಹೂಳಲಾಗಿದೆ ಎಂಬ ಸಾಕ್ಷಿ ದೂರುದಾರನ ಆರೋಪಗಳಿಗೆ ಪ್ರತಿಕ್ರಿಯಿಸಿ, ‘ಅದು ಅಸಾಧ್ಯ. ಧರ್ಮಸ್ಥಳದಲ್ಲಿ ಯಾರಾದರೂ ಸತ್ತರೆ ಅವರಿಗೆ ಮೋಕ್ಷ ಸಿಗುತ್ತದೆ ಎಂಬ ನಂಬಿಕೆ ಹಲವರಲ್ಲಿದೆ. ಯಾವುದೇ ಸಾವು ಸಂಭವಿಸಿದಾಗ ನಾವು ಪಂಚಾಯಿತಿಗೆ ಮಾಹಿತಿ ನೀಡುತ್ತಿದ್ದೆವು. ಅವರು ಎಲ್ಲ ನಿಯಮಗಳನ್ನು ಪಾಲಿಸಿ ಶವವನ್ನು ಹೂಳುತ್ತಿದ್ದರು’ ಎಂದು ಹೇಳಿದರು.

ಕುಟುಂಬ ಸದಸ್ಯರ ಮೇಲಿನ ಆರೋಪದಲ್ಲಿ ಹುರುಳಿಲ್ಲ

ಸೌಜನ್ಯ ಸಾವಿಗೆ ನ್ಯಾಯ ಒದಗಿಸಬೇಕು ಎಂಬ ಕೂಗು ಮತ್ತೆ ಕೇಳಿ ಬಂದಿರುವುದರ ಬಗ್ಗೆ, ‘ಆ ರೀತಿಯ ಘಟನೆ ನಡೆದಿದೆ ಎಂಬುದು ತಿಳಿದಾಗ ನಾವು ಅದೇ ದಿನ ಸರ್ಕಾರಕ್ಕೆ ಮಾಹಿತಿ ನೀಡಿದ್ದೇವೆ. ನಮ್ಮ ಕುಟುಂಬದ ಮೇಲಿನ ಆರೋಪಗಳು ಆಧಾರರಹಿತ. ಅವರು ಆರೋಪ ಮಾಡಿರುವ ನಮ್ಮ ಕುಟುಂಬದ ಸದಸ್ಯರು ಶಿಕ್ಷಣಕ್ಕಾಗಿ ವಿದೇಶದಲ್ಲಿದ್ದರು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾವು ಸಲ್ಲಿಸಿದ್ದೇವೆ. ಇವೆಲ್ಲ ನಮ್ಮ ಕುಟುಂಬದ ವಿರುದ್ಧ ನಡೆದಿರುವ ಷಡ್ಯಂತ್ರ’ ಎಂದರು.

‘ಎಲ್ಲ ಪಕ್ಷಗಳ ಬೆಂಬಲ ಇದೆ’

ಧರ್ಮಸ್ಥಳಕ್ಕೆ ಸಂಬಂಧಿಸಿದ ವಿವಾದ ರಾಜಕೀಯ ತಿರುವು ಪಡೆದುಕೊಂಡಿದೆ ಎಂಬ ಮಾತುಗಳನ್ನು ಹೆಗ್ಗಡೆ ಅಲ್ಲಗಳೆದರು. ‘ನಾನು ಹಾಗೆ ಭಾವಿಸುವುದಿಲ್ಲ. ಕಾಂಗ್ರೆಸ್ ನಾಯಕರು ಮತ್ತು ಜೆಡಿಎಸ್ ಪಕ್ಷಗಳ ನಾಯಕರೂ ಇಲ್ಲಿಗೆ ಬಂದಿದ್ದಾರೆ. ಕೆಲವರು ದೇವಾಲಯದ ಹೆಸರು ಕೆಡಿಸಲು ಬಯಸುತ್ತಿದ್ದಾರೆ. ಎಲ್ಲ ಪಕ್ಷಗಳೂ ದೇವಾಲಯಕ್ಕೆ ತಮ್ಮ ಬೆಂಬಲ ಸೂಚಿಸಿವೆ’ ಎಂದು ಹೇಳಿದರು.

‘ಯಾರ ಪಿತೂರಿ ಎಂಬುದು ತಿಳಿದಿದೆ’

‘ಈ ಎಲ್ಲಾ ಪಿತೂರಿಗಳ ಹಿಂದೆ ಯಾರಿದ್ದಾರೆ ಎಂಬುದನ್ನು ನಮ್ಮ ಮೂಲಗಳಿಂದ ತಿಳಿದುಕೊಂಡಿದ್ದೇವೆ. ಆದರೆ, ನಮ್ಮ ಬಳಿ ಪುರಾವೆಗಳಿಲ್ಲದ ಕಾರಣ ಯಾವುದೇ ಹೆಸರು ನೀಡಲು ಸಾಧ್ಯವಾಗುತ್ತಿಲ್ಲ. ನಮ್ಮ ವಿರುದ್ಧ ಪಿತೂರಿ ನಡೆದಿರುವುದನ್ನು ಸಾಬೀತುಪಡಿಸುವುದು ಎಸ್‌ಐಟಿಯ ಜವಾಬ್ದಾರಿಯಾಗಿದೆ’ ಎಂದು ಹೆಗ್ಗಡೆ ಪ್ರತಿಪಾದಿಸಿದರು.

‘ತಿಮರೋಡಿ ಬಂಧನಕ್ಕೆ ಸೂಚಿಸಿಲ್ಲ’



ಮಹೇಶ ಶೆಟ್ಟಿ



ಪರಮೇಶ್ವರ


ಬೆಂಗಳೂರು: ‘ಮುಖ್ಯಮಂತ್ರಿ ವಿರುದ್ಧ ಹೇಳಿಕೆ ನೀಡಿದವರನ್ನು ಬಂಧಿಸುವಂತೆ ಸೂಚಿಸಿಲ್ಲ. ಇಂತಹ ವಿಷಯಗಳಲ್ಲಿ ಸ್ಥಳೀಯ ಪೊಲೀಸರೇ ಕ್ರಮಕೈಗೊಳ್ಳುತ್ತಾರೆ’ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಅಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ಬಂಧಿಸಲು ಸೂಚನೆ ನೀಡಿದ್ದೀರಾ ಎಂಬ ಸುದ್ದಿಗಾರರ ಪ್ರಶ್ನೆಗೆ ಮಂಗಳವಾರ ಉತ್ತರ ನೀಡಿದ ಅವರು, ‘ಯಾರೋ, ಏನೋ ಹೇಳುತ್ತಾರೆ ಎಂದ ತಕ್ಷಣ ಬಂಧಿಸಲು ಆಗುತ್ತದೆಯೇ? ಹೇಳಿಕೆಯ ತೀವ್ರತೆ ನೋಡಿಕೊಂಡು ಕ್ರಮ ಕೈಗೊಳ್ಳಲಾಗುತ್ತದೆ. ಅದಕ್ಕಾಗಿಯೇ ದ್ವೇಷ ಭಾಷಣ ಮಸೂದೆ ಸಿದ್ಧಪಡಿಸಲಾಗಿದೆ’ ಎಂದರು.

ವಿಧಾನಸಭೆಯಲ್ಲಿ ಸೋಮವಾರ ಮಾತನಾಡಿದ್ದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ 24 ಕೊಲೆ ಮಾಡಿದ್ದಾರೆ ಎಂದು ಹೇಳಿಕೆ ನೀಡಿದ್ದ ವ್ಯಕ್ತಿಯ ವಿರುದ್ಧ ಕಾನೂನು ಪ್ರಕಾರ ತಕ್ಷಣ ಕ್ರಮಕೈಗೊಳ್ಳಲಾಗು-ವುದು’ ಎಂದು ಹೇಳಿದ್ದರು.

ವಿರೋಧಪಕ್ಷದ ನಾಯಕ ಆರ್. ಅಶೋಕ ವಿಷಯ ಪ್ರಸ್ತಾಪಿಸಿ, ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾತನಾಡುವ ವೇಳೆ ಒಬ್ಬ ವ್ಯಕ್ತಿ, ಮುಖ್ಯಮಂತ್ರಿ 24 ಕೊಲೆ ಮಾಡಿದ್ದಾರೆ ಎಂದಿದ್ದಾರೆ. ಅದನ್ನು ಕೇಳಿದ ಬಳಿಕವೂ ಕ್ರಮಕೈಗೊಳ್ಳದಿದ್ದರೆ ಹೇಗೆ ಎಂದು ಪ್ರಶ್ನಿಸಿದ್ದರು.

ಆದರೆ, ಈ ಹೇಳಿಕೆ ನೀಡಿದ್ದು ಬಿಜೆಪಿ ಶಾಸಕ ಹರೀಶ್ ಪೂಂಜಾ ಎನ್ನುವ ಮಾಹಿತಿ ಗೃಹ ಸಚಿವರಿಗೆ ತಡವಾಗಿ ಗೊತ್ತಾಗಿದೆ. ‘2023ರಲ್ಲಿ ಇಂತಹ ಹೇಳಿಕೆ ನೀಡಿದ್ದ ಪೂಂಜಾ ವಿರುದ್ಧ ಪ್ರಕರಣ ದಾಖಲಾಗಿತ್ತು. ನ್ಯಾಯಾಲಯದ ತಡೆಯಾಜ್ಞೆ ತಂದಿದ್ದರು. ತಡೆಯಾಜ್ಞೆ ತೆರವಾದ ತಕ್ಷಣ ಮುಂದಿನ ಕ್ರಮ ತೆಗೆದುಕೊಳ್ಳ-ಲಾಗುತ್ತದೆ’ ಎಂದು ಪ್ರತಿಕ್ರಿಯಿಸಿದರು.



ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ ಬಳಿ ಕಾವೇರಿ ನದಿಯಲ್ಲಿ ಕಂಡುಬಂದ ನೀರು ನಾಯಿಗಳು

‘ಕಾವೇರಿ’ಯಲ್ಲಿ ನೀರು ನಾಯಿಗಳು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಇಲ್ಲಿನ ಕಾವೇರಿ ನದಿಯಲ್ಲಿ ಅಳಿವಿನ ಅಂಚಿನಲ್ಲಿರುವ ನೀರು ನಾಯಿಗಳು ಮಂಗಳವಾರ ಗೋಚರಿಸಿದವು.

ಪಟ್ಟಣದ ವೆಲ್ಲೆಸ್ಲಿ ಸೇತುವೆಯ ಪೂರ್ವ ಭಾಗದಲ್ಲಿ ನೀರಿನಲ್ಲಿ ಈಜಾಡುತ್ತಿದ್ದ ನೀರು ನಾಯಿಗಳನ್ನು ಜನ ಕುತೂಹಲದಿಂದ ವೀಕ್ಷಿಸಿದರು. ಏಳೆಂಟು ನೀರು ನಾಯಿಗಳ ಗುಂಪು ನದಿಯ ಮೇಲ್ಮುಖವಾಗಿ ಈಜುತ್ತಾ ಬಂದವು.

ನೀರಿನಲ್ಲಿ ಮುಳುಗೇಳುತ್ತಾ ಚಿನ್ನಾಟ ಆಡುತ್ತಿದ್ದುದನ್ನು ಕಂಡು ಜನ ಖುಷಿಪಟ್ಟರು. ಕೆಲವರು ಮೊಬೈಲ್‌ಗಳಲ್ಲಿ ಫೋಟೊ ಕ್ಲಿಕ್ಕಿಸಿಕೊಂಡರು.

‘ಕಲ್ಹಳ್ಳಿಯಲ್ಲಿ ಕಸಾಪ ವಾರ್ಷಿಕ ಸಭೆ’

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ): ‘ತಾಲ್ಲೂಕಿನ ಕಲ್ಹಳ್ಳಿ ಗ್ರಾಮದ ಸತ್ಯಕಾಮ ಪ್ರತಿಷ್ಠಾನದ ‘ಸುಮ್ಮನೆ’ ಸಭಾಭವನದ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಾಮಾನ್ಯಸಭೆ ಹಮ್ಮಿಕೊಳ್ಳ-ಲಾಗುವುದು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

‘ಕಾರ್ಯಕಾರಿಣಿ ಸಮಿತಿಯಲ್ಲಿ ಅನುಮೋದನೆ ಪಡೆದು, ಸಭೆಯ ಸ್ಥಳ ಘೋಷಿಸಲಾಗುವುದು. ಎಲ್ಲಿಯಾದರೂ ಸಾಮಾನ್ಯ ಸಭೆ ಮಾಡಬಹುದು ಎಂದು ನ್ಯಾಯಾಲಯ ಸ್ಪಷ್ಟವಾಗಿ ತಿಳಿಸಿದೆ.’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಪರಿಷತ್ತಿನ ವಾರ್ಷಿಕ ಸಭೆಯು ಕೆಲವರ ಕುತಂತ್ರದಿಂದ ನೆರವೇರಲಿಲ್ಲ. ಪರಿಷತ್ತಿನ ಸದಸ್ಯ ಬಲ 4 ಲಕ್ಷ ಇದೆ. ಎಲ್ಲರೂ ಬಂದರೆ ಹೇಗೆ ನಿಭಾಯಿಸಲು ಸಾಧ್ಯ ಎಂದು ಪೊಲೀಸರಿಗೆ ತಪ್ಪು ಮಾಹಿತಿ ನೀಡಿದರು. ಸುರಕ್ಷತೆ ಕಾರಣದಿಂದ ಸಭೆಗೆ ಅನುಮತಿ ನಿರಾಕರಿಸಲಾಯಿತು’ ಎಂದು ಅವರು ಹೇಳಿದರು.

‘ದೊಡ್ಡ ಸಂಸ್ಥೆಯಲ್ಲಿ ಪರ, ವಿರೋಧ ಸಹಜ. ಆದರೆ, ಎಸ್.ಜಿ.ಸಿದ್ದರಾಮ-ಯ್ಯ, ಜಾಣಗೆರೆ ವೆಂಕಟರಾಮಯ್ಯ, ವಸುಂಧರಾ ಭೂಪತಿ, ಹಂ.ಪ.ನಾ-ಗರಾಜಯ್ಯ ಸೇರಿ ಕೆಲವರು ದ್ವೇಷದ ಕಾರಣಕ್ಕೆ ಕುತಂತ್ರ ನಡೆಸಿದ್ದಾರೆ. ಅದಕ್ಕೆ ಬಗ್ಗುವದಿಲ್ಲ’ ಎಂದರು.

ಅಪಘಾತ: ಇಬ್ಬರು ಮಕ್ಕಳು ಸಾವು

ಬ್ಯಾಡಗಿ (ಹಾವೇರಿ): ತಾಲ್ಲೂಕಿನ ಮೋಟೆಬೆನ್ನೂರು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಸಗಿ ಬಸ್ ಅಪಘಾತಕ್ಕೀಡಾದ ಪರಿಣಾಮ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ. 13 ಮಂದಿ ಗಾಯಗೊಂಡಿದ್ದಾರೆ.

ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಬಸತವಡೆ ಗ್ರಾಮದ ಯಶ್ ಕಸಾಬ ಸಾವಂತ (14) ಮತ್ತು ನೆವರಿ ಗ್ರಾಮದ ಐರ್ಣವಿ ಸಚಿನ್ ಮಹಾಡಿ (11) ಮೃತರು. ಇಬ್ಬರೂ ಪೋಷಕರೊಂದಿಗೆ ಪ್ರಯಾಣಿಸುತ್ತಿದ್ದರು.

‘ಮಹಾರಾಷ್ಟ್ರದ ವಿಟಾದಿಂದ ಕೊಯಮತ್ತೂರಿಗೆ ಹೊರಟಿದ್ದ ಖಾಸಗಿ ಬಸ್‌ಗೆ ಮೋಟೆಬೆನ್ನೂರು ಬಳಿ ಹೆದ್ದಾರಿಯಲ್ಲಿ ಕಾರು ಅಡ್ಡ ಬಂತು. ಅದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಯತ್ನಿಸಿದ ಬಸ್ ಚಾಲಕ, ದಿಢೀರ್ ಬ್ರೇಕ್ ಹಾಕಿದ. ನಿಯಂತ್ರಣ ತಪ್ಪಿದ ಬಸ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಉರುಳಿ ಬಿತ್ತು’ ಎಂದು ಪೊಲೀಸರು ತಿಳಿಸಿದರು.

ಚಿಟಿಕೆ ಸುದ್ದಿ

ಸಾಂಸ್ಕೃತಿಕ ಟ್ರಸ್ಟ್, ಪ್ರತಿಷ್ಠಾನಕ್ಕೆ ಅಧ್ಯಕ್ಷರ ನೇಮಕ

ಬೆಂಗಳೂರು: ಸಾಂಸ್ಕೃತಿಕ ಟ್ರಸ್ಟ್‌ಗಳು ಹಾಗೂ ಪ್ರತಿಷ್ಠಾನಕ್ಕೆ ಕಾರ್ಯಕಾರಿ ಸಮಿತಿ ರಚಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.

ಡಾ.ಮಲ್ಲಿಕಾರ್ಜುನ ಮನ್ಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ಗೆ ಹಿಂದೂಸ್ತಾನಿ ಗಾಯಕ ಎಂ. ವೆಂಕಟೇಶ್ ಕುಮಾರ್ (ಧಾರವಾಡ) ಅವರನ್ನು ನೇಮಕಗೊಳಿಸಲಾಗಿದೆ.

ಡಾ.ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ಗೆ ಸಾಹಿತಿ ಸರಜೂ ಕಾಟ್ಕರ್ (ಬೆಳಗಾವಿ) ಅವರನ್ನು ಹಾಗೂ ಸ್ವರ ಸಾಮ್ರಾಟ್ ಪಂ.ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ಗೆ ಹಿಂದೂಸ್ತಾನಿ ಗಾಯಕ ಕೈವಲ್ಯ ಕುಮಾರ ಗುರವ (ಧಾರವಾಡ), ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ಗೆ ಸಾಹಿತಿ ರಂಜಾನ್ ದರ್ಗಾ (ಧಾರವಾಡ), ಚಿತ್ರಕಲಾ ಶಿಲ್ಪಿ ಡಿ.ವ್ಹಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ಗೆ ಕಲಾವಿದ ಬಿ. ಮಾರುತಿ (ಧಾರವಾಡ) ಅವರು ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಹಾವೇರಿ ಜಿಲ್ಲೆಯಲ್ಲಿರುವ ಗಳಗನಾಥ ಮತ್ತು ನಾ. ರಾಜಪುರೋಹಿತ ಪ್ರತಿಷ್ಠಾನಕ್ಕೆ ಅಧ್ಯಕ್ಷರಾಗಿ ಕೆ.ಆರ್. ಕಮಲೇಶ್ ಅವರನ್ನು ನೇಮಕ ಮಾಡಲಾಗಿದೆ. ಈ ನೇಮಕಾತಿಗಳು ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹಟ್ಟಿ ಚಿನ್ನದ ಗಣಿಗೆ ಭಾರವಾದ ‘ಟೌನ್‌ಶಿಪ್’

ಉಳಿತಾಯದ ₹1000 ಕೋಟಿ ಬಳಕೆಗೆ ಮಹಾಲೇಖಪಾಲರ ಪರಿಶೋಧನಾ ವರದಿಯಲ್ಲಿ ಆಕ್ಷೇಪ

• ಎಸ್.ರವಿಪ್ರಕಾಶ್

ಬೆಂಗಳೂರು: ರಾಯಚೂರಿನಲ್ಲಿರುವ ದೇಶದ ಏಕೈಕ ಪ್ರತಿಷ್ಠಿತ ‘ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್’ (ಎಚ್‌ಜಿಎಂಸಿಎಲ್) ಕಳೆದ 77 ವರ್ಷಗಳಲ್ಲಿ ದುಡಿದು, ನಿಶ್ಚಿತ ಠೇವಣಿ ಖಾತೆಗಳಲ್ಲಿ ಉಳಿತಾಯ ಮಾಡಿದ್ದ ₹1,200 ಕೋಟಿಯಲ್ಲಿ ₹1,000 ಕೋಟಿಯನ್ನು ‘ಸಂಯೋಜಿತ ಟೌನ್‌ಶಿಪ್’ ನಿರ್ಮಾಣಕ್ಕೆ ಬಳಕೆ ಮಾಡಲು ಮುಂದಾಗಿದೆ.

‘ಈ ರೀತಿ ₹1,000 ಕೋಟಿಯನ್ನು ಅನುತ್ಪಾದಕ ವೆಚ್ಚಕ್ಕೆ ಬಳಸುತ್ತಿರುವುದರಿಂದ ಹಟ್ಟಿ ಚಿನ್ನದ ಗಣಿ ಕಂಪನಿ ದಿವಾಳಿ ಆಗುತ್ತದೆ’ ಎಂದು ಭಾರತದ ಮಹಾಲೇಖಪಾಲರ (ಸಿಎಜಿ) ಪರಿಶೋಧನಾ ವರದಿ ಎಚ್ಚರಿಕೆ ನೀಡಿದೆ. ಈ ಸಂಬಂಧ ಪ್ರಧಾನ ಮಹಾ ಲೇಖಪಾಲರು ಕಳೆದ ಜೂನ್ 27 ರಂದು ಎಚ್‌ಜಿಎಂಸಿಎಲ್‌ಗೆ ಹಲವು ಗಂಭೀರ ಪ್ರಶ್ನೆಗಳನ್ನು ಕೇಳಿದ್ದಾರೆ. ಅದರ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

‘ಕಂಪನಿಯು ವಿವಿಧ ಬ್ಯಾಂಕ್‌ಗಳ ನಿಶ್ಚಿತ ಠೇವಣಿಗಳಲ್ಲಿ ಇಟ್ಟಿರುವ ಮೊತ್ತ ₹850 ಕೋಟಿ. ಫ್ಲೆಕ್ಸಿ ಅಕೌಂಟ್ ಬ್ಯಾಲೆನ್ಸ್ ₹350 ಕೋಟಿ. ಹೀಗೆ ಒಟ್ಟು ₹1,200 ಕೋಟಿ ಇದೆ. ಇದರಲ್ಲಿ ₹998.50 ಕೋಟಿ ವೆಚ್ಚದಲ್ಲಿ 912 ಮನೆಗಳನ್ನು ಒಳಗೊಂಡ ಟೌನ್‌ಶಿಪ್ ನಿರ್ಮಾಣ ಮಾಡಿದರೆ, ಕಂಪನಿ ಬಳಿ ಉಳಿಯುವುದು ಕೇವಲ ₹211.50 ಕೋಟಿ’ ಎಂದು 2024 ರ ಮಾರ್ಚ್‌ಗೆ ಕೊನೆಗೊಂಡ ಕಂಪನಿಯ ವಿತ್ತೀಯ ಹೇಳಿಕೆ ತಿಳಿಸಿದೆ. ಇದು ಆಘಾತಕಾರಿ ಸಂಗತಿ ಎಂದು ಸಿಎಜಿ ವರದಿ ಬೊಟ್ಟು ಮಾಡಿದೆ.

‘ಸುಮಾರು 77 ವರ್ಷಗಳ ಶ್ರಮದ ಕಾರಣ ಇಷ್ಟು ಮೊತ್ತ ಉಳಿತಾಯ ಮಾಡಲು ಸಾಧ್ಯವಾಗಿದೆ. ₹998.50 ಕೋಟಿ ಅಂದರೆ ನಿಶ್ಚಿತ ಠೇವಣಿಯಲ್ಲಿನ ಶೇ 83.21 ರಷ್ಟು ಮೊತ್ತ ಅನುತ್ಪಾದಕ ಉದ್ದೇಶಕ್ಕೆ (ಟೌನ್‌ಶಿಪ್) ಬಳಸಲಾಗುತ್ತಿದೆ. ಇದರಿಂದ ಕಂಪನಿಯ ವ್ಯಾಪಾರ ವಹಿವಾಟು ವೃದ್ಧಿಸಲು ಸುತಾರಾಂ ಸಾಧ್ಯವಿಲ್ಲ. ಮೊದಲ ಹಂತದ ಯೋಜನೆ ಕೈಗೆತ್ತಿಕೊಂಡರೆ ಕಂಪನಿ ತೀವ್ರ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುತ್ತದೆ. ಹಣಕಾಸು ಬಾಧ್ಯತೆ ಮತ್ತು ಭವಿಷ್ಯದ ವಿಸ್ತರಣಾ ಚಟುವಟಿಕೆಗಳನ್ನು ಗಮನಕ್ಕೆ ತೆಗೆದುಕೊಳ್ಳದೇ ಅವಿವೇಕದ ನಿರ್ಧಾರ ತೆಗೆದುಕೊಂಡಿದೆ’ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

‘ಲೋಕೋಪಯೋಗಿ ಇಲಾಖೆ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ತನ್ನ ಮನಸ್ಸಿಗೆ ತೋಚಿದಂತೆ ಮಾಡಿಕೊಂಡಿದೆ. ಎಚ್‌ಜಿಎಂಸಿಎಲ್‌ನ ಅಗತ್ಯವನ್ನು ಚರ್ಚಿಸಿಯೇ ಇಲ್ಲ. ಇದಕ್ಕೆ ಪೂರಕವಾದ ಯಾವುದೇ ದಾಖಲೆಗಳೂ ನಮಗೆ ಲಭ್ಯವಾಗಿಲ್ಲ. ನಿಮ್ಮ ಬಳಿ ದಾಖಲೆಗಳು ಇದ್ದರೆ ನಮಗೆ ಕೊಡಿ’ ಎಂದು ಮಹಾಲೆಕ್ಕ ಪರಿಶೋಧಕರು ವರದಿಯಲ್ಲಿ ಪ್ರತಿಪಾದಿಸಿದ್ದಾರೆ.

> ‘ಲೋಕೋಪಯೋಗಿ ಇಲಾಖೆ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ತನ್ನ ಮನಸ್ಸಿಗೆ ತೋಚಿದಂತೆ ಮಾಡಿಕೊಂಡಿದೆ ಎಂದು ಸಿಎಜಿ ಆಡಿಟ್ ವರದಿಯಲ್ಲಿ ಆಕ್ಷೇಪ ಎತ್ತಲಾಗಿದೆ.

‘ಅಲ್ಲದೇ, ಎಚ್‌ಜಿಎಂಸಿಎಲ್ ಈ ಯೋಜನೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆ ಜತೆಗೆ ಯಾವುದೇ ಒಪ್ಪಂದವನ್ನೂ ಮಾಡಿಕೊಂಡಿಲ್ಲ. ನಿಯಮಗಳು ಮತ್ತು ಷರತ್ತುಗಳು, ವ್ಯಾಜ್ಯ ತೀರ್ಮಾನ ವ್ಯವಸ್ಥೆ, ಪಾವತಿ ವಿಧಾನ ಇತ್ಯಾದಿಗಳ ಕುರಿತೂ ಒಪ್ಪಂದಗಳೂ ಆಗಿಲ್ಲ. ಆದರೂ, 2025ರ ಫೆಬ್ರುವರಿ 6ಕ್ಕೆ ₹39.69 ಕೋಟಿ ಮುಂಗಡವನ್ನು ‘ಕುಸುಮ ಮೆಸರ್ಸ್ ಸ್ಟಾರ್ ಇನ್‌ಫ್ರಾಟೆಕ್‌ಗೆ ಪಾವತಿ ಮಾಡಿದೆ. ಅಷ್ಟೇ ಅಲ್ಲ, ಲೋಕೋಪಯೋಗಿ ಇಲಾಖೆ ₹793.94 ಕೋಟಿಗೆ ಕಾರ್ಯಾದೇಶವನ್ನೂ ಬಿಡುಗಡೆ ಮಾಡಿದೆ. ಅಚ್ಚರಿ ಎಂದರೆ ಎಚ್‌ಜಿಎಂಸಿಎಲ್ ಬಳಿ ಕಾರ್ಯಾದೇಶದ ಪತ್ರದ ಪ್ರತಿಯೇ ಇಲ್ಲ’ ಎಂದು ವರದಿ ಹೇಳಿದೆ.

‘ಲೋಕೋಪಯೋಗಿ ಇಲಾಖೆ ತಾನು ಸಿದ್ಧಪಡಿಸಿದ ಸಮಗ್ರ ಯೋಜನಾ ವರದಿಗೆ ಭಾರತೀಯ ವಿಜ್ಞಾನ ಸಂಸ್ಥೆಯಿಂದ (ಐಐಎಸ್‌ಸಿ) ಟೌನ್‌ಶಿಪ್ ರಚನಾ ಸುಸ್ಥಿರತೆ ವರದಿಯನ್ನು ಕೇಳಿದೆ. ಇದಕ್ಕಾಗಿ ₹1.40 ಕೋಟಿ ಪಾವತಿಸಿದೆ. ಚಿನ್ನದ ಗಣಿಗಳಲ್ಲಿ ಸ್ಫೋಟ ಕಾರ್ಯವನ್ನು ನಡೆಸುವುದರಿಂದ ಪರಿಣಾಮ ಆಗುವುದೇ, ಅದಕ್ಕಾಗಿ ಯೋಜನೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆ ಎಂಬ ವರದಿಯನ್ನು ಕೇಳಿದೆ. ಈ ವಿಚಾರದಲ್ಲೂ ಎಚ್‌ಜಿಎಂಸಿಎಲ್ ಅನ್ನು ಕತ್ತಲಿನಲ್ಲಿ ಇಡಲಾಗಿದೆ’ ಎಂದು ಸಿಎಜಿ ಆಕ್ಷೇಪ ವ್ಯಕ್ತಪಡಿಸಿದೆ.


ಹಟ್ಟಿ ಚಿನ್ನದ ಗಣಿ ಪ್ರವೇಶ ದ್ವಾರ

ಎಚ್‌ಜಿಎಂಸಿಎಲ್‌ಗೆ ಪ್ರಶ್ನೆಗಳು

- ಕೆಎಚ್‌ಬಿ ₹1,000 ಕೋಟಿಗೆ 2,624 ಮನೆಗಳ ಟೌನ್‌ಶಿಪ್ ನಿರ್ಮಿಸಿ ಕೊಡುವುದಾಗಿ ಹೇಳಿತ್ತು. ಆದರೆ, ಲೋಕೋಪಯೋಗಿ ಇಲಾಖೆಗೆ ₹998.50 ಕೋಟಿಯಲ್ಲಿ 912 ಮನೆಗಳ ಟೌನ್‌ಶಿಪ್‌ಗೆ ಒಪ್ಪಿಗೆ ನೀಡಿದ್ದೇಕೆ? ಲೋಕೋಪಯೋಗಿ ಇಲಾಖೆ ಕುಸುಮ ಮೆಸರ್ಸ್ ಸ್ಟಾರ್ ಇನ್‌ಫ್ರಾಟೆಕ್‌ಗೆ (ಸ್ಟಾರ್ ಬಿಲ್ಡರ್) ಗುತ್ತಿಗೆ ನೀಡಿದ್ದೇಕೆ?
- ವೆಚ್ಚವನ್ನು ಏಕಾಏಕಿ ಏರಿಸಿದ್ದರ ಕಾರಣಗಳೇನು?
- 2,624 ಮನೆಗಳ ಬದಲಿಗೆ 912 ಮನೆಗಳನ್ನು ಕಟ್ಟಿಕೊಟ್ಟರೆ, ಉಳಿದ 1,712 ಕಾರ್ಮಿಕರಿಗೆ ಯಾವಾಗ ಮನೆ ಕಟ್ಟಿಕೊಡುತ್ತೀರಿ? ಇವರಿಗೆ ಮನೆ ಸಿಗದೇ ಹೋದರೆ ಕಾರ್ಮಿಕರಲ್ಲಿ ಅಸಮಾಧಾನಕ್ಕೆ ಕಾರಣವಾಗಿ ಉತ್ಪಾದಕತೆ ಮೇಲೆ ಪರಿಣಾಮ ಬೀರುತ್ತದೆಯಲ್ಲವೇ?
- ಲೋಕೋಪಯೋಗಿ ಇಲಾಖೆ ಟೌನ್‌ಶಿಪ್ ನಿರ್ಮಾಣದಲ್ಲಿ ಪರಿಣತಿ ಹೊಂದಿಲ್ಲ. ಗಣಿ ಸಚಿವರ ನಿರ್ದೇಶನ ಇಲ್ಲದೇ ಇದ್ದರೆ, ಎಚ್‌ಜಿಎಂಸಿಎಲ್ ಲೋಕೋಪಯೋಗಿ ಇಲಾಖೆಯನ್ನು ಆಯ್ಕೆ ಮಾಡುತ್ತಿರಲಿಲ್ಲ
- ನಾಲ್ಕು ಗಣಿಗಳಿಗೆ 1987 ರಿಂದ ಬಾಡಿಗೆ ಪಾವತಿ ಮಾಡಲಾಗುತ್ತಿದೆ. ಆದರೆ, ಅಲ್ಲಿ ಈವರೆಗೂ ಗಣಿಗಾರಿಕೆ ಆರಂಭಿಸಿಲ್ಲ. ಗಣಿ ಚಟುವಟಿಕೆ ವಿಸ್ತರಣೆ ಮಾಡುವುದರ ಬದಲು ಟೌನ್‌ಶಿಪ್ ಮೇಲೆ ಹೂಡಿಕೆ ಮಾಡುವ ಅಗತ್ಯವೇನಿದೆ?
- ಅಗತ್ಯ ಮೂಲ ಸೌಕರ್ಯ ಯೋಜನೆಗಳನ್ನು ಕೈಗೆತ್ತಿಕೊಳ್ಳದೇ, ಉತ್ಪಾದಕತೆ ಹೆಚ್ಚಿಸುವತ್ತ ಗಮನ ಹರಿಸದೇ, ₹998.50 ಕೋಟಿಯ ಟೌನ್‌ಶಿಪ್ ಯೋಜನೆಯ ಅಗತ್ಯ ಏನಿದೆ ಎಂಬುದಕ್ಕೆ ಸ್ಪಷ್ಟನೆಯ ಅಗತ್ಯವಿದೆ

ಯೋಜನೆಯ ಹಿನ್ನೆಲೆ

ಎಚ್‌ಜಿಎಂಸಿಎಲ್ 2023 ರಲ್ಲಿ ₹1,000 ಕೋಟಿಯಲ್ಲಿ ಹಟ್ಟಿಯಲ್ಲಿ ಟೌನ್‌ಶಿಪ್ ನಿರ್ಮಾಣಕ್ಕಾಗಿ ಕರ್ನಾಟಕ ಗೃಹ ಮಂಡಳಿಗೆ (ಕೆಎಚ್‌ಬಿ) ಪ್ರಸ್ತಾವ ಕಳಹಿಸಿತ್ತು. ಮೊದಲ ಹಂತದಲ್ಲಿ ₹380 ಕೋಟಿ ವೆಚ್ಚದಲ್ಲಿ ಕಾರ್ಮಿಕರಿಗೆ 824 ಮನೆಗಳು, ರಸ್ತೆ, ಪಾರ್ಕಿಂಗ್, ಒಳಚರಂಡಿ, ಎಸ್‌ಟಿಪಿ, ಸಬ್‌ಸ್ಟೇಷನ್, ಯಜಿ ಕೇಬಲ್ ಮತ್ತಿತರ ನಾಗರಿಕ ಸೌಲಭ್ಯಗಳು, 130 ಹಾಸಿಗೆಗಳ ಆಸ್ಪತ್ರೆ, ಆಸ್ಪತ್ರೆ ಸಿಬ್ಬಂದಿಗೆ ವಸತಿ ಗೃಹಗಳು, ಎರಡು ಮಲ್ಟಿಪ್ಲೆಕ್ಸ್ ಒಳಗೊಂಡ ಕಮರ್ಷಿಯಲ್ ಕಾಂಪ್ಲೆಕ್ಸ್ ನಿರ್ಮಿಸುವ ಪ್ರಸ್ತಾಪ ಇತ್ತು. ಕರ್ನಾಟಕ ಗೃಹ ಮಂಡಳಿ 2023 ರ ಮೇ 26 ರಂದು ನಡೆದ 431 ನೇ ಆಡಳಿತ ಮಂಡಳಿ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ನೀಡಿತು.

ಎಚ್‌ಜಿಎಂಸಿಎಲ್ ಈ ಸಂಬಂಧ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಕಾರ್ಯದರ್ಶಿಗೆ 2023 ರ ಆಗಸ್ಟ್‌ನಲ್ಲಿ ಪತ್ರ ಬರೆದು ಮಾಹಿತಿ ತಿಳಿಸಿತು. ಆ ಪ್ರಸ್ತಾವಕ್ಕೆ ₹25 ಕೋಟಿಯಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣ ಯೋಜನೆಯನ್ನೂ ಸೇರಿಸಿ, ಅಂದಾಜು ವೆಚ್ಚವನ್ನು ₹405 ಕೋಟಿಗೆ ಪರಿಷ್ಕರಿಸಲಾಯಿತು. ಬಳಿಕ ಸಂಪುಟ ಅನುಮತಿಗಾಗಿ ಪ್ರಸ್ತಾವ ಸಲ್ಲಿಸಲಾಯಿತು. ಏತನ್ಮಧ್ಯೆ, ಗಣಿ ಮತ್ತು ಭೂವಿಜ್ಞಾನ ಸಚಿವರು, ಈ ಟೌನ್ ಶಿಪ್ ಯೋಜನೆಯನ್ನು ಲೋಕೋಪಯೋಗಿ ಇಲಾಖೆ ಮೂಲಕ ಕಾರ್ಯಗತಗೊಳಿಸಿ ಎಂದು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದರು.

ಇದರ ಬೆನ್ನಲ್ಲೇ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ₹998.50 ಕೋಟಿಗೆ ಸಮಗ್ರ ಯೋಜನಾ ವರದಿ ಸಲ್ಲಿಸಿದರು. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಈ ಯೋಜನೆಯನ್ನು ಲೋಕೋಪಯೋಗಿ ಇಲಾಖೆಯ ಪಿಆರ್‌ಎಎಂಸಿ ಅಡಿಯಲ್ಲಿ ಕಾರ್ಯಗತಗೊಳಿಸಬೇಕು ಎಂಬ ಷರತ್ತಿನ ಅಡಿ ಅನುಮೋದನೆ ನೀಡಿತು. ಟೌನ್‌ಶಿಪ್‌ಗೆ ರಾಜ್ಯ ಸರ್ಕಾರ ಹಣ ನೀಡುತ್ತಿಲ್ಲ.

ಎಡಗೈಗೂ 6 ಬಲಗೈಗೂ 6

ಒಂದನೇ ಪುಟದಿಂದ...

‘ನಮಗೂ ಸಮಾನ ಮೀಸಲಾತಿ ಇರಲಿ’ ಎಂದು ಬಲಗೈ ಸಮುದಾಯದ ಜಿ. ಪರಮೇಶ್ವರ ಮತ್ತು ಎಚ್.ಸಿ. ಮಹದೇವಪ್ಪ ಅವರು ಸಭೆಯಲ್ಲಿ ಕೋರಿಕೆ ಮುಂದಿಟ್ಟರೆ, ‘ನಾವೂ ದಲಿತರೆ. ಉಪ ಜಾತಿಗಳಿಗೆ ಮೀಸಲಾತಿ ಹಂಚಿಕೆ ವೇಳೆ ಭೋವಿ ಸಮುದಾಯಕ್ಕೆ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕು’ ಎಂದು ಬೋವಿ ಸಮುದಾಯದ ಶಿವರಾಜ್ ತಂಗಡಗಿ ಹೇಳಿದರು ಎಂದು ಗೊತ್ತಾಗಿದೆ.

‘ನಮ್ಮದು ಜಾತಿ ಪ್ರಮಾಣಪತ್ರ ಕೇಳುತ್ತಾರೆ. ಆದರೆ. ಮೂಲ ಜಾತಿ ಗೊತ್ತಿಲ್ಲದ ಕಾರಣಕ್ಕೆ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ನಮೂದಿಸಿದ್ದಾರೆ. ಈ ಗೊಂದಲ ಬಗೆಹರಿಯಲಿ’ ಎಂದು ಪರಮೇಶ್ವರ ಸಲಹೆ ನೀಡಿದರು ಎಂದು ಗೊತ್ತಾಗಿದೆ.

‘ನಾಗಮೋಹನದಾಸ್ ಆಯೋಗ ಮಾಡಿರುವ ಜಾತಿಗಳ ವರ್ಗೀಕರಣದ ಬಗ್ಗೆ ವಿಸ್ತಾರವಾಗಿ ಚರ್ಚಿಸುವ ಅಗತ್ಯವಿದೆ’ ಎಂದು ಸಮಾಜ ಕಲ್ಯಾಣ ಇಲಾಖೆ ಸಂಪುಟ ಸಭೆಗೆ ಟಿಪ್ಪಣಿ ನೀಡಿತ್ತು.

101 ಪರಿಶಿಷ್ಟ ಜಾತಿಗಳನ್ನು ಐದು ಗುಂಪುಗಳಾಗಿ ವಿಂಗಡಿಸಿ ಮೀಸಲಾತಿ ಹಂಚಿಕೆ ಮಾಡಿರುವ ಜೊತೆಗೆ ಇತರ ಐದು ಶಿಫಾರಸುಗಳನ್ನೂ ಮಾಡಿತ್ತು. 2024ರ ಅಕ್ಟೋಬರ್ 28ರಿಂದ ನೇಮಕಾತಿ ಆರಂಭವಾಗುವರೆಗೆ ವಯೋಮಿತಿ ಮೀರಿದವರಿಗೆ ವಯೋಮಿತಿ ಸಡಿಲಿಸಿ ಅವಕಾಶ ನೀಡಬೇಕು. ಒಂದು ಪ್ರವರ್ಗದಲ್ಲಿ ಭರ್ತಿಯಾಗದೆ ಉಳಿದ ಹುದ್ದೆಗಳನ್ನು ಕ್ಯಾರಿ ಫಾರ್ವರ್ಡ್ ನಿಯಮದಂತೆ ಭರ್ತಿ ಮಾಡಬೇಕು. ನಂತರವೂ ಸೂಕ್ತ ಅಭ್ಯರ್ಥಿ ಲಭ್ಯ ಇಲ್ಲದೇ ಇದ್ದರೆ, ಪರಿಶಿಷ್ಟ ಜಾತಿಯ ಮತ್ತೊಂದು ಪ್ರವರ್ಗಕ್ಕೆ ವರ್ಗಾವಣೆ ಮಾಡಬೇಕು. ಕೆಲವು ಜಾತಿಗಳ ಹೆಸರು ಅಪಹಾಸ್ಯಕ್ಕೆ ಈಡಾಗುತ್ತಿದೆ ಎಂಬ ಕಾರಣಕ್ಕೆ ಬದಲಿಸಿಕೊಳ್ಳಲು ಅಪೇಕ್ಷಿಸಿದರೆ ಅವಕಾಶ ಮಾಡಿಕೊಡಬೇಕು, ಮೂಲ ಜಾತಿ ಗೊತ್ತಿದ್ದರೂ ಜಾತಿ ಪಟ್ಟಿಯಲ್ಲಿ ಹೆಸರು ಇಲ್ಲದ ಕಾರಣಕ್ಕೆ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಜಾತಿ ಪ್ರಮಾಣಪತ್ರ ಪಡೆದುಕೊಂಡವರಿಗೆ, ಅವರ ಜಾತಿಯ ಬಗ್ಗೆ ಅಧ್ಯಯನ ನಡೆಸಿ ಜಾತಿ ಪಟ್ಟಿಯಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳಬೇಕು, ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂಬ ಹೆಸರಿನ ಜೊತೆಗೆ ತಮ್ಮ ಮೂಲಜಾತಿಯ ಹೆಸರು ತಿಳಿಸಿದ್ದಾರೆ. ಅವರಿಗೆ ಮೂಲಜಾತಿಯ ಪ್ರಮಾಣಪತ್ರ ನೀಡಲು ಕ್ರಮ ಕೈಗೊಳ್ಳಬೇಕೆಂದೂ ಸರ್ಕಾರಕ್ಕೆ ತನ್ನ ವರದಿಯಲ್ಲಿ ಆಯೋಗ ಶಿಫಾರಸು ಮಾಡಿತ್ತು.

‘ಟೊಟೊ ಪುರಸ್ಕಾರ’ಕ್ಕೆ ಕೃತಿ ಆಹ್ವಾನ

ಬೆಂಗಳೂರು: ‘ಟೊಟೊ ಪುರಸ್ಕಾರ’ಕ್ಕೆ ಸಾಹಿತ್ಯ ಕೃತಿಗಳನ್ನು ಆಹ್ವಾನಿಸಲಾಗಿದೆ.

ಈ ಪ್ರಶಸ್ತಿಯನ್ನು ಟಿ.ಎಫ್.ಎ. (ಟೊಟೊ ಫಂಡ್ಸ್ ದಿ ಆರ್ಟ್ಸ್) ಸ್ಥಾಪಿಸಿದ್ದು, ₹ 60 ಸಾವಿರ ನಗದು ಬಹುಮಾನ ಒಳಗೊಂಡಿದೆ.

ಬರಹಗಾರರು 18 ರಿಂದ 29 ವರ್ಷ ವಯಸ್ಸಿನವರಾಗಿರಬೇಕು. ಕಥೆ, ಕವಿತೆ ಅಥವಾ ನಾಟಕ ಪ್ರಕಾರದಲ್ಲಿ ಪ್ರವೇಶಗಳನ್ನು ಕಳುಹಿಸಬಹುದು. ಪ್ರವೇಶಗಳನ್ನು ಕಳುಹಿಸಲು ಸೆ.30 ಕೊನೆಯ ದಿನವಾಗಿದ್ದು, ಪ್ರವೇಶ ಪತ್ರವನ್ನು https://totofundsthearts.org/ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬರಹ ಮತ್ತು ಪ್ರವೇಶ ಪತ್ರವನ್ನು totokannada@gmail.com ಗೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಬಳಸದ ಭೂಮಿಗೂ ಬಾಡಿಗೆ: ಆಕ್ಷೇಪ

ಒಂದನೇ ಪುಟದಿಂದ...

ರಾಜ್ಯದಲ್ಲಿ 2,500 ಮೆಗಾವಾಟ್ ಸೌರವಿದ್ಯುತ್ ಉತ್ಪಾದನೆಯ ಗುರಿ ನೀಡಲಾಗಿತ್ತು. ರಾಜ್ಯದಲ್ಲಿ 2,050 ಮೆಗಾವಾಟ್ ಸೌರವಿದ್ಯುತ್ ಉತ್ಪಾದನೆ ಯಾಗುತ್ತಿದೆ. ಈ ಮೂಲಕ ಶೇ 82 ಸಾಧನೆ ಮಾಡಲಾಗಿದೆ. ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ ರಾಜ್ಯಗಳ ಸಾಧನೆ ಶೇ 8ರಿಂದ ಶೇ 34ರ ನಡುವೆ ಇದೆ ಎಂದು ವರದಿ ತಿಳಿಸಿದೆ.


ಕೆಆರ್‌ಇಡಿಎಲ್‌ಗೆ 293 ಎಕರೆ ಉಪಗುತ್ತಿಗೆ: ಹಿತಾಸಕ್ತಿ ಸಂಘರ್ಷ

2,000 ಮೆಗಾವಾಟ್ ಸಾಮರ್ಥ್ಯದ ಈ ಘಟಕವು 2019ರಲ್ಲಿ ವಾಣಿಜ್ಯ ಕಾರ್ಯಾಚರಣೆ ಆರಂಭಿಸಿತು. ಆದರೆ, ಈ ಯೋಜನೆಯಲ್ಲಿ ಕೆಲವೊಂದು ನ್ಯೂನತೆ ಇರುವುದನ್ನು ಲೆಕ್ಕಪರಿಶೋಧನಾ ವರದಿ ತಿಳಿಸಿದೆ.

ಈ ಯೋಜನೆಯನ್ನು ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮದ ಜತೆಗೂಡಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮವು (ಕೆಆರ್‌ಇಡಿಎಲ್) ನಡೆಸುತ್ತಿದೆ. ಈ ಘಟಕದ ಸಾಮರ್ಥ್ಯವನ್ನು 2,000 ಮೆಗಾವಾಟ್‌ನಿಂದ 2,060 ಮೆಗಾವಾಟ್‌ಗೆ ಹೆಚ್ಚಿಸಲು ಅನುಮೋದನೆ ನೀಡಬೇಕು ಎಂದು ಕೇಂದ್ರ ಸರ್ಕಾರವನ್ನು ನಿಗಮವು ಕೋರಿತ್ತು. ಇಲ್ಲಿ 60 ಮೆಗಾವಾಟ್ ಸಾಮರ್ಥ್ಯದ ಘಟಕವನ್ನು ಸ್ಥಾಪಿಸಲು ಕೆಆರ್‌ಇಡಿಎಲ್ ಬಯಸಿತ್ತು. ಈ ಯೋಜನೆಯ ಜಂಟಿ ಪಾಲುದಾರ ಆಗಿರುವ ಕೆಆರ್‌ಇಡಿಎಲ್ ಸೌರ ಯೋಜನೆ ಸ್ಥಾಪಿಸುವಂತಿಲ್ಲ ಎಂಬ ಕಾರಣ ನೀಡಿ ಕೇಂದ್ರ ಸರ್ಕಾರವು 2019ರ ಮಾರ್ಚ್‌ನಲ್ಲಿ ಈ ಪ್ರಸ್ತಾವ ತಿರಸ್ಕರಿಸಿತ್ತು. ಪಾರದರ್ಶಕ ಬಿಡ್ಡಿಂಗ್ ಮೂಲಕವೇ ಪ್ರಕ್ರಿಯೆ ನಡೆಸಬೇಕು ಎಂದು ಸೂಚಿಸಿತ್ತು.

ಆದಾಗ್ಯೂ, ನಿಗಮವು ಕೆಆರ್‌ಇಡಿಎಲ್‌ಗೆ ನಿರುಪಯುಕ್ತವಾದ 293.82 ಎಕರೆಯನ್ನು 2019ರ ಅಕ್ಟೋಬರ್‌ನಲ್ಲಿ ಉಪಗುತ್ತಿಗೆ ನೀಡಿತ್ತು. 50 ಮೆಗಾವಾಟ್‌ನ ಸೌರ ಯೋಜನೆ ಸ್ಥಾಪಿಸಲು ಅನುಮತಿ ನೀಡಿತ್ತು. ಇದು ಹಿತಾಸಕ್ತಿ ಸಂಘರ್ಷಕ್ಕೆ ಸಾಕ್ಷಿ ಎಂದು ಸಿಎಜಿ ವರದಿ ಆಕ್ಷೇಪ ವ್ಯಕ್ತಪಡಿಸಿದೆ.

ಡಿಪಿಆರ್ ಪ್ರಕಾರ, ನಿಗಮವು ಯೋಜನೆ ಅಭಿವೃದ್ಧಿಪಡಿಸುವವರಿಂದ ಪ್ರತಿ ಮೆಗಾವಾಟ್‌ಗೆ ₹27.27 ಲಕ್ಷ ಶುಲ್ಕ ಸಂಗ್ರಹಿಸಬೇಕಿತ್ತು. ಆದಾಗ್ಯೂ, ನಿಗಮವು 600 ಮೆಗಾವಾಟ್‌ಗೆ ₹27.27 ಲಕ್ಷ (ಪ್ರತಿ ಮೆಗಾ ವಾಟ್‌ಗೆ) ಹಾಗೂ 1,400 ಮೆಗಾವಾಟ್‌ಗೆ ₹29.025 ಲಕ್ಷ ಶುಲ್ಕ ಸಂಗ್ರಹಿಸಿತ್ತು. ಈ ಮೂಲಕ, ನಿಗಮವು ಹೆಚ್ಚುವರಿಯಾಗಿ ₹24.57 ಕೋಟಿ ಸಂಗ್ರಹ ಮಾಡಿತ್ತು. ವಿಭಿನ್ನ ಶುಲ್ಕ ವಿಧಿಸಲು ನಿಗಮವು ಅನುಮೋದನೆ ಪಡೆದಿರಲಿಲ್ಲ. ಈ ಮೂಲಕ, ಕೇಂದ್ರದ ಮಾರ್ಗಸೂಚಿ ಉಲ್ಲಂಘಿಸಿದೆ ಎಂದು ವರದಿ ಹೇಳಿದೆ.



ಸುಭಾಷಿತ

ಗುಣವನ್ನು ತಿಳಿದರೆ ಸಾಲದು. ಅದನ್ನು ಉಳ್ಳವರಾಗಲು ಯತ್ನಿಸಬೇಕು. ಅದನ್ನು ಅನುಷ್ಠಾನಕ್ಕೆ ತರಬೇಕು.

–ಅರಿಸ್ಟಾಟಲ್

ಸಂಪಾದಕೀಯ

ಮತದಾರರ ಪಟ್ಟಿಯಲ್ಲಿ ಅಕ್ರಮ ಆರೋಪಗಳ ನಿರ್ಲಕ್ಷ್ಯ ಸರಿಯಲ್ಲ

ಮತದಾರರ ಪಟ್ಟಿಯಲ್ಲಿನ ಅಕ್ರಮಗಳ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರು ನೀಡಿರುವ ಪ್ರತಿಕ್ರಿಯೆ ತೃಪ್ತಿಕರವಾಗಿಲ್ಲ. ಬೆಂಗಳೂರಿನ ಮಹದೇವಪುರ ವಿಧಾನಸಭಾ ಕ್ಷೇತ್ರದ ಮತಪಟ್ಟಿಯಲ್ಲಿನ ದೋಷಗಳನ್ನು ಉಲ್ಲೇಖಿಸಿ, ಮತದಾರರ ಪಟ್ಟಿ ತಯಾರಿಕೆಯಲ್ಲಿ ಅಕ್ರಮ ನಡೆದಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದರು. ಆ ಆರೋಪಗಳಿಗೆ ಉತ್ತರ ನೀಡುವುದಕ್ಕಾಗಿ ನಡೆಸಿದ ಸುದ್ದಿಗೋಷ್ಠಿಯಲ್ಲಿ, ಸೂಕ್ತ ಸಮಜಾಯಿಷಿ ನೀಡುವುದು ಆಯುಕ್ತರಿಗೆ ಸಾಧ್ಯವಾಗಿಲ್ಲ. ರಾಹುಲ್ ಗಾಂಧಿ ಮಾತ್ರವಲ್ಲದೆ, ಇತರರೂ ಮತದಾರರ ಪಟ್ಟಿಯ ವಿಶ್ವಾಸಾರ್ಹತೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದರು. ಆ ಎಲ್ಲ ಪ್ರಶ್ನೆಗಳಿಗೆ ಆಯೋಗ ಸೂಕ್ತ ಉತ್ತರ ನೀಡುತ್ತದೆಂದು ನಿರೀಕ್ಷಿಸಲಾಗಿತ್ತು. ಆದರೆ, ಜ್ಞಾನೇಶ್ ಕುಮಾರ್ ಅವರು ಆಯೋಗದ ಮೇಲಿನ ಆರೋಪಗಳನ್ನು ಸಾರಾಸಗಟಾಗಿ ತಳ್ಳಿಹಾಕುವುದರ ಜೊತೆಗೆ, ಅನಗತ್ಯ ಹೇಳಿಕೆಗಳನ್ನೂ ನೀಡಿದ್ದಾರೆ. ತಮ್ಮ ಆರೋಪಗಳಿಗೆ ಸಾಕ್ಷ್ಯಗಳನ್ನು ನೀಡುವಂತೆ ಹಾಗೂ ಲಿಖಿತ ಪ್ರಮಾಣಪತ್ರ ಸಲ್ಲಿಸುವಂತೆ ರಾಹುಲ್ ಗಾಂಧಿ ಅವರಿಗೆ ಸವಾಲು ಹಾಕಿರುವ ಅವರು, ಪ್ರಮಾಣಪತ್ರ ಸಲ್ಲಿಸದೆ ಹೋದಲ್ಲಿ ಕ್ಷಮೆಯಾಚಿಸುವಂತೆ ಆಗ್ರಹಿಸಿದ್ದಾರೆ. ಆಯೋಗದ ಕಾರ್ಯ ಚಟುವಟಿಕೆಯ ಬಗ್ಗೆ ಪ್ರಶ್ನೆಗಳನ್ನೆತ್ತುವ ರಾಜಕೀಯ ಮುಖಂಡರು, ನಾಗರಿಕರಿಗೆ ಗಡುವು ಗೊತ್ತುಪಡಿಸುವುದಕ್ಕೆ ಇಲ್ಲವೇ ಷರತ್ತುಗಳನ್ನು ವಿಧಿಸುವುದಕ್ಕೆ ಚುನಾವಣಾ ಆಯುಕ್ತರಿಗೆ ಯಾವ ಅಧಿಕಾರವಿದೆ? ಚುನಾವಣಾ ನಿಯಮಗಳು ಮತ್ತು ಪೇಟೆಂಟ್ ನಿಯಮಗಳಿಗೆ ಸಂಬಂಧಿಸಿದ ನಿಯಮ 20(3)(ಬಿ), ರಾಹುಲ್ ಗಾಂಧಿ ಅವರ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ. ಕಾಂಗ್ರೆಸ್ ಗೆಲುವು ಸಾಧಿಸಿರುವ ಕ್ಷೇತ್ರಗಳಲ್ಲಿನ ಮತಪಟ್ಟಿಗಳಲ್ಲೂ ಲೋಪಗಳಿವೆ ಎಂದು ಆರೋಪಿಸಿರುವ ಬಿಜೆಪಿ ನಾಯಕ ಅನುರಾಗ್ ಠಾಕೂರ್ ಅವರಿಂದ ಆಯೋಗ ಯಾವ ಪ್ರಮಾಣಪತ್ರವನ್ನೂ ಕೇಳಿಲ್ಲ. ಜ್ಞಾನೇಶ್ ಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ಬಳಸಿರುವ ಭಾಷೆ ಮತ್ತು ಧ್ವನಿ, ಸಾಂವಿಧಾನಿಕ ಸಂಸ್ಥೆಯೊಂದರ ಅಧಿಕಾರಿಗೆ ತಕ್ಕುದಾಗಿಲ್ಲ. ಅವರ ಮಾತು, ಸಾಂವಿಧಾನಿಕ ಪರಿಭಾಷೆಗಿಂತಲೂ ಹೆಚ್ಚಾಗಿ ರಾಜಕೀಯದ ಭಾಷೆಯಂತಿತ್ತು; ಗ್ರಹಿಕೆಗಿಂತಲೂ ಮಿಗಿಲಾದ ಪೂರ್ವಗ್ರಹವನ್ನು ಹಾಗೂ ಅರ್ಥೈಸಿಕೊಳ್ಳುವುದಕ್ಕೆ ಬದಲಾಗಿ ತಿರಸ್ಕರಿಸುವ ಧಾಟಿಯನ್ನು ಹೊಂದಿತ್ತು.



> ಮತದಾರರ ಪಟ್ಟಿಯಲ್ಲಿ ದೋಷಗಳಿವೆ ಎನ್ನುವ ಆರೋಪದ ಬಗ್ಗೆ ಉತ್ತರಿಸುವುದು ಚುನಾವಣಾ ಆಯೋಗದ ಕರ್ತವ್ಯ. ಪ್ರಶ್ನೆ ಕೇಳಿದವರನ್ನೇ ಕಟಕಟೆಯಲ್ಲಿ ನಿಲ್ಲಿಸುವ ಪ್ರಯತ್ನ ಸರಿಯಾದುದಲ್ಲ.

ಮನೆಯ ಸಂಖ್ಯೆಯನ್ನು ‘ಸೊನ್ನೆ’ ಎಂದು ದಾಖಲಿಸಿರುವ ನಮೂದುಗಳು ಹಾಗೂ ನಕಲಿ ಹೆಸರುಗಳು ದೊಡ್ಡ ಪ್ರಮಾಣದಲ್ಲಿವೆ ಎನ್ನುವ ಆರೋಪಗಳನ್ನು ಉತ್ಪ್ರೇಕ್ಷೆ ಎಂದು ತಳ್ಳಿಹಾಕಿರುವ ಚುನಾವಣಾ ಆಯುಕ್ತರು, ವ್ಯತ್ಯಾಸಗಳೇನಾದರೂ ಇದ್ದಲ್ಲಿ ಮತಪಟ್ಟಿ ಅಂತಿಮಗೊಳ್ಳುವ ಮೊದಲು ಸರಿಪಡಿಸುವ ಅವಕಾಶ ರಾಜಕೀಯ ಪಕ್ಷಗಳಿಗಿದೆ ಎಂದು ವಾದಿಸಿದ್ದಾರೆ. ಆದರೆ, ರಾಹುಲ್ ಗಾಂಧಿ ಅವರು ಉಲ್ಲೇಖಿಸಿರುವ ಮತದಾರರ ಪಟ್ಟಿಯಲ್ಲಿ ಉತ್ಪ್ರೇಕ್ಷೆಯ ಸಂಗತಿಗಳೇನೂ ಕಾಣಿಸುತ್ತಿಲ್ಲ ಹಾಗೂ ಆರೋಪಕ್ಕೆ ಸಂಬಂಧಿಸಿದಂತೆ ಆಯೋಗ ಕೇಳುತ್ತಿರುವ ಸಾಕ್ಷ್ಯ, ಅದು ಸಿದ್ಧಪಡಿಸಿರುವ ದಾಖಲೆಗಳಲ್ಲೇ ಇದೆ. ನಿರ್ವಸಿತರ ವಿಳಾಸವನ್ನು ‘ಮನೆ ಸಂಖ್ಯೆ ಸೊನ್ನೆ’ ಎಂದು ಗುರ್ತಿಸುವ ವಿಶ್ಲೇಷಣೆ ನಂಬಿಕೆಗೆ ಅರ್ಹವಾಗಿಲ್ಲ. ಮತದಾನದ ವಿಡಿಯೊಗಳನ್ನು ಸಾರ್ವಜನಿಕವಾಗಿ ಬಿಡುಗಡೆಗೊಳಿಸುವುದರಿಂದ ಮತದಾರರ ಖಾಸಗೀತನಕ್ಕೆ ಧಕ್ಕೆಯಾಗುತ್ತದೆ ಎನ್ನುವ ಹೇಳಿಕೆಯೂ ಒಪ್ಪತಕ್ಕದ್ದಲ್ಲ. ಡಿಜಿಟಲ್ ಮತಪಟ್ಟಿಗಳ ಒದಗಿಸುವಿಕೆ ಹಾಗೂ ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಗೆ ಸಂಬಂಧಿಸಿದ ನಿರ್ದಿಷ್ಟ ಪ್ರಶ್ನೆಗಳನ್ನೂ ಆಯೋಗ ನಿರ್ಲಕ್ಷಿಸಿದೆ.

ರಾಹುಲ್ ಗಾಂಧಿ ಅವರು ಬಳಸಿರುವ ‘ಮತ ಕಳವು’ ಪದ ಪ್ರಯೋಗ ಅನುಚಿತ ಹಾಗೂ ದಾರಿತಪ್ಪಿಸುವಂತಿದೆ ಎಂದು ಚುನಾವಣಾ ಆಯೋಗ ಆಕ್ಷೇಪ ವ್ಯಕ್ತಪಡಿಸಿದೆ. ಆಯೋಗದ ಕಾರ್ಯಾಚರಣೆಯ ಬಗ್ಗೆ ಟೀಕೆ ಟಿಪ್ಪಣಿಗಳು ವ್ಯಕ್ತವಾದಾಗ, ಸರ್ಕಾರ ಮತ್ತು ಆಡಳಿತ ಪಕ್ಷದ ಬಗ್ಗೆ ಸಹಾನುಭೂತಿಯಿಂದಲೂ ಹಾಗೂ ವಿರೋಧ ಪಕ್ಷಗಳ ಕುರಿತು ಕಠಿಣವಾಗಿಯೂ ಚುನಾವಣಾ ಆಯೋಗ ವರ್ತಿಸುತ್ತಿದೆ. ತನ್ನ ಕರ್ತವ್ಯಕ್ಕೆ ಸಂಬಂಧಿಸಿದಂತೆ ಪಾರದರ್ಶಕತೆ ಹಾಗೂ ಹೊಣೆಗಾರಿಕೆಯೊಂದಿಗೆ ಆಯೋಗ ರಾಜಿ ಮಾಡಿಕೊಳ್ಳುವಂತಿಲ್ಲ. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ನಡುವೆ ತಾರತಮ್ಯ ಮಾಡುತ್ತಿಲ್ಲ ಎಂದು ಆಯೋಗ ಹೇಳುತ್ತಿದೆ. ಆದರೆ, ಅದರ ನಿಷ್ಪಕ್ಷಪಾತ ಕಾರ್ಯ ಚಟುವಟಿಕೆಯ ಬಗ್ಗೆ ವಿರೋಧ ಪಕ್ಷಗಳಿಗೆ ಹಾಗೂ ಬಹಳಷ್ಟು ನಾಗರಿಕರಿಗೆ ನಂಬಿಕೆ ಉಳಿದಿಲ್ಲ. ಮುಖ್ಯ ಚುನಾವಣಾಧಿಕಾರಿ ಅವರ ಸುದ್ದಿಗೋಷ್ಠಿ, ದಾಖಲೆಗಳಲ್ಲಿನ ಲೋಪಗಳನ್ನು ಸರಿಪಡಿಸುವುದಕ್ಕೆ ಚಾಲನೆ ನೀಡುವುದರ ಬದಲಾಗಿ, ಆರೋಪಗಳನ್ನು ಮತ್ತಷ್ಟು ದೃಢಪಡಿಸುವಂತೆ ಆಗಿರುವುದು ದುರದೃಷ್ಟಕರ.

ಚುರುಮುರಿ... ಜಾಲಡಾ

ಕಟ್ಟುವ ಕೆಲಸವಿನ್ನೂ ಬಾಕಿಯಿದೆ



ಹಂಚಿಕೊಂಡು ಬದುಕುವ ನೈತಿಕ ಪಾಠವನ್ನು ದಲಿತ ಚಿಂತಕರು/ ಚಳವಳಿಗಳು ಸಮಾಜಕ್ಕೆ ದೇಶಕ್ಕೆ ಹೇಳುವ ಹಕ್ಕನ್ನು ಪಡೆದುಕೊಂಡಿದ್ದು, ಈಗ ತಮ್ಮೊಳಗೇ ಪಾಲನ್ನು ಹಂಚಿಕೊಳ್ಳುವ ಚಾರಿತ್ರಿಕ ಸನ್ನಿವೇಶ ಬಂದಿದೆ. ಈ ಹಂಚಿಕೆ ಕಾರ್ಯ ತಾಯ್ತನದ ಭಾವದಲ್ಲಿ ಮುಗಿಯಲಿ. ಒಳಪಂಗಡಗಳೆಲ್ಲ ಕೂಡಿ ಮತ್ತೊಮ್ಮೆ ಏಕೀಕೃತ ದಲಿತ ಚಳವಳಿಯಾಗಿ ಹೊಮ್ಮಲಿ. ಮೀಸಲಾತಿಯ ಆಚೆ ದಲಿತ ಚಳವಳಿ ಉಳಿದ ಚಳವಳಿಗಳ ಜತೆಗೂಡಿ ಕರ್ನಾಟಕವನ್ನು ಕಟ್ಟುವ ಹೊಣೆಗಾರಿಕೆಯನ್ನು ನಿಭಾಯಿಸುವ ಕೆಲಸವಿನ್ನೂ ಬಾಕಿಯಿದೆ.

ರಹಮತ್ ತರೀಕೆರೆ, ಸಾಹಿತಿ, ಫೇಸ್‌ಬುಕ್‌ನಿಂದ

ಕಿಡಿನುಡಿ



ತೆರಿಗೆ ಹೆಸರಲ್ಲಿ ಜನರನ್ನು ಸುಲಿಗೆ ಮಾಡುತ್ತಿದ್ದರೂ ಕೇಂದ್ರ ಸರ್ಕಾರ ಅತಿಹೆಚ್ಚು ಸಾಲ ಮಾಡಿದ್ದೇಕೆ? ಯಾರ ಜೇಬು ತುಂಬಿಸುವುದಕ್ಕೆ? ಬಿಜೆಪಿ ಈ ಬಗ್ಗೆ ಮಾತನಾಡುವುದೇ? ಪ್ರಧಾನಿ ಕೇವಲ ಒಂದೇ ಒಂದಾದರೂ ಪತ್ರಿಕಾಗೋಷ್ಠಿ ನಡೆಸಿ ಈ ಬೃಹತ್ ಸಾಲದ ಕಾರಣವನ್ನು ತಿಳಿಸುವರೇ?

ಪ್ರಿಯಾಂಕ್ ಖರ್ಗೆ, ಐ.ಟಿ–ಬಿಟಿ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 20-8-2000

• 51 ಮಂದಿ ಟಾಡಾ ಬಂದಿಗಳ ಮೊಕದ್ದಮೆ ವಾಪಸ್ಸಿಗೆ ಅಸ್ತು

ಮೈಸೂರು, ಆಗಸ್ಟ್ 19– ಟಾಡಾ ಕಾಯ್ದೆಯನ್ವಯ ಬಂಧನದಲ್ಲಿರುವ ಮತ್ತು ಜಾಮೀನಿನ ಮೇಲೆ ಬಿಡುಗಡೆಯಾಗಿರುವ ವೀರಪ್ಪನ್‌ನ ಎಲ್ಲ ಸಹಚರರು ಮತ್ತು ಅವನಿಗೆ ನೆರವು ನೀಡಿದವರ ಮೇಲಿನ ಆರೋಪಗಳನ್ನು ಹಿಂದಕ್ಕೆ ಪಡೆಯಲು ಇಲ್ಲಿನ ವಿಶೇಷ ಟಾಡಾ ನ್ಯಾಯಾಲಯ ಅನುಮತಿ ನೀಡಿದೆ.

ನ್ಯಾಯಾಧೀಶರ ಈ ತೀರ್ಪಿನಿಂದಾಗಿ ಮೈಸೂರು ಸೆಂಟ್ರಲ್ ಜೈಲಿನಲ್ಲಿರುವ 51 ಟಾಡಾ ಬಂದಿಗಳು, ಜಾಮೀನು ಪಡೆದು ಹೊರಬರಲು ಸಾಧ್ಯವಾಗುತ್ತದೆ.

• ವಿವಾದದಲ್ಲಿ ದಾಂಡೇಲಿ ಮಿನಿ ಜಲವಿದ್ಯುತ್

ಕಾರವಾರ, ಆಗಸ್ಟ್ 19– ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಬಳಿಯ ಮೌಳಂಗ ಹತ್ತಿರ ಕಾಳಿ ನದಿಗೆ ಅಣೆಕಟ್ಟು ಕಟ್ಟಿ ವಿದ್ಯುತ್ ಉತ್ಪಾದಿಸಲು ಉದ್ದೇಶಿಸಿರುವ ‘ದಾಂಡೇಲಿ ಮಿನಿ ಜಲವಿದ್ಯುತ್ ಯೋಜನೆ’ಯಿಂದ ಪರಿಸರಕ್ಕೆ ಯಾವುದೇ ಧಕ್ಕೆಯಾಗುವುದಿಲ್ಲ ಎಂದು ಯೋಜನೆಯ ಕಾರ್ಯ ನಿರ್ವಾಹಕ ಸಾರಾಂಶದಲ್ಲಿ ತಿಳಿಸಲಾಗಿದೆ.

75 ವರ್ಷಗಳ ಹಿಂದೆ

ಭಾನುವಾರ, 20-8-1950

• ಮನೆ ಮಾರುವವರ ಹಂಬಲ; ಕೊಳ್ಳುವವರ ಅಭಾವ

ಟೋಕಿಯೊ, ಆಗಸ್ಟ್ 19– ಯುದ್ಧ ಭೀತಿಯಿಂದ ಗಾಬರಿಗೊಂಡಿರುವ ಟೋಕಿಯೊ ನಗರ ನಿವಾಸಿಗಳು ತಮ್ಮ ಮನೆಗಳನ್ನು ಮಾರಲು ಮುಂದೆ ಬಂದಿದ್ದಾರೆ. ನಗರದ ವಿಸ್ತರಣೆಗಳಲ್ಲೋ, ಸುತ್ತಮುತ್ತಲ ಹಳ್ಳಿಗಾಡಿನಲ್ಲೋ ಇದ್ದರೆ ತಾವು ರಕ್ಷಿತರಾಗುತ್ತೇವೆಂಬ ಆಸೆಯಿಂದ ಈ ನಡವಳಿಕೆ. ಆದರೆ, ಮನೆ ಕೊಳ್ಳಲು ಯಾರೂ ಇಚ್ಛಿಸುತ್ತಿಲ್ಲ. ಸ್ಥಿರ ಸ್ವತ್ತಿನ ವ್ಯಾಪಾರ ತೀರ ಕೆಳಮಟ್ಟಕ್ಕೆ ಇಳಿದಿದೆ ಎಂದು ಅಧಿಕಾರಿಯೊಬ್ಬರ ಪರಿಶೀಲನೆಯಿಂದ ವಿದಿತವಾಗಿದೆ ಎಂದು ಕಯೋಡೊ ಸುದ್ದಿಸಂಸ್ಥೆ ವರದಿ ಮಾಡಿದೆ.

ಕ್ರಿಕೆಟ್ ಪ್ರೀತಿ ಕುರುಡಾಯಿತೆ?



ವಿಶ್ಲೇಷಣೆ

ಗಿರೀಶ ದೊಡ್ಡಮನಿ

> ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಕ್ರಿಕೆಟ್‌ಪ್ರೇಮಿಗಳ ಅಭಿಮಾನವನ್ನು ತನ್ನ ಬ್ರ್ಯಾಂಡ್ ಮೌಲ್ಯವನ್ನಾಗಿ ಬದಲಿಸಿಕೊಂಡಿದೆ. ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ, ಆಟದ ಬಗೆಗಿನ ಅಭಿಮಾನವೇ ಆರ್‌ಸಿಬಿ ಕುರಿತ ಅಂಧಾಭಿಮಾನವಾಗಿ ರೂಪುಗೊಂಡಿದೆಯೇ ಎನ್ನುವ ಅನುಮಾನ ಉಂಟಾಗುತ್ತದೆ.

ಕರ್ನಾಟಕ ತಂಡ ಚೊಚ್ಚಲ ರಣಜಿ ಟ್ರೋಫಿ ಗೆದ್ದ ಸಂಭ್ರಮ ಹಾಗೂ ಟೆಸ್ಟ್ ಪಂದ್ಯವೊಂದಕ್ಕೆ ಮೊದಲ ಬಾರಿ ಚಿನ್ನಸ್ವಾಮಿ ಕ್ರೀಡಾಂಗಣ ಆತಿಥ್ಯ ವಹಿಸಿದ ಸಿಹಿ ನೆನಪಿನ ಸಂಭ್ರಮ, ಎರಡು ಮಹತ್ವದ ವಿದ್ಯಮಾನಗಳು ದಾಖಲಾದುದು 1974ರಲ್ಲಿ. ಆ ಯುಗಳ ಸಂಭ್ರಮದ ಚಿನ್ನದ ಹಬ್ಬಕ್ಕೆ ಕಳೆದ ವರ್ಷವಷ್ಟೇ ಸಾಕ್ಷಿಯಾಗಿದ್ದ ಚಿನ್ನಸ್ವಾಮಿ ಕ್ರೀಡಾಂಗಣ, ಹಲವಾರು ಆಟಗಾರರ ಮನಸ್ಸಿನಲ್ಲಿ ಅವಿಸ್ಮರಣೀಯ ನೆನಪುಗಳನ್ನು ದಾಖಲಿಸಿದೆ. ಅದೇ ರೀತಿ, ಕ್ರಿಕೆಟ್ ಅಭಿಮಾನಿಗಳ ಮನಗಳಲ್ಲಿಯೂ ಅಚ್ಚಳಿಯದ ಸ್ಮರಣೆಗಳಿವೆ. ಈ ಚೆಂದದ ಕ್ರೀಡಾಂಗಣದ ಸುತ್ತ ಕರ್ನಾಟಕದ ಕ್ರಿಕೆಟ್ ಸಂಸ್ಕೃತಿಯೂ ಬೆಳೆದು ನಿಂತಿದೆ.

ದೇಶದ ಬೇರಾವುದೋ ಕ್ರೀಡಾಂಗಣದಲ್ಲಿ ಕೊನೆಕ್ಷಣದಲ್ಲಿ ಸಮಸ್ಯೆಗಳುಂಟಾಗಿ ಪಂದ್ಯಗಳನ್ನು ಸ್ಥಳಾಂತರಿಸುವ ಸವಾಲು ಎದುರಾದಾಗಲೆಲ್ಲ ‘ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ’ಯ (ಬಿಸಿಸಿಐ) ಮೊದಲ ಆಯ್ಕೆ ಚಿನ್ನಸ್ವಾಮಿ ಕ್ರೀಡಾಂಗಣವೇ ಆಗಿರುತ್ತಿತ್ತು. ಮಳೆ ಬಂದು ನಿಂತ 45 ನಿಮಿಷದಲ್ಲಿಯೇ ಮತ್ತೆ ಪಂದ್ಯಕ್ಕೆ ಕ್ರೀಡಾಂಗಣವನ್ನು ಸಜ್ಜುಗೊಳಿಸುವ ಇಲ್ಲಿನ ‘ಸಬ್ ಏರ್ ಸಿಸ್ಟಮ್’ ತಂತ್ರಜ್ಞಾನ ದೇಶ, ವಿದೇಶಗಳ ಕ್ರಿಕೆಟ್ ಆಡಳಿತಗಾರರನ್ನು ಸೆಳೆದಿತ್ತು. ಇದೆಲ್ಲಕ್ಕಿಂತ ಹೆಚ್ಚಾಗಿ, ಇಲ್ಲಿ ಯಾವುದೇ ಪಂದ್ಯ ಇರಲಿ; ಗಮನಾರ್ಹ ಸಂಖ್ಯೆಯಲ್ಲಿ ಪ್ರೇಕ್ಷಕರ ಕಲರವ ಇದ್ದೇ ಇರುತ್ತಿತ್ತು ಎಂಬುದು ವಿಶೇಷ. ಟೆಸ್ಟ್, ಐಪಿಎಲ್ ಅಥವಾ ಸೀಮಿತ ಓವರ್‌ಗಳ ಪಂದ್ಯಗಳಷ್ಟೇ ಅಲ್ಲ, ಮಹಿಳೆಯರ ಕ್ರಿಕೆಟ್ ಪಂದ್ಯಗಳಿಗೂ ಇಲ್ಲಿಯ ಅಭಿಮಾನಿಗಳ ಹಾಜರಿ ಗಮನ ಸೆಳೆಯುತ್ತದೆ. ಹೋದ ಸಲ ‘ಮಹಿಳಾ ಪ್ರೀಮಿಯರ್ ಲೀಗ್’ (ಡಬ್ಲ್ಯುಪಿಎಲ್) ಟೂರ್ನಿಯ ಪ್ರತಿ ಪಂದ್ಯಕ್ಕೂ ಸರಾಸರಿ 20 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಸೇರಿದ್ದರು.

ಎಲ್ಲವೂ ಸರಿಹೋದರೆ, ಮುಂದಿನ ತಿಂಗಳು ಆರಂಭವಾಗಲಿರುವ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಉದ್ಘಾಟನೆಯೂ ಸೇರಿದಂತೆ ಕೆಲವು ಪ್ರಮುಖ ಪಂದ್ಯಗಳನ್ನು ನಡೆಸುವ ಅವಕಾಶ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ದೊರೆಯಲಿದೆ. ಭಾರತ ಮತ್ತು ಶ್ರೀಲಂಕಾದ ಜಂಟಿ ಆತಿಥ್ಯದಲ್ಲಿ ನಡೆಯುವ ಈ ಟೂರ್ನಿಯ ಪಂದ್ಯಗಳನ್ನು ಕೊಲಂಬೊ ಸೇರಿದಂತೆ ಐದು ನಗರಗಳಲ್ಲಿ (ಬೆಂಗಳೂರು, ಇಂದೋರ್, ಗುವಾಹಟಿ, ವಿಶಾಖಪಟ್ಟಣ) ಆಯೋಜಿಸಲು ನಿರ್ಧರಿಸಲಾಗಿದೆ. ಬೆಂಗಳೂರು ಬಿಟ್ಟರೆ ಭಾರತದ ಉಳಿದ ನಗರಗಳು ಎರಡನೇ ಹಂತದ ತಾಣಗಳಾಗಿವೆ. ದೇಶದಲ್ಲಿರುವ ಬೇರೆ ಯಾವುದೇ ಮಹಾನಗರಕ್ಕೂ ಆಯೋಜನೆ ಅವಕಾಶ ಸಿಕ್ಕಿಲ್ಲ. ಇದು ಕ್ರಿಕೆಟ್ ವಿಷಯದಲ್ಲಿ ಬೆಂಗಳೂರಿನ ಮಹತ್ವವನ್ನು ತೋರಿಸುತ್ತದೆ.

ಅನಿರೀಕ್ಷಿತ ಘಟನೆಯಿಂದಾಗಿ, ವಿಶ್ವಕಪ್ ಪಂದ್ಯಗಳು ಬೇರೆಡೆ ಸ್ಥಳಾಂತರಗೊಳ್ಳುವ ಸಾಧ್ಯತೆ ಇದೆ. ಅದಕ್ಕೆ ಕಾರಣ, ಜೂನ್ 4ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಐಪಿಎಲ್ ಟ್ರೋಫಿ ಗೆಲುವಿನ ಸಂಭ್ರಮಾಚರಣೆ ಸಂದರ್ಭದಲ್ಲಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣ. ಆ ದುರ್ಘಟನೆಯಲ್ಲಿ 11 ಅಭಿಮಾನಿಗಳು ಅಸುನೀಗಿದ್ದರು. ರಾಜ್ಯ ಸರ್ಕಾರ, ಆರ್‌ಸಿಬಿ, ಡಿಎನ್‌ಎ ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ತರಾತುರಿಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದು ಹಾಗೂ ಭದ್ರತಾ ಲೋಪಗಳಿಂದಾಗಿ ಈ ದುರ್ಘಟನೆ ನಡೆಯಿತು ಎಂದು ಸಾರ್ವಜನಿಕ ವಲಯದಿಂದ ಆಕ್ರೋಶ ವ್ಯಕ್ತವಾಯಿತು. ಆದರೆ, ರಾಜ್ಯ ಸರ್ಕಾರ ನಿಯೋಜಿಸಿದ ತನಿಖಾ ಸಮಿತಿಯು ಇತ್ತೀಚೆಗೆ ವರದಿ ಸಲ್ಲಿಸಿದೆ. ಅದರಲ್ಲಿ, ದೊಡ್ಡ ಕಾರ್ಯಕ್ರಮ ಆಯೋಜನೆಗೆ ಯಾವ ಸಿದ್ಧತೆಗಳು ಇರಬೇಕು ಎಂಬ ಬಗ್ಗೆ ಶಿಫಾರಸು ಮಾಡಿದೆ.

ಕ್ರೀಡಾಂಗಣದಲ್ಲಿ ಅಗ್ನಿಶಾಮಕ ಇಲಾಖೆಯ ನಿಯಮಾವಳಿಯ ಪ್ರಕಾರ ವ್ಯವಸ್ಥೆಗಳಿಲ್ಲವೆಂಬ ಕಾರಣಕ್ಕೆ ವಿದ್ಯುತ್ ಸಂಪರ್ಕವನ್ನೂ ಕಡಿತಗೊಳಿಸಲಾಗಿತ್ತು. ಈ ಎಲ್ಲ ಕಾರಣಗಳಿಂದಾಗಿ ಪೊಲೀಸ್ ಇಲಾಖೆಯು ಇಲ್ಲಿ ಪಂದ್ಯಗಳ ಆಯೋಜನೆಗೆ ಅನುಮತಿ ನೀಡುತ್ತಿಲ್ಲ. ಅದಕ್ಕಾಗಿಯೇ ‘ಮಹಾರಾಜ ಟ್ರೋಫಿ’ ಟಿ20 ಕ್ರಿಕೆಟ್ ಟೂರ್ನಿಯನ್ನು ಮೈಸೂರಿಗೆ ಸ್ಥಳಾಂತರಿಸಲಾಯಿತು. ಇದೀಗ ಮಹಿಳಾ ವಿಶ್ವಕಪ್ ಪಂದ್ಯಗಳೂ ಕೇರಳದ ತಿರುವನಂತಪುರ ಕ್ರೀಡಾಂಗಣಕ್ಕೆ ಸ್ಥಳಾಂತರಗೊಳ್ಳುವ ಸಾಧ್ಯತೆಗಳಿವೆ. ಜನರಿಲ್ಲದೇ ಪಂದ್ಯಗಳನ್ನು ನಡೆಸಲಾಗುವುದು ಎಂದು ಕೆಎಸ್‌ಸಿಎ ಮಾಡಿದ ಮನವಿಗೂ ಸರ್ಕಾರ ಅನುಮತಿ ನೀಡಿಲ್ಲ. ಇದೀಗ ಮೈಸೂರಿನಲ್ಲಿಯೂ ಜನರಿಲ್ಲದ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯುತ್ತಿವೆ. ಕರ್ನಾಟಕದ ಕ್ರಿಕೆಟ್ ಇತಿಹಾಸದಲ್ಲಿ ಅಭಿಮಾನಿಗಳನ್ನು ದೂರವಿಟ್ಟು ಪಂದ್ಯಗಳನ್ನು ಆಯೋಜಿಸುವ ಪರಿಸ್ಥಿತಿ ಬಂದಿದ್ದು (ಕೋವಿಡ್ ಕಾಲಘಟ್ಟ ಹೊರತುಪಡಿಸಿ) ಇದೇ ಮೊದಲು.

ಕ್ರಿಕೆಟ್ ಅಷ್ಟೇ ಅಲ್ಲ; ಕಂಠೀರವ ಕ್ರೀಡಾಂಗಣದಲ್ಲಿ ಫುಟ್‌ಬಾಲ್ ಪಂದ್ಯಗಳು ನಡೆದಾಗಲೂ ಇಂತಹದೇ ಅಭಿಮಾನದ ಹೊಳೆ ಹರಿಯುತ್ತದೆ. ಇತ್ತೀಚೆಗೆ ಒಲಿಂಪಿಯನ್ ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಅವರ ಕ್ಲಾಸಿಕ್ ಚಾಂಪಿಯನ್‌ಷಿಪ್‌ಗೂ 14ರಿಂದ 16 ಸಾವಿರ ಜನರು ಸೇರಿದ್ದರು. ಇದು ಬೆಂಗಳೂರಿನವರ ಕ್ರೀಡಾಪ್ರೇಮಕ್ಕೆ ಸಾಕ್ಷಿ. ಕನ್ನಡಿಗರ ಕ್ರೀಡಾಪ್ರೇಮವನ್ನು ತನ್ನತ್ತ ಸಂಪೂರ್ಣವಾಗಿ ಸೆಳೆದುಕೊಳ್ಳುವಲ್ಲಿ ‘ಆರ್‌ಸಿಬಿ’ ಯಶಸ್ವಿಯಾಯಿತು. ಸತತ 17 ವರ್ಷಗಳವರೆಗೆ ಐಪಿಎಲ್‌ನಲ್ಲಿ ಒಂದೂ ಟ್ರೋಫಿ ಗೆಲ್ಲದಿದ್ದರೂ ಅಭಿಮಾನಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸುತ್ತ ಹೋಗಿರುವುದು ತಂಡದ ಚಾಣಾಕ್ಷತೆಗೆ ಹಿಡಿದಿರುವ ಕನ್ನಡಿ. ಕರ್ನಾಟಕದ ಕ್ರಿಕೆಟ್ ಎಂದರೆ ಆರ್‌ಸಿಬಿ ಎನ್ನುವ ಮಟ್ಟಿಗೆ ಅದರ ಬ್ರ್ಯಾಂಡ್ ಬೆಳೆಸಿಕೊಂಡಿದೆ; ಟೀಕೆಗಳನ್ನೇ ಯಶಸ್ಸಿನ ಮೆಟ್ಟಿಲುಗಳನ್ನಾಗಿ ಮಾಡಿಕೊಂಡಿದೆ.

ತಂಡದಲ್ಲಿ ಕನ್ನಡಿಗರು ಇಲ್ಲದಿರುವ ಬಗ್ಗೆ ವ್ಯಕ್ತವಾದ ಟೀಕೆಗಳಿಗೆ ‘ಬಿಡ್ ಪ್ರಕ್ರಿಯೆಯ ಡೈನಾಮಿಕ್ಸ್’ ಎಂದ ಆರ್‌ಸಿಬಿಯು– ಕ್ರಿಸ್ ಗೇಲ್, ವಿರಾಟ್ ಕೊಹ್ಲಿ, ಎಬಿ ಡಿವಿಲಿಯರ್ಸ್ ಅವರಂತಹ ದಿಗ್ಗಜರಿಗೆ ಒಂದಿಷ್ಟು ಕನ್ನಡ ಪದಗಳನ್ನು ಕಲಿಸಿತು. ಹೋದ ವರ್ಷ ನಾಯಕ ರಜತ್ ಪಾಟೀದಾರ್ ಅವರು ‘ಅಭಿಮಾನಿ ದೇವರುಗಳು’ ಎಂದು ಹೇಳುವ ಮೂಲಕ ಕನ್ನಡಿಗರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿದರು. ಭಾರತ ತಂಡದ ಸೂಪರ್‌ಸ್ಟಾರ್ ವಿರಾಟ್ ಕೊಹ್ಲಿ ಅವರ ಅಭಿಮಾನಿ ಬಳಗವೂ ಆರ್‌ಸಿಬಿಯ ಶಕ್ತಿ ವೃದ್ಧಿಸಿತು. ವಿದೇಶಗಳಲ್ಲಿಯೂ ಆರ್‌ಸಿಬಿ ಫ್ಯಾನ್ ಕ್ಲಬ್‌ಗಳು ತಲೆ ಎತ್ತಿದವು.

ಯುವಪೀಳಿಗೆಯಲ್ಲಿ ಆರ್‌ಸಿಬಿಯ ಕ್ರೇಜ್ ಮೇರೆ ಮೀರಿತು. ರಣಜಿ, ದುಲೀಪ್ ಟ್ರೋಫಿ ಮತ್ತಿತರ ಟೂರ್ನಿಗಳ ಪಂದ್ಯಗಳು ಇಲ್ಲಿ ನಡೆದಾಗಲೂ ಸೇರುತ್ತಿದ್ದ ಯುವ ಅಭಿಮಾನಿಗಳು ‘ಆರ್‌ಸಿಬಿ... ಆರ್‌ಸಿಬಿ...’ ಎಂದೇ ಕೂಗುತ್ತ ದಿನಗಳೆಯುತ್ತಿದ್ದರು. ಆ ದೇಶಿ ಪಂದ್ಯಗಳಲ್ಲಿ ಆಡುವ ತಂಡಗಳಲ್ಲಿ ಆರ್‌ಸಿಬಿಯ ಆಟಗಾರರು ಇದ್ದರಂತೂ ಅಭಿಮಾನಿಗಳ ಸಂಭ್ರಮ ಹೇಳತೀರದು ಎಂಬ ಮಟ್ಟಿಗೆ ಇತ್ತು. ಅದರಲ್ಲೂ 2016ರಲ್ಲಿ ಆರ್‌ಸಿಬಿಯು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರಿನ ಫೈನಲ್‌ನಲ್ಲಿ ಸೋತಿತು. ಆಗ ಸಾಮಾಜಿಕ ಜಾಲತಾಣಗಳಲ್ಲಿ ಆರ್‌ಸಿಬಿ ಸೋಲಿಗೆ ಟೀಕಿಸಿದವರಿಗಿಂತ ಮರುಕಪಟ್ಟವರೇ ಹೆಚ್ಚು. ಅಭಿಮಾನಿಗಳ ಈ ನಾಡಿಮಿಡಿತವನ್ನು ಸರಿಯಾಗಿ ಅರಿತುಕೊಂಡ ಆರ್‌ಸಿಬಿ ತನ್ನ ಬ್ರ್ಯಾಂಡ್ ವೃದ್ಧಿಗೆ ಹೆಚ್ಚು ಒತ್ತುಕೊಟ್ಟಿತು.

ಐಪಿಎಲ್ ತಂಡಗಳ ನಡುವಣ ವೈರತ್ವದ ಅಂಶಗಳನ್ನು ಮುನ್ನೆಲೆಗೆ ತರುವ ಕಾರ್ಯ ಕಳೆದ ಮೂರ್ನಾಲ್ಕು ವರ್ಷಗಳಿಂದ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಆರ್‌ಸಿಬಿ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಅಭಿಮಾನಿಗಳ ಪೈಪೋಟಿಯು ತಾರಕಕ್ಕೇರಿತು. ಮುಂಬೈ ಇಂಡಿಯನ್ಸ್ ಎದುರಿಗಿನ ಪಂದ್ಯಗಳಿಗೂ ಮೆಲ್ಲಗೆ ಕಾವೇರಿತು. ಈ ಅಂಶಗಳನ್ನೂ ಆರ್‌ಸಿಬಿ ತನ್ನ ಅಭಿಮಾನಿ ವಲಯವನ್ನು ಬೆಳೆಸಿಕೊಳ್ಳಲು ಬಳಸಿಕೊಂಡಿತು. ಆರ್‌ಸಿಬಿ ಅಭಿಮಾನವೆಂಬುದು ಕ್ರಿಕೆಟ್‌ಪ್ರಿಯರ ‘ಜೀವನಶೈಲಿ’ ಎಂಬಷ್ಟರ ಮಟ್ಟಿಗೆ ಹಾಸುಹೊಕ್ಕಾಯಿತು.

ಅದಕ್ಕೆ ತಕ್ಕಂತೆ ಆರ್‌ಸಿಬಿಯು ‘ಇನ್ನೊವೇಟಿವ್ ಲ್ಯಾಬ್’, ‘ಅನ್‌ಬಾಕ್ಸ್ ಇವೆಂಟ್’ಗಳ ಮೂಲಕ ಶ್ರೀಮಂತವಾಯಿತು. ಬೆಂಗಳೂರಿನಲ್ಲಿ ನಡೆಯುವ ಐಪಿಎಲ್ ಪಂದ್ಯಗಳ ಟಿಕೆಟ್ ಮಾರಾಟ ವನ್ನು ತನ್ನ ವೆಬ್‌ಸೈಟ್‌ಗಳಿಗೆ ಸೀಮಿತ ಮಾಡಿಕೊಂಡಿತು. ಮಾರಾಟ ಶುರುವಾದ ಕೆಲವೇ ನಿಮಿಷಗಳಲ್ಲಿ ‘ಸೋಲ್ಡ್‌ಔಟ್’ ಆಗಿರುತ್ತಿದ್ದವು. ಇದರಿಂದಾಗಿ ಪಂದ್ಯಗಳನ್ನು ನೋಡಲು ಪೈಪೋಟಿ ಹೆಚ್ಚಿತು. ಹಂತಹಂತವಾಗಿ ಅಭಿಮಾನವು ಅಂಧಾಭಿಮಾನವಾಗಿ ರೂಪುಗೊಂಡಿದ್ದು ಗೊತ್ತಾಗಲೇ ಇಲ್ಲ. ಇದನ್ನು ಮನಃಶಾಸ್ತ್ರಜ್ಞರು ‘ಹರ್ಡ್ (ಹಿಂಡು) ಮನೋಭಾವ’ ಎನ್ನುತ್ತಾರೆ. ಇದರ ಒಟ್ಟು ಪರಿಣಾಮ ಕಂಡುಬಂದಿದ್ದು ಆರ್‌ಸಿಬಿಯು ಜೂನ್ 3ರಂದು ಅಹಮದಾಬಾದಿನಲ್ಲಿ ಐಪಿಎಲ್ ಟ್ರೋಫಿ ಎತ್ತಿ ಹಿಡಿದಾಗಲೇ. ಅದರ ಮರುದಿನ ಬೆಂಗಳೂರಿನಲ್ಲಿ ಸಂಭವಿಸಿದ ಕಾಲ್ತುಳಿತದ ಸಂದರ್ಭದಲ್ಲಿ ಅಭಿಮಾನಿಗಳೇ ಜೀವ ಕಳೆದುಕೊಂಡರು. ಆರ್‌ಸಿಬಿ, ಕೆಎಸ್‌ಸಿಎ ಮತ್ತು ಸರ್ಕಾರ ಒಂದಿಷ್ಟು ಪರಿಹಾರ ಘೋಷಣೆ ಮಾಡಿದವು. ಘಟನೆಯಲ್ಲಿ ಅಸುನೀಗಿದವರ ಕುಟುಂಬಗಳು ಈ ಪರಿಹಾರದ ಹಣವನ್ನು ತಿರಸ್ಕರಿಸಿದ ಘಟನೆಗಳೂ ನಡೆದವು.

ಸರ್ಕಾರ, ಆರ್‌ಸಿಬಿ, ಕ್ರಿಕೆಟ್ ಸಂಸ್ಥೆಗಳು ಒಬ್ಬರ ತಪ್ಪು ಇನ್ನೊಬ್ಬರ ಮೇಲೆ ಹಾಕುವ ಕೆಸರೆರಚಾಟ ಈಗಲೂ ನಡೆಯುತ್ತಿದೆ. ಇದೆಲ್ಲದರ ನಡುವೆ ಅಭಿಮಾನಿಗಳ ಜೀವ ಅಗ್ಗವಾದುದು ದುರದೃಷ್ಟಕರ. ಕರ್ನಾಟಕದ ಕ್ರಿಕೆಟ್ ಕೀರ್ತಿ ನೆಲಕಚ್ಚಿದ್ದೂ ಸುಳ್ಳಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಯುವ ಹೃದಯಗಳನ್ನು ಅಂಧಾಭಿಮಾನಿಗಳನ್ನಾಗಿ ರೂಪಿಸುವ ಮಾರುಕಟ್ಟೆ ತಂತ್ರ ಕುರಿತ ಅಧ್ಯಯನ, ಜಾಗೃತಿ ಮತ್ತು ಕಡಿವಾಣ ಹಾಕುವ ಚಿಂತನೆ ನಡೆದಿಲ್ಲ. ‘ಅಭಿಮಾನಿಗಳೇ ಸರ್ವಸ್ವ’ ಎನ್ನುವ ತಾರೆಗಳೆಲ್ಲರೂ ಮುಗುಮ್ಮಾಗಿದ್ದಾರೆ.



ವಾಚಕರ ವಾಣಿ

ಸಾಕುನಾಯಿ ಬಗ್ಗೆ ಚರ್ಚೆ ನಡೆಯಲಿ

ಶಾಸನಸಭೆಯಿಂದ ಸುಪ್ರೀಂ ಕೋರ್ಟ್‌ವರೆಗೆ ದೇಶದ ಎಲ್ಲೆಡೆ ಬೀದಿನಾಯಿಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಅದರ ಜೊತೆಗೆ ಸಾಕುನಾಯಿಗಳು ಮತ್ತು ಅವುಗಳ ಮಾಲೀಕರ ಬಗೆಗೂ ಚರ್ಚೆ ನಡೆಯಬೇಕಿದೆ. ಸಾಕುನಾಯಿಗಳ ಮಾಲೀಕರು ತಮ್ಮ ಪುಟ್ಟ–ದೊಡ್ಡ, ಸ್ವದೇಶಿ–ವಿದೇಶಿ, ವಿಚಿತ್ರ ಮೂತಿಯ ನಾಯಿಗಳನ್ನು ಬೆಳ್ಳಂಬೆಳಿಗ್ಗೆ ಹಿಡಿದುಕೊಂಡು ಠಾಕುಠೀಕಾಗಿ ನಡೆದು ಬರುತ್ತಾ, ಬಾಗಿಲು ಮುಚ್ಚಿರುವ ಮನೆ ಅಥವಾ ಅಂಗಡಿಗಳ ಮುಂದೆ ಹೇಸಿಗೆ ಮಾಡಿಸುತ್ತಾರೆ. ನಂತರ, ತಮಗೆ ಏನೂ ಗೊತ್ತಿಲ್ಲದವರಂತೆ ಅಲ್ಲಿಂದ ಮುಂದೆ ಹೋಗುತ್ತಾರೆ.

ಬೀದಿನಾಯಿಗಳು ಯಾವಾಗಲಾದರೊಮ್ಮೆ ತೊಂದರೆ ಕೊಡಬಹುದು. ಆದರೆ, ಸಾಕುನಾಯಿಗಳ ಉಪಟಳ ಪ್ರತಿದಿನವೂ ತಪ್ಪಿದ್ದಲ್ಲ. ಬೀದಿನಾಯಿಗಳ ಕಾಟ ತಡೆಯುವುದರ ಜೊತೆಗೆ, ಸಾಕುನಾಯಿಗಳ ಸಮಸ್ಯೆಗೂ ಪರಿಹಾರ ಬೇಕು.

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

‘ಖಾಕಿ’ ಎಂಬುದು ಅಭಿರುಚಿಹೀನ ಮಾತು

ಕನ್ನಡದ ಸುದ್ದಿ ವಾಹಿನಿಗಳು ತನಿಖೆ ಕಾರ್ಯಾಚರಣೆ ಕೈಗೊಳ್ಳುವ ಪೊಲೀಸರನ್ನು ‘ಖಾಕಿ’ ಎಂದು ಸಂಬೋಧಿಸುವುದು ಅಭಿರುಚಿಹೀನವಾಗಿದೆ. ಇದು ಕನ್ನಡದ ಸಂವೇದನೆಯನ್ನು ಕೀಳಾಗಿಸುವಂತಿದೆ. ‘ಪೊಲೀಸ್’, ‘ಪೊಲೀಸರು’ ಎಂದು ಕರೆದು, ಅವರ ಕರ್ತವ್ಯವನ್ನು ಗೌರವಿಸುವುದು ಒಳ್ಳೆಯದು.

ದಾದಾಪೀರ್ ನವಿಲೇಹಾಳ್, ದಾವಣಗೆರೆ

ಚುನಾವಣೆ ವೇಳೆ ಉಡುಗೊರೆ ನೆನಪು

ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಕೇಂದ್ರ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ (ಪ್ರ.ವಾ., ಆಗಸ್ಟ್ 19). ಜನಸಾಮಾನ್ಯರು ಬಳಸುವ ಸಕ್ಕರೆ, ಚಹಾ, ಅಡುಗೆ ಎಣ್ಣೆ, ಅಗರಬತ್ತಿ, ಜೀವರಕ್ಷಕ ಔಷಧಗಳು ಸೇರಿದಂತೆ ಅನೇಕ ದಿನಬಳಕೆ ವಸ್ತುಗಳ ಮೇಲೆ ಜಿಎಸ್‌ಟಿ ಹೆಸರಲ್ಲಿ ಅವೈಜ್ಞಾನಿಕವಾಗಿ ತೆರಿಗೆ ವಿಧಿಸಲಾಗುತ್ತಿದೆ. ಅನೇಕ ವರ್ಷಗಳಿಂದ ಹೀಗೆ ತೆರಿಗೆ ವಸೂಲಿ ಮಾಡಿರುವ ಕ್ರಮ ದೇಶದ ಜನರ ವಿಶ್ವಾಸಕ್ಕೆ ಎಸಗಿದ ದ್ರೋಹ. ಈಗ ಹಲವು ರಾಜ್ಯಗಳಲ್ಲಿ ಚುನಾವಣೆಗಳು ನಡೆಯಲಿರುವುದರಿಂದ ಕೇಂದ್ರ ಸರ್ಕಾರಕ್ಕೆ ಜನರ ಮೇಲೆ ಪ್ರೀತಿ ಉಕ್ಕಿದಂತೆ ಕಾಣುತ್ತಿದೆ. ಅದಕ್ಕೆ ದೀಪಾವಳಿ ಉಡುಗೊರೆಯ ನೆಪ!

ಎಂ.ಜಿ. ರಂಗಸ್ವಾಮಿ, ಹಿರಿಯೂರು

ಗ್ರಾಹಕಸ್ನೇಹಿ ಹೋಟೆಲ್ ಬೇಕು

ಇತ್ತೀಚೆಗೆ ನಾನು ವಿಜಯಪುರಕ್ಕೆ ಕೆಲಸದ ನಿಮಿತ್ತ ಹೋಗಿದ್ದೆ. ಅಲ್ಲಿನ ಹೋಟೆಲ್‌ನಲ್ಲಿ ಸಣ್ಣ ಇಡ್ಲಿ ಮತ್ತು ವಡೆ ಸೇವಿಸಿದೆ. ಅದಕ್ಕೆ ದುಪ್ಪಟ್ಟು ಹಣ ನೀಡಿದೆ. ದುಬಾರಿ ಬೆಲೆ ಬಗ್ಗೆ ನಾನು ಹೋಟೆಲ್ ಮಾಲೀಕನನ್ನು ಪ್ರಶ್ನಿಸಿದೆ. ‘ಸರ್, ನಿಮಗೆ ಇಷ್ಟವಾದರೆ ತಿನ್ನಿ, ಇಲ್ಲದಿದ್ದರೆ ಬೇರೆ ಹೋಟೆಲ್‌ಗೆ ಹೋಗಿ’ ಎನ್ನುವ ಉತ್ತರ ಎದುರಾಯಿತು.

ಹೋಟೆಲ್ ಉದ್ಯಮ ಬಹುವಿಸ್ತಾರವಾಗಿ ಹರಡಿಕೊಂಡಿದೆ. ಗ್ರಾಹಕರಿಗೆ ರುಚಿಕರ ಹಾಗೂ ಶುದ್ಧ ಆಹಾರ ಒದಗಿಸುವುದು ಈ ಉದ್ಯಮ ನಡೆಸುತ್ತಿರುವವರ ಜವಾಬ್ದಾರಿ. ಕೆಲವು ಹೋಟೆಲ್‌ಗಳು ಗ್ರಾಹಕಸ್ನೇಹಿಯಾಗಿವೆ. ಆದರೆ, ಬಹುತೇಕ ಹೋಟೆಲ್ ಮಾಲೀಕರು, ಗ್ರಾಹಕರಿಂದ ಹೆಚ್ಚಿನ ಹಣ ವಸೂಲಿ ಮಾಡುತ್ತಾರೆ. ಗ್ರಾಹಕರು ನೀಡಿದ ಹಣಕ್ಕೆ ತಕ್ಕಂತೆ ಹೋಟೆಲ್‌ನಿಂದಲೂ ಗುಣಮಟ್ಟದ ಆಹಾರ ಪೂರೈಸುವುದು ಮಾಲೀಕರ ಹೊಣೆಯಾಗಿದೆ.

ರಿಯಾಝ್ ಅಹ್ಮದ್, ರೋಣ

> **ಸೊಳ್ಳೆ ದಿನ!**
> ಇಂದು ‘ವಿಶ್ವ ಸೊಳ್ಳೆ ದಿನ’. ಸೊಳ್ಳೆ ಕಚ್ಚದಿದ್ದರೆ ಒಳ್ಳೆ ದಿನ.
> **ಎಚ್. ಆನಂದರಾಮ ಶಾಸ್ತ್ರೀ**

ಕಥೆ ಹೇಳುತ್ತಿವೆ ಬೆಳ್ಳಿ ಗದೆಗಳು!

ಸಿ.ಎಂ, ಡಿ.ಸಿ.ಎಂ ಕೈಯಲ್ಲಿ ಬೆಳ್ಳಿ ಗದೆ ಹಿಡಿದಿರುವ ಫೋಟೊ ಮಾರ್ಮಿಕವಾಗಿದೆ (ಪ್ರ.ವಾ. ಚಿತ್ರ, ಆಗಸ್ಟ್ 19). ನನಗೆ ಬಿದ್ದ ಹೊಡೆತ ಯಾರ ಗದೆಯದೆಂಬ ಚಿಂತೆ ರಾಜಣ್ಣನಿಗೆ! ಯುದ್ಧ ಶುರುವಾಗುತ್ತಿಲ್ಲವಲ್ಲ ಎಂಬ ಬೇಸರ ಮಾಧ್ಯಮದವರಿಗೆ! ನಮ್ಮ ಆದೇಶಕ್ಕೆ ಕಾಯದೆ ಎಲ್ಲಿ ಯುದ್ಧ ಶುರು ಮಾಡಿಬಿಡುವರೋ ಎಂಬ ಆತಂಕ ಹೈಕಮಾಂಡಿಗೆ! ಇದೆಲ್ಲಾ ಮಾಮೂಲಿಯೆಂಬ ಸಿನಿಕತನ ಜನಸಾಮಾನ್ಯರಿಗೆ!

ಜೆ.ಬಿ. ಮಂಜುನಾಥ, ಪಾಂಡವಪುರ

ಮುಂಬಡ್ತಿಗೆ ಅರ್ಹತಾ ಪರೀಕ್ಷೆ ಸ್ವಾಗತಾರ್ಹ

ಇದೇ ಮೊದಲ ಬಾರಿಗೆ ಪ್ರೌಢಶಾಲಾ ಸಹಶಿಕ್ಷಕರ ಮುಂಬಡ್ತಿಗೆ ಅರ್ಹತಾ ಪರೀಕ್ಷೆ ಆಯೋಜಿಸಿರುವ ಪದವಿಪೂರ್ವ ಶಿಕ್ಷಣ ಇಲಾಖೆಯ ನಡೆ ಸ್ವಾಗತಾರ್ಹ. ಪ್ರೌಢಶಾಲಾ ಶಿಕ್ಷಕರನ್ನು ಪಿಯು ಉಪನ್ಯಾಸಕರಾಗಿ ಬಡ್ತಿ ನೀಡುವುದಕ್ಕಾಗಿಯೇ ಪಿಯು ಉಪನ್ಯಾಸಕ ನೇಮಕದ ವೃಂದ ಮತ್ತು ನೇಮಕಾತಿ ನಿಯಮಗಳನ್ನು 2014ರಲ್ಲಿಯೇ ಬದಲಾವಣೆ ಮಾಡಲಾಗಿದೆ. ಒಬ್ಬ ಶಿಕ್ಷಕ ನಿರಂತರ ಓದುಗನಾಗಬೇಕು. ಶಿಕ್ಷಕನ ಓದು ವಿದ್ಯಾರ್ಥಿಯ ಓದಿನ ಮೂಲಾಧಾರ ಎಂದರೆ ತಪ್ಪಲ್ಲ.

ಶಿವರಾಜ ಕಾಂಬಳೆ, ಚಿಕ್ಕೋಡಿ

ಕಾಯಕ ವರ್ಗಗಳಿಗೆ ಅಪಮಾನ ಬೇಡ

ಕುರಿಗಾಹಿಗಳ ಹಿತರಕ್ಷಣೆಗಾಗಿ ಕರ್ನಾಟಕ ಸಾಂಪ್ರದಾಯಿಕ ವಲಸೆ ಕುರಿಗಾಹಿಗಳ (ಕಲ್ಯಾಣ ಕಾರ್ಯಕ್ರಮಗಳು ಮತ್ತು ದೌರ್ಜನ್ಯ ತಡೆ) ಮಸೂದೆ– 2025 ಸಿದ್ಧಪಡಿಸಿರುವುದು ಸ್ವಾಗತಾರ್ಹ. ಕುರಿಗಾಹಿಗಳ ಬಗೆಗಿನ ಜಾತಿ ನಿಂದನೆಯು ಈಗ ಕಡಿಮೆಯಾಗಿದೆ. ಎಂದೋ ಜಾರಿಗೆ ಬರಬೇಕಾಗಿದ್ದ ಮಸೂದೆ ತಡವಾಗಿಯಾದರೂ ಮಂಡನೆಯಾಗುತ್ತಿರುವುದು ಅಭಿನಂದನೀಯ. ಸಮಾಜದಲ್ಲಿ ಕುರಿಗಾಹಿಯಂತೆ ದನಗಾಹಿ, ಸವಿತಾ, ಮಡಿವಾಳ, ಬಡಿಗ, ಕುಂಬಾರ ಮುಂತಾದ ಕಾಯಕ ವರ್ಗದವರಿಗೂ ಅಪಮಾನವಾಗುತ್ತಿದೆ. ಆದುದರಿಂದ ಈ ಎಲ್ಲಾ ಕಾಯಕವನ್ನು ನಿರ್ವಹಿಸುವ ಜನರನ್ನು ಕಾಯ್ದೆಯಡಿ ಸೇರಿಸುವುದು ಸೂಕ್ತ.

ಕೆ.ಎಂ. ನಾಗರಾಜು, ಮೈಸೂರು

ಚುರುಮುರಿ



ಕಳವು ಕಳವಳ

• ಮಣ್ಣೆ ರಾಜು

ಬ್ಯಾಂಕ್ ಲಾಕರ್‌ನಲ್ಲಿಟ್ಟಿದ್ದ ಒಡವೆ ಬಿಡಿಸಿಕೊಳ್ಳಲು ಶಂಕ್ರಿ, ಸುಮಿ ಬಂದಿದ್ದರು.

‘ಹಬ್ಬ, ಮದುವೆ, ಗೃಹಪ್ರವೇಶಗಳಲ್ಲಿ ತೊಟ್ಟುಕೊಂಡು ಮುಗಿದ ಮೇಲೆ ತಂದು ಬ್ಯಾಂಕ್ ಲಾಕರ್‌ನಲ್ಲಿಡುವ ಸೌಭಾಗ್ಯಕ್ಕೆ ಒಡವೆಗೆ ಲಕ್ಷಾಂತರ ರೂಪಾಯಿ ಬಂಡವಾಳ ಹಾಕಬೇಕಾ?’ ಶಂಕ್ರಿ ಗೊಣಗಿಕೊಂಡ.

‘ಸರಗಳ್ಳರ ಹಾವಳಿ ಜಾಸ್ತಿಯಾಗಿದೆ ಕಣ್ರೀ, ಮಾಂಗಲ್ಯ ಸರವನ್ನೂ ಲಾಕರ್‌ನಲ್ಲಿಟ್ಟು ಕರಿಮಣಿ ಸರ ಹಾಕಿಕೊಂಡು ಬಾಳ್ತಿದ್ದೀನಿ’ ಅಂದಳು ಸುಮಿ.

‘ಹೌದು. ಮೊನ್ನೆ ನಮ್ಮ ಮನೆ ಹತ್ರ ಕಳ್ಳರು ಹೆಂಗಸಿನ 60 ಗ್ರಾಂ ಮಾಂಗಲ್ಯ ಸರ ಕಿತ್ತುಕೊಂಡು ಹೋದ್ರು. ಆಕೆ ಮೂರು ದಿನ ಅಡುಗೇನೂ ಮಾಡಲಿಲ್ಲ, ಊಟಾನೂ ಮಾಡಲಿಲ್ಲ’ ಬ್ಯಾಂಕ್ ಅಧಿಕಾರಿ ಹೇಳಿದರು.

‘ಪಾಪ! ಆಮೇಲೆ ಏನಾಯ್ತು?’

‘ನಾಲ್ಕನೇ ದಿನ ಗಂಡ ಹೋಟೆಲ್‌ನಿಂದ ಊಟ ತಂದು ಅವಳಿಗೆ ತಿನ್ನಿಸಿ ಸಮಾಧಾನ ಮಾಡಿದ’.

‘ನಮ್ಮ ಏರಿಯಾದಲ್ಲೂ ಕಳ್ಳತನ ಜಾಸ್ತಿಯಾಗಿವೆ. ಹೋದ ವಾರ ಯಾರೋ ಒಬ್ಬ ಪಕ್ಕದ ಮನೆ ಹುಡುಗಿಯ ಹೃದಯ ಕದ್ದ. ಹುಡುಗಿ ಮನೆಯವರು ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟರು’.

‘ಕಿಡ್ನಿ ಕದಿಯುವುದು ಅಪರಾಧ. ಹೃದಯ ಕದಿಯುವುದು ಅಫೆನ್ಸ್ ಅಲ್ಲ ಮೇಡಂ’.

‘ಹೃದಯ ಕದ್ದವನು, ಕಳೆದುಕೊಂಡವಳು ಮನೆ ಬಿಟ್ಟು ಓಡಿಹೋಗಿದ್ದರು. ಪೊಲೀಸರು ಪತ್ತೆ ಮಾಡಿ ಕರೆತಂದು ವಿಚಾರಣೆ ಮಾಡಿದರು. ಅವರಿಬ್ಬರ ಹೃದಯ ಅದಲು ಬದಲಾಗಿದ್ದವು! ಪೊಲೀಸರೇ ಮುಂದೆ ನಿಂತು ಅವರಿಬ್ಬರಿಗೂ ಮದುವೆ ಮಾಡಿಸಿದರು’.

‘ಈಗಂತೂ ತರಾವರಿ ಕಳ್ಳತನಗಳಾಗ್ತಿವೆ. ಹೊಸದಾಗಿ ಮತಗಳ್ಳತನ ಶುರುವಾಗಿದೆಯಂತೆ’.

‘ಒಡವೆ ಇಟ್ಟುಕೊಳ್ಳುವಂತೆ ಮತಗಳನ್ನೂ ನಿಮ್ಮ ಬ್ಯಾಂಕ್ ಲಾಕರ್‌ನಲ್ಲಿ ಇಟ್ಟುಕೊಳ್ತೀರಾ?’

‘ಇಲ್ಲ ಮೇಡಂ, ಮತಗಳ ಲಾಕರ್ ಸೌಲಭ್ಯ ನಮ್ಮ ಬ್ಯಾಂಕಿನಲ್ಲಿಲ್ಲ. ಮತಗಳ ಸುಭದ್ರತೆಗೆ ರಾಜಕಾರಣಿಗಳು ಪ್ರತ್ಯೇಕ ಮತ ಬ್ಯಾಂಕ್ ಮಾಡಿಕೊಂಡಿದ್ದಾರೆ’ ಎಂದು ನಕ್ಕ ಅಧಿಕಾರಿ, ಸುಮಿಗೆ ಒಡವೆ ತೆಗೆದುಕೊಟ್ಟರು.

ಸಂಗತ

ಪಿಎಚ್‌.ಡಿ ‘ಸಂಶೋಧನೆ’ ಮತ್ತು ವೇದನೆ

ನಾಡು–ನುಡಿಯನ್ನು ವಿವೇಕದ ರೂಪದಲ್ಲಿ ನೋಡಬೇಕಾದ ಉನ್ನತ ಶಿಕ್ಷಣ ಕ್ಷೇತ್ರ ಹಾಗೂ ಪಿಎಚ್‌.ಡಿ ಸಂಶೋಧನೆಗಳು ಭ್ರಷ್ಟಾಚಾರದ ಕೆಸರನ್ನು ಮೆತ್ತಿಕೊಂಡಿವೆ.

• ಆರ್. ಲಕ್ಷ್ಮೀನಾರಾಯಣ

ಕನ್ನಡದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಗುಣಮಟ್ಟ ಕುಸಿಯುತ್ತಿದೆ ಎನ್ನುವ ಆತಂಕ ಆಗಾಗ ವ್ಯಕ್ತವಾಗುತ್ತಿದೆ. ಬೆಂಗಳೂರಿನಲ್ಲಿ ನಡೆದ, ಪಂಪನನ್ನು ಕುರಿತ ಎರಡು ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲೂ ಈ ಆತಂಕ ವ್ಯಕ್ತವಾಗಿದೆ (ಪ್ರ.ವಾ., ಆಗಸ್ಟ್ 18). ಕನ್ನಡ ಸಂಶೋಧನೆಯ ಗುಣಮಟ್ಟ ಕುಸಿಯುತ್ತಿರುವ ವಿಚಾರಕ್ಕೆ ಮತ್ತು ಅದರಲ್ಲಿ ಹಣ ವಹಿಸುತ್ತಿರುವ ಪಾತ್ರದ ಕುರಿತು ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ಅವರು, ವಿಷಾದದಿಂದ ಆಡಿರುವ ಮಾತುಗಳಲ್ಲಿ ಉತ್ಪ್ರೇಕ್ಷೆಯ ಅಂಶವೇನಿಲ್ಲ (ಕೆಲವೇ ಅಪವಾದಗಳನ್ನು ಹೊರತುಪಡಿಸಿ). ಆದರೆ, ಈ ಗುಣಮಟ್ಟದ ಕುಸಿತ ಕನ್ನಡ ಅಧ್ಯಾಪಕರಿಗೆ ಮತ್ತು ಕರ್ನಾಟಕಕ್ಕೆ ಮಾತ್ರ ಸೀಮಿತವಾದ ಸಂಗತಿಯೇನಲ್ಲ.

ಬಡ್ತಿ ಪಡೆಯಲಿಕ್ಕೆ ಪಿಎಚ್‌.ಡಿ ಕಡ್ಡಾಯ ಎಂದು ‘ವಿಶ್ವವಿದ್ಯಾಲಯ ಅನುದಾನ ಆಯೋಗ’ (ಯುಜಿಸಿ) ಯಾವಾಗ ಆದೇಶ ಹೊರಡಿಸಿತೋ ಅಂದೇ ಎಲ್ಲ ವಿಷಯಗಳ ಸಂಶೋಧನಾ ಪ್ರಬಂಧಗಳ ಗುಣಮಟ್ಟ ಕುಸಿತ ಆರಂಭಗೊಂಡಿತು ಮತ್ತು ಭ್ರಷ್ಟಾಚಾರಕ್ಕೆ ಬೀಜಾಂಕುರ ಆಯಿತು.

ಹಣ ತೆಗೆದುಕೊಂಡು ಪಿಎಚ್‌.ಡಿ ಪ್ರಬಂಧ ಬೇರೆಯವರಿಗೆ ಬರೆದುಕೊಡುವ ಮತ್ತು ಅದರ ಗುಣಮಟ್ಟ ಹೇಗೇ ಇದ್ದರೂ ಅದಕ್ಕೆ ಪದವಿ ನೀಡುವ ದಂಧೆ ಮೊದಲು ಶುರುವಾದದ್ದು ಉತ್ತರದ ರಾಜ್ಯಗಳಲ್ಲಿ, ಈಗ್ಗೆ ಸುಮಾರು ಮೂವತ್ತು ವರ್ಷಗಳ ಹಿಂದೆಯೇ ಎಂಬುದು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಪಡಸಾಲೆಯಲ್ಲಿ ಓಡಾಡುವವರೆಲ್ಲ ಮಾತನಾಡುತ್ತಿದ್ದ ಮತ್ತು ತಿಳಿದ ಸಂಗತಿಯಾಗಿತ್ತು. ಕ್ರಮೇಣ ಆ ಪಿಡುಗು ದೇಶವ್ಯಾಪಿಯಾಯಿತು, ಕರ್ನಾಟಕದಲ್ಲೂ ಕಾಣಿಸಿಕೊಂಡಿತು.



ಬಡ್ತಿಗೆ ಪಿಎಚ್‌.ಡಿ ಅಗತ್ಯವಾಗಿರದೆ, ಕೇವಲ ಅಪೇಕ್ಷಣೀಯವಷ್ಟೇ ಆಗಿದ್ದಾಗ ಸಂಶೋಧನೆಯಲ್ಲಿ ನಿಜಕ್ಕೂ ಆಸಕ್ತಿ ಇದ್ದವರು ಮತ್ತು ಅಧ್ಯಯನಶೀಲರು ಮಾತ್ರ ಪಿಎಚ್‌.ಡಿ ಅಧ್ಯಯನಕ್ಕೆ ಹೆಸರು ನೋಂದಣಿ ಮಾಡಿಸುತ್ತಿದ್ದರು. ಆಗ ಮಾರ್ಗದರ್ಶಕರು (ಗೈಡ್‌ಗಳು) ಸಿಕ್ಕುವುದೂ ಕಷ್ಟವಾಗಿತ್ತು. ಆದರೆ, ಎಂ.ಫಿಲ್ ಮತ್ತು ಪಿಎಚ್‌.ಡಿ.ಗಳು ಬಡ್ತಿಗೆ ಅನಿವಾರ್ಯವೆಂದು ಯುಜಿಸಿ ಕಡ್ಡಾಯ ಮಾಡಿದ ಕೂಡಲೇ, ಎಲ್ಲರಿಗೂ ಹೇಗಾದರೂ ಮಾಡಿ ಡಾಕ್ಟರೇಟ್ ಗಿಟ್ಟಿಸುವುದೇ ಧ್ಯೇಯವಾಗಿಬಿಟ್ಟಿತು. ಸಂಶೋಧನೆಗಳ ಸಂಖ್ಯೆ ಹೆಚ್ಚಿದಂತೆ ಗುಣಮಟ್ಟದ ಅಧಃಪತನ ಶುರುವಾಯಿತು.

ಕನ್ನಡದ ಹೆಸರು ಹೇಳಿಕೊಂಡೇ ಹುಟ್ಟಿದ ವಿಶ್ವವಿದ್ಯಾಲಯವಂತೂ ತನ್ನ ಕೇಂದ್ರ ಸಂಸ್ಥೆ ಮತ್ತು ಹಲವಾರು ಅಧ್ಯಯನ ಕೇಂದ್ರಗಳ ಮೂಲಕ ಪಿಎಚ್‌.ಡಿ.ಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರು ಮಾಡುವ ಕಾರ್ಖಾನೆಯೇ ಆಗಿಬಿಟ್ಟಿರುವುದನ್ನು ನಾವೆಲ್ಲ ಕಾಣುತ್ತಿದ್ದೇವೆ. ಹಾಗಾಗಿ, ಸಹಜವಾಗಿಯೇ ಗುಣಮಟ್ಟ ಕುಸಿಯತೊಡಗಿ ಈಗ ಅಧಃಪಾತಾಳವನ್ನು ಮುಟ್ಟಿದೆ. ಇನ್ನು ಸಂಶೋಧನೆಯಲ್ಲಿ ಹಣ ಸೇರಿಕೊಂಡಿರುವುದಕ್ಕೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನಷ್ಟೇ ಗುರಿ ಮಾಡಿ ದೂರುವುದರಲ್ಲೇನೂ ಅರ್ಥವಿಲ್ಲ. ವಿಶ್ವವಿದ್ಯಾಲಯ ಮಟ್ಟದಲ್ಲಾಗಲಿ, ಕೆಪಿಎಸ್‌ಸಿ ಮಟ್ಟದಲ್ಲಾಗಲಿ, ಖಾಸಗಿ ಕಾಲೇಜುಗಳ ಹಂತದಲ್ಲಾಗಲಿ, ಅಧ್ಯಾಪಕರ ನೇಮಕಾತಿಗಳಲ್ಲಿ ಹಾಗೂ ಉಳಿದ ಇಲಾಖೆಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿರಾಟ್ ರೂಪವನ್ನು ನಿತ್ಯವೂ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಹಣ ಕೊಡದೆ ಸಾರ್ವಜನಿಕ ಕೆಲಸ ಮಾಡಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ಇನ್ನು ರಾಜಕೀಯ ಭ್ರಷ್ಟಾಚಾರಕ್ಕಂತೂ ಕೊನೆ ಮೊದಲಿಲ್ಲ. ಜನ ಭ್ರಷ್ಟಾಚಾರದ ಬಗ್ಗೆ ರೋಸಿ ಹೋಗಿ, ಇದೆಲ್ಲ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸರ್ವೇಸಾಮಾನ್ಯ ಮತ್ತು ಸಹಜ ಎಂದು ಒಪ್ಪಿಕೊಳ್ಳುವ ಹಂತಕ್ಕೆ ಬಂದುಬಿಟ್ಟಿರುವುದು ದುರ್ದೈವವೇ ಸರಿ. ಪ್ರಜಾಪ್ರಭುತ್ವ ವ್ಯವಸ್ಥೆಯ ಬೇರುಗಳ ರೂಪದಲ್ಲಿ ನೋಡಬಹುದಾದ ಚುನಾವಣೆಗಳು ಈಗ ಎಷ್ಟರಮಟ್ಟಿಗೆ ಪಾವಿತ್ರ್ಯ ಉಳಿಸಿಕೊಂಡಿವೆ ಎನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ. ಬೇರುಗಳಿಗೇ ಹುಳು ಬಿದ್ದಿರುವ ಸನ್ನಿವೇಶದಲ್ಲಿ, ಕೊಂಬೆ ರೆಂಬೆ, ಹೂವು ಕಾಯಿ ಆರೋಗ್ಯದಿಂದ ಇರಲು ಸಾಧ್ಯವೆ?

ಕರ್ನಾಟಕದಲ್ಲೇ ಹಿಂದೆ ಇದ್ದ ರಾಜ್ಯಪಾಲರೊಬ್ಬರು ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಆಯ್ಕೆ ಮಾಡಲು ಸೂಟ್‌ಕೇಸ್‌ಗಳನ್ನು ತೆಗೆದುಕೊಳ್ಳುವ ಪದ್ಧತಿಗೆ ನಾಂದಿ ಹಾಡಿದರೆಂಬುದೇನೂ ಈಗ ಗುಟ್ಟಿನ ಸಂಗತಿಯಾಗಿಲ್ಲ. ರಾಜ್ಯದ ಯಾವುದಾದರೂ ವಿಶ್ವವಿದ್ಯಾಲಯ ಭ್ರಷ್ಟಾಚಾರ ಮುಕ್ತವಾಗಿ ಇದೆಯೇ? ಕುಲಪತಿಗಳ ನೇಮಕಾತಿಯೇ ಹಣದೊಂದಿಗೆ ತಳಕು ಹಾಕಿಕೊಂಡಿರುವಾಗ, ಭ್ರಷ್ಟಾಚಾರಮುಕ್ತ ವಿಶ್ವವಿದ್ಯಾಲಯಗಳನ್ನು ಹೇಗೆ ನಿರೀಕ್ಷಿಸುವುದು?

ಭ್ರಷ್ಟಾಚಾರ, ಪಿಎಚ್‌.ಡಿ ಪದವಿಗಳ ಗೈಡ್‌ಗಳು ಹಣ ತೆಗೆದುಕೊಳ್ಳುವುದಕ್ಕಷ್ಟೇ ಇದು ನಿಂತಿಲ್ಲ. ವಿಶ್ವವಿದ್ಯಾಲಯಗಳಿಗೆ ಜೂನಿಯರ್ ಹಾಗೂ ಸೀನಿಯರ್ ರಿಸರ್ಚ್ ಫೆಲೋಗಳು, ತಮಗೆ ಸಂದಾಯವಾಗುವ ಸ್ಕಾಲರ್‌ಶಿಪ್ ಹಣದಲ್ಲೂ ಹವಿಭಾಗವನ್ನು ಕೇಳುವ ವಿಭಾಗ ಮುಖ್ಯಸ್ಥರ ಬಗ್ಗೆ ಮಾತಾಡಿಕೊಳ್ಳುವುದೂ ಈಗ ಬಹಿರಂಗವೇ ಆಗಿಬಿಟ್ಟಿದೆ.

ಪಿಎಚ್‌.ಡಿ ವಿದ್ಯಾರ್ಥಿಗಳನ್ನು ಗೈಡ್‌ಗಳು ಬೇರೆ ಬೇರೆ ರೂಪದಲ್ಲಿ ಶೋಷಿಸುತ್ತಿರುವ ದೂರುಗಳೂ ಇವೆ. ಇಂಥ ಭ್ರಷ್ಟಾಚಾರ, ಮುಖ್ಯವಾಗಿ ವೈಯಕ್ತಿಕ ಪ್ರಾಮಾಣಿಕತೆಯನ್ನು ಸಮಾಜ ನಿರೀಕ್ಷಿಸುವ, ಉನ್ನತ ವ್ಯಾಸಂಗ ಮಾಡಿ ಲಕ್ಷಗಟ್ಟಲೆ ಸಂಬಳ ಪಡೆಯುವವರವರೆಗೂ ಬಂದು ಹಲವು ವರ್ಷಗಳೇ ಆಗಿದೆಯೆಂಬ ಸಂಗತಿ ಅತ್ಯಂತ ಕಟುವಾದರೂ ವಾಸ್ತವ. ಅದನ್ನು ನಿಲ್ಲಿಸುವುದು ಹೇಗೆಂಬ ಬಗ್ಗೆ ಶಿಕ್ಷಣ ಕ್ಷೇತ್ರದ ಬಗ್ಗೆ ಕಾಳಜಿಯುಳ್ಳ ಎಲ್ಲರೂ ಗಂಭೀರವಾಗಿ ಚಿಂತಿಸಬೇಕಾಗಿದೆ.

(ಲೇಖಕ: ನಿವೃತ್ತ ಕನ್ನಡ ಪ್ರಾಧ್ಯಾಪಕ)

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗಾಜಾ ಪಟ್ಟಿ ಮಕ್ಕಳ ಬಾಲ್ಯ ಜರ್ಜರಿತ

ಇಸ್ರೇಲ್–ಹಮಾಸ್ ನಡುವಿನ ಯುದ್ಧದಿಂದ ಗಾಜಾ ಪಟ್ಟಿಯ ಲಕ್ಷಾಂತರ ಮಕ್ಕಳ ಬದುಕು ಜರ್ಜರಿತವಾಗಿದೆ; ಸ್ವಲ್ಪ ಆಹಾರ, ಗುಟುಕು ನೀರಿಗಾಗಿ ಹಾಹಾಕಾರ ನಡೆಯುತ್ತಿದೆ. ಅನೇಕ ಮಕ್ಕಳಿಗೆ ಪೋಷಕರೇ ಉಳಿದಿಲ್ಲ. ಕಣ್ಣ ಮುಂದೆ ಪ್ರೀತಿಪಾತ್ರರ ಸಾವು, ಹಿಂಸಾಚಾರ, ಬಾಂಬ್, ಕ್ಷಿಪಣಿಗಳ ನಿರಂತರ ದಾಳಿ, ಯಾವ ಕ್ಷಣ ಏನಾಗುವುದೋ ಎನ್ನುವ ಭಯ, ಶಿಬಿರದಿಂದ ಶಿಬಿರಕ್ಕೆ ಅಲೆಯುವ ಬದುಕು; ಭೂಮಿಯ ಮೇಲೆ ಮನುಷ್ಯನಿಗೆ ಎದುರಾಗಬಹುದಾದ ಸಕಲ ಸವಾಲುಗಳನ್ನೂ, ಸಂಕಷ್ಟಗಳನ್ನೂ ಬಾಲ್ಯದಲ್ಲೇ ಅನುಭವಿಸುತ್ತಿರುವ, ಯುದ್ಧದ ಆತ್ಯಂತಿಕ ಪರಿಣಾಮಗಳಿಗೆ ಒಳಗಾಗಿರುವ ಗಾಜಾ ಪಟ್ಟಿಯ ಮಕ್ಕಳ ದುರ್ಭರ ಪರಿಸ್ಥಿತಿಯನ್ನು ವಿವರಿಸಲು ಪದಗಳೇ ಲಭ್ಯವಿಲ್ಲ

ಪ್ರಜಾವಾಣಿ ವಾರ್ತೆ

'ನಿನಗೆ ಕ್ರಯಾನ್‌ಗಳು ಬೇಕೋ, ಬ್ರೆಡ್ ಬೇಕೋ ಎಂದು ಕೇಳಿದರೆ, ನನ್ನ ಆಯ್ಕೆ ಬ್ರೆಡ್'

–ಇದು ಗಾಜಾ ಪಟ್ಟಿಯ 12 ವರ್ಷದ ರಹ್ಮಾ ಅಬು ಅಬೆದ್‌ಳ ಮಾತು. ಆಟ ಎಂದರೆ ಊಟ, ನಿದ್ದೆ ಎಲ್ಲವನ್ನೂ ಮರೆಯುವ ಮಕ್ಕಳ ನಡುವೆ ರಹ್ಮಾಳ ಉತ್ತರ ವಿಚಿತ್ರ ಅನ್ನಿಸಬಹುದು. ಆದರೆ, ರಹ್ಮಾಳ ಮಾತಿನಲ್ಲಿ ಗಾಜಾ ಪಟ್ಟಿಯ ಮಕ್ಕಳ ಭೀಕರ ಚಿತ್ರಣವಿದೆ.

ಇಸ್ರೇಲ್–ಹಮಾಸ್ ಯುದ್ಧದಲ್ಲಿ ದಕ್ಷಿಣ ಗಾಜಾದಲ್ಲಿದ್ದ ರಹ್ಮಾಳ ಮನೆ ನೆಲಕಚ್ಚಿದೆ. ತನ್ನ ಐವರು ಒಡಹುಟ್ಟಿದವರು ಮತ್ತು ಪೋಷಕರೊಂದಿಗೆ ಆಕೆ ಮೀನುಗಾರಿಕಾ ಉಪಕರಣಗಳ ಶೆಡ್‌ನಲ್ಲಿ ವಾಸವಾಗಿದ್ದಾಳೆ. ರಹ್ಮಾಳ ಕುಟುಂಬದಂತೆಯೇ ಅನೇಕ ನಿರಾಶ್ರಿತ ಕುಟುಂಬಗಳೂ ಅಲ್ಲಿ ಆಶ್ರಯ ಪಡೆದಿವೆ. ದಿನಕ್ಕೆ ಒಂದು ಹೊತ್ತು ಮಾತ್ರ ಊಟ ಮಾಡುವ ರಹ್ಮಾ, ದಿನದ ಬಹುಸಮಯವನ್ನು ಹತ್ತಿರದ ಸಮುದ್ರತೀರದಲ್ಲಿ ಕಳೆಯುತ್ತಾಳೆ. ಒಳ್ಳೆಯ ಬಟ್ಟೆ, ಒಳ್ಳೆಯ ಊಟ ಎಂದರೆ ಹೇಗಿರುತ್ತವೆ ಎನ್ನುವುದರ ನೆನಪೂ ಆಕೆಗೆ ಉಳಿದಿಲ್ಲ. ಮಾಂಸ ತಿನ್ನುವುದು ಅವಳಿಗೀಗ ಒಂದು ಕನಸು.

ಇದು ರಹ್ಮಾ ಒಬ್ಬಳ ಸ್ಥಿತಿ ಅಲ್ಲ; ಗಾಜಾ ಪಟ್ಟಿಯಲ್ಲಿರುವ 11 ಲಕ್ಷ ಮಕ್ಕಳ ದಾರುಣ ಪರಿಸ್ಥಿತಿ. 22 ತಿಂಗಳುಗಳಿಂದ ನಡೆಯುತ್ತಿರುವ ಸಂಘರ್ಷದಿಂದ ಗಾಜಾದಲ್ಲಿ ಬಾಲ್ಯ ಎನ್ನುವ ಪದಕ್ಕೆ ಅರ್ಥವೇ ಇಲ್ಲದಂತಾಗಿದೆ. ಇಲ್ಲಿನ ಬಹುತೇಕ ಮಕ್ಕಳು ಎರಡು ವರ್ಷಗಳಿಂದ ಶಾಲೆಯ ಮುಖವನ್ನೇ ಕಂಡಿಲ್ಲ. ಈ ಭಾಗದ ಶೇ 95ರಷ್ಟು ಶಾಲೆಗಳು ನೆಲಕ್ಕುರುಳಿದ್ದರೆ, ಅಳಿದುಳಿದ ಶಾಲೆಗಳು ನಿರಾಶ್ರಿತ ಶಿಬಿರಗಳಾಗಿ ಮಾರ್ಪಟ್ಟಿವೆ.

ಮಕ್ಕಳಿಗೆ ಹೊಟ್ಟೆತುಂಬ ಊಟ, ಮೈಮುಚ್ಚುವಷ್ಟು ಬಟ್ಟೆ, ದಾಹ ತೀರುವಷ್ಟು ಕುಡಿಯುವ ನೀರು ಕೂಡ ದುರ್ಲಭವಾಗಿವೆ; ಹಸಿವು, ಪದೇ ಪದೇ ಆಶ್ರಯ ಶಿಬಿರಗಳ ಬದಲಾವಣೆ, ಬಾಂಬ್, ಕ್ಷಿಪಣಿ ದಾಳಿಗಳಿಂದ ಅವರು ತೀವ್ರ ದೈಹಿಕ ಮತ್ತು ಮಾನಸಿಕ ಕ್ಷೋಭೆಗೆ ಒಳಗಾಗಿದ್ದು, ಅವರಿಗೆ ತಕ್ಷಣ ವೈದ್ಯಕೀಯ ನೆರವು ಬೇಕಾಗಿದೆ. ಯುದ್ಧದ ಭೀಕರತೆ, ಹಿಂಸಾಚಾರ, ಪ್ರೀತಿಪಾತ್ರರ ಸಾವು, ಭಯ ಮತ್ತು ಮೂಲಸೌಕರ್ಯಗಳ ಕೊರತೆಯಿಂದ ಇಲ್ಲಿನ ಮಕ್ಕಳು ಜೀವಚ್ಛವಗಳಾಗಿದ್ದಾರೆ.

ಮಹಿಳೆಯರು, ಅದರಲ್ಲೂ ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳು ಗಾಜಾ ಪಟ್ಟಿಯಲ್ಲಿ ನಿರ್ಮಾಣವಾಗಿರುವ ಮಾನವೀಯ ಬಿಕ್ಕಟ್ಟಿನ ಮೊದಲ ಬಲಿಪಶುಗಳಾಗಿದ್ದಾರೆ. ಈಗಾಗಲೇ ಸಾವಿರಾರು ಮಕ್ಕಳು ಪ್ರಾಣ ಕಳೆದುಕೊಂಡಿದ್ದು, ಅದಕ್ಕಿಂತ ಹೆಚ್ಚು ಮಂದಿ ಗಾಯಾಳುಗಳಾಗಿ ಸರಿಯಾದ ಚಿಕಿತ್ಸೆಯೂ ಸಿಗದೇ ನರಳುತ್ತಿದ್ದಾರೆ. ಯುದ್ಧದಿಂದ ನೇರವಾಗಿ ಸತ್ತವರಂತೆಯೇ ಊಟ ಸಿಗದೇ ಸತ್ತವರು, ಕಾಯಿಲೆಗಳಿಂದ ಸತ್ತ ಮಕ್ಕಳ ಸಂಖ್ಯೆಯೂ ಗಣನೀಯವಾಗಿದೆ. ಏರುತ್ತಿರುವ ಉಷ್ಣಾಂಶ ಕೂಡ ಅವರಿಗೆ ಶಾಪವಾಗಿ ಪರಿಣಮಿಸಿದೆ. ಸುಮಾರು 17 ಸಾವಿರ ಮಕ್ಕಳು ತಮ್ಮ ಪೋಷಕರಿಂದ ದೂರವಾಗಿದ್ದಾರೆ. ಇಸ್ರೇಲ್ 11 ತಿಂಗಳು ಆಹಾರ ಪದಾರ್ಥಗಳ ಸಾಗಣೆಯನ್ನು ನಿರ್ಬಂಧಿಸಿದ್ದರಿಂದ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ತೀವ್ರ ಅಪೌಷ್ಟಿಕತೆಯ ಅಪಾಯ ಎದುರಿಸುತ್ತಿದ್ದಾರೆ.

ಆಹಾರ ಪದಾರ್ಥಗಳ ಲಭ್ಯತೆಯೇ ದೊಡ್ಡ ಸಮಸ್ಯೆಯಾಗಿದೆ. ಬೇಕರಿಗಳನ್ನು ಮುಚ್ಚಲಾಗಿದೆ. ಆಹಾರ ಧಾನ್ಯಗಳ ಬೆಲೆ ಶೇ 700ರಷ್ಟು ಹೆಚ್ಚಾಗಿದ್ದು, ಹಸಿವಿನ ವಿರಾಟ್ ಸ್ವರೂಪವು ಇಲ್ಲಿ ಕಂಡುಬರುತ್ತಿದೆ. ದಿನಕ್ಕೆ ಒಂದು ಹೊತ್ತು ಕೂಡ ಊಟ ಸಿಗದವರ ಸಂಖ್ಯೆ ದೊಡ್ಡದಿದೆ. ಹಸಿವು ತಾಳಲಾಗದೇ ಮಕ್ಕಳು ಆಕ್ರಂದನ ಮಾಡುವುದು, ಪೋಷಕರು ತಮ್ಮ ಮಕ್ಕಳಿಗಾಗಿ ಹಿಡಿ ಅನ್ನ ನೀಡುವಂತೆ ಅಧಿಕಾರಿಗಳನ್ನು ಬೇಡಿಕೊಳ್ಳುವುದು ಇಲ್ಲಿನ ಸಾಮಾನ್ಯ ದೃಶ್ಯಗಳಾಗಿವೆ.

ಕೆಲವು ಸ್ವಯಂ ಸೇವಾ ಸಂಸ್ಥೆಗಳು, ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಇಲ್ಲಿ ಉದ್ಭವಿಸಿರುವ ಮಾನವೀಯ ಬಿಕ್ಕಟ್ಟನ್ನು ಶಮನ ಮಾಡಲು ಒಂದಿಷ್ಟು ಪ್ರಯತ್ನ ನಡೆಸುತ್ತಿವೆ. ಅದಕ್ಕಾಗಿ ಹಲವು ದೇಶಗಳು ಧನಸಹಾಯ ಮಾಡುತ್ತಿವೆ. ಆದರೆ, ಇಲ್ಲಿನ ಪರಿಸ್ಥಿತಿಯ ತೀವ್ರತೆಗೆ ತಕ್ಕಂತೆ ಪರಿಹಾರ ಕಾರ್ಯಗಳು ನಡೆಯುತ್ತಿಲ್ಲ. ರಕ್ಷಣಾ ಕಾರ್ಯದಲ್ಲಿ, ಆರೋಗ್ಯ ಸೇವೆಗಳಲ್ಲಿ ತೊಡಗಿರುವ ಸಿಬ್ಬಂದಿಯೂ ಹಸಿದ ಹೊಟ್ಟೆಯಲ್ಲಿಯೇ ಕೆಲಸ ಮಾಡಬೇಕಾದ ಸ್ಥಿತಿ ಇದೆ. ಆಹಾರ ಪದಾರ್ಥ, ಪರಿಹಾರ ಸಾಮಗ್ರಿಯನ್ನು ಹೊತ್ತ ಟ್ರಕ್‌ಗಳು ಆಗಮಿಸುತ್ತಿದ್ದಂತೆಯೇ ಜನ ಅವುಗಳನ್ನು ಮುತ್ತಿಕೊಳ್ಳುವ, ನಿರಾಶ್ರಿತರಿಗೆ ಪೂರೈಸಲಾಗುವ ಆಹಾರಕ್ಕಾಗಿ ಪೈಪೋಟಿ ನಡೆಸುವ ಚಿತ್ರಗಳು, ವಿಡಿಯೊಗಳು ಅಲ್ಲಿನ ಪರಿಸ್ಥಿತಿಯ ತೀವ್ರತೆಯನ್ನು ಹೇಳುತ್ತಿವೆ.


ಎಲುಬಿನ ಹಂದರವಾಗಿರುವ ಮಕ್ಕಳು ಆಹಾರಕ್ಕಾಗಿ, ಜೀವ ಉಳಿಸುವಂಥ ಮಾನವೀಯ ನೆರವಿಗಾಗಿ ಆಸೆಯಿಂದ ಎದುರುನೋಡುತ್ತಿದ್ದಾರೆ. ಅವರ ದೈನ್ಯ, ನೋವು ತುಂಬಿದ ಕಣ್ಣುಗಳು ಗಾಜಾ ಪಟ್ಟಿಯ ಪರಿಸ್ಥಿತಿಗೆ, ಮನುಷ್ಯ ನಿರ್ಮಿತ ಬಿಕ್ಕಟ್ಟಿನ ತೀವ್ರತೆಗೆ, ದೇಶ–ದೇಶಗಳ ನಡುವಿನ ಯುದ್ಧ, ಅಸಹನೆ, ಆಕ್ರಮಣಗಳಿಂದ ಉಂಟಾಗುವ ಪರಿಣಾಮಗಳಿಗೆ ಸಂಕೇತದಂತಿವೆ.

ಆಧಾರ: ಇಂಟರ್‌ನ್ಯಾಷನಲ್ ರೆಸ್ಕ್ಯೂ ಕಮಿಟಿ, ಬಿಬಿಸಿ, ರಾಯಿಟರ್ಸ್, ವಿಶ್ವಸಂಸ್ಥೆಯ ವರದಿಗಳು, ದಿ ನ್ಯೂಯಾರ್ಕ್ ಟೈಮ್ಸ್



ಹಸಿವು ತಡೆಯಲಾಗುತ್ತಿಲ್ಲ ಊಟ ಕೊಡಿ... ಗಾಜಾ ಪಟ್ಟಿಯ ನಿರಾಶ್ರಿತರ ಶಿಬಿರವೊಂದರಲ್ಲಿ ಆಹಾರಕ್ಕಾಗಿ ಮಕ್ಕಳು ಪಾತ್ರೆಗಳನ್ನು ಒಡ್ಡಿದ ಕ್ಷಣ –ಎಎಫ್‌ಪಿ ಚಿತ್ರ

19 ಲಕ್ಷ ಯುದ್ಧದಿಂದಾಗಿ ನಿರಾಶ್ರಿತರಾದವರು	62 ಸಾವಿರ ಈವರೆಗೆ ಮೃತಪಟ್ಟ ಪ್ಯಾಲೆಸ್ಟೀನಿಯರು	18,500 ಮೃತಪಟ್ಟ ಮಕ್ಕಳ ಸಂಖ್ಯೆ	1.56 ಲಕ್ಷ ಗಾಯಗೊಂಡ ಪ್ಯಾಲೆಸ್ಟೀನಿಯನ್ನರು	20 ಸಾವಿರ ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು	6.5 ಲಕ್ಷ ಶಿಕ್ಷಣದಿಂದ ವಂಚಿತರಾದ ಮಕ್ಕಳು



ನೆರವು ತಡೆಯುತ್ತಿರುವ ಇಸ್ರೇಲ್

ಗಾಜಾ ಪಟ್ಟಿಯ ಶೇ 86ರಷ್ಟು ಭೂಭಾಗದ ಮೇಲೆ ನಿಯಂತ್ರಣ ಹೊಂದಿರುವ ಇಸ್ರೇಲ್, ಹಸಿವಿನಿಂದ ಬಳಲುತ್ತಿರುವ ನಿರಾಶ್ರಿತ ಪ್ಯಾಲೆಸ್ಟೀನಿಯನ್ನರಿಗೆ ಆಹಾರ ವಸ್ತುಗಳು ಹಾಗೂ ಇನ್ನಿತರ ಅಗತ್ಯ ಸಾಮಗ್ರಿಗಳನ್ನು ಪೂರೈಸುವುದಕ್ಕೆ ಅವಕಾಶ ನೀಡುತ್ತಿಲ್ಲ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘಟಕ ಆರೋಪಿಸಿದೆ. ಕಳೆದ ಕೆಲವು ವಾರಗಳಿಂದ ಗಾಜಾ ಪಟ್ಟಿಗೆ ಸ್ವಲ್ಪ ಪ್ರಮಾಣದಲ್ಲಿ ನೆರವು ತಲುಪುವುದಕ್ಕೆ ಮಾತ್ರ ಇಸ್ರೇಲ್ ಅವಕಾಶ ನೀಡಿದೆ. ಆದರೆ, ಅಲ್ಲಿ ಹೆಚ್ಚುತ್ತಿರುವ ಹಸಿವನ್ನು ತಡೆಯಲು ಇದು ಸಾಕಾಗುತ್ತಿಲ್ಲ ಎಂದು ಅದು ಹೇಳಿದೆ. ಯುದ್ಧ ಆರಂಭವಾದ, 2023ರ ಅಕ್ಟೋಬರ್ 7ಕ್ಕೂ ಮೊದಲು ಪ್ರತಿ ದಿನ 500 ಟ್ರಕ್‌ಗಳು ಗಾಜಾವನ್ನು ಪ್ರವೇಶಿಸುತ್ತಿದ್ದವು. ಅಂದರೆ ಪ್ರತಿ ತಿಂಗಳು 15 ಸಾವಿರದಷ್ಟು ಟ್ರಕ್‌ಗಳು ನೆರವಿನ ಸಾಮಗ್ರಿಗಳನ್ನು ಹೊತ್ತೊಯ್ಯುತ್ತಿದ್ದವು. ಯುದ್ಧದ ನಂತರ ಇದಕ್ಕೆ ಇಸ್ರೇಲ್ ತಡೆಯೊಡ್ಡಿತ್ತು. ಕಡಿಮೆ ಸಂಖ್ಯೆಯ ಟ್ರಕ್‌ಗಳಿಗಷ್ಟೇ ಅವಕಾಶ ನೀಡುತ್ತಿತ್ತು.

ಈಗ ಅಂತರರಾಷ್ಟ್ರೀಯ ಒತ್ತಡದ ಬಳಿಕ ಆಹಾರ ಸಾಮಗ್ರಿಗಳನ್ನು ಹೊತ್ತ ಟ್ರಕ್‌ಗಳಿಗೆ ಗಾಜಾದತ್ತ ತೆರಳಲು ಮತ್ತು ವಿಮಾನ, ಹೆಲಿಕಾಪ್ಟರ್‌ಗಳ ಮೂಲಕ ಅಗತ್ಯ ವಸ್ತುಗಳನ್ನು ನಿರಾಶ್ರಿತ ಶಿಬಿರಗಳ ವ್ಯಾಪ್ತಿಯಲ್ಲಿ ಹಾಕಲು ಇಸ್ರೇಲ್ ಅವಕಾಶ ನೀಡಿದೆ ಎಂದು ವರದಿಯಾಗಿದೆ.





ಅಮೆರಿಕದ ಮೌನಕ್ಕೆ ಅತೃಪ್ತಿ

ರಷ್ಯಾ ನಡೆಸುತ್ತಿರುವ ದಾಳಿಯಲ್ಲಿ ಉಕ್ರೇನ್ ಸೈನಿಕರು ಹಾಗೂ ಜನರು ಸಾಯುತ್ತಿರುವುದರ ಬಗ್ಗೆ ಮಾತನಾಡುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಗಾಜಾದಲ್ಲಿನ ಮಾನವೀಯ ಬಿಕ್ಕಟ್ಟಿನ ಬಗ್ಗೆ ಮೌನ ತಾಳಿದ್ದಾರೆ. ಬದಲಿಗೆ, ಅಮೆರಿಕ ಸರ್ಕಾರ ಇಸ್ರೇಲ್ ಅನ್ನು ಬೆಂಬಲಿಸುತ್ತಿರುವುದು ಪ್ಯಾಲೆಸ್ಟೀನ್‌ನ ಬೆಂಬಲಕ್ಕೆ ನಿಂತಿರುವ ರಾಷ್ಟ್ರಗಳು ಹಾಗೂ ಜನರ ಅಸಮಾಧಾನಕ್ಕೆ ಕಾರಣವಾಗಿದೆ.



ಗಾಜಾ ಪಟ್ಟಿಯ ನುಸೀರಾಟ್ ಪ್ರದೇಶದಲ್ಲಿ ವಿಮಾನದಿಂದ ಪ್ಯಾರಾಚೂಟ್ ಮೂಲಕ ಎಸೆದ ಸಾಮಗ್ರಿಗಳನ್ನು ಪಡೆದುಕೊಳ್ಳಲು ಭಾರಿ ಸಂಖ್ಯೆಯಲ್ಲಿ ಜನರು ಕಾದು ಕುಳಿತಿದ್ದರು. (ಒಳಚಿತ್ರ) ಗಾಜಾ ಪಟ್ಟಿಯ ಉತ್ತರ ಭಾಗದ ನಿರಾಶ್ರಿತರ ಶಿಬಿರದಲ್ಲಿ ಪಾತ್ರೆಯಲ್ಲಿ ಉಳಿದಿದ್ದ ಆಹಾರ ಪದಾರ್ಥವನ್ನು ಸಂಗ್ರಹಿಸಲು ಸಂತ್ರಸ್ತರು ಯತ್ನಿಸಿದರು

ನಂಬಿ ಕೆಡದವರ ಕತೆ

ನುಡಿ ಬೆಳಗು



ವಾಸುದೇವ ನಾಡಿಗ್


ಪ್ರಯಾಣದ ಉದ್ದಕ್ಕೂ ಬೆಳೆದು ನಿಂತ ಮಗ ಮತ್ತು ತಾಯಿಯ ಜಗಳ. ಬಹುಶಃ ತಾಯಿಯ ಒತ್ತಾಯಕ್ಕೆ ಆ ಹುಡುಗ ಬಸ್ ಹತ್ತಿದ್ದಾನೆ ಅನಿಸುತ್ತದೆ. 'ನನಗೆ ಕ್ರಿಕೆಟ್ ಮ್ಯಾಚ್ ಇತ್ತು, ಫ್ರೆಂಡ್‌ನ ಬರ್ತ್ ಡೇ ಇತ್ತು, ಸುಖಾ ಸುಮ್ಮನೆ ಒತ್ತಾಯ ಮಾಡಿ ಕರ್ಕೊಂಡು ಬಂದೆ' ಅಂತ ಮಗನ ವರಾತ. 'ಇಲ್ಲ ಮಗನೇ, ನೀನು ಮಗುವಾಗಿದ್ದಾಗ ಕರ್ಕೊಂಡು ಬಂದಿದ್ದೆ. ಈಗ ಪಿಯುಸಿ ಮುಗೀತಲ್ಲ, ಒಳ್ಳೆಯ ಮಾರ್ಕ್ಸ್ ತಗೊಂಡಿದ್ದಿ. ಶಾರದಾಂಬೆಯನ್ನು ನೀನು ನೋಡಲೇ ಬೇಕು. ಅದಕ್ಕೆ ಕರ್ಕೊಂಡು ಬಂದೆ' ಅಂತ ಅಮ್ಮನ ಉತ್ತರ. ಬಸ್ಸಿನ ಹೊರಗೆ ಕಾಣುವ ಯಾವ ಸುಂದರವಾದ ನಿಸರ್ಗದ ನೋಟವನ್ನೂ ಕಾಣದೇ ಮುಖ ಊದಿಸಿಕೊಂಡೇ ಮಗ ಧುಮ್ ಅಂತ ಮೊಬೈಲ್ ಹಿಡಿದುಕೊಂಡು ಕೂತಿದ್ದ.

ಒಂದು ರಾತ್ರಿ ಉಳಿದು ಒಂದು ಹಗಲಿನ ಪ್ರಯಾಣದ ಯೋಜನೆಯದು. ಅಷ್ಟಕ್ಕೇ ಮಗನ ರಂಪ ರಗಳೆ. ಸಂಜೆ ಸೊಬಗಿನ ಯಾವೊಂದು ದೃಶ್ಯವನ್ನೂ ಅವನು ನೋಡದ ಹಾಗೆ ಮೊಬೈಲ್ ಮೋಡಿ ಮಾಡಿತ್ತು. ತಾಯಿಯು ಶೃಂಗೇರಿಯ ಸಣ್ಣ ಪುಟ್ಟ ಸಂಗತಿಗಳನ್ನು ಹೇಳುತ್ತಿದ್ದರೂ ಅವನು ಕೇಳಿಸಿಕೊಳ್ಳುವ ವ್ಯವಧಾನ ತೋರಲಿಲ್ಲ.

ನಸುಕಿನಲ್ಲೇ ತುಂಗಾನದಿ ದಡದಲ್ಲಿ ಜನಸ್ತೋಮ. ಕೆಲವು ಮೀನುಗಳಿಗೆ ಬಂಗಾರದ ಮೂಗುತಿ ಚುಚ್ಚಲಾಗಿದೆ ಎಂಬ ಪ್ರತೀತಿಯಲ್ಲಿ ಅದನ್ನು ಕಾಣುವ ಕುತೂಹಲ ಜನರಿಗೆ. ಮೂಗುತಿ ಚುಚ್ಚಲು ಹೇಗೆ ಸಾಧ್ಯ? ನೀರಿನಿಂದ ಹೊರಗೆ ಎತ್ತಿಕೊಂಡು ಬಂದರೆ ಅವು ಸಾಯುವುದಿಲ್ಲವೇ? ಎಂಬ ತರ್ಕಕ್ಕೂ ಯೋಚಿಸದ ಅಗಾಧ ನಂಬಿಕೆಯೇ ಅಲ್ಲಿ ಹಾಸಿಕೊಂಡಂತಿತ್ತು. ಯಾವುದೇ ತರ್ಕ ವಿಜ್ಞಾನ ಏನೂ ಕೆಲಸ ಮಾಡಲಾರವು ಅಲ್ಲಿ. ಕೇವಲ ನಂಬಿಕೆ ಅಷ್ಟೇ. ಮೆಟ್ಟಿಲ ತುದಿಯಲಿ ಒಂದು ಶಿಲ್ಪ ಕಲೆ. ಕಪ್ಪೆಯ ತಲೆಯ ಮೇಲೆ ಹೆಡೆಯನ್ನು ಹರಡಿ ನೆರಳಾಗಿ ನಿಂತ ನಾಗರಹಾವು. ಮಳೆಗೋ ಬಿಸಿಲಿಗೋ ಗೊತ್ತಿಲ್ಲ; ಅಂತೂ ತನ್ನ ಆಹಾರಕ್ಕೆ ನುಂಗಬೇಕಾದ ಕಪ್ಪೆಯನ್ನು ನಾಗರಹಾವು ರಕ್ಷಿಸುತ್ತಿರುವ ವಿರೋಧಾಭಾಸದ ಚಿತ್ರ. ಅಲ್ಲೂ ಪ್ರಶ್ನೆ ಇಲ್ಲ. ಬದಲಿಗೆ ಸ್ಥಳದ ಮಹಿಮೆ ಮತ್ತು ದೈವಿಕ ನಂಬಿಕೆ.

ಒಂದು ನಂಬಿಕೆಯೇ ಬಾಳನ್ನು ಮುನ್ನಡೆಸುವ ಕ್ರಮವದು. ಅದು ಇತರರಿಗೆ ಹಾನಿ ಉಂಟು ಮಾಡದ, ತೊಂದರೆ ಕೊಡದ ತಣ್ಣನೆಯ ನಂಬಿಕೆ. ಕಪ್ಪೆಯನ್ನು ಕಾಯುವ ನಾಗರಹಾವು ಮತ್ತು ಮೂಗುತಿಯನ್ನು ತೊಡಿಸಿಕೊಂಡ ಮೀನುಗಳ ಚಿತ್ರ ಆ ತಾಯಿ ಮಗನಲ್ಲಿ ಮೂಡಿಸಿದ ಭಾವ ಏನೋ ಗೊತ್ತಿಲ್ಲ. ಆದರೆ ವಾದ–ವಿವಾದ ಜಗಳ ಹಟ ನಿರ್ಲಕ್ಷ್ಯ ಅಹಂ ಇತ್ಯಾದಿಗಳ ನಡುವೆ ಮುಗ್ಧತೆ ಇದೆ ನೋಡಿ... ಅದು ಬಾಳಿನ ಪ್ರಯಾಣವನ್ನು ಸುಗಮ ಮಾಡಬಲ್ಲದು. ಈ ಮುಗ್ಧತೆಯನ್ನು ದುರ್ಲಭವಾಗದ ಹಾಗೆ ಕಾಪಾಡಬೇಕಷ್ಟೇ. ❖

ಗುಂಡಣ್ಣ



ರಾಷ್ಟ್ರೀಯ

'ನೌಕರಿ ಕಾಯಂ ನಿರಾಕರಣೆ ಆರ್ಥಿಕ ಮಿತಿ 'ರಕ್ಷೆ' ಅಲ್ಲ'

ಪ್ರಜಾವಾಣಿ ವಾರ್ತೆ



ನವದೆಹಲಿ: ಹಲವು ದಶಕಗಳಿಂದ ಕರ್ತವ್ಯ ನಿರ್ವಹಿಸುತ್ತಾ ಬಂದಿರುವ ದಿನಗೂಲಿ ನೌಕರರ ಸೇವೆ ಕಾಯಂಗೊಳಿಸದಿರುವುದಕ್ಕೆ ಆರ್ಥಿಕ ಮಿತಿಯನ್ನು ಒಂದು 'ತಾಯತ ರಕ್ಷಾ ಕವಚ'ದಂತೆ ಬಳಕೆ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದೆ.

'ಸರ್ಕಾರವು (ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೇರಿ) ಸಾಂವಿಧಾನಿಕವಾದ ಉದ್ಯೋಗದಾತ. ಸಾರ್ವಜನಿಕ ವಿಚಾರಗಳಿಗೆ ಸಂಬಂಧಿಸಿ ಮೂಲಭೂತ ಕಾರ್ಯಗಳನ್ನು ನಿರ್ವಹಿಸುವ ದಿನಗೂಲಿಗಳಿಗೆ ತಕ್ಕ ವೇತನ ನಿರಾಕರಿಸುವ ಮೂಲಕ ಬಜೆಟ್‌ನಲ್ಲಿ ಸಮತೋಲನೆ ಕಾಪಾಡಿಕೊಳ್ಳುವ ಪ್ರಯತ್ನಗಳನ್ನು ಸರ್ಕಾರ ಮಾಡಬಾರದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಹಾಗೂ ಸಂದೀಪ್ ಮೆಹ್ತಾ ಅವರು ಇದ್ದ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

ತಮ್ಮ ಸೇವೆ ಕಾಯಂಗೊಳಿಸುವಂತೆ ಉತ್ತರ ಪ್ರದೇಶ ಉನ್ನತ ಶಿಕ್ಷಣ ಸೇವೆಗಳ ಆಯೋಗದಲ್ಲಿ ದೀರ್ಘಕಾಲ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರು ಸಲ್ಲಿಸಿದ್ದ ಮನವಿಯನ್ನು ಸರ್ಕಾರ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ನೌಕರರು ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿ ಆದೇಶಿಸಿತ್ತು.

ಈ ಆದೇಶ ಪ್ರಶ್ನಿಸಿ ದಿನಗೂಲಿ ನೌಕರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, ಅಲಹಾಬಾದ್ ಹೈಕೋರ್ಟ್ ಆದೇಶವನ್ನು ರದ್ದುಪಡಿಸಿತು. 2002ರ ಏಪ್ರಿಲ್ 24ರಿಂದ ಅನ್ವಯವಾಗುವಂತೆ ಅರ್ಜಿದಾರರ ಸೇವೆಯನ್ನು ಕಾಯಂಗೊಳಿಸಬೇಕು ಎಂದು ನ್ಯಾಯಪೀಠ ಆದೇಶಿಸಿದೆ.

ಮಸೂದೆಗಳಿಗೆ ಅಂಕಿತ: ರಾಷ್ಟ್ರಪತಿ ಪ್ರಶ್ನಿಸಿರುವುದರಲ್ಲಿ ತಪ್ಪೇನಿದೆ–'ಸುಪ್ರೀಂ'


ನವದೆಹಲಿ (ಪಿಟಿಐ): ರಾಜ್ಯಗಳ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಕಾಲಮಿತಿ ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸ್ಪಷ್ಟನೆ ಕೇಳಿರುವುದರಲ್ಲಿ ತಪ್ಪೇನಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಪ್ರಶ್ನಿಸಿತು.

ತಮಿಳುನಾಡು ಮತ್ತು ಕೇರಳ ಸರ್ಕಾರಗಳ ಪರ ವಕೀಲರು ರಾಷ್ಟ್ರಪತಿಯವರು ಸ್ಪಷ್ಟನೆ ಕೋರಿರುವುದನ್ನು ವಿರೋಧಿಸಿದ್ದು, ಅದು ವಿಚಾರಣೆಗೆ ಯೋಗ್ಯವೇ ಎಂದು ಪ್ರಶ್ನಿಸಿದರು. ಬಳಿಕ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠವು, 'ರಾಷ್ಟ್ರಪತಿ ಸ್ಪಷ್ಟನೆ ಕೇಳಿರುವುದರಲ್ಲಿ ತಪ್ಪೇನಿದೆ? ಈ ವಿಚಾರದ ಪ್ರತಿವಾದವನ್ನು ನಿಜಕ್ಕೂ ನೀವು ಗಂಭೀರವಾಗಿ ಪರಿಗಣಿಸಿದ್ದೀರಾ' ಎಂದು ಕೇಳಿತು.

ಸಂವಿಧಾನದ 143(1)ನೇ ವಿಧಿಯಡಿ ದತ್ತವಾದ ಅಧಿಕಾರವನ್ನು ಬಳಸಿಕೊಂಡು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸುಪ್ರೀಂ ಕೋರ್ಟ್‌ನಿಂದ ಸ್ಪಷ್ಟನೆ ಕೇಳಿದ್ದಾರೆ.

ಕಾಲಮಿತಿಯೊಳಗೆ ಅಂಕಿತ ಹಾಕಬೇಕು ಎಂದು ಹೇಳುವುದರಿಂದ ಸರ್ಕಾರದ ಒಂದು ಅಂಗವೇ ಹೆಚ್ಚಿನ ಅಧಿಕಾರ ಹೊಂದಿದಂತಾಗಲಿದೆ. ಇದರಿಂದ 'ಸಾಂವಿಧಾನಿಕ ವ್ಯವಸ್ಥೆಗೆ ಧಕ್ಕೆ' ಉಂಟಾಗಲಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅಭಿಪ್ರಾಯ ದಾಖಲಿಸಿದೆ. 'ಈ ವಿಷಯದಲ್ಲಿ ನಮ್ಮ ವ್ಯಾಪ್ತಿಯು ಸಲಹೆ ನೀಡುವುದಕ್ಕಷ್ಟೆ ಸೀಮಿತವಾಗಿದೆ' ಎಂದೂ ಪೀಠವು ತಿಳಿಸಿತು.

ಕೇರಳ: ಅಮೀಬಾ ಸೋಂಕು ಹೆಚ್ಚಳ



ತಿರುವನಂತಪುರ: ತೀರಾ ಅಪರೂಪ ಹಾಗೂ ಪ್ರಾಣಕ್ಕೆ ಸಂಚಕಾರ ತರುವ ಸೋಂಕು ಎಂದು ಪರಿಗಣಿಸಲಾಗಿರುವ 'ಮಿದುಳು ತಿನ್ನುವ ಅಮೀಬಾ' (ಅಮೀಬಿಕ್ ಮೆನಿಂಗೊಎನ್ಸೆಫಲೈಟಿಸ್) ಸೋಂಕಿನ ಪ್ರಕರಣಗಳು ಕೇರಳದಲ್ಲಿ ಹೆಚ್ಚಳ ಕಂಡಿವೆ.

ವರ್ಷಕ್ಕೆ ಒಂದೋ ಎರಡೋ ಪ್ರಕರಣಗಳು ವರದಿಯಾಗುತ್ತಿದ್ದ ರಾಜ್ಯದಲ್ಲಿ, ಪ್ರಸಕ್ತ ವರ್ಷ ಇದುವರೆಗೆ 8 ಮಂದಿಗೆ ಸೋಂಕು ದೃಢಪಟ್ಟಿದೆ. ಸೋಂಕಿನಿಂದಾಗಿ ಇಬ್ಬರು ಮೃತಪಟ್ಟಿದ್ದಾರೆ.

ಸೋಂಕಿನ ಪ್ರಕರಣಗಳ ಹೆಚ್ಚಳಕ್ಕೆ ಮೂಲ ಕಾರಣ ಏನು ಎಂಬುದನ್ನು ಪತ್ತೆಹಚ್ಚಲು ಸಾಧ್ಯವಾಗಿಲ್ಲ. ಆದಾಗ್ಯೂ, ಅವೈಜ್ಞಾನಿಕ ಕಸ ವಿಲೇವಾರಿಯಿಂದಾಗಿ ಜಲ ಮೂಲಗಳು ಕಲುಷಿತಗೊಳ್ಳುತ್ತಿರುವುದು, ಹವಾಮಾನ ಬದಲಾವಣೆ, ವಲಸೆ ಕಾರ್ಮಿಕರ ಹೆಚ್ಚಳ ಹಾಗೂ ರೋಗ ಪತ್ತೆ ಸೌಲಭ್ಯಗಳ ಉನ್ನತೀಕರಣವನ್ನು ಪ್ರಕರಣಗಳ ಹೆಚ್ಚಳಕ್ಕೆ ಕಾರಣ ಎಂದು ಹೇಳಲಾಗುತ್ತಿದೆ.


ಮೂಲ ಕಾರಣ ಏನು ಎಂಬುದನ್ನು ಪತ್ತೆಹಚ್ಚಲು ತುರ್ತಾಗಿ ಸಂಶೋಧನೆ ಕೈಗೊಳ್ಳಬೇಕೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಕಳೆದ ವಾರ ಇದೇ ಸೋಂಕಿನಿಂದ 9 ವರ್ಷದ ಬಾಲಕಿ ಮೃತಪಟ್ಟಿದ್ದು, ಆಕೆಯ ಇಬ್ಬರು ಸಹೋದರರಿಗೂ ಸೋಂಕು ಹರಡಿರುವ ಗುಣಲಕ್ಷಣಗಳು ವರದಿಯಾಗಿವೆ.

ಪದಬಂಧ 6140

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಲೆಯನ್ನು ಕೆಳಕ್ಕೆ ಬಾಗಿಸಿ ನಡೆಯುವವನು (4)
3.ಮೂಲಿಕೆಗಳನ್ನು ಬಟ್ಟೆಯಿಳಿಸಿ ತೆಗೆದ ರಸ (3)
5.ಗಣಿಯೊಳಗಿರುವ ಬಸುರಿ (3)
7.ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ (3)
8.ಎಲ್ಲರೂ ಒಟ್ಟಾಗಿ ಹಾಡುವಿಕೆ (5)
11.ಗದ್ದಲ ಇಲ್ಲೇ ಕೇಳುತ್ತಿದೆ (3)
12.ಕೋಟೆಯ ಮೇಲುಭಾಗ (3)
15.ಪ್ರತ್ಯಕ್ಷವಲ್ಲದ್ದು ಪಕ್ಷದೊಳಗಿದೆಯಲ್ಲಾ? (3)
16.ಅಕ್ಕಪಕ್ಕ ಎಂದು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಎಣ್ಣೆ ಮಜ್ಜನಕ್ಕೇನೂ ಭಂಗವಿಲ್ಲ ಬಿಡಿ! (3)
2.ಉತ್ತರದವರ ಸತ್ಯ! (2)
3.ಕರದಲ್ಲಿ ಹಿಡಿದಿರುವ ಕಚ್ಚಾಪ್ರತಿ (3)
4.ನರಕಾಧಿಪತಿ ನೀಡಿದ ಘೋರದಂಡನೆ (4)
6.ಸರಪಣಿಯಲ್ಲಿನ ಪಂಕ್ತಿಯೇ ಉಲ್ಟಾ ಆಗಿಬಿಟ್ಟಿದೆ (3)
7.ಕೆಲಸಕ್ಕೆ ಬಾರದ ಮಾತಿದು (5)
9.ಮುಸಲ್ಮಾನರ ದೊರೆ (3)
10.ಒಪ್ಪವಾಗಿ ಬಳಿಯುವುದು (4)
11.ಬೆಳಕಿನ ಕಿಂಡಿಯಿದು (3)
13.ರೀತಿಯೊಡನೆ ಬಂದಿರುವ ಸಂಪ್ರದಾಯ! (3)
14.ಕಷ್ಟಕ್ಕೆ ಸಿಕ್ಕಿದವನು ತಿರುಗಿದ್ದಾನಲ್ಲಾ! (2)



6139ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶಾನುಭೋಗ 2.ಪಾರುಪತ್ಯ
4.ಮಾನವೀಯ 6.ಸಂಪದ 7.ಕಸ
9.ನಿಷ್ಣಾತ 11.ರಸ
13.ವಿಲೋಮ 14.ಕನ್ನಡಕ
16.ಮಕಮಲ್ಲು 17.ಅವಗುಣ

ಮೇಲಿಂದ ಕೆಳಕ್ಕೆ:
1.ಶಾಖಮಾಪಕ 2.ಪಾದ್ರಿ
3.ಪರೋಪಕಾರ 5.ಯವನಿ
8.ಸಮಾಲೋಚಕ 10.ತವಕ
12.ಸಮೀಕರಣ 15.ಜೊಲ್ಲು

ಸುಡೊಕು 6524

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				5		7		2
	9		6		7		8	1
		7		3		6		9
	6			1		8		7
7		9	5		3		1	
	8			9		3		5
	7		3		1			
5		6		2			7	
	3		9		5			8

6523 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

20 ಆಗಸ್ಟ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ದ್ವಾದಶಿ ಗಂ. 13-59 **ನಕ್ಷತ್ರ:** ಪುನರ್ವಸು ಗಂ. 24-27 **ಯೋಗ:** ಸಿದ್ಧಿ (ಆಸ್ರಿಕ್) ಗಂ. 18-14 **ಕರಣ:** ತೈತಿಲ ಗಂ. 13-59 ಸಿಂಹ ಮಾಸದ 03 ನೇ ದಿನ. **ಮಳೆ ನಕ್ಷತ್ರ :** ಮಘಾ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 01-30, **ಸೂರ್ಯೋದಯ :** 06-22 **ಸೂರ್ಯಾಸ್ತ :** 06-46, **ಮುಸ್ಲಿಂ ದಿನಾಂಕ :** 25 ಸಫರ್ ,**ಅದೃಷ್ಟ ಸಂಖ್ಯೆ :** 2, 8

ಮೇಷ: ಜವಾಬ್ದಾರಿಯ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ ಯಶಸ್ವಿಯಾಗುವಿರಿ. ಹಿಂದೆ ಮಾಡಿದ ಬಂಗಾರದ ಮೇಲಿನ ಹೂಡಿಕೆ ದುಪ್ಪಟ್ಟಾಗಿರುವುದು ಹೆಚ್ಚಿನ ಸಂತೋಷವನ್ನು ತಂದುಕೊಡುವುದು.

ವೃಷಭ: ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯ ಹಸ್ತ ದೊರಕಲಿದೆ. ಸ್ನೇಹಿತರೊಂದಿಗೆ ಪ್ರವಾಸ ಮಾಡಬೇಕೆನಿಸಿದ್ದರೂ ಮುಂದೂಡುವುದು ಉತ್ತಮ. ನವವಿವಾಹಿತರಿಗೆ ಸಂತಾನ ಭಾಗ್ಯ.

ಮಿಥುನ: ಎದುರು ಬರುವ ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಪಡೆದುಕೊಳ್ಳಿ. ಗೃಹ ನಿರ್ಮಾಣ ಮತ್ತು ಸ್ವತ್ತು ಸಂಪಾದನೆಯಂಥ ಕಾರ್ಯಗಳ ಸಂಭವವಿದೆ.

ಕರ್ಕಾಟಕ: ವೃತ್ತಿಯಲ್ಲಿ ಹೆಚ್ಚಿನ ಬದಲಾವಣೆ ಕಂಡುಬರುವುದು ನಿಮಗೆ ಆಶ್ಚರ್ಯಕರವಾಗಲಿದೆ. ಭೂ ಮತ್ತು ವಾಹನಗಳಿಂದ ಅಧಿಕ ಲಾಭವಿದೆ. ಕುಟುಂಬದಲ್ಲಿ ಸೌಖ್ಯವಿದ್ದು ಮನೋರಂಜನೆ ಪಡೆಯುವಿರಿ.

ಸಿಂಹ: ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಬೇಕಾಗುವುದು. ತಂದೆ ತಾಯಿ ಅಥವಾ ಹಿರಿಯರ ಆರೋಗ್ಯ ಉತ್ತಮವಾಗಿರಲಿದೆ. ಕೆಲಸದ ಮುಕ್ತಾಯದ ಸಮಯದಲ್ಲಿ ಬಹಳ ಆಯಾಸವಾಗಬಹುದು.

ಕನ್ಯಾ: ನೆರೆ-ಹೊರೆಯವರೊಂದಿಗಿನ ಸಂಬಂಧ ಉತ್ತಮಗೊಳ್ಳುವುದು. ತಾಳ್ಮೆ ಮೂಲ ಮಂತ್ರವಾಗಲಿದೆ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆ ಕಾಪಾಡಿಕೊಳ್ಳಿರಿ. ಪ್ರೀತಿ ಪಾತ್ರರೊಡನೆ ಆತ್ಮೀಯ ಒಡನಾಟ ಇಟ್ಟುಕೊಳ್ಳಿ.

ತುಲಾ: ಯೋಜನೆಯನ್ನು ಪೂರ್ಣಗೊಳಿಸುವ ವಿಚಾರವಾಗಿ ಗಡಿಬಿಡಿಯ ವಾತಾವರಣ ಇರಲಿದೆ. ಎಲ್ಲಾ ಕೆಲಸಗಳೂ ತ್ವರಿತ ಗತಿಯಲ್ಲಿ ಸಾಗುವುವು. ದುರ್ಗಾಪರಮೇಶ್ವರಿಯ ಆರಾಧನೆ ಕಷ್ಟವನ್ನು ದೂರ ಮಾಡುವುದು .

ವೃಶ್ಚಿಕ: ಜನಸಂಪರ್ಕದಲ್ಲಿರುವ ರಾಜಕಾರಣಿಗಳಿಗೆ ಬಹಳ ಕೆಲಸದ ಒತ್ತಡ ಇರುವುದು. ಹೆದರಬೇಡಿ ಅದೃಷ್ಟ ನಿಮ್ಮ ಪಾಲಿಗೇ ಇದೆ. ಜೀವನೋಪಾಯಕ್ಕೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವುದು ಅನಿವಾರ್ಯವಾಗುವುದು.

ಧನು: ಯೋಗ್ಯ ವಯಸ್ಕರರಿಗೆ ವಿವಾಹ ಭಾಗ್ಯ ಒದಗಿ ಬರುವುದು. ಶೀತ ಬಾಧೆಯನ್ನು ಹೋಗಲಾಡಿಸಿಕೊಳ್ಳುವ ವಿಚಾರವಾಗಿ ಆಯುರ್ವೇದದ ಮೊರೆ ಹೋಗಿ. ವೃತ್ತಿ ಜೀವನ , ದಿನಚರಿಯು ಎಂದಿನಂತೆ ವ್ಯವಸ್ಥಿತವಾಗಿರುವುದು.

ಮಕರ: ನೆನೆಗುದಿಗೆ ಬಿದ್ದಿದ್ದ ಕೆಲಸಗಳು ದೇವತಾನುಗ್ರಹದಿಂದ ಆರಂಭವಾಯಿತೆಂದು ಸಂತೋಷಪಡುವಿರಿ. ಸಿನಿಮಾ ನಟ–ನಟಿಯರಿಗೆ ಶುಭ ಸುದ್ದಿ ಸಿಗುವುದು. ಮಕ್ಕಳ ಅನಾರೋಗ್ಯ ತಲೆನೋವಿಗೆ ಕಾರಣವಾಗುತ್ತದೆ.

ಕುಂಭ: ಬದುಕಿನಲ್ಲಿ ಮಹತ್ವದ ದಿನವೆನಿಸಲಿದೆ. ಬಂಧುವೊಬ್ಬರ ಸಹಾಯವನ್ನು ನಯವಾಗಿ ನಿರಾಕರಿಸುವಿರಿ. ಮುಂದಿನ ಕಾರ್ಯ ಯೋಜನೆಗಳಿಗೆ ಸ್ಪಷ್ಟ ರೂಪ ಕೊಡುವಿರಿ. ತಲೆ ಎತ್ತಿ ನಿಲ್ಲುವಂತಾಗುತ್ತದೆ.

ಮೀನ: ವಿನ್ಯಾಸಕಾರ ಸಲಹೆಗಾರರಾಗಿ ಕಟ್ಟಡ ನಿರ್ಮಾಣ ಸಂಸ್ಥೆಯೊಂದಕ್ಕೆ ನೇಮಕಗೊಳ್ಳುವ ಯೋಗವಿದೆ. ಆದಾಯದಲ್ಲಿ ಹೆಚ್ಚಳ. ಆತ್ಮೀಯರಿಗೆ ಸಾಂತ್ವನ ಹೇಳಬೇಕಾದ ಸಂದರ್ಭ ಬರಲಿದೆ. ಇಷ್ಟಾರ್ಥಗಳು ಸಿದ್ಧಿಯಾಗುವುದು.

ವಿಧಾನ ಪರಿಷತ್

ಪ್ರಶ್ನೋತ್ತರ

ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯವನ್ನು ಬೇರೆ ವಿಶ್ವವಿದ್ಯಾಲಯಗಳ ಜತೆ ವಿಲೀನ ಮಾಡುವ ಅಥವಾ ಮುಚ್ಚುವಂತಹ ಯಾವುದೇ ಪ್ರಸ್ತಾವಗಳು ರಾಜ್ಯ ಸರ್ಕಾರದ ಮುಂದೆ ಇಲ್ಲ. ಯಾವುದೇ ಕಾರಣಕ್ಕೂ ಆ ವಿಶ್ವವಿದ್ಯಾಲಯವನ್ನು ಮುಚ್ಚುವುದಿಲ್ಲ. ಆ ಭಾಗದ ಶಾಸಕರಿಗೆ ಯಾರೋ ತಪ್ಪು ಮಾಹಿತಿ ನೀಡಿದ್ದು, ಈ ಬಗ್ಗೆ ಅವರಿಗೆ ತಿಳಿವಳಿಕೆ ಹೇಳಿ.

ಎನ್.ಚಲುವರಾಯಸ್ವಾಮಿ, ಕೃಷಿಸಚಿವ (ಪ್ರಶ್ನೆ: ಹಣಮಂತ ನಿರಾಣಿ, ಬಿಜೆಪಿ)

ಕಲಬುರಗಿ ಜಿಲ್ಲೆಯಲ್ಲಿ ಜವಳಿ ಪಾರ್ಕ್ ಸ್ಥಾಪನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲುದಾರಿಕೆಯ ಯೋಜನೆಯಾಗಿದೆ. ಕೇಂದ್ರವು ಅನುದಾನ ಬಿಡುಗಡೆ ಮಾಡಿದಂತೆ, ರಾಜ್ಯವೂ ಅನುದಾನ ಒದಗಿಸಿಕೊಂಡು ಕಾಮಗಾರಿ ನಡೆಸಲಿದೆ. ಈಗಾಗಲೇ ಒಪ್ಪಂದ ಏರ್ಪಟ್ಟಿದೆ. ಜವಳಿ ಪಾರ್ಕ್ ಕಾರ್ಯಾರಂಭ ಮಾಡಲು ಕನಿಷ್ಠ 5ರಿಂದ 10 ವರ್ಷವಾದರೂ ಬೇಕು.

ಶಿವಾನಂದ ಪಾಟೀಲ, ಜವಳಿ ಸಚಿವ (ಪ್ರಶ್ನೆ: ಜಗದೇವ ಗುತ್ತೇದಾರ್, ಕಾಂಗ್ರೆಸ್)

ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಗೆ ಸಹಾಯಕ ನಿರ್ದೇಶಕರನ್ನು ನೇಮಕ ಮಾಡಲು, ಸ್ನಾತಕ ಅಥವಾ ಸ್ನಾತಕೋತ್ತರ ಪದವಿ ಪಡೆದ 40 ಸಿಬ್ಬಂದಿಯ ಕೊರತೆ ಇದೆ. ಅದಕ್ಕಿಂತ ಕಡಿಮೆ ವಿದ್ಯಾರ್ಹತೆಯ ಅಧಿಕಾರಿಗಳನ್ನು ನಿಯೋಜನೆ ಮಾಡಿ, ಅಗತ್ಯ ಪದವಿ ಪಡೆಯಲು 2 ವರ್ಷ ರಜೆ ನೀಡುವ ವ್ಯವಸ್ಥೆ ಮಾಡಲಾಗಿದೆ.

ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ (ಪ್ರಶ್ನೆ: ಟಿ.ಎ.ಶರವಣ, ಜೆಡಿಎಸ್)

ವಿಧಾನಸಭೆ

ಪಿಎಸ್‌ಐ 402 ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಇದೇ ಆಗಸ್ಟ್ 2ರಂದು ಪ್ರಕಟಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸಿಂಧುತ್ವ, ವೈದ್ಯಕೀಯ ಪ್ರಮಾಣಪತ್ರ, ದಾಖಲಾತಿಗಳ ಪರಿಶೀಲನೆ ನಡೆಯುತ್ತಿದೆ. 15-20 ದಿನಗಳಲ್ಲಿ ನೇಮಕಾತಿ ಆದೇಶ ನೀಡಲಾಗುವುದು.

ಜಿ. ಪರಮೇಶ್ವರ, ಗೃಹ ಸಚಿವ (ಪ್ರಶ್ನೆ: ಬಿ.ವೈ. ವಿಜಯೇಂದ್ರ, ಬಿಜೆಪಿ)

ಮಹದಾಯಿ, ಕಳಸಾ ಬಂಡೂರಿ ಯೋಜನೆಯ ಕಾಮಗಾರಿ ಆರಂಭಿಸಲು ಸರ್ಕಾರ ಬದ್ಧವಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ದಾಖಲಿಸಿರುವ ಕೇಸು ವಾಪಸ್ ಪಡೆದು ನಮ್ಮ ಜಾಗದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು. ಈ ವಿಚಾರದಲ್ಲಿ ಎಲ್ಲರೂ ಒಗ್ಗಟ್ಟು ಪ್ರದರ್ಶಿಸಬೇಕು.

ಡಿ.ಕೆ. ಶಿವಕುಮಾರ್, ಜಲಸಂಪನ್ಮೂಲ ಸಚಿವ (ಪ್ರಶ್ನೆ: ಎನ್.ಎಚ್. ಕೋನರಡ್ಡಿ, ಕಾಂಗ್ರೆಸ್)

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಬೆಣ್ಣಿಹಳ್ಳ ಮತ್ತು ಮಾಸ್ತಿ ಹಳ್ಳಗಳ ಹೂಳು ತೆಗೆಯುವ ಕಾಮಗಾರಿ ಕೈಗೆತ್ತಿಕೊಳ್ಳಲು ₹83.21 ಕೋಟಿ ಮೊತ್ತದ ಪ್ರತ್ಯೇಕ ವಿಸ್ತೃತ ಯೋಜನಾ ವರದಿಯು ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿದೆ. ಈ ಹಳ್ಳಗಳ ಅಗಲೀಕರಣ ಮತ್ತು ಹೂಳು ತೆಗೆದು ಪ್ರವಾಹ ನಿಯಂತ್ರಿಸಲು ₹ 1,610 ಕೋಟಿ ಮೊತ್ತದ ಡಿಪಿಆರ್ ತಯಾರಿಸಿ ಕೇಂದ್ರ ಸರ್ಕಾರದಿಂದ ಧನಸಹಾಯ ಕೋರಿ ಫೆ. 20ರಂದೇ ಕೇಂದ್ರ ಜಲ ಆಯೋಗಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಈ ವಿಚಾರದಲ್ಲಿಯೂ ಎಲ್ಲರೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಿದೆ.

ಡಿ.ಕೆ. ಶಿವಕುಮಾರ್, ಜಲಸಂಪನ್ಮೂಲ ಸಚಿವ (ಪ್ರಶ್ನೆ: ಎಂ.ಆರ್. ಪಾಟೀಲ, ಬಿಜೆಪಿ)

ಮಾತು ಗಮ್ಮತ್ತು

‘ಎಂಟೈರ್ ಪೊಲಿಟಿಕಲ್ ಸೈನ್ಸ್ ಅಲ್ಲ’

‘ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ’ ಮಸೂದೆಯ ಕುರಿತು ವಿಧಾನಸಭೆಯಲ್ಲಿ ಚರ್ಚೆ ನಡೆಯುವಾಗ ವಿರೋಧ ಪಕ್ಷಗಳ ಸದಸ್ಯರು, ಬೆಂಗಳೂರು ವಿಭಜನೆಯು ಸಂವಿಧಾನದ ಆಶಯಗಳಿಗೆ ಪೂರಕವಾಗಿಲ್ಲ. ಅವರ ನಾಯಕ ರಾಜೀವ್ ಗಾಂಧಿ ತಂದ ಸಂವಿಧಾನದ 73, 74ನೇ ತಿದ್ದುಪಡಿಗೆ ವಿರುದ್ಧವಾಗಿದೆ ಎಂದು ಟೀಕಿಸಿದರು.

ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ಜಿಲ್ಲಾ ಪಂಚಾಯಿತಿ ಸದಸ್ಯನಾಗಿ ನಾನು ರಾಜಕೀಯ ಆರಂಭಿಸಿದೆ. ಸ್ಥಳೀಯ ಸಂಸ್ಥೆಗಳ ಬಗ್ಗೆ ವಿಶೇಷ ಆಸಕ್ತಿ ಇಟ್ಟುಕೊಂಡಿದ್ದೇನೆ. 45ನೇ ವಯಸ್ಸಿನಲ್ಲಿ ರಾಜ್ಯಶಾಸ್ತ್ರದಲ್ಲಿ ಎಂ.ಎ ವ್ಯಾಸಂಗ ಮಾಡಿ, ಅತಿ ಹೆಚ್ಚು ಅಂಕ ಪಡೆದಿದ್ದೆ. ರಾಜೀವ್ ಅವರ ಆಶಯಗಳಿಗೆ ಅನುಗುಣವಾಗಿಯೇ ಬಿಬಿಎಂಪಿ ಅಧಿಕಾರ ವಿಕೇಂದ್ರೀಕರಣ ಮಾಡಲಾಗಿದೆ’ ಎಂದರು.

ಆಗ ಮಧ್ಯ ಪ್ರವೇಶಿಸಿದ ಬಿಜೆಪಿಯ ಎಸ್.ಸುರೇಶ್‌ಕುಮಾರ್, ರಾಜ್ಯಶಾಸ್ತ್ರದಲ್ಲಿ ಎಷ್ಟು ಅಂಕ ಪಡೆದಿದ್ದೀರಿ ಎಂಬುದು ಗೊತ್ತಿಲ್ಲ. ಆದರೆ, ಅನ್ವಯಿಕ ರಾಜ್ಯಶಾಸ್ತ್ರದಲ್ಲಿ 100ಕ್ಕೆ 200 ಅಂಕ ಪಡೆದಿದ್ದೀರಿ ಎಂದು ಕಾಲೆಳೆದರು. ಅದಕ್ಕೆ ಶಿವಕುಮಾರ್, ‘ಹೌದು, ನಾನು ಓದಿದ್ದು ಪೊಲಿಟಿಕಲ್ ಸೈನ್ಸ್ ಆದರೆ, ಎಂಟೈರ್ ಪೊಲಿಟಿಕಲ್ ಸೈನ್ಸ್’ ಅಲ್ಲ ಎಂದು ಛೇಡಿಸಿದರು.

ನಾವು ‘ನಾನ್ ಅಡ್ಜೆಸ್ಟ್‌ಮೆಂಟ್ ವಿರೋಧ ಪಕ್ಷ’

‘ನಾವು ಮೂರು ಮಂದಿ ನಾನ್ ಅಡ್ಜೆಸ್ಟ್‌ಮೆಂಟ್ ವಿರೋಧ ಪಕ್ಷದವರು. ನಮಗೆ ಮುಂದೆ ಕುಳಿತುಕೊಳ್ಳಲು ಅವಕಾಶ ಕೊಡಿ’ ಎಂದು ಬಿಜೆಪಿಯಿಂದ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬೇಡಿಕೆ ಇಟ್ಟರು.

ವಿಧಾನಸಭೆಯಲ್ಲಿ ಸದನದಲ್ಲಿ ಸೀಟು ಹಂಚಿಕೆ ವಿಚಾರವಾಗಿ ಸಭಾಧ್ಯಕ್ಷ ಯು.ಟಿ. ಖಾದರ್ ಬಳಿ ಈ ಬೇಡಿಕೆ ಇಟ್ಟ ಯತ್ನಾಳ, ‘ನಾನು, ಶಿವರಾಮ್ ಹೆಬ್ಬಾರ್, ಎಸ್.ಟಿ. ಸೋಮಶೇಖರ್ ಹಿರಿಯ ಶಾಸಕರು. ನಾನು ಆರು ಬಾರಿ, ಸೋಮಶೇಖರ್ ನಾಲ್ಕು, ಹೆಬ್ಬಾರ್ ನಾಲ್ಕು ಬಾರಿ ಆಯ್ಕೆಯಾಗಿದ್ದೇವೆ’ ಎಂದರು.

‘ಸದನದಲ್ಲಿ ನನಗೆ 224 ಸೀಟ್ ನಂಬರ್ ನೀಡಿದ್ದಾರೆ. ಸೋಮಶೇಖರ್ ಮತ್ತು ಹೆಬ್ಬಾರ್ ಅವರಿಗೆ 225, 226ನೇ ನಂಬರ್ ಸೀಟು ನೀಡಿದ್ದಾರೆ. ಆದರೆ, ಸದಸ್ಯರ ಸಂಖ್ಯೆ ಇರೋದೆ 224. ಹೀಗಿರುವಾಗ 225, 226 ಸೀಟು ಬೋಗಸ್ ಆಯ್ತಲ್ಲವೇ’ ಎಂದೂ ಪ್ರಶ್ನಿಸಿದರು.

‘ಜನಾರ್ದನ ರೆಡ್ಡಿ ಅವರು ತಮ್ಮ ಪಕ್ಷವನ್ನು ಬಿಜೆಪಿಯಲ್ಲಿ ವಿಲೀನ ಮಾಡಿದ್ದರೂ ಅವರಿಗೆ ಪ್ರತ್ಯೇಕ ಸ್ಥಾನ ಎಂದು ಕಾರ್ಯದರ್ಶಿ ಹೇಳುತ್ತಾರೆ. ನೀವು ನಮಗೆ ಮುಂದಿನ ಆಸನ ಕೊಡಿ’ ಎಂದೂ ಮಾತು ಸೇರಿಸಿದರು.

ಪ್ರತಿಕ್ರಿಯಿಸಿದ ಸಭಾಧ್ಯಕ್ಷರು, ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಹೇಳಿದರು.

‘ಸಕ್ಕರೆಗಿಂತ ಅಪಾಯಕಾರಿ ಸಚಿವ’

ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು ಪ್ರಶ್ನೋತ್ತರ ವೇಳೆಯಲ್ಲಿ ಸಕ್ಕರೆ ಕಾರ್ಖಾನೆಗಳ ಸ್ಥಿತಿಗತಿ ಬಗ್ಗೆ ಪ್ರಶ್ನಿಸಿ, ‘ಕಬ್ಬು ಸಚಿವರು ಉತ್ತರಿಸಬೇಕು’ ಎಂದು ಸಚಿವ ಶಿವಾನಂದ ಪಾಟೀಲ ಅವರತ್ತ ನೋಡಿದರು. ಆಗ ಸಭಾಪತಿ ಬಸವರಾಜ ಹೊರಟ್ಟಿ, ‘ನೀವು ಅವರನ್ನು ಕಬ್ಬು ಸಚಿವರು ಎಂದು ಕರೆದರೋ ಅಥವಾ ಕೊಬ್ಬು ಸಚಿವರು ಎಂದು ಕರೆದರೋ’ ಎಂದು ಛೇಡಿಸಿದರು.

ಆಗ ರವಿಕುಮಾರ್, ‘ಅವರು ಬಹಳ ಒಳ್ಳೆಯವರು. ಅವರು ಸಕ್ಕರೆಯಂತಹ ಸಚಿವರು. ಸಕ್ಕರೆಗಿಂತಲೂ ಸಿಹಿಯಾದ ಸಚಿವರು’ ಎಂದರು. ಸಿ.ಟಿ.ರವಿ ಅವರು ಎದ್ದುನಿಂತು, ‘ಸಕ್ಕರೆಗಿಂತಲೂ ಸಿಹಿಯಾದವರು ಎಂದರೆ ಡೇಂಜರ್ ಎಂದರ್ಥ. ಅವರು ಸಕ್ಕರೆಗಿಂತಲೂ ಅಪಾಯಕಾರಿ ಸಚಿವರು’ ಎಂದು ಕಾಲೆಳೆದರು.

ಬಾಗಲಕೋಟೆ ಸಕ್ಕರೆ ಕಾರ್ಖಾನೆಯ ಗುತ್ತಿಗೆ ಬಗ್ಗೆ ರವಿಕುಮಾರ್ ಅವರು ಎತ್ತಿದ ತಕರಾರಿಗೆ ಉತ್ತರಿಸಿದ ಸಚಿವರು, ‘ನಿಮ್ಮ ಸರ್ಕಾರವು ಆ ಕಾರ್ಖಾನೆಯನ್ನು 40 ವರ್ಷಗಳಿಗೆ ₹320 ಕೋಟಿಗೆ ಗುತ್ತಿಗೆ ನೀಡಲು ಹೊರಟಿತ್ತು. ನಮ್ಮ ಸರ್ಕಾರವು ಅದೇ ಕಾರ್ಖಾನೆಯನ್ನು 30 ವರ್ಷಗಳಿಗೆ ಒಟ್ಟು ₹475 ಕೋಟಿಗೆ ಗುತ್ತಿಗೆ ನೀಡಿದೆ’ ಎಂದು ಕುಟುಕಿದರು.

‘ನನ್ನ ಮಗಳಿಗಿನ್ನೂ ಮದುವೆಯಾಗಿಲ್ಲ’

ಮುದಗಲ್ ಪಟ್ಟಣಕ್ಕೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿ ವಿಳಂಬವಾಗುತ್ತಿರುವ ಬಗ್ಗೆ ಕಾಂಗ್ರೆಸ್‌ನ ಶರಣಗೌಡ ಬಯ್ಯಾಪುರ ಅವರು ವಿಧಾನ ಪರಿಷತ್ತಿನ ಪ್ರಶ್ನೋತ್ತರದಲ್ಲಿ ಚಕಾರ ಎತ್ತಿದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು, ‘ಮುದಗಲ್ ಪಟ್ಟಣಕ್ಕೆ ಕುಡಿಯುವ ನೀರು ಯೋಜನೆ ಕಾಮಗಾರಿ ನಡೆಸಲು, ಪುರಸಭೆಯಲ್ಲಿ ಹಣ ಇರಲಿಲ್ಲ. ರಾಜ್ಯ ಸರ್ಕಾರವು ತನ್ನ ಪಾಲಿನ ಹಣ ಒದಗಿಸಿದರೂ ಗುತ್ತಿಗೆದಾರ ಕಾಮಗಾರಿ ಪೂರ್ಣಗೊಳಿಸಲಿಲ್ಲ. ನಷ್ಟದ ಹಣವನ್ನು ಗುತ್ತಿಗೆದಾರನಿಂದ ವಸೂಲಿ ಮಾಡಿ, ಉಳಿಕೆ ಹಣವನ್ನು ಒದಗಿಸಿಕೊಂಡು ಕಾಮಗಾರಿ ಆರಂಭಿಸುತ್ತೇವೆ’ ಎಂದು ಉತ್ತರಿಸಿದರು.

ಇದರಿಂದ ಸಮಾಧಾನಗೊಳ್ಳದ ಶರಣಗೌಡ ಅವರು, ‘ಸರ್ಕಾರದಿಂದಲೇ ಪೂರ್ಣ ಹಣ ಒದಗಿಸಿ, ಕುಡಿಯುವ ನೀರಿನ ಸಂಪರ್ಕ ಕಲ್ಪಿಸಿ. ಮುದಗಲ್‌ನಲ್ಲಿ ನಿಮ್ಮ ಪ್ರತಿಮೆ ಮಾಡಿಸಿ, ಹಾಲಿನ ಅಭಿಷೇಕ ಮಾಡಿಸುತ್ತೇನೆ’ ಎಂದರು. ಬಿಜೆಪಿಯ ಭಾರತಿ ಶೆಟ್ಟಿ, ‘ಬದುಕಿರುವವರಿಗೆ ಪ್ರತಿಮೆ ಮಾಡಿಸುತ್ತಾರೆಯೇ’ ಎಂದು ಆಕ್ಷೇಪಿಸಿದರು.

ಆಗ ಸಚಿವ ಸುರೇಶ್, ‘ನಮ್ಮ ಕಡೆ ಫೋಟೊಗೆ, ಪ್ರತಿಮೆಗೆ ಹಾರ ಹಾಕುವುದು ಮತ್ತು ಹಾಲು ಹಾಕುವುದು ಎಂದರೆ ಬೇರೆ ಅರ್ಥವಿದೆ. ನನಗಷ್ಟು ವಯಸ್ಸಾಗಿಲ್ಲ. ನನ್ನ ಮಗಳಿಗಿನ್ನೂ ಮದುವೆಯಾಗಿಲ್ಲ, ಮದುವೆ ಮುಗಿಸಿಬಿಡುತ್ತೇನೆ’ ಎಂದರು.

‘ಹೊರಟ್ಟಿ ಅವರನ್ನು ಮೊದಲ ಬಾರಿಗೆ ಸೋಲಿಸಿದ್ದೇವೆ’

‘ಎಂಟು ಬಾರಿ ಗೆದ್ದು ಈವರೆಗೂ ಸೋಲರಿಯದ ಸಭಾಪತಿ ಬಸವರಾಜ ಹೊರಟ್ಟಿಯವರನ್ನು ಮೊದಲ ಬಾರಿಗೆ ನಾವಿಲ್ಲಿ ಸೋಲಿಸಿದ್ದೇವೆ’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಬಸವರಾಜ ಹೊರಟ್ಟಿ ಅವರು ವಿಧಾನ ಪರಿಷತ್ ಸದಸ್ಯರಾಗಿ 45 ವರ್ಷ ಪೂರೈಸಿದ್ದಕ್ಕೆ ಅಭಿನಂದನೆ ಸಲ್ಲಿಸಿದ ಸಂದರ್ಭದಲ್ಲಿ ಅವರು ಮಾತನಾಡಿದರು.

‘ಕಾಂಗ್ರೆಸ್‌ನ ಎಂ. ನಾಗರಾಜು ಅವರು ನಿಮಗೆ ಅಭಿನಂದನೆ ಸಲ್ಲಿಸುವಾಗ ಅವರು ಯಾವಾಗ ಮಾತು ನಿಲ್ಲಿಸುತ್ತಾರೋ ಎಂದು ನಮಗೆಲ್ಲ ಅನ್ನಿಸಿತು. ಆದರೆ, ಅಭಿಮಾನ, ವಿಶ್ವಾಸಕ್ಕೆ ಕಟ್ಟುಬಿದ್ದು ಅವರಿಗೆ ಮಾತನಾಡಲು ಬಿಟ್ಟಿರಿ. ಅದೇ ರೀತಿ ಹಲವು ಸದಸ್ಯರು ಮಾತನಾಡುವಾಗ ಅದನ್ನು ನಿಲ್ಲಿಸಲು ಬೆಲ್ ಹೊಡೆಯದ ಹಾಗೆ ನಿಮ್ಮನ್ನು ಕಟ್ಟಿಹಾಕಿದ್ದು ನಿಮ್ಮ ಸೋಲಾಗಿದೆ’ ಎಂದು ಮಧು ಬಂಗಾರಪ್ಪ ಹೇಳಿದರು. ‘ನಾವು ಗೆದ್ದೆವು, ಅವರು ಸೋತರು’ ಎಂದು ಬಿಜೆಪಿಯ ರವಿಕುಮಾರ್ ಧ್ವನಿಗೂಡಿಸಿದರು.

4 ಲಕ್ಷ ಗಿಗ್ ಕಾರ್ಮಿಕರಿಗೆ ಭದ್ರತೆ

ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ ಮಸೂದೆ–2025 ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲಾಟ್‌ಫಾರ್ಮ್ ಆಧಾರಿತ ಸೇವೆಗಳಾದ ಸ್ವಿಗ್ಗಿ, ಜೊಮಾಟೊ, ರೈಡ್ ಶೇರಿಂಗ್ ಸೇವೆಗಳಾದ ಓಲಾ, ಉಬರ್, ಇ–ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಪ್‌ಕಾರ್ಟ್, ಬಿಗ್ ಬಾಸ್ಕೆಟ್ ಮತ್ತಿತರ ಕ್ಷೇತ್ರಗಳಲ್ಲಿ ಪೂರ್ಣಕಾಲಿಕ ಅಥವಾ ಅರೆಕಾಲಿಕ ಡೆಲಿವರಿ ನೌಕರರಾಗಿ ಕಾರ್ಯ ನಿರ್ವಹಿಸುತ್ತಿರುವವರಿಗೂ ಇನ್ನು ಮುಂದೆ ಸಾಮಾಜಿಕ ಭದ್ರತೆ ಸಿಗಲಿದೆ.

ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ–2025ಕ್ಕೆ ವಿಧಾನಸಭೆ ಮಂಗಳವಾರ ಅಂಗೀಕಾರ ನೀಡಿದೆ. ಇದರಿಂದ ರಾಜ್ಯದ 4 ಲಕ್ಷ ಗಿಗ್ ಕಾರ್ಮಿಕರ ಅನುಕೂಲವಾಗಲಿದೆ.

ಗಿಗ್ ಕಾರ್ಮಿಕರು ಸರಕು ಸೇವೆಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಸೂಚಿಸಿದ ಸ್ಥಳಗಳಿಗೆ ವಾಹನಗಳಲ್ಲಿ ತೆರಳಿ ವಿತರಿಸುತ್ತಾರೆ. ಅಂತಹ ಸಂದರ್ಭಗಳಲ್ಲಿ ಅಪಘಾತಕ್ಕೆ ಒಳಗಾಗಬಹುದು. ಅಪಘಾತದಿಂದ ಮರಣ, ಶಾಶ್ವತ ಅಂಗವೈಕಲ್ಯ ಹೊಂದಿದರೆ ಅವರು ಮತ್ತು ಅವರ ಅವಲಂಬಿತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಾರೆ. ಅಂತಹ ಸಂದರ್ಭದಲ್ಲಿ ಅವರು ಮತ್ತು ಅವರ ಕುಟುಂಬಗಳಿಗೆ ಸಾಮಾಜಿಕ ಭದ್ರತೆ ಸಿಗಲಿದೆ.

ಇದಕ್ಕಾಗಿ ಪ್ಲಾಟ್‌ಫಾರ್ಮ್ ಆಧಾರಿತ ಸೇವೆಯ ವೇದಿಕೆಗಳಿಂದ ಪ್ರತಿ ವಹಿವಾಟಿನ ಮೇಲೆ ಶೇ 1ರಿಂದ ಶೇ 2 ಮೀರದಂತೆ ಕ್ಷೇಮಾಭಿವೃದ್ಧಿ ಶುಲ್ಕ ಸಂಗ್ರಹಿಸಲಾಗುತ್ತದೆ. ಅವರಿಗೆ ಭವಿಷ್ಯ ನಿಧಿ, ಅಪಘಾತ ಸೌಲಭ್ಯ, ವಸತಿ, ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ, ಕಾರ್ಮಿಕ ಕೌಶಲಾಭಿವೃದ್ಧಿ, ಅಂತ್ಯಸಂಸ್ಕಾರಕ್ಕೆ ಧನಸಹಾಯ ಸಿಗಲಿದೆ.

‘ರಾಜ್ಯದಲ್ಲಿ 4 ಲಕ್ಷ ಗಿಗ್ ಕಾರ್ಮಿಕರಿದ್ದಾರೆ ಎಂದು ಅಂದಾಜಿಸಲಾಗಿದೆ. ಅವರು ಶಾಸನಬದ್ಧ ಸೌಲಭ್ಯಗಳಿಂದ ವಂಚಿತರಾಗದಂತೆ ಅವರ ಜೀವನಮಟ್ಟವನ್ನು ಉತ್ತಮಡಿಸಲು ಕಾಯ್ದೆ ನೆರವಾಗಲಿದೆ. ಶೇ 90ರಷ್ಟು ಇರುವ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ಪೆಟ್ರೋಲ್, ಡೀಸೆಲ್ ಮೇಲೆ ಪ್ರತ್ಯೇಕ ಸೆಸ್ ಹಾಕುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇವೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಮುಖ್ಯಾಂಶಗಳು

- ಸೇವಾ ವೇದಿಕೆಗಳು, ಗಿಗ್ ಕಾರ್ಮಿಕರ ನೋಂದಣಿ ಕಡ್ಡಾಯ
- ಕೆಲಸದ ಅವಧಿ ಗಣನೆಗೆ ತೆಗೆದುಕೊಳ್ಳುವಂತಿಲ್ಲ
- ಬೆಲೆಪಟ್ಟಿ, ಆದಾಯ ಭದ್ರತೆಯ ಖಾತ್ರಿ, ಗಿಗ್ ನಿಧಿ ಸ್ಥಾಪನೆ

ಮಸೂದೆ ವ್ಯಾಪ್ತಿಗೆ ಹೊರಗುತ್ತಿಗೆ ನೌಕರರನ್ನೂ ಸೇರಿಸಿ, ‘ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರು ಮತ್ತು ಹೊರಗುತ್ತಿಗೆ ನೌಕರರ ಕಲ್ಯಾಣ ಮಸೂದೆ’ ಎಂದು ಮರುನಾಮಕರಣ ಮಾಡಬೇಕು

ಎಸ್. ಸುರೇಶ್‌ಕುಮಾರ್, ಬಿಜೆಪಿ ಶಾಸಕ



ವಿಧಾನ ಸಭೆ ಕಲಾಪದಲ್ಲಿ ಸಚಿವ ಸಂತೋಷ್ ಲಾಡ್ ಮಾತನಾಡಿದರು

ಪ್ಲಾಟ್‌ಫಾರ್ಮ್ ಆಧಾರಿತ ಸೇವೆಗಳಲ್ಲಿ ₹600ರಿಂದ ₹800 ಗಳಿಸಲು 16 ಗಂಟೆ ದುಡಿಯುತ್ತಾರೆ. ರಸ್ತೆ ಮಾಲಿನ್ಯ ಅವರ ಆರೋಗ್ಯ ಕೆಡಿಸುತ್ತದೆ. ಹೊಸ ಕಾಯ್ದೆ ಅವರ ಬದುಕಿಗೆ ನೆಮ್ಮದಿ ತರಲಿದೆ

ಸಂತೋಷ್ ಲಾಡ್, ಕಾರ್ಮಿಕ ಸಚಿವ

ಕಲ್ಯಾಣ ಮಂಡಳಿ ರಚನೆ

ನಿಧಿ ಸಂಗ್ರಹಣೆ, ನಿರ್ವಹಣೆ, ಫಲಾನುಭವಿಗಳಿಗೆ ಮತ್ತು ಅವರ ಅವಲಂಬಿತರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳ ‘ಕರ್ನಾಟಕ ಪ್ಲಾಟ್ ಫಾರ್ಮ್ ಆಧಾರಿತ ಗಿಗ್ ಕಾರ್ಮಿಕ ಕಲ್ಯಾಣ ಮಂಡಳಿ’ ಸ್ಥಾಪಿಸಲಾಗುತ್ತದೆ.

ಈ ಮಂಡಳಿಗೆ ಕಾರ್ಮಿಕ ಸಚಿವರು ಅಧ್ಯಕ್ಷರಾಗಿರುತ್ತಾರೆ. ಆರು ಸದಸ್ಯರು, ಒಬ್ಬರು ಕಾರ್ಯದರ್ಶಿ ಇರುತ್ತಾರೆ. ನಾಮ ನಿರ್ದೇಶಿತ ಸದಸ್ಯರು ಮೂರು ವರ್ಷಗಳ ಅವಧಿ ಹೊಂದಿರುತ್ತಾರೆ. ಮಂಡಳಿ ಪ್ರತಿ ಮೂರು ತಿಂಗಳಿಗೆ ಒಮ್ಮೆ ಸಭೆ ನಡೆಸಬೇಕಿದೆ.

ವಿರೋಧ ಪಕ್ಷಗಳ ಸಲಹೆ

- ಹೊರಗುತ್ತಿಗೆ ಕಾರ್ಮಿಕರನ್ನೂ ಕಾಯ್ದೆ ವ್ಯಾಪ್ತಿಗೆ ತರಬೇಕು
- ಗಿಗ್ ಕಾರ್ಮಿಕರಿಗೂ ಇಎಸ್‌ಐ ಸೌಲಭ್ಯ ನೀಡಬೇಕು
- ಸೇವಾ ಸಂಸ್ಥೆಗಳ ಜತೆಗೆ ಸರ್ಕಾರವೂ ವಂತಿಗೆ ನೀಡಬೇಕು
- ಅತಿಯಾದ ನಿಯಂತ್ರಣಕ್ಕೆ ಅವಕಾಶ ಇರಬಾರದು
- ಕರ್ನಾಟಕದಲ್ಲಿ ಕನ್ನಡಿಗರಿಗೆ ಹೆಚ್ಚಿನ ಅವಕಾಶ ಸಿಗಬೇಕು

ಜಿಎಸ್‌ಟಿ ಐಟಿಸಿ: ಲೆಕ್ಕಕ್ಕೆ ಸಿಗದ ₹1,143 ಕೋಟಿ

ತೆರಿಗೆ ಸಂಗ್ರಹದಲ್ಲಿ ಅಧಿಕಾರಿಗಳಿಂದ ಭಾರಿ ಲೋಪ: ಸಿಎಜಿ ವರದಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯು ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ನೀಡುವಲ್ಲಿ ಭಾರಿ ಲೋಪವಾಗಿದ್ದು, ₹1,143.58 ಕೋಟಿಯಷ್ಟು ಲೆಕ್ಕ ಸಿಗುತ್ತಿಲ್ಲ ಎಂದು ಭಾರತದ ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

ಮಂಗಳವಾರ ಮಂಡಿಸಲಾದ ‘ರಾಜ್ಯ ಕಂದಾಯ ವರದಿ–2023ರ ಮಾರ್ಚ್’| ರಲ್ಲಿ ಸಿಎಜಿ ಈ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

‘ಜಿಎಸ್‌ಟಿ ಪಾವತಿದಾರರು, ತಾವು ಪಾವತಿಸುವ ಜಿಎಸ್‌ಟಿಗೆ ಐಟಿಸಿ ಪಡೆಯುತ್ತಿದ್ದಾರೆ. ಆದರೆ ಇದರಲ್ಲಿ ಜಿಎಸ್‌ಟಿ ಇನ್‌ವಾಯ್ಸ್‌ಗಳು ತಾಳೆಯಾಗದೇ ಇರುವ ಬಗ್ಗೆ ಅನುಮಾನಗಳಿದ್ದವು. ಈ ಸಂದೇಹಗಳನ್ನು ಪರಿಹರಿಸಿಕೊಳ್ಳುವ ಸಲುವಾಗಿ, ಅತ್ಯಂತ ದೊಡ್ಡ ಮೊತ್ತದ ವರ್ಗಾವಣೆ ನಡೆದಿದ್ದ 699 ಐಟಿಸಿ ಪ್ರಕರಣಗಳನ್ನು ಪರಿಶೀಲಿಸಲು ನಿರ್ಧರಿಸಲಾಗಿತ್ತು. ಆದರೆ ವಾಣಿಜ್ಯ ತೆರಿಗೆ ಇಲಾಖೆಯು 679 ಪ್ರಕರಣಗಳ ಮಾಹಿತಿಯನ್ನಷ್ಟೇ ಸಲ್ಲಿಸಿತು’ ಎಂದು ಸಿಎಜಿ ತನ್ನ ವರದಿಯಲ್ಲಿ ಹೇಳಿದೆ.

‘ಈ 679ರ ಪೈಕಿ 232 ಪ್ರಕರಣಗಳಲ್ಲಿ ಐಟಿಸಿ ಕ್ಲೇಮು ಮಾಡಿದ್ದವರು ತಮ್ಮ ಇನ್‌ವಾಯ್ಸ್‌ಗಳಲ್ಲಿ ಉಲ್ಲೇಖಿಸಿದ್ದ ವ್ಯಾಪಾರಿಗಳ (ವೆಂಡರ್) ಜಿಎಸ್‌ಟಿ ಕಡತಗಳನ್ನು ಪರಿಶೀಲಿಸಲಾಯಿತು. ಕ್ಲೇಮು ಮಾಡಲಾದ ಐಟಿಸಿ ಪ್ರಕರಣಗಳಲ್ಲಿ ಈ ವ್ಯಾಪಾರಿಗಳು ಜಿಎಸ್‌ಟಿಯನ್ನು ಪಾವತಿಸಿಯೇ ಇಲ್ಲ ಎಂಬುದು ಗೊತ್ತಾಯಿತು. ಅದನ್ನು ವಸೂಲಿ ಮಾಡಲೂ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ’ ಎಂದು ವಿವರಿಸಿದೆ.

‘ಸರ್ಕಾರಕ್ಕೆ ಜಿಎಸ್‌ಟಿ ಪಾವತಿಯಾಗದೇ ಇದ್ದರೂ, ₹1,143.58 ಕೋಟಿಯಷ್ಟು ಐಟಿಸಿ ಕ್ಲೇಮುಗಳನ್ನು ಮಂಜೂರು ಮಾಡಲಾಗಿದೆ. ವ್ಯಾಪಾರಿಗಳು ತೆರಿಗೆ ವಂಚಿಸಿರುವುದು ಮಾತ್ರವಲ್ಲದೆ, ಐಟಿಸಿ ಕ್ಲೇಮು ಪಡೆದಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಭಾರಿ ನಷ್ಟವಾಗಿದೆ. ಈ ಹಣ ಎಲ್ಲಿ ಹೋಗಿದೆ ಎಂಬುದಕ್ಕೆ ಲೆಕ್ಕವೇ ಇಲ್ಲ’ ಎಂದಿದೆ.



ವಿಧಾನ ಸಭೆ ಕಲಾಪದಲ್ಲಿ ಸಿದ್ದರಾಮಯ್ಯ ಮಾತನಾಡಿದರು

ಲೆಕ್ಕ ತಪ್ಪಿದ್ದೆಲ್ಲಿ...

- ಆರ್ಥಿಕ ವರ್ಷ ಮತ್ತು ಕ್ಲೇಮು ಅವಧಿ ಮುಗಿದ ಬಳಿಕ ಸಲ್ಲಿಸಲಾದ ಐಟಿಸಿ ಕ್ಲೇಮುಗಳನ್ನು ಮಂಜೂರು ಮಾಡಲಾಗಿದೆ
- ಪೂರೈಕೆದಾರರು ತೆರಿಗೆ ಪಾವತಿಸದಿದ್ದ ಸಂದರ್ಭದಲ್ಲಿಯೂ ಐಟಿಸಿ ಕ್ಲೇಮು ನೀಡಲಾಗಿದೆ
- ಪಾವತಿಯಾದ ಜಿಎಸ್‌ಟಿಗಿಂತ ಹೆಚ್ಚಿನ ಮೊತ್ತದ ಐಟಿಸಿ ಕ್ಲೇಮುಗಳನ್ನು ನೀಡಲಾಗಿದೆ
- ಪೂರೈಕೆದಾರರಿಂದ ತೆರಿಗೆ ವಸೂಲಿಗೆ ಕ್ರಮ ತೆಗೆದುಕೊಂಡಿಲ್ಲ
- ತಡವಾಗಿ ಜಿಎಸ್‌ಟಿ ಪಾವತಿ ಮಾಡಿದ ಸಂದರ್ಭದಲ್ಲಿ ದಂಡ ಮತ್ತು ಬಡ್ಡಿಯನ್ನು ವಸೂಲಿ ಮಾಡಿಲ್ಲ

ಶಿಫಾರಸುಗಳು

- ಜಿಎಸ್‌ಟಿ ರಿಟರ್ನ್ಸ್ ಫೈಲಿಂಗ್‌ಗಳನ್ನು ಕೂಲಂಕಷವಾಗಿ ಪರಿಶೀಲಿಸುವ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು
- ಐಟಿಸಿ ಕ್ಲೇಮುಗಳನ್ನು ಮಂಜೂರು ಮಾಡುವುದಕ್ಕೂ ಮುನ್ನ, ಮೂಲದಲ್ಲಿ ಜಿಎಸ್‌ಟಿ ಪಾವತಿ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು
- ಐಟಿಸಿ ಕ್ಲೇಮು ಪ್ರಕರಣಗಳ ಪೈಕಿ ಮೂಲದಲ್ಲಿ ಜಿಎಸ್‌ಟಿ ಪಾವತಿ ಆಗದೇ ಇದ್ದರೆ, ವಸೂಲಿಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು
- ಜಿಎಸ್‌ಟಿ ಪಾವತಿಯಾಗದ ಪ್ರಕರಣಗಳಲ್ಲಿ ದಂಡ ಮತ್ತು ಬಡ್ಡಿಯನ್ನು ಕಾಲಮಿತಿಯಲ್ಲಿ ಸಂಗ್ರಹಿಸಲು ಕ್ರಮ ತೆಗೆದುಕೊಳ್ಳಬೇಕು

‘ಎಸ್ಮಾ’ ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಷ್ಕರ ನಡೆಸುವ ಸಾರಿಗೆ ನಿಗಮಗಳ ಸಿಬ್ಬಂದಿ ವಿರುದ್ಧ ‘ಎಸ್ಮಾ’ ಜಾರಿಗೊಳಿಸುವ ‘ಅಗತ್ಯ ಸೇವೆಗಳ ನಿರ್ವಹಣಾ ತಿದ್ದುಪಡಿ ಮಸೂದೆ’ಗೆ ವಿಧಾನಸಭೆ ಅಂಗೀಕಾರ ನೀಡಿತು.

2015ರಲ್ಲಿ ಜಾರಿಗೆ ತಂದಿದ್ದ ಕಾಯ್ದೆಯ ಅವಧಿ 10 ವರ್ಷಗಳಿದ್ದು, 2025ರ ಮೇ ನಲ್ಲಿ ಅವಧಿ ಮುಕ್ತಾಯವಾದ ಕಾರಣ ಮತ್ತೆ 20 ವರ್ಷಗಳವರೆಗೆ ವಿಸ್ತರಿಸಿ, ತಿದ್ದುಪಡಿ ತರಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಮುಖ್ಯಾಧಿಕಾರಿಗೆ ಕಟ್ಟಡ ಪರವಾನಗಿ ಅಧಿಕಾರ: ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಮನೆ ಮತ್ತಿತರ ಕಟ್ಟಡಗಳ ನಿರ್ಮಾಣಕ್ಕೆ ಪರವಾನಗಿ ನೀಡುವುದು ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಮುಖ್ಯಾಧಿಕಾರಿಗಳಿಗೆ ಹೊಣೆ ನೀಡುವ ಕರ್ನಾಟಕ ಮುನ್ಸಿಪಾಲಿಟಿಗಳು ಮತ್ತು ಇತರೆ ಕಾನೂನು ತಿದ್ದುಪಡಿ ಮಸೂದೆಗೆ ಅಂಗೀಕಾರ ಸಿಕ್ಕಿತು.

ಜನರು ಅರ್ಜಿ ಸಲ್ಲಿಸಿದ 30 ದಿನಗಳ ಒಳಗೆ ಪರವಾನಗಿ ನೀಡಬೇಕು. ನಂತರ ನಡೆಯುವ ಕೌನ್ಸಿಲ್‌ನಲ್ಲಿ ಅನುಮತಿ ಪಡೆಯಬೇಕು ಎಂಬ ಷರತ್ತು ವಿಧಿಸಲಾಗಿದೆ.

ಮೂಲಸೌಕರ್ಯಕ್ಕಾಗಿ ನಿಗದಿ ಮಾಡಿದ ಬಂಡವಾಳ ವೆಚ್ಚ ₹5,299 ಕೋಟಿ ‘ಗ್ಯಾರಂಟಿ’ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023-24ರಲ್ಲಿ ಮೂಲಸೌಕರ್ಯಕ್ಕಾಗಿ ನಿಗದಿ ಮಾಡಿದ ಬಂಡವಾಳ ವೆಚ್ಚದಲ್ಲಿ ₹5,299 ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗಾಗಿ ಬಳಸಲಾಗಿದೆ ಎಂದು ಭಾರತದ ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

2023-24 ಕೊನೆಗೊಂಡ ವರ್ಷದ ಸಿಎಜಿ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಕಾಂಗ್ರೆಸ್ ನೇತೃತ್ವದ ಸರ್ಕಾರದ ಮೊದಲ ವರ್ಷದಲ್ಲಿ(2023-24) ₹52,120 ಕೋಟಿ ಬಂಡವಾಳ ವೆಚ್ಚ ಮಾಡಲಾಗಿದ್ದು, ಇದು ಒಟ್ಟು ವೆಚ್ಚದ ಪೈಕಿ ಶೇ 17 ರಷ್ಟಿದೆ. ಹಿಂದಿನ ಸಾಲಿನಲ್ಲಿ(2022-23) ಬಂಡವಾಳ ವೆಚ್ಚ ₹57,349 ಕೋಟಿ ಇತ್ತು. ಹಿಂದಿನ ಸಾಲಿಗಿಂತ ₹5,299 ಕೋಟಿ ಕಡಿಮೆ ಆಗಿದೆ ಎಂದು ವರದಿ ವಿವರಿಸಿದೆ.

ಸರ್ಕಾರದ ಐದು ‘ಗ್ಯಾರಂಟಿ’ ಯೋಜನೆಗಳು 2023-24 ಸಾಲಿನಲ್ಲಿ ರಾಜಸ್ವ ವೆಚ್ಚದ ಶೇ 15ರಷ್ಟು ಪಾಲು ಹೊಂದಿವೆ. ಇದರಿಂದಾಗಿ ವೆಚ್ಚದ ಬೆಳವಣಿಗೆ ಏರಿಕೆಯಾಗಿದೆ. ಇದರ ಪರಿಣಾಮ ₹9,271 ಕೋಟಿ ರಾಜಸ್ವ ಕೊರತೆಯಾತುತಯ. ವಿತ್ತೀಯ ಕೊರತೆ 2022-23 ರಲ್ಲಿ ₹46,623 ಕೋಟಿ ಇತ್ತು. 2023-24 ರಲ್ಲಿ ₹65,522 ಕೋಟಿಗೆ ಏರಿಕೆಯಾಗಿದೆ ಎಂದು ವರದಿ ಹೇಳಿದೆ.

ಗ್ಯಾರಂಟಿ ಯೋಜನೆಗಳು ಮತ್ತು ಅದರಿಂದ ಉಂಟಾದ ಕೊರತೆಗಳಿಗೆ ಹಣಕಾಸು ಒದಗಿಸಲು ರಾಜ್ಯ ಸರ್ಕಾರ ₹63,000 ಕೋಟಿ ಸಾಲ ಪಡೆದುಕೊಂಡಿದೆ. ಇದು ಕಳೆದ ವರ್ಷದ ನಿವ್ವಳ ಸಾಲಕ್ಕಿಂತ (₹26,000 ಕೋಟಿ) ₹37,000 ಕೋಟಿ ಹೆಚ್ಚಾಗಿದೆ ಎಂದು ವರದಿ ಬೊಟ್ಟು ಮಾಡಿದೆ.

ಐದು ಗ್ಯಾರಂಟಿ ಯೋಜನೆಗಳ ವಿವರ (₹ಕೋಟಿಗಳಲ್ಲಿ)

ಯೋಜನೆ	ಆಯವ್ಯಯ	ವೆಚ್ಚ	ರಾಜಸ್ವ ವೆಚ್ಚದ ಶೇಕಡವಾರು
ಗೃಹಲಕ್ಷ್ಮಿ	16,964.40	16,964.40	6.99
ಗೃಹಜ್ಯೋತಿ	8,900	8,900	3.67
ಅನ್ನಭಾಗ್ಯ	7,384.68	7,344.68	3.03
ಶಕ್ತಿ	3,200	3,200	1.32
ಯುವನಿಧಿ	88.88	88.88	0.04
ಒಟ್ಟು	36,537,96	36,497.96	15.05

ಕ್ಯೂರಿಂಗ್ ಮೊದಲೇ ₹ 21 ಕೋಟಿ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಗುತ್ತಿಗೆದಾರರ ಜೊತೆ ಒಪ್ಪಂದ ಮಾಡಿಕೊಂಡು ಕೇವಲ 1ರಿಂದ 21 ದಿನಗಳ ಅವಧಿಯಲ್ಲಿಯೇ ರಸ್ತೆ ಕಾಮಗಾರಿಯ ಕೆಲಸವನ್ನು ಅಳೆದು ₹ 21.32 ಕೋಟಿ ಪಾವತಿಸಲಾಗಿದೆ ಎಂದು ಮಹಾ ಲೇಖಪಾಲರ ವರದಿ (ಸಿಎಜಿ) ವರದಿ ಹೇಳಿದೆ.

2023ರ ಮಾರ್ಚ್ ಕೊನೆಗೊಂಡ ವರ್ಷದ ವಿವಿಧ ಇಲಾಖೆಗಳ ಕಾಮಗಾರಿಗಳ ಪರಿಶೋಧನೆ ಕುರಿತ ಭಾರತದ ಮಹಾಲೇಖಪಾಲರ ವರದಿಯನ್ನು ಮಂಗಳವಾರ ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಸಿ.ಸಿ ರಸ್ತೆಗಳು ಮತ್ತು ಚರಂಡಿಗಳ ನಿರ್ಮಾಣ ಮತ್ತು ಸುಧಾರಣೆಗೆ ಸಂಬಂಧಿಸಿದ ಕಾಮಗಾರಿಗಳಲ್ಲಿ ಕಾಂಕ್ರೀಟ್ ಮತ್ತು ಕ್ಯೂರಿಂಗ್ ಮಾಡಿ, ಪರೀಕ್ಷಾ ವರದಿಯನ್ನು 28 ದಿನಗಳ ಬಳಿಕ ಸಿದ್ಧಪಡಿಸಬೇಕು. ಆದರೆ, ಲೋಕೋಪಯೋಗಿ ಇಲಾಖೆಯ ಬಳ್ಳಾರಿ ಮತ್ತು ಕೊಪ್ಪಳ ವಿಭಾಗದಲ್ಲಿ ಈ ನಿಯಮ ಉಲ್ಲಂಘಿಸಲಾಗಿದೆ ಎಂದು ಸಿಎಜಿ ವರದಿ ಹೇಳಿದೆ.

‘ಲೋಕೋಪಯೋಗಿ ಇಲಾಖೆಯ ಕೋಡ್ (ಕೆಪಿಡಬ್ಲ್ಯುಡಿ ಕೋಡ್) ಪ್ರಕಾರ ಮಾರ್ಚ್ 15ರ ನಂತರ ಯಾವುದೇ ಕಾಮಗಾರಿಯನ್ನು ಅಳತೆ ಮಾಡಿ ಹಣ ಪಾವತಿಸಲು ಅವಕಾಶ ಇಲ್ಲ. ಆದರೆ, ಬಳ್ಳಾರಿ ಮತ್ತು ಕೊಪ್ಪಳ ವಿಭಾಗದಲ್ಲಿ 32 ಪ್ರಮುಖ ಕಾಮಗಾರಿಗಳಲ್ಲಿ ಗುತ್ತಿಗೆದಾರರ ಜೊತೆ ಶಾಮೀಲಾಗಿ ಮೊತ್ತ ಪಾವತಿಸಲಾಗಿದೆ. ಈ ಬಗ್ಗೆ ಸರ್ಕಾರ ತನಿಖೆ ನಡೆಸಿ, ಹಣ ಪಾವತಿಗೆ ಕಾರಣರಾದವರ ಮೇಲೆ ಜವಾಬ್ದಾರಿಗಳನ್ನು ನಿಗದಿಪಡಿಸಬಹುದು’ ಎಂದು ವರದಿಯಲ್ಲಿದೆ.

ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಇಂಟರ್‌ನೆಟ್ ನೆಟ್‌ವರ್ಕ್ ಸೇವಾ ಪೂರೈಕೆದಾರರು ಆಪ್ಟಿಕಲ್ ಫೈಬರ್ ಕೇಬಲ್ ನೆಟ್‌ವರ್ಕ್‌ಗಳನ್ನು ಹಾಕಲು ಅನುಮತಿ ನೀಡುವಾಗ ಲೋಕೋಪಯೋಗಿ ಇಲಾಖೆಯ ನಾಲ್ಕು ವಿಭಾಗಗಳು ಸರ್ಕಾರ ಸೂಚಿಸಿದ ದರದಲ್ಲಿ ಸಂಗ್ರಹಿಸಬೇಕು. ಅದರ ಬದಲು ರಸ್ತೆ ಅಗೆತ ಮತ್ತು ಮತ್ತೆ ಯಥಾಸ್ಥಿತಿಗೆ ತರಲು ಶುಲ್ಕಗಳಿಗೆ ತಪ್ಪಾಗಿ ದರ ಅಳವಡಿಸಿಕೊಂಡ ಪರಿಣಾಮ ರಸ್ತೆ ಕಟ್ಟಿಂಗ್ ಶುಲ್ಕ ₹ 7.32 ಕೋಟಿ ಕಡಿಮೆ ವಸೂಲಿ ಮಾಡಲಾಗಿದೆ ಎಂದೂ ವರದಿ ಹೇಳಿದೆ.

ಸದನ ಸಮಿತಿ ರಚಿಸುವಂತೆ ಬಿಜೆಪಿ, ಜೆಡಿಎಸ್ ಶಾಸಕರ ಆಗ್ರಹ

ಬಫರ್ ಝೋನ್ ಕಡಿತ: ಸಭಾತ್ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ಮಸೂದೆ- 2025’ರ ಕುರಿತು ಚರ್ಚಿಸಲು ಸದನ ಸಮಿತಿ ರಚಿಸಬೇಕು’ ಎಂಬ ತಮ್ಮ ಬೇಡಿಕೆಗೆ ಮನ್ನಣೆ ಸಿಗದ ಕಾರಣ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು. ಅದರ ನಡುವೆಯೇ ಸರ್ಕಾರ ಮಸೂದೆಗೆ ಅಂಗೀಕಾರ ಪಡೆಯಿತು.

ಸಣ್ಣ ನೀರಾವರಿ ಸಚಿವ ಎನ್. ಎಸ್. ಬೋಸರಾಜು ಅವರು ತಿದ್ದುಪಡಿ ಮಸೂದೆಯನ್ನು ಮಂಡಿಸಿದರು.

ರಾಜ್ಯದಲ್ಲಿರುವ ಕೆರೆಗಳಿಗೆ ಏಕರೂಪದಲ್ಲಿದ್ದ 30 ಮೀಟರ್ ಬಫರ್ ಝೋನ್ (ಸಂರಕ್ಷಿತ ಪ್ರದೇಶ) ಕಡಿತಗೊಳಿಸಲು ಅವಕಾಶ ಕಲ್ಪಿಸುವ ಈ ತಿದ್ದುಪಡಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, ‘ಈ ತಿದ್ದುಪಡಿ ಬೆಂಗಳೂರಿಗೆ ಮಾರಕವಾಗಿದೆ. ಸರ್ಕಾರ ರಿಯಲ್ ಎಸ್ಟೇಟ್ ಲಾಬಿಗೆ ಮಣಿದಿದೆ’ ಎಂದು ಆರೋಪಿಸಿದರು. ಅಲ್ಲದೆ, ಈ ತಿದ್ದುಪಡಿಯನ್ನು ಸದನ ಸಮಿತಿ ರಚಿಸಿ ಅದರ ಅವಗಾಹನೆಗೆ ನೀಡಬೇಕು’ ಎಂದು ಆಗ್ರಹಿಸಿದರು. ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿಯ ಎಸ್.ಆರ್. ವಿಶ್ವನಾಥ್ ಅವರೂ ದನಿಗೂಡಿಸಿದರು.

ಆಕ್ಷೇಪಗಳಿಗೆ ಪ್ರತಿಕ್ರಿಯಿಸಿದ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್, ‘ಕೆರೆಗಳ ಬಫರ್ ಝೋನ್ ವಿಚಾರವಾಗಿ ತಿದ್ದುಪಡಿ ತರುವಂತೆ ಯಾವುದೇ ಬಿಲ್ಡರ್‌ಗಳು ಮನವಿ ಮಾಡಿಲ್ಲ. ಈ ಹಿಂದೆ ಕಂಠೀರವ ಸ್ಟೇಡಿಯಂ, ಕೆಂಪೇಗೌಡ ಬಸ್ ನಿಲ್ದಾಣವನ್ನು ಕೆರೆಗಳ ಮೇಲೆ ನಿರ್ಮಾಣ ಮಾಡಲಾಯಿತು. ಅದು ಆಗಿನ ಕಾಲ. ಈಗ ಯಾವುದೇ ಕಾರಣಕ್ಕೆ ಕೆರೆಗಳನ್ನು ಒತ್ತುವರಿ ಮಾಡುವುದಿಲ್ಲ. ನಾವು ಕೆರೆಗಳ ಸಂರಕ್ಷಣೆ ಮಾಡಬೇಕು ಎಂದು ಈ ತಿದ್ದುಪಡಿಗೆ ಮುಂದಾಗಿದ್ದೇವೆ’ ಎಂದು ಸಮರ್ಥನೆ ನೀಡಿದರು.

ತೆಲಂಗಾಣ, ಆಂಧ್ರ ಪ್ರದೇಶ, ಅಸ್ಸಾಂ, ಮಧ್ಯಪ್ರದೇಶ, ತಮಿಳುನಾಡು ಮತ್ತಿತರ ರಾಜ್ಯಗಳಲ್ಲಿರುವ ಬಫರ್ ಝೋನ್ ಕುರಿತು ಮಾಹಿತಿ ನೀಡಿದ ಅವರು, ‘ನಮಗೆ ಎನ್‌ಜಿಟಿ ತೀರ್ಪುಗಳ ಬಗ್ಗೆಯೂ ಅರಿವಿದೆ. ಸುಪ್ರೀಂ ಕೋರ್ಟ್‌ನ ತೀರ್ಪುಗಳ ವಿರುದ್ಧ ಹೋಗುತ್ತಿಲ್ಲ. ಬೆಂಗಳೂರಿನ ರಾಜಕಾಲುವೆಗಳ ಬಫರ್ ಝೋನ್‌ಗಳಲ್ಲಿ ಕಟ್ಟಡ ಹಾಗೂ ಇತರ ನಿರ್ಮಾಣ ಕೆಲಸಗಳು ಆಗುತ್ತವೆ ಎನ್ನುವ ಮುನ್ನೆಚರಿಕೆ ವಹಿಸಿಕೊಂಡು ಸುಮಾರು 300 ಕಿ.ಮೀ ಉದ್ದಕ್ಕೆ ರಾಜಕಾಲುವೆ ಪಕ್ಕದಲ್ಲಿ ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದೇವೆ’ ಎಂದರು.

ಎರಡು ಮಸೂದೆಗಳಿಗೆ ಅಂಗೀಕಾರ: ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ‘ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ’ ಎಂದು ನಾಮಕರಣ ಮಾಡಲು ‘ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಮಸೂದೆ’ ಮತ್ತು ಅಂತರ್ಜಲ ಸಂರಕ್ಷಣೆಗಾಗಿ ಕೇಂದ್ರ ಅಂತರ್ಜಲ ಪ್ರಾಧಿಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಮಸೂದೆಗೆ ವಿಧಾನಸಭೆ ಅಂಗೀಕಾರ ನೀಡಿತು.



ಪರಿಷತ್ ಕಲಾಪದಲ್ಲಿ ಒಳಮೀಸಲಾತಿ ಕುರಿತ ಚರ್ಚೆಯಲ್ಲಿ ಬಿಜೆಪಿ ಸದಸ್ಯರು ಪಾಲ್ಗೊಂಡಿದ್ದರು– ಚಿತ್ರ: ಪ್ರಶಾಂತ್ ಎಚ್.ಜಿ.

‘ಪ್ರಜಾವಾಣಿ’ ವರದಿ ಉಲ್ಲೇಖ

ಬೆಂಗಳೂರು: ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಅವರು ವಿಧಾನ ಪರಿಷತ್ತಿನ ಮಂಗಳವಾರದ ಕಲಾಪದ ಶೂನ್ಯವೇಳೆಯಲ್ಲಿ ‘ಪ್ರಜಾವಾಣಿ’ಯ ವರದಿಯನ್ನು ಉಲ್ಲೇಖಿಸಿದರು.

ಬಿಹಾರದಲ್ಲಿನ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ಕಾಂಗ್ರೆಸ್‌ನ ರಾಹುಲ್ ಗಾಂಧಿ ಮಾಡಿರುವ ಮತ ಕಳ್ಳತನದ ಆರೋಪ ಕುರಿತು ‘ವೋಟ್ ಫಾರ್ ಡೆಮಾಕ್ರಸಿ’ ಮತ್ತು ‘ಎದ್ದೇಳು ಕರ್ನಾಟಕ’ ಸಂಘಟನೆಗಳು ಸೋಮವಾರ ದುಂಡುಮೇಜಿನ ಸಭೆ ಆಯೋಜಿಸಿದ್ದವು. ಈ ಸಭೆಯ ನಿರ್ಣಯಗಳ ಬಗ್ಗೆ ‘ಪ್ರಜಾವಾಣಿ’ಯಲ್ಲಿ, ‘ಇವಿಎಂ ದುರ್ಬಳಕೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ’ ಎಂಬ ತಲೆಬರಹದ ಅಡಿಯಲ್ಲಿ ವರದಿ ಪ್ರಕಟವಾಗಿತ್ತು.

ಹರಿಪ್ರಸಾದ್ ಅವರು ಈ ವರದಿ ಉಲ್ಲೇಖಿಸಿ, ‘ಚುನಾವಣಾ ಆಯೋಗವು ಬಿಜೆಪಿಯ ಪರವಾಗಿ ಕೆಲಸ ಮಾಡುತ್ತಿದೆ. ಅವರನ್ನು ಬೆಂಬಲಿಸದ ಮತದಾರರನ್ನು, ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ ಎಂದು ಸಭೆಯಲ್ಲಿ ಆರೋಪಿಸಲಾಗಿದೆ. ಚುನಾವಣಾ ಆಯೋಗದ ಕ್ರಮವನ್ನು ಖಂಡಿಸಿ ಸರ್ಕಾರವು ನಿರ್ಣಯ ಕೈಗೊಳ್ಳಬೇಕು. ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು’ ಎಂದು ಸರ್ಕಾರವನ್ನು ಒತ್ತಾಯಿಸಿದರು.

‘ಭಾರತ, ಚೀನಾ ಸಂಬಂಧ ಬಲಿಷ್ಠ’

ವಾಂಗ್ ಯಿ ಜೊತೆ ನಡೆದ ಸಭೆಯಲ್ಲಿ ಜೈಶಂಕರ್ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): ‘ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಕಳೆದ ಒಂಬತ್ತು ತಿಂಗಳಿಂದ ಶಾಂತಿ ನೆಲಸಿದೆ. ಈ ಕಾರಣಕ್ಕೆ ಚೀನಾ ಮತ್ತು ಭಾರತ ನಡುವಿನ ಸಂಬಂಧದಲ್ಲಿ ‘ಏರುಗತಿ’ ಕಾಣಬಹುದಾಗಿದೆ’ ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮಂಗಳವಾರ ಹೇಳಿದರು.

ಗಡಿ ಸಮಸ್ಯೆ ಕುರಿತಂತೆ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರೊಂದಿಗೆ ನಡೆದ ದ್ವಿಪಕ್ಷೀಯ ಮಾತುಕತೆ ವೇಳೆ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಚೀನಾಕ್ಕೆ ಭೇಟಿ ನೀಡುತ್ತಿದ್ದು, ಈ ಸಂದರ್ಭದಲ್ಲಿ ಡೊಭಾಲ್ ಅವರ ಈ ಹೇಳಿಕೆಗೆ ಮಹತ್ವ ಬಂದಿದೆ.

‘ವಿಶೇಷ ಪ್ರತಿನಿಧಿಗಳ’ ಕಾರ್ಯವಿಧಾನ ಚೌಕಟ್ಟಿನಡಿ ಆಯೋಜಿಸಿದ್ದ ಮಾತುಕತೆಯಲ್ಲಿ,

> **ದ್ವಿಪಕ್ಷೀಯ ಸಂಬಂಧ ಗಟ್ಟಿಗೊಂಡ ಕಾರಣ ನಿರ್ಮಾಣವಾಗಿರುವ ಪರಿಸ್ಥಿತಿಯಿಂದಾಗಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿ ಉಭಯ ದೇಶಗಳ ನಡುವಿನ ಮಾತುಕತೆಗಳಿಗೆ ಬಲಬಂದಿದೆ**
> **ಅಜಿತ್ ಡೊಭಾಲ್**
> ರಾಷ್ಟ್ರೀಯ ಭದ್ರತಾ ಸಲಹೆಗಾರ

ಜೈಶಂಕರ್ ಹಾಗೂ ವಾಂಗ್ ಯಿ ಅವರು ಗಡಿಗೆ ಸಂಬಂಧಿಸಿ ವಿವಿಧ ವಿಚಾರಗಳ ಕುರಿತು ಚರ್ಚೆ ನಡೆಸಿದರು.

‘ವಿಶೇಷ ಪ್ರತಿನಿಧಿಗಳ’ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಕಳೆದ ಡಿಸೆಂಬರ್‌ನಲ್ಲಿ ಬೀಜಿಂಗ್‌ಗೆ ಭೇಟಿ ನೀಡಿದ್ದನ್ನು ಪ್ರಸ್ತಾಪಿಸಿದ ಡೊಭಾಲ್,‘ಈ ಭೇಟಿ ವೇಳೆ ನಡೆದ ಮಾತುಕತೆ ನಂತರ, ಉಭಯ ದೇಶಗಳ ನಡುವಿನ ಸಂಬಂಧ ಮತ್ತಷ್ಟು ಗಟ್ಟಿಯಾಗಿದೆ’ ಎಂದರು.

‘ಗಡಿಗಳಲ್ಲಿ ಶಾಂತಿ ನೆಲಸಿದೆ. ಹೀಗಾಗಿ, ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತಂತೆ ಉಭಯ ದೇಶಗಳ ನಡುವೆ ಗಮನಾರ್ಹ ಮಾತುಕತೆಗಳು ನಡೆಯುತ್ತಿವೆ’ ಎಂದು ಹೇಳಿದರು.



ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಹಾಗೂ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ನವದೆಹಲಿಯಲ್ಲಿ ಮಾತುಕತೆ ನಡೆಸಿದರು ಎಪಿ/ಪಿಟಿಐ ಚಿತ್ರ

ವಾಂಗ್ ಸಂತಸ: ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಮಾತನಾಡಿ, ‘ಸಂವಹನ ಹಾಗೂ ಸಹಕಾರದದ ಮೂಲಕ ಎರಡೂ ದೇಶಗಳು ವಿಶ್ವಾಸ ವೃದ್ಧಿಗೆ ಒತ್ತು ನೀಡಬೇಕು. ಜೊತೆಗೆ, ಉಭಯ ದೇಶಗಳ ನಡುವಿನ ನಿರ್ದಿಷ್ಟ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು’ ಎಂದು ಹೇಳಿದರು.

‘ಸಂಬಂಧಗಳ ಸುಧಾರಣೆ ಮತ್ತು ಪ್ರಗತಿ ಕುರಿತಂತೆ ನಮ್ಮ ದ್ವಿಪಕ್ಷೀಯ ಬಾಂಧವ್ಯ ಸವಾಲು ಎದುರಿಸುತ್ತಿದೆ. ಈ ಕಾರಣಕ್ಕೆ, ಎಸ್‌ಸಿಒ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಪ್ರಧಾನಿ ಮೋದಿ ಅವರು ಚೀನಾಕ್ಕೆ ಭೇಟಿ ನೀಡುತ್ತಿರುವುದಕ್ಕೆ ಬಹಳ ಮಹತ್ವ ಇದೆ’ ಎಂದು ಯಿ ಹೇಳಿದರು.

‘ಶೃಂಗಸಭೆಯಲ್ಲಿ ಮೋದಿ ಭಾಗಿ’

ಚೀನಾದ ತಿಯಾನ್‌ಜಿನ್ ನಗರದಲ್ಲಿ ಆಗಸ್ಟ್ 31 ಹಾಗೂ ಸೆಪ್ಟೆಂಬರ್ 1ರಂದು ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಶೃಂಗಸಭೆ ನಡೆಯಲಿದ್ದು, ಪ್ರಧಾನಿ ಪಾಲ್ಗೊಳ್ಳುವರು ಎಂದು ಡೊಭಾಲ್ ಇದೇ ವೇಳೆ ಘೋಷಿಸಿದರು.

‘ಮೋದಿ ಅವರ ಚೀನಾ ಭೇಟಿ ಹಿನ್ನೆಲೆಯಲ್ಲಿ ಈ ವಿಶೇಷ ಪ್ರತಿನಿಧಿಗಳ ಮಾತುಕತೆಗೆ ಹೆಚ್ಚು ಮಹತ್ವ ಇದೆ. ರಷ್ಯಾದ ಕಜನ್ ನಗರದಲ್ಲಿ ಕಳೆದ ಅಕ್ಟೋಬರ್‌ನಲ್ಲಿ ನಡೆದ ಶೃಂಗಸಭೆ ಸಂದರ್ಭದಲ್ಲಿ ಮೋದಿ ಹಾಗೂ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಮಾತುಕತೆ ನಡೆಸಿದ್ದರು. ಉಭಯ ನಾಯಕರ ಈ ಭೇಟಿಯಿಂದ ಎರಡೂ ದೇಶಗಳಿಗೆ ಪ್ರಯೋಜನವಾಗಿದೆ’ ಎಂದು ಹೇಳಿದರು.

‘ತೈವಾನ್: ಭಾರತದ ನಿಲುವು ಅಚಲ’

ನವದೆಹಲಿ(ಪಿಟಿಐ): ‘ತೈವಾನ್ ಕುರಿತಂತೆ ಭಾರತದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಸರ್ಕಾರದ ಮೂಲಗಳು ಮಂಗಳವಾರ ಸ್ಪಷ್ಟಪಡಿಸಿವೆ.

‘ವಿಶ್ವದ ಇತರ ರಾಷ್ಟ್ರಗಳಂತೆ, ಭಾರತ ಕೂಡ ತೈವಾನ್ ಜೊತೆ ದ್ವಿಪಕ್ಷೀಯ ಸಂಬಂಧ ಹೊಂದಿದೆ. ಆರ್ಥಿಕತೆ, ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ಒಪ್ಪಂದಗಳ ಮೇಲೆ ಈ ಸಂಬಂಧ ಕೇಂದ್ರೀಕೃತವಾಗಿದೆ’ ಎಂದು ಕೇಂದ್ರ ಸರ್ಕಾರ ಹೇಳಿದ್ದಾಗಿ ಇವೇ ಮೂಲಗಳು ತಿಳಿಸಿವೆ.

ಸಚಿವ ಎಸ್.ಜೈಶಂಕರ್ ಅವರು ವಿದೇಶಾಂಗ ಸಚಿವ ವಾಂಗ್ ಯಿ ಅವರೊಂದಿಗೆ ಸೋಮವಾರ ಮಾತುಕತೆ ನಡೆಸಿದ ಬಳಿಕ ಚೀನಾ ವಿದೇಶಾಂಗ ಸಚಿವಾಲಯ ಹೇಳಿಕೆಯೊಂದನ್ನು ಬಿಡುಗಡೆ ಮಾಡಿತ್ತು.



‘ತೈವಾನ್‌ಅನ್ನು ಚೀನಾದ ಭಾಗವೆಂದು ಭಾರತ ಪರಿಗಣಿಸುತ್ತದೆ ಎಂಬುದಾಗಿ ಜೈಶಂಕರ್ ಅವರು ವಾಂಗ್ ಯಿ ಅವರಿಗೆ ಸೋಮವಾರದ ಸಭೆಯಲ್ಲಿ ಹೇಳಿದ್ದರು’ ಎಂಬುದಾಗಿ ಈ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿತ್ತು. ಇದರ ಬೆನ್ನಲ್ಲೇ ಕೇಂದ್ರ ಸರ್ಕಾರವು ಈ ಸ್ಪಷ್ಟನೆ ನೀಡಿದೆ.

ಈ ಬೆಳವಣಿಗೆಗಳ ನಂತರ, ‘ಜೈಶಂಕರ್ ಅವರ ಹೇಳಿಕೆಯನ್ನು ಚೀನಾ ವಿದೇಶಾಂಗ ಸಚಿವಾಲಯ ತಪ್ಪಾಗಿ ಉಲ್ಲೇಖಿಸಿತ್ತು’ ಎಂದೂ ಮೂಲಗಳು ಹೇಳಿವೆ.

ಚೀನಾ ಹೇಳಿಕೆ ಕುರಿತು ಅಚ್ಚರಿ ವ್ಯಕ್ತಪಡಿಸಿದ್ದ ಸಚಿವ ಜೈಶಂಕರ್, ‘ಗಡಿ ವಿಚಾರವಾಗಿ ಭಾರತದೊಂದಿಗೆ ಯಾವ ರೀತಿ ಚೀನಾ ವ್ಯವಹರಿಸುತ್ತಿದೆಯೋ ಅದೇ ರೀತಿ ತೈವಾನ್‌ನೊಂದಿಗೂ ವ್ಯವಹರಿಸುತ್ತಿದೆ’ ಎಂದು ಪ್ರತಿಕ್ರಿಯಿಸಿದ್ದರು.

ಜನ್ಮ ನೀಡಲು ಸಂತ್ರಸ್ತೆ ಸಮ್ಮತಿ

ನವದೆಹಲಿ (ಪಿಟಿಐ): ಅತ್ಯಾಚಾರ ಸಂತ್ರಸ್ತೆ, 30 ವಾರಗಳ ಗರ್ಭಿಣಿಯಾದ 14 ವರ್ಷದ ಬಾಲಕಿಯು ಮಗುವಿಗೆ ಜನ್ಮ ನೀಡಲು ಅನುಮತಿ ನೀಡಿದ್ದಾಳೆ. ಗರ್ಭಪಾತಕ್ಕೆ ಅನುಮತಿ ನೀಡಬೇಕು ಎಂದು ಕೋರಿ ಬಾಲಕಿಯು ದೆಹಲಿ ಹೈಕೋರ್ಟ್‌ ಮೆಟ್ಟಿಲೇರಿದ್ದಳು.

‘ಈ ಮಗುವನ್ನು ದತ್ತು ನೀಡಲಾಗುವುದು’ ಎಂದು ನ್ಯಾಯಾಲಯ ಹೇಳಿದೆ. ಸದ್ಯ ಬಾಲಕಿಯು ದೆಹಲಿಯ ಆಶ್ರಯಧಾಮವೊಂದರಲ್ಲಿ ಆಶ್ರಯ ಪಡೆದಿದ್ದಾಳೆ. ಹತ್ತಿರದ ಸಂಬಂಧಿಯೇ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ಈ ವ್ಯಕ್ತಿಯ ತಾಯಿಯ ಸಹಾಯದಿಂದಲೇ ಬಾಲಕಿಯು ನ್ಯಾಯಾಲಯದ ಮೊರೆ ಹೋಗಿದ್ದಾಳೆ. ತಾನು ಗರ್ಭಿಣಿ ಎಂದು ಬಾಲಕಿಗೆ ಆಗಸ್ಟ್ ಮೊದಲ ವಾರದಲ್ಲಿ ವೈದ್ಯರ ಮೂಲಕ ತಿಳಿಯಿತು. ಅದಾಗಲೇ ಆಕೆಯು 27 ವಾರಗಳ ಗರ್ಭಿಣಿಯಾಗಿದ್ದಳು. ನ್ಯಾಯಾಲಯಕ್ಕೆ ಹೋಗುವಂತೆ ವೈದ್ಯರೇ ಬಾಲಕಿಗೆ ಸಲಹೆ ನೀಡಿದ್ದರು.

‘ಮಹಿಳಾ ಆಯೋಗವು ಬಾಲಕಿಯೊಂದಿಗೆ ಮಾತುಕತೆ ನಡೆಸಿ, ನ್ಯಾಯಾಲಯಕ್ಕೆ ಮಾಹಿತಿ ನೀಡಬೇಕು’ ಎಂದು ನ್ಯಾಯಮೂರ್ತಿ ಸ್ವರ್ಣಕಾಂತ್ ಶರ್ಮಾ ಆಗಸ್ಟ್ 18ರಂದು ಆದೇಶ ನೀಡಿದ್ದರು.

ಸುದರ್ಶನ ರೆಡ್ಡಿ ವಿಪಕ್ಷ ಅಭ್ಯರ್ಥಿ

ಒಂದನೇ ಪುಟದಿಂದ...

ತಮಿಳುನಾಡಿನ ಪ್ರಖ್ಯಾತ ವ್ಯಕ್ತಿಯನ್ನು ಕಣಕ್ಕಿಳಿಸಿ ಎನ್‌ಡಿಎಗೆ ತಿರುಗೇಟು ನೀಡಬೇಕು ಎಂದು ಡಿಎಂಕೆ ಬಯಸಿತ್ತು. ಇದಕ್ಕೆ ಉಳಿದ ಪಕ್ಷಗಳು ಒಪ್ಪಿಗೆ ಸೂಚಿಸಲಿಲ್ಲ.

ಎನ್. ಚಂದ್ರಬಾಬು ನಾಯ್ಡು ನೇತೃತ್ವದ ಟಿಡಿಪಿ ಮತ್ತು ಕೆ. ಚಂದ್ರಶೇಖರ್ ರಾವ್ ನೇತೃತ್ವದ ಬಿಆರ್‌ಎಸ್‌ಗೆ ರಾಜಕೀಯ ಸಂದಿಗ್ಧ ಉಂಟುಮಾಡಬಹುದಾದ ತೆಲುಗು ಅಭ್ಯರ್ಥಿಯನ್ನು ಆಯ್ಕೆ ಮಾಡುವ ಮೂಲಕ ಪ್ರತಿದಾಳಿ ನಡೆಸಲಾಗಿದೆ ಎಂದು ವಿಪಕ್ಷಗಳ ಒಂದು ವರ್ಗ ವ್ಯಾಖ್ಯಾನಿಸಿದೆ.

ಎರಡು ದಿನಗಳ ಸುದೀರ್ಘ ಸಮಾಲೋಚನೆಯ ಬಳಿಕ ವಿಪಕ್ಷ ಕೂಟವು ಅಭ್ಯರ್ಥಿಯ ಹೆಸರನ್ನು ಅಖೈರುಗೊಳಿಸಿದೆ. ಇಸ್ರೊ ಮಾಜಿ ವಿಜ್ಞಾನಿ ಮೈಲ್‌ಸ್ವಾಮಿ ಅಣ್ಣಾದೊರೈ, ಮಹಾತ್ಮ ಗಾಂಧಿಯವರ ಮೊಮ್ಮಗ ತುಷಾರ್ ಗಾಂಧಿ ಹಾಗೂ ರಾಜ್ಯಸಭಾ ಮಾಜಿ ಸದಸ್ಯ ಬಾಲಚಂದ್ರ ಮುಂಗೇಕರ್ ಅವರ ಹೆಸರುಗಳನ್ನು ಸಹ ಚರ್ಚಿಸಲಾಗಿತ್ತು. ವಿರೋಧ ಪಕ್ಷದ ಜಂಟಿ ಅಭ್ಯರ್ಥಿಯನ್ನು ಆಮ್ ಆದ್ಮಿ ಪಕ್ಷ ಸಹ ಬೆಂಬಲಿಸಲಿದೆ ಎಂಬ ವಿಶ್ವಾಸದಲ್ಲಿ ಮೈತ್ರಿಕೂಟದ ನಾಯಕರಿದ್ದಾರೆ.

ಇಂಡಿಯಾ ಕೂಟದ ನಾಯಕರ ಜತೆಗೆ ಮಾಧ್ಯಮಗೋಷ್ಠಿಯಲ್ಲಿ ಅಭ್ಯರ್ಥಿಯ ಹೆಸರನ್ನು ಪ್ರಕಟಿಸಿದ ಖರ್ಗೆ, ‘ಈ ಚುನಾವಣೆಯು ಸೈದ್ಧಾಂತಿಕ ಹೋರಾಟವಾಗಿದೆ. ನ್ಯಾಯಮೂರ್ತಿ ರೆಡ್ಡಿ ಅವರು ಭಾರತದ ಅತ್ಯಂತ ವಿಶಿಷ್ಟ ಮತ್ತು ಪ್ರಗತಿಪರ ನ್ಯಾಯಶಾಸ್ತ್ರಜ್ಞರಲ್ಲಿ ಒಬ್ಬರು’ ಎಂದು ಬಣ್ಣಿಸಿದರು.

ವಿರೋಧ ಪಕ್ಷದ ಸಂಸದರು ಬುಧವಾರ ಮಧ್ಯಾಹ್ನ 1 ಗಂಟೆಗೆ ‘ಸಂವಿಧಾನ ಸದನ’ದ ಸೆಂಟ್ರಲ್ ಹಾಲ್‌ನಲ್ಲಿ ಸಭೆ ಸೇರಲಿದ್ದಾರೆ ಎಂದು ಅವರು ಹೇಳಿದರು. ತೃಣಮೂಲ ಕಾಂಗ್ರೆಸ್‌ನ ಡೆರೆಕ್ ಒಬ್ರಯಾನ್, ‘ಈ ಕೂಟವು ಇಂಡಿಯಾ ಬಣ ಅಲ್ಲವೆಂದು ಖರ್ಗೆ ಉಲ್ಲೇಖಿಸಿದ್ದಾರೆ. ಹೀಗಾಗಿ, ಈ ಕೂಟದಲ್ಲಿ ಎಎಪಿ ಇರಲಿದೆ’ ಎಂದು ಒತ್ತಿ ಹೇಳಿದರು.

79 ವರ್ಷದ ರೆಡ್ಡಿ ಅವರು ಗೋವಾದ ಮೊದಲ ಲೋಕಾಯುಕ್ತರಾಗಿದ್ದರು. ತೆಲಂಗಾಣದಲ್ಲಿ ಜಾತಿ ಜನಗಣತಿಗಾಗಿ ಅಲ್ಲಿನ ಕಾಂಗ್ರೆಸ್ ಸಮಿತಿ ರಚಿಸಿದ್ದ ತಜ್ಞರ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು.


ಆಂಧ್ರ ಪ್ರದೇಶ ಹೈಕೋರ್ಟ್‌ನ ನ್ಯಾಯಮೂರ್ತಿ, ಗುವಾಹಟಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹಾಗೂ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಅವರು ಕಾರ್ಯನಿರ್ವಹಿಸಿದ್ದರು. 2011ರ ಜುಲೈನಲ್ಲಿ ನಿವೃತ್ತರಾಗಿದ್ದರು.

ಕೆಎಂಇಆರ್‌ಸಿ ಮೇಲುಸ್ತುವಾರಿ

ಗಣಿಗಾರಿಕೆಯಿಂದ ಬಾಧಿತವಾಗಿರುವ ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಪರಿಹಾರ ಮತ್ತು ಪುನಶ್ಚೇತನ ಕೆಲಸಗಳನ್ನು ಅನುಷ್ಠಾನಕ್ಕೆ ತರಲು ರಚಿಸಿರುವ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ (ಕೆಎಂಇಆರ್‌ಸಿ) ಮೇಲುಸ್ತುವಾರಿ ಪ್ರಾಧಿಕಾರಿಯಾಗಿ ನ್ಯಾಯಮೂರ್ತಿ ಬಿ. ಸುದರ್ಶನ ರೆಡ್ಡಿ ಅವರು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ.

ರೆಡ್ಡಿ ಅವರನ್ನು ಕೆಎಂಇಆರ್‌ಸಿ ಮೇಲುಸ್ತುವಾರಿ ಪ್ರಾಧಿಕಾರಿಯಾಗಿ ನೇಮಿಸಿ ಸುಪ್ರೀಂ ಕೋರ್ಟ್ 2022ರ ಏಪ್ರಿಲ್ 21ರಂದು ಆದೇಶ ಹೊರಡಿಸಿತ್ತು. 2023ರಿಂದ ಅವರು ಪ್ರಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಗಣಿಗಾರಿಕೆಯಿಂದ ಬಾಧಿತವಾಗಿರುವ ನಾಲ್ಕು ಜಿಲ್ಲೆಗಳಲ್ಲಿ ₹30,000 ಕೋಟಿ ವೆಚ್ಚದ ಪರಿಹಾರ ಮತ್ತು ಪುನರ್ವಸತಿ ಯೋಜನೆಗಳ ಅನುಷ್ಠಾನದ ಮೇಲುಸ್ತುವಾರಿಯನ್ನು ಅವರು ನಿರ್ವಹಿಸಬೇಕಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,876
ಇಂದಿನ ಅಂತ್ಯ:	24,980
ದಿನದ ಕನಿಷ್ಠ:	24,873
▲	103

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹540
	12 ಕ್ಕೆ	₹72
ಮೈಸೂರು:	100 ಕ್ಕೆ	₹548

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹171

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1285 (1290)
ಸೂರ್ಯಕಾಂತಿ (ರಿಫೈನ್ಡ್)	₹1410 (1400)
ಪಾಮೋಲಿನ್	₹1285 (1290)

ಮುಂಬೈ ಧಾರಣೆ (ಶೇಂಗಾ)

19-08-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1283 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1335 (1330)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,650 (99,100)
ಬೆಳ್ಳಿ ಕೆ.ಜಿಗೆ	1,13,500 (1,14,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹333-595
ದ್ವಿತಳಿ (ಬಿ.ವಿ)	₹387-800

ವರಮಾನ ನಷ್ಟ ₹85,000 ಕೋಟಿ

‘ತೆರಿಗೆ ಹಂತದಲ್ಲಿನ ಬದಲಾವಣೆಯಿಂದಾಗಿ ₹1.98 ಲಕ್ಷ ಕೋಟಿ ಮೌಲ್ಯದ ಬೇಡಿಕೆ ಸೃಷ್ಟಿ’

ಮುಖ್ಯಾಂಶಗಳು

- ಜಿಎಸ್‌ಟಿ ಸುಧಾರಣೆಯಿಂದ ಹಣದುಬ್ಬರ ಇಳಿಕೆ
- ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳ ಸಾಧ್ಯತೆ
- ಅಕ್ಟೋಬರ್‌ನಿಂದ ಬದಲಾವಣೆಗಳು ಜಾರಿ?



ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿ ತರಲು ಉದ್ದೇಶಿಸಿರುವ ಸುಧಾರಣೆಗಳಿಂದಾಗಿ ಸರ್ಕಾರಗಳಿಗೆ ವಾರ್ಷಿಕ ₹85 ಸಾವಿರ ಕೋಟಿ ವರಮಾನ ನಷ್ಟ ಆಗಲಿದೆ ಎಂದು ಎಸ್‌ಬಿಐ ರಿಸರ್ಚ್ ಅಂದಾಜು ಮಾಡಿದೆ.

ಆದರೆ ಈ ಸುಧಾರಣೆಗಳ ಪರಿಣಾಮವಾಗಿ ಮಾರುಕಟ್ಟೆಯಲ್ಲಿ ₹1.98 ಲಕ್ಷ ಕೋಟಿ ಮೌಲ್ಯದ ಬೇಡಿಕೆಯು ಹೊಸದಾಗಿ ಸೃಷ್ಟಿ ಆಗಲಿದೆ ಎಂದು ಅದು ಅಂದಾಜಿನಲ್ಲಿ ಹೇಳಿದೆ.

ಕೇಂದ್ರ ಸರ್ಕಾರವು ಪ್ರಸ್ತಾವ ಮಾಡಿರುವ ‘ಹೊಸ ತಲೆಮಾರಿನ ಜಿಎಸ್‌ಟಿ’ ವ್ಯವಸ್ಥೆಯು ಎರಡು ಹಂತಗಳ ತೆರಿಗೆಗಳನ್ನು ಮಾತ್ರ ಉಳಿಸಿಕೊಳ್ಳಲಿದೆ. ಶೇ 12 ಹಾಗೂ ಶೇ 28ರ ತೆರಿಗೆ ಹಂತಗಳು ಇನ್ನಿಲ್ಲವಾಗಲಿದ್ದು, ಶೇ 5 ಹಾಗೂ ಶೇ 18ರ ತೆರಿಗೆ ಹಂತಗಳು ಮಾತ್ರ ಉಳಿಯಲಿವೆ. ತಂಬಾಕಿನಂತಹ ಕೆಲವೇ ಕೆಲವು ಉತ್ಪನ್ನಗಳಿಗೆ ಶೇ 40ರಷ್ಟು ತೆರಿಗೆ ಇರಲಿದೆ.

ಜಿಎಸ್‌ಟಿ ಸುಧಾರಣೆಯಿಂದಾಗಿ ಬೇಡಿಕೆಯಲ್ಲಿ ಆಗಲಿರುವ ಹೆಚ್ಚಳವು ದೇಶದ ಜಿಡಿಪಿ ಬೆಳವಣಿಗೆಯು ಶೇ 0.6ರಷ್ಟು ಹೆಚ್ಚುವಂತೆ ಮಾಡಲಿದೆ. ಆದರೆ ಇದು ಹಣದುಬ್ಬರಕ್ಕೆ ಕಾರಣ ಆಗುವುದಿಲ್ಲ. ಏಕೆಂದರೆ ಜನರು ವ್ಯಾಪಕವಾಗಿ ಬಳಕೆ ಮಾಡುವ ಉತ್ಪನ್ನಗಳು, ಸರಕುಗಳ ಮೇಲಿನ ತೆರಿಗೆಯು ಕಡಿಮೆ ಹಂತಕ್ಕೆ ಬರುವ ನಿರೀಕ್ಷೆ ಇದೆ ಎಂದು ಅದು ಹೇಳಿದೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ಪ್ರಮಾಣವು ಶೇ 0.20ರಿಂದ ಶೇ 0.25ರವರೆಗೆ ಇಳಿಕೆ ಕಾಣಬಹುದು ಎಂದು ಅಂದಾಜು ಮಾಡಿದೆ.

ಅಗತ್ಯ ವಸ್ತುಗಳಾದ ಆಹಾರ ಮತ್ತು ಬಟ್ಟೆಗೆ ಶೇ 12ರಷ್ಟು ತೆರಿಗೆ ಬದಲು ಶೇ 5ರಷ್ಟು ತೆರಿಗೆ ವಿಧಿಸುವ ಸಾಧ್ಯತೆ ಇರುವ ಕಾರಣ, ಈ ವಸ್ತುಗಳ ಹಣದುಬ್ಬರ ಪ್ರಮಾಣವು ಶೇ 0.1ರಿಂದ ಶೇ 0.15ರಷ್ಟು ಕಡಿಮೆ ಆಗುವ ಸಾಧ್ಯತೆ ಇದೆ.

ಬದಲಾವಣೆ ಪ್ರಸ್ತಾವಗಳು ಈ ವರ್ಷದ ಅಕ್ಟೋಬರ್‌ನಲ್ಲಿ ಜಾರಿಗೆ ಬಂದಲ್ಲಿ, ಈ ಹಣಕಾಸು ವರ್ಷದಲ್ಲಿ ಆಗುವ ವರಮಾನ ನಷ್ಟವು ₹45 ಸಾವಿರ ಕೋಟಿ ಆಗಬಹುದು.

ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾದ ವರಮಾನ ತೆರಿಗೆ ಮಿತಿ ಸಡಿಲಿಕೆ ಕ್ರಮ ಹಾಗೂ ಜಿಎಸ್‌ಟಿ ಸುಧಾರಣೆಯ ಒಟ್ಟು ಪರಿಣಾಮವಾಗಿ, ಅರ್ಥ ವ್ಯವಸ್ಥೆಯಲ್ಲಿ ₹5.31 ಲಕ್ಷ ಕೋಟಿ ಮೌಲ್ಯದ ಬೇಡಿಕೆ ಸೃಷ್ಟಿಯಾಗಲಿದೆ ಎಂದು ಎಸ್‌ಬಿಐ ಅಂದಾಜು ಮಾಡಿದೆ.

ಕೇಂದ್ರದ ಪ್ರಸ್ತಾವವನ್ನು ರಾಜ್ಯಗಳ ಸಚಿವರ ಗುಂಪು ಬುಧವಾರ ಹಾಗೂ ಗುರುವಾರ ಪರಾಮರ್ಶೆಗೆ ಒಳಪಡಿಸಲಿದೆ. ಸಚಿವರ ಗುಂಪು ಈ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿದರೆ, ಅದನ್ನು ಜಿಎಸ್‌ಟಿ ಮಂಡಳಿಯ ಮುಂದೆ ಇರಿಸಲಾಗುತ್ತದೆ. ಜಿಎಸ್‌ಟಿ ಮಂಡಳಿಯ ಸಭೆ ಮುಂದಿನ ತಿಂಗಳು ನಡೆಯಲಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಘುರಾಮ್, ಯಲಹಂಕ

- **ಪ್ರಶ್ನೆ: ಇತ್ತೀಚೆಗೆ ಥೀಮ್ಯಾಟಿಕ್ ಮ್ಯೂಚುವಲ್ ಫಂಡ್‌ಗಳು ಹೆಚ್ಚು ಪ್ರಸ್ತುತವಾಗುತ್ತಿವೆ ಎಂಬುದು ನನ್ನ ಅಭಿಪ್ರಾಯ. ಇವುಗಳಲ್ಲಿ ಹೂಡಿಕೆ ಮಾಡುವುದು ಕೆಲವೊಮ್ಮೆ ಲಾಭದಾಯಕ ಹಾಗೂ ಇನ್ನು ಕೆಲವೊಮ್ಮೆ ಹೆಚ್ಚು ಆರ್ಥಿಕ ಅಪಾಯದಿಂದ ಕೂಡಿದೆ ಎಂದು ಅನ್ನಿಸುತ್ತದೆ. ಹೀಗಿರುವಾಗ ಇಂತಹ ಫಂಡ್‌ಗಳನ್ನು ಹೂಡಿಕೆಗೆ ಆಯ್ಕೆ ಮಾಡುವುದು ಸೂಕ್ತವೇ ಅಥವಾ ಸಾಮಾನ್ಯ ಈಕ್ವಿಟಿ ವಿಭಾಗದಲ್ಲಿ ಹೂಡಿಕೆ ಸೂಕ್ತವೇ?**

ಉತ್ತರ: ಥೀಮ್ಯಾಟಿಕ್ ಫಂಡ್‌ಗಳು ನಿರ್ದಿಷ್ಟ ವಲಯ ಅಥವಾ ನಿರ್ದಿಷ್ಟ ಉದ್ದೇಶದ ಹೂಡಿಕೆ ಹಿನ್ನೆಲೆಯಲ್ಲಿ ರೂಪುಗೊಂಡ ಹೂಡಿಕೆ ಉತ್ಪನ್ನಗಳು. ಉದಾಹರಣೆಗೆ, ತಂತ್ರಜ್ಞಾನ, ಇಂಧನ, ಆರೋಗ್ಯಸೇವೆ, ಮೂಲಸೌಕರ್ಯ, ಸರಕು ಸಾಗಣೆ ಇತ್ಯಾದಿ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರಿಗೆ ಆಯಾ ವಲಯದ ಮೇಲಿನ ಭರವಸೆಯ ಆಧಾರದಲ್ಲಿ ಹೂಡಿಕೆ ಮಾಡುವ ಅವಕಾಶ ಮಾಡಿ ಕೊಡುತ್ತದೆ. ಇವು ಸಾಮಾನ್ಯ ಈಕ್ವಿಟಿ ವಿಭಾಗದ ಫಂಡ್‌ಗಳಿಗಿಂತ, ಆಯಾ ವಲಯಕ್ಕೆ ಹೆಚ್ಚು ಒತ್ತು ನೀಡುವ ಕಾರಣ ಲಾಭ-ನಷ್ಟ ಎರಡೂ ಅತಿ ಹೆಚ್ಚಿನ ಪ್ರಮಾಣದಲ್ಲಿ ಇವುಗಳಲ್ಲಿ ಕಾಣಿಸಿಕೊಳ್ಳಬಹುದು. ಹೀಗಾಗಿ, ಯಾವುದೇ ಹೂಡಿಕೆಗೂ ಮುನ್ನ ಹೂಡಿಕೆದಾರ ತಾನು ಯಾವ ಕ್ಷೇತ್ರದ ಬಗ್ಗೆ ಹೆಚ್ಚು ಭರವಸೆ ಹೊಂದಿದ್ದೇನೆ ಎಂಬುದನ್ನು ಸ್ಪಷ್ಟ ಮಾಡಿಕೊಳ್ಳಬೇಕು. ಅದೇ ರೀತಿ ಯಾವುದೇ ಕ್ಷೇತ್ರದಲ್ಲಿ ಇಳಿಕೆ ಆರಂಭವಾದಂತೆ ಆ ಕ್ಷೇತ್ರದಿಂದ ಹೂಡಿಕೆಯನ್ನು ಹಿಂಪಡೆಯುವ ನಿರ್ಧಾರವೂ ಅಷ್ಟೇ ಮುಖ್ಯವಾಗುತ್ತದೆ.

ಇಂತಹ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮೊದಲು ಈ ಕೆಳಗಿನ ವಿಚಾರಗಳನ್ನು ಗಮನದಲ್ಲಿಡುವುದು ಸೂಕ್ತ.

1. ಥೀಮ್ಯಾಟಿಕ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮೊದಲು ಸಾಕಷ್ಟು ವಲಯಗಳ ಬಗ್ಗೆ ಮಾಹಿತಿ ಕಲೆಹಾಕಿ ಅದನ್ನು ಅಧ್ಯಯನ ಮಾಡಬೇಕು. ನಮಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವ ಕ್ಷೇತ್ರವನ್ನೇ ಹೂಡಿಕೆಗೆ ಆಯ್ಕೆ ಮಾಡುವುದು ಸೂಕ್ತ.

2. ಹೂಡಿಕೆಗೆ ಆಯ್ಕೆ ಮಾಡಿದ ಕ್ಷೇತ್ರ ಎಷ್ಟು ಕಾಲ ಉತ್ತಮ ಸ್ಥಿತಿಯಲ್ಲಿ ಇರಬಹುದೆನ್ನುವ ನಿರೀಕ್ಷೆಯು ಆಯಾ ಥೀಮ್ಯಾಟಿಕ್ ಫಂಡ್‌ಗಳ ಹೂಡಿಕೆಗೆ ಆಯ್ಕೆಯಾದ ಕಂಪನಿಗಳ ಆದಾಯ, ಲಾಭ-ನಷ್ಟ ಇತ್ಯಾದಿ ವಿವರಗಳನ್ನು ಆಧರಿಸಿರುತ್ತದೆ. ಈ ಬಗ್ಗೆ ಪ್ರತಿ ತ್ರೈಮಾಸಿಕ ಅವಧಿಗೆ ಒಮ್ಮೆ ಪುನರ್ ವಿಮರ್ಶೆ ನಡೆಸಬೇಕು.

3. ನಾವು ನಿರೀಕ್ಷೆ ಮಾಡಿದ ಆದಾಯ ಬಂತೆಂದರೆ ಮತ್ತು ವಲಯ ಪರಿಮಿತದ ಚಕ್ರದಲ್ಲಿ ಸಾಕಷ್ಟು ವೃದ್ಧಿ ಕಂಡು ಇನ್ನೂ ಹೆಚ್ಚಿನ ಬೆಳವಣಿಗೆಯ ನಿರೀಕ್ಷೆ ಸಾಧ್ಯವಿಲ್ಲ ಎಂದು ಅನ್ನಿಸಿದರೆ, ಹೂಡಿಕೆಯಿಂದ ಹೊರಗುಳಿಯುವುದು ಉತ್ತಮ ಹಾಗೂ ಇತರ ಹೂಡಿಕೆಗಳಿಗೆ ಹಣವನ್ನು ವರ್ಗಾಯಿಸುವುದು ಸೂಕ್ತ.

4. ನಿರ್ದಿಷ್ಟ ಮೊತ್ತದ ಹಣವನ್ನು (ಉದಾಹರಣೆಗೆ - ಒಟ್ಟು ಮ್ಯೂಚುವಲ್ ಫಂಡ್ ಹೂಡಿಕೆಯ ಶೇ 20ರಿಂದ 25ರಷ್ಟು) ಮಾತ್ರ ಈ ಬಗೆಯ ಫಂಡ್‌ಗಳಲ್ಲಿ ತೊಡಗಿಸಿ. ಉಳಿದ ಮೊತ್ತವನ್ನು ಇತರ ಫಂಡ್‌ಗಳಲ್ಲಿ ತೊಡಗಿಸಿ.

ವಿಶ್ವವಿಜೇತ್, ಯಲಹಂಕ

- **ಪ್ರಶ್ನೆ: ಹೂಡಿಕೆಯ ವಿಚಾರ ಬಂದಾಗ ಕೆಲವೆಲ್ಲ ‘ಥಂಬ್ ರೂಲ್’ಗಳ ಆಧಾರದಲ್ಲಿ ಹೂಡಿಕೆ ವಿಶ್ಲೇಷಕರು ತಮ್ಮ ಅಭಿಪ್ರಾಯ ತಿಳಿಸುತ್ತಾರೆ. ಉದಾಹರಣೆಗೆ ‘ರೂಲ್ ಆಫ್ 72’ ಅಥವಾ ‘ರೂಲ್ ಆಫ್ 70’ ಇತ್ಯಾದಿಗಳನ್ನು ಹೇಳಲಾಗುತ್ತದೆ. ನಿಜ ಅರ್ಥದಲ್ಲಿ ಇವೆಲ್ಲ ವಾಸ್ತವದಲ್ಲಿ ಇವೆಯೇ ಅಥವಾ ಕೇವಲ ಮಾತುಕತೆಗೆ ಸೀಮಿತವಾದ ವಿಚಾರಗಳೇ?**


ಉತ್ತರ: ಹೂಡಿಕೆಯಲ್ಲಿ ಬಳಸುವ ಕೆಲವು ‘ಥಂಬ್ ರೂಲ್’ಗಳು ವಾಸ್ತವದಲ್ಲಿ ನಾವು ನಿತ್ಯದ ಬದುಕಿನಲ್ಲಿ ಬಳಸುವ ಕೈಬೆರಳ ಲೆಕ್ಕಾಚಾರದಂತೆ ನೆರವಾಗುವ ಮಾಹಿತಿಯಾಗಿದೆ. ಆದರೆ ಇವು ಅಂತಿಮ ನಿಯಮಗಳಲ್ಲ, ಕೇವಲ ಮಾರ್ಗದರ್ಶಕ ಸೂತ್ರಗಳು. ನೀವೇ ಹೇಳಿರುವ ಮಾಹಿತಿಯನ್ನು ಗಮನಿಸೋಣ ಹಾಗೂ ಕೆಲವು ಹೆಚ್ಚುವರಿ ಮಾಹಿತಿಯನ್ನು ನೋಡೋಣ.

1. ರೂಲ್ ಆಫ್ 72: ಇದು ಅತ್ಯಂತ ಜನಪ್ರಿಯ ನಿಯಮವಾಗಿದ್ದು, ಸಾಮಾನ್ಯವಾಗಿ ನಿರೀಕ್ಷಿತ ಬಡ್ಡಿದರದಲ್ಲಿ ಹೂಡಿಕೆಯ ಹಣ ದ್ವಿಗುಣವಾಗಲು ಬೇಕಾಗುವ ಸಮಯವನ್ನು ಅಂದಾಜಿಸಲು ಇದನ್ನು ಬಳಸಲಾಗುತ್ತದೆ. ಈ ಸೂತ್ರದಂತೆ 72ನ್ನು ಬಡ್ಡಿದರದಿಂದ ಭಾಗಿಸಿದಾಗ ಯಾವ ಸಂಖ್ಯೆ ಬರುತ್ತದೋ ಅಷ್ಟು ಅಂದಾಜು ವರ್ಷ ಅಥವಾ ಅವಧಿಯಲ್ಲಿ ಹಣ ದ್ವಿಗುಣವಾಗುತ್ತದೆ ಎನ್ನುವುದು ಈ ನಿಯಮ ಸಾಬೀತುಪಡಿಸಹೊರಟಿರುವ ವಿಚಾರ. ಉದಾ: ಶೇ 12ರಷ್ಟು ಬಡ್ಡಿದರ ಇದ್ದರೆ, 72ನ್ನು 12ರಿಂದ ಭಾಗಿಸಿದಾಗ 6ರಿಂದ 7 ವರ್ಷಗಳಲ್ಲಿ ಹಣ ದ್ವಿಗುಣ ಆಗುತ್ತದೆ ಎಂಬುದು ಸರಳ ಲೆಕ್ಕಾಚಾರ. ಇದೇ ವಿವರದ ಆಧಾರದಲ್ಲಿ ರೂಲ್ ಆಫ್ 70 ಕೂಡಾ ಪ್ರಸ್ತುತವಾಗುತ್ತದೆ.

2. ರೂಲ್ ಆಫ್ 114: ಈ ನಿಯಮವನ್ನು ಹೂಡಿಕೆ ಮಾಡುವ ಹಣ ಮೂರು ಪಾಲಾಗಲು ಬೇಕಾದ ಸಮಯ ಅಂದಾಜಿಸಲು ಬಳಸುತ್ತಾರೆ. ಉದಾಹರಣೆಗೆ, ಶೇ 12ರಷ್ಟು ಬಡ್ಡಿದರ ಇದ್ದರೆ 114ನ್ನು 12ರಿಂದ ಭಾಗಿಸಿದಾಗ, ಸುಮಾರು 9ರಿಂದ 10 ವರ್ಷಗಳಲ್ಲಿ ಹಣ ಮೂರು ಪಟ್ಟು ಆಗುತ್ತದೆ ಎಂಬ ಮಾಹಿತಿಯನ್ನು ಈ ನಿಯಮ ನೀಡುತ್ತದೆ. ಇದೇ ರೀತಿ ಹಣ ನಾಲ್ಕು ಪಟ್ಟು ಬೆಳೆಯಲು ರೂಲ್ ಆಫ್ 144ಅನ್ನು ಬಳಸಲಾಗುತ್ತದೆ.

ಈ ‘ಥಂಬ್ ರೂಲ್’ಗಳು ವಾಸ್ತವದಲ್ಲಿ ಗಣಿತ ಆಧಾರಿತ ಸರಳ ವಿಧಾನಗಳು. ಇವು ಕೇವಲ ಮಾತುಕತೆಗಾಗಿ ಮಾತ್ರವಲ್ಲ, ಹಣಕಾಸು ಯೋಜನೆಗಳನ್ನು ವೇಗವಾಗಿ ಅಂದಾಜು ಮಾಡಲು ಬಳಸುವ ವಿಧಾನವಾಗಿದೆ. ಆದರೆ ನಿಖರ ಹೂಡಿಕೆ ತೀರ್ಮಾನಕ್ಕೆ ಮಾರುಕಟ್ಟೆ ಸ್ಥಿತಿ, ತೆರಿಗೆ, ದುಬಾರಿ ದರ , ವೈಯಕ್ತಿಕ ಗುರಿ ಮುಂತಾದ ಅಂಶಗಳನ್ನೂ ಸಹ ಪರಿಗಣಿಸಬೇಕು.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in



ಗಾಜಾದಲ್ಲಿ ಕದನ ವಿರಾಮ ಪ್ರಸ್ತಾಪಿಸಿದ ಹಮಾಸ್

ಅಧ್ಯಯನ ಮಾಡಿ ನಿರ್ಧಾರ-ಇಸ್ರೇಲ್

ಮುಖ್ಯಾಂಶಗಳು

- ಗಾಜಾದಲ್ಲಿ ಹೊಸತಾಗಿ ದಾಳಿ ನಡೆಸುವ ಎಚ್ಚರಿಕೆ ನೀಡಿದ ಇಸ್ರೇಲ್
- ಸೋಮವಾರ ರಾತ್ರಿಯಿಡೀ ಟ್ಯಾಂಕ್ ಮೂಲಕ ದಾಳಿ

ಜೆರುಸಲೇಂ/ಕೈರೊ (ರಾಯಿಟರ್ಸ್): ಗಾಜಾದಲ್ಲಿ 60 ದಿನಗಳ ಕದನ ವಿರಾಮ ಪ್ರಸ್ತಾಪಿಸಿರುವ ಹಮಾಸ್ ಪ್ರಸ್ತಾವವನ್ನು ಅಧ್ಯಯನ ಮಾಡಲಾಗುತ್ತಿದೆ ಎಂದು ಇಸ್ರೇಲ್ ತಿಳಿಸಿದೆ.

ಗಾಜಾ ನಗರದ ನಿಯಂತ್ರಣವನ್ನು ಸಂಪೂರ್ಣವಾಗಿ ವಶಕ್ಕೆ ಪಡೆಯುವ ನಿಟ್ಟಿನಲ್ಲಿ ಮತ್ತಷ್ಟು ದಾಳಿ ತೀವ್ರಗೊಳಿಸಲಾಗುವುದು ಎಂದು ಇಸ್ರೇಲ್ ಕಳೆದ ವಾರ ಘೋಷಿಸಿತ್ತು. ಇದರ ಬೆನ್ನಲ್ಲೇ, ಅಮೆರಿಕದ ಬೆಂಬಲದೊಂದಿಗೆ ಕದನ ವಿರಾಮಕ್ಕೆ ಈಜಿಪ್ಟ್ ಹಾಗೂ ಕತಾರ್ ದೇಶಗಳು ಪರೋಕ್ಷ ಮಾತುಕತೆ ನಡೆಸಲು ಮುಂದಾಗಿವೆ.

‘ಹಮಾಸ್‌ನ ಒತ್ತೆಯಾಳಾಗಿರುವ ಇಸ್ರೇಲ್‌ನ 10 ಜೀವಂತ ವ್ಯಕ್ತಿಗಳು ಹಾಗೂ 18 ಮಂದಿಯ ಮೃತದೇಹಗಳ ಹಸ್ತಾಂತರಕ್ಕೆ ಪ್ರತಿಯಾಗಿ ಜೈಲಿನಲ್ಲಿ ಬಂಧಿಯಾಗಿರುವ ಪ್ಯಾಲೆಸ್ಟೀನ್‌ನ 200 ಮಂದಿ ಕೈದಿಗಳು, ಮಹಿಳೆಯರು, ಮಕ್ಕಳನ್ನು ಬಿಡುಗಡೆಗೊಳಿಸುವ ಪ್ರಸ್ತಾವ ಸಿದ್ಧಗೊಂಡಿದೆ’ ಎಂದು ಹಮಾಸ್ ತಿಳಿಸಿತ್ತು. ಪ್ರಸ್ತಾವ ಸಿದ್ಧವಾಗಿದೆ ಎಂದು ಈಜಿಪ್ಟ್‌ನ ಭದ್ರತಾ ಪಡೆಗಳು ಖಚಿತಪಡಿಸಿವೆ. ಇದಕ್ಕೆ ಪ್ರತಿಯಾಗಿ, ಗಾಜಾದಲ್ಲಿ ಬಂಧಿಸಿರುವ ನೂರಾರು ಮಂದಿಯನ್ನು ಬಿಡುಗಡೆಗೊಳಿಸಬೇಕು ಎಂದು ಹಮಾಸ್ ಒತ್ತಾಯಿಸಿದೆ.

ಶೇಕಡ 75 ಗಾಜಾ ನಿಯಂತ್ರಣ: ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಪಡೆಗಳು ಶೇಕಡ 75ರಷ್ಟು ಹಿಡಿತ ಸಾಧಿಸಿದ್ದು, ಅಲ್ಪ ಪ್ರಮಾಣದಲ್ಲಿ ಇಸ್ರೇಲ್ ಪಡೆಗಳು ಹಿಂದಕ್ಕೆ ಪಡೆಯಬೇಕು ಎಂಬ ಪ್ರಸ್ತಾವವನ್ನು ಹಮಾಸ್ ಮುಂದಿಟ್ಟಿದೆ. ಅಮೆರಿಕದ ವಿಶೇಷ ಮಧ್ಯಪ್ರಾಚ್ಯ ರಾಯಭಾರಿ ಸ್ಟೀವ್ ವಿಟ್ಕೋಫ್ ನೇತೃತ್ವದಲ್ಲಿ ಒಪ್ಪಂದದ ರೂಪುರೇಷೆಗೆ ಇಸ್ರೇಲ್ ಒಪ್ಪಿಗೆ ಸೂಚಿಸಿತ್ತು. ‘60 ದಿನಗಳ ಕದನ ವಿರಾಮವು ಯುದ್ಧ ಕೊನೆಗಾಣಿಸಲು ಸಮಗ್ರ ಒಪ್ಪಂದಕ್ಕೆ ಮಾರ್ಗವಾಗಿದೆ’ ಎಂದು ಕತಾರ್‌ನ ವಿದೇಶಾಂಗ ಇಲಾಖೆಯ ವಕ್ತಾರ ಮಜೆದ್ ಅಲ್ ಅನ್ಸಾರಿ ತಿಳಿಸಿದ್ದಾರೆ.

20 ಮಂದಿ ಬಲಿ: ‘ಕದನ ವಿರಾಮ ಪ್ರಸ್ತಾವದ ಹೊರತಾಗಿಯೂ ಮಂಗಳವಾರವು ಗಾಜಾದ ಮೇಲೆ ಇಸ್ರೇಲ್ ವಾಯು ದಾಳಿ ಮುಂದುವರಿಸಿದ್ದು, 20 ಮಂದಿ ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ’ ಎಂದು ಗಾಜಾದ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪರ- ವಿರೋಧ: ಹಮಾಸ್ ಮುಂದಿಟ್ಟಿರುವ ಪ್ರಸ್ತಾವದಂತೆ ಕದನ ವಿರಾಮಕ್ಕೆ ಮುಂದಾಗಬೇಕು ಎಂದು ಇಸ್ರೇಲ್‌ನ ನಾಗರಿಕರು ಒತ್ತಾಯಿಸಿದ್ದಾರೆ. ಪ್ರಧಾನಿ ಬೆಂಜಮಿನ್ ನೆತಾನ್ಯಾಹು ಶೀಘ್ರ ಸಭೆ ನಡೆಸಲಿದ್ದಾರೆ ಎಂದು ಇಸ್ರೇಲ್‌ನ ಇಬ್ಬರು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಅಡಿಕೆ ಧಾರಣೆ

ಕಾರ್ಕಳ		ಗೊರಬಲು	18299-37500	ಬಿಳಿಗೋಟು	25399-34791
ಹೊಸತು	25000-48500	ರಾಶಿ	48459-61509	ಚಾಲಿ	38299-43399
ಹಳತು	30000-52500	ಸರಕು	55900-98100	ಕೆಂಪುಗೋಟು	21899-27709
ಸಾಗರ		**ಸಿದ್ದಾಪುರ**		ರಾಶಿ	44009-50508
ಬಿಳಿಗೋಟು	22099-26066	ಬಿಳಿಗೋಟು	25299-33000	**ಯಲ್ಲಾಪುರ**	
ಚಾಲಿ	24066-36870	ಚಾಲಿ	35000-42599	ಆಪಿ	64009-83899
ಕೋಕ	18989-23799	ಕೋಕ	18699-26399	ಬಿಳಿಗೋಟು	16099-33299
ಕೆಂಪುಗೋಟು	26989-34099	ಕೆಂಪುಗೋಟು	20119-27900	ಚಾಲಿ	33719-43239
ರಾಶಿ	34199-59399	ರಾಶಿ	44099-49969	ಕೋಕ	10417-19399
ಸಿಪ್ಪೆಗೋಟು	19289-20069	ತಟ್ಟಿಬೆಟ್ಟೆ	30019-48099	ಕೆಂಪುಗೋಟು	16899-27809
ಶಿವಮೊಗ್ಗ		**ಶಿರಸಿ**		ರಾಶಿ	39009-56236
ಬೆಟ್ಟೆ	57240-64599	ಬೆಟ್ಟೆ	29869-39609	ತಟ್ಟಿಬೆಟ್ಟೆ	28209-38821

‘ತ್ರೈಮಾಸಿಕದಲ್ಲಿ ಶೇ 6.7ರಷ್ಟು ಬೆಳವಣಿಗೆ’

ನವದೆಹಲಿ (ಪಿಟಿಐ): ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ದೇಶದ ಅರ್ಥ ವ್ಯವಸ್ಥೆಯು ಶೇಕಡ 6.7ರಷ್ಟು ಬೆಳವಣಿಗೆ ಸಾಧಿಸಿದೆ ಎಂದು ರೇಟಿಂಗ್ ಸಂಸ್ಥೆ ಐಸಿಆರ್‌ಎ ಹೇಳಿದೆ.

ಸರ್ಕಾರದ ಕಡೆಯಿಂದ ಬಂಡವಾಳ ವೆಚ್ಚವು ಹೆಚ್ಚಳ ಕಂಡಿದ್ದು ಹಾಗೂ ವಿವಿಧ ರಫ್ತುಗಳು ಹೆಚ್ಚಾಗಿದ್ದು ಈ ಬೆಳವಣಿಗೆಗೆ ಕಾರಣ ಎಂದು ಅದು ಹೇಳಿದೆ. ರೇಟಿಂಗ್ ಸಂಸ್ಥೆಯ ಈ ಅಂದಾಜು ಆರ್‌ಬಿಐನ ಅಂದಾಜಿಗಿಂತ ಹೆಚ್ಚಾಗಿದೆ. ಆರ್‌ಬಿಐ ಪ್ರಕಾರ ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.5ರಷ್ಟು ಆಗಿದೆ. ಜೂನ್ ತ್ರೈಮಾಸಿಕದ ಜಿಡಿಪಿ ಕುರಿತ ಅಂಕಿ-ಅಂಶ ಆ.29ರಂದು ಬಿಡುಗಡೆ ಆಗುವ ನಿರೀಕ್ಷೆ ಇದೆ.

ಹತ್ತಿಗೆ ಆಮದು ಸುಂಕ ವಿನಾಯಿತಿ



ಸಾಂದರ್ಭಿಕ ಚಿತ್ರ

ನವದೆಹಲಿ (ಪಿಟಿಐ): ಕಚ್ಚಾ ಹತ್ತಿಯನ್ನು ಸೆಪ್ಟೆಂಬರ್ 30ರವರೆಗೆ ಯಾವುದೇ ಸುಂಕ ಇಲ್ಲದೆ ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆ. ದೇಶದ ಜವಳಿ ಉದ್ಯಮಕ್ಕೆ ಅಗತ್ಯವಾಗಿರುವ ಈ ಕಚ್ಚಾವಸ್ತುವಿನ ಲಭ್ಯತೆಯನ್ನು ಸುಧಾರಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಕೇಂದ್ರದ ಈ ಕ್ರಮವು ಅಮೆರಿಕಕ್ಕೆ ಕೂಡ ನೆರವಾಗಲಿದೆ ಎಂದು ಹೇಳಲಾಗಿದೆ.

ಇದುವರೆಗೆ ಹತ್ತಿಗೆ ಶೇಕಡ 11ರಷ್ಟು ಆಮದು ಸುಂಕ ವಿಧಿಸಲಾಗುತ್ತಿತ್ತು. ಇದರಲ್ಲಿ ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ ಕೂಡ ಇತ್ತು.

ಕೇಂದ್ರ ಹಣಕಾಸು ಸಚಿವಾಲಯವು ಆಗಸ್ಟ್ 18ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ, ಸುಂಕ ವಿನಾಯಿತಿಯು ಆಗಸ್ಟ್ 19ರಿಂದ ಜಾರಿಗೆ ಬಂದಿದೆ. ಸುಂಕ ವಿನಾಯಿತಿಯ ಪರಿಣಾಮವಾಗಿ ದೇಶದ ಜವಳಿ ವಲಯಕ್ಕೆ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಒಡ್ಡಲು ಸಾಧ್ಯವಾಗುವ ದರದಲ್ಲಿ ಕಚ್ಚಾ ಹತ್ತಿ ಲಭ್ಯವಾಗುತ್ತದೆ ಎಂಬ ನಿರೀಕ್ಷೆ ಇದೆ.


ದೇಶದ ಜವಳಿ ವಲಯ ಸೇರಿದಂತೆ ವಿವಿಧ ವಲಯಗಳಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳ ಮೇಲೆ ಅಮೆರಿಕವು ಶೇ 50ರಷ್ಟು ಸುಂಕ ವಿಧಿಸಿರುವ ಸಂದರ್ಭದಲ್ಲಿ ಈ ವಿನಾಯಿತಿಯ ನೆರವು ಜವಳಿ ವಲಯಕ್ಕೆ ದೊರೆತಿದೆ. ಹತ್ತಿ ಪೂರೈಕೆ ಕೊರತೆಯನ್ನು ನಿವಾರಿಸಲು ಹಾಗೂ ಬೆಲೆಯಲ್ಲಿ ಸ್ಥಿರತೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರವು ಆಮದು ಸುಂಕವನ್ನು ಶೂನ್ಯಕ್ಕೆ ಇಳಿಸಿದೆ ಎಂದು ಜಿಟಿಆರ್‌ಐ ಅಭಿಪ್ರಾಯಪಟ್ಟಿದೆ.

2023-24ರಲ್ಲಿ ಹತ್ತಿಯ ಆಮದು 579.2 ಮಿಲಿಯನ್ ಡಾಲರ್ (ಅಂದಾಜು ₹5,041 ಕೋಟಿ) ಇದ್ದಿದ್ದು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 107.4ರಷ್ಟು ಹೆಚ್ಚಳ ಕಂಡು 1.20 ಬಿಲಿಯನ್ ಡಾಲರ್‌ಗೆ (ಅಂದಾಜು ₹10,446 ಕೋಟಿ) ತಲುಪಿದೆ.

ಕಳೆದ ವರ್ಷ ಭಾರತಕ್ಕೆ ಹತ್ತಿ ಪೂರೈಕೆ ಮಾಡಿದ ಪ್ರಮುಖ ದೇಶಗಳ ಸಾಲಿನಲ್ಲಿ ಆಸ್ಟ್ರೇಲಿಯಾ, ಅಮೆರಿಕ, ಬ್ರೆಜಿಲ್ ಮತ್ತು ಈಜಿಪ್ಟ್ ಇವೆ.

‘ಕಚ್ಚಾ ವಸ್ತು ಖರೀದಿಗೆ ಹೆಚ್ಚಿನ ಮೊತ್ತ ವಿನಿಯೋಗಿಸುತ್ತಿರುವ ಹತ್ತಿ ಗಿರಣಿಗಳಿಗೆ ಸುಂಕ ವಿನಾಯಿತಿಯ ಕ್ರಮದಿಂದ ನೆರವಾಗಲಿದೆ. ಅಲ್ಲದೆ, ಹತ್ತಿಯ ನೂಲು ಮತ್ತು ಬಟ್ಟೆಯ ರಫ್ತುದಾರರಿಗೆ ಹಬ್ಬಗಳ ಋತುವಿನಲ್ಲಿ ಸಹಾಯ ಆಗಲಿದೆ’ ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ. ‘ದೇಶಿ ಮಾರುಕಟ್ಟೆಗೆ ಹೊಸ ಹತ್ತಿ ಬೆಳೆ ಆವಕ ಆಗುವವರೆಗೆ ಬೆಲೆಯಲ್ಲಿ ಸ್ಥಿರತೆ ತರುವ ಉದ್ದೇಶದಿಂದ ಸಮಯಮಿತಿಯ ಈ ವಿನಾಯಿತಿಯನ್ನು ನೀಡಲಾಗಿದೆ’ ಎಂದು ವಿವರಿಸಿದ್ದಾರೆ.

ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ವ್ಯಾಪಾರ ಒಪ್ಪಂದದ ಅನ್ವಯ, ಅಲ್ಲಿಂದ ಭಾರತಕ್ಕೆ ಆಮದಾಗುವ 51 ಸಾವಿರ ಟನ್ ಹತ್ತಿಗೆ ಸುಂಕ ವಿನಾಯಿತಿ ಇದೆ. ಹೀಗಾಗಿ, ಈಗಿನ ಕ್ರಮದ ಪ್ರಯೋಜನವು ಅಮೆರಿಕಕ್ಕೆ ದೊಡ್ಡ ಮಟ್ಟದಲ್ಲಿ ಸಿಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.



ಮತ್ತೆ ದಾಳಿ ತಡೆಯುವ ಭದ್ರತಾ ಖಾತ್ರಿಗೆ ನೆರವು: ಅಮೆರಿಕ

ಪುಟಿನ್, ಝೆಲೆನ್‌ಸ್ಕಿ ಸಭೆಗೆ ಸಿದ್ಧತೆ: ಟ್ರಂಪ್



ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್/ಮಾಸ್ಕೊ (ಎಪಿ/ರಾಯಿಟರ್ಸ್): ಉಕ್ರೇನ್ ವಿರುದ್ಧ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸುವುದಕ್ಕಾಗಿ ಅಧ್ಯಕ್ಷರಾದ ಉಕ್ರೇನ್‌ನ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ರಷ್ಯಾದ ವ್ಲಾದಿಮಿರ್ ಪುಟಿನ್ ಅವರನ್ನು ಮುಖಾಮುಖಿ ಮಾಡಿಸಿ, ಸಭೆ ನಡೆಸುವ ಕುರಿತ ಸಿದ್ಧತೆಗಳಿಗೆ ಸೋಮವಾರ ಚಾಲನೆ ನೀಡಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಒಂದೊಮ್ಮೆ ಉಭಯ ದೇಶಗಳ ಯುದ್ಧ ಕೊನೆಗೊಂಡ ನಂತರ, ಉಕ್ರೇನ್ ಮೇಲೆ ರಷ್ಯಾ ಮತ್ತೆ ದಾಳಿ ನಡೆಸದಿರುವುದನ್ನು ಖಾತ್ರಿಪಡಿಸಲು ಐರೋಪ್ಯ ರಾಷ್ಟ್ರಗಳು ರೂಪಿಸಿರುವ ಭದ್ರತಾ ಸೂತ್ರಕ್ಕೂ ಬೆಂಬಲಿಸುವುದಾಗಿ ಟ್ರಂಪ್ ಹೇಳಿದ್ದಾರೆ.

‘ಪುಟಿನ್ ಹಾಗೂ ಝೆಲೆನ್‌ಸ್ಕಿ ಅವರನ್ನು ಮುಖಾಮುಖಿಯಾಗಿಸುವ ಕುರಿತ ಪ್ರಯತ್ನಗಳು ಮುಂದುವರಿಯಲಿವೆ. ಇದರ ಭಾಗವಾಗಿ, ಝೆಲೆನ್‌ಸ್ಕಿ ಅವರೊಂದಿಗೆ ಸೋಮವಾರ ನಡೆದ ಸಭೆ ವೇಳೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿರುವೆ. ಬ್ರಿಟನ್, ಫಿನ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ ನಾಯಕರು ಹಾಗೂ ಐರೋಪ್ಯ ಆಯೋಗದ ಅಧ್ಯಕ್ಷರೊಂದಿಗೂ ಮಾತುಕತೆ ನಡೆಸಿರುವೆ’ ಎಂದು ಟ್ರಂಪ್ ಹೇಳಿದ್ದಾರೆ.

ಉಕ್ರೇನ್ ಮೇಲೆ ಮತ್ತೆ ದಾಳಿ ನಡೆಯದಂತೆ ಮಾಡಲು ರೂಪಿಸಿರುವ ಭದ್ರತಾ ಖಾತ್ರಿಗಳು ಹಾಗೂ ಯುದ್ಧ ಕೊನೆಗಾಣಿಸುವ ಸಂಬಂಧದ ಮಾತುಕತೆಗಳು ಇನ್ನೂ ಅಂತಿಮ ರೂಪ ಪಡೆದಿಲ್ಲ. ಆದರೆ, ಈ ಎಲ್ಲ ಪ್ರಯತ್ನಗಳು ಟ್ರಂಪ್, ಝೆಲೆನ್‌ಸ್ಕಿ ಮತ್ತು ಯುರೋಪಿನ ನಾಯಕರ ನಡುವೆ ಶ್ವೇತಭವನದಲ್ಲಿ ನಡೆದ ಸರಣಿ ಸಭೆಗಳ ಮುಂದುವರಿದ ಭಾಗಗಳೇ ಆಗಿವೆ ಎಂದು ಮೂಲಗಳು ಹೇಳಿವೆ.

‘ಭದ್ರತೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿನ ಪ್ರಯತ್ನಗಳಿಗೆ ಕೈಜೋಡಿಸುವುದಾಗಿ ಅಮೆರಿಕ ಬದ್ಧತೆ ಪ್ರದರ್ಶಿಸಿದೆ. ಇದು, ಶ್ವೇತಭವನದಲ್ಲಿ ನಡೆದ ಸಭೆಗಳ ನಂತರ ಹೊರಹೊಮ್ಮಿರುವ ಮುಖ್ಯ ಫಲಿತಾಂಶ’ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಹೇಳಿದ್ದಾರೆ.

‘ಮಾತುಕತೆ: ವ್ಯಾಪಕ ಸಿದ್ಧತೆ ಅಗತ್ಯ’



ಲ್ಯಾವ್ರೋವ್

‘ಉಕ್ರೇನ್ ವಿರುದ್ಧದ ಯುದ್ಧವನ್ನು ಅಂತ್ಯಗೊಳಿಸುವ ಸಂಬಂಧ ನಡೆಯುವ ಮಾತುಕತೆಗೆ ಸಿದ್ಧತೆ ಅಗತ್ಯ’ ಎಂದು ರಷ್ಯಾ ಮಂಗಳವಾರ ಹೇಳಿದೆ.

ತ್ರಿಪಕ್ಷೀಯ ಮಾತುಕತೆ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ರಷ್ಯಾ ವಿದೇಶಾಂಗ ಸಚಿವ ಸರ್ಗಿ ಲಾವ್ರೋವ್, ‘ದ್ವಿಪಕ್ಷೀಯ ಇಲ್ಲವೇ ತ್ರಿಪಕ್ಷೀಯ ಮಾತುಕತೆ ಮೂಲಕವಾದರೂ ಸರಿಯೇ, ಉಕ್ರೇನ್‌ಗೆ ಸಂಬಂಧಿಸಿದ ಬಿಕ್ಕಟ್ಟನ್ನು ಬಗೆಹರಿಸಲು ರಷ್ಯಾ ಬದ್ಧ. ಆದರೆ, ಸಭೆಯಲ್ಲಿ ಪಾಲ್ಗೊಳ್ಳುವ ವಿವಿಧ ರಾಷ್ಟ್ರಗಳ ನಾಯಕರಲ್ಲಿ ಸಿದ್ಧತೆ ಅಗತ್ಯ’ ಎಂದು ಹೇಳಿದ್ದಾರೆ.

‘ಈ ಮಾತನ್ನು ಅಧ್ಯಕ್ಷ ಪುಟಿನ್ ಹಲವು ಬಾರಿ ಪುನರುಚ್ಚರಿಸಿದ್ದಾರೆ. ಅಲ್ಲದೇ, ಇಂತಹ ಸಭೆಗಳು ಕೇವಲ ಮಾಧ್ಯಮದಲ್ಲಿ ಪ್ರಚಾರದ ಉದ್ದೇಶ ಹೊಂದಿರಬಾರದು’ ಎಂದೂ ಅವರು ಪ್ರತಿಪಾದಿಸಿದ್ದಾರೆ.

ಮಾಸ್ಕೊದಲ್ಲಿ ಶಾಂತಿ ಸಭೆ: ಪುಟಿನ್

ಕೀವ್(ಎಎಫ್‌ಪಿ): ಉಕ್ರೇನ್ ಅಧ್ಯಕ್ಷ ವೊಲೊಡಿಮರ್ ಝೆಲೆನ್‌ಸ್ಕಿ ಅವರೊಂದಿಗಿನ ಶಾಂತಿ ಸಭೆ ಮಾಸ್ಕೊದಲ್ಲಿ ಆಯೋಜಿಸಬೇಕು ಎಂಬ ಪ್ರಸ್ತಾವವನ್ನು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮುಂದಿಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

‘ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ದೂರವಾಣಿ ಮೂಲಕ ನಡೆಸಿದ ಮಾತುಕತೆ ವೇಳೆ ಪುಟಿನ್ ಪ್ರಸ್ತಾವ ಮುಂದಿಟ್ಟರು’ ಎಂದು ಮೂಲಗಳು ತಿಳಿಸಿವೆ. ‘ಪುಟಿನ್ ಅವರ ಈ ಪ್ರಸ್ತಾವಕ್ಕೆ ಝೆಲೆನ್‌ಸ್ಕಿ ಒಪ್ಪಿಗೆ ನೀಡಲಿಲ್ಲ’ ಎಂದು ಒಂದು ಮೂಲ ಹೇಳಿದೆ.

ರಷ್ಯಾ ಪ್ರವಾಸ ಹೊರಟ ಸಚಿವ ಜೈಶಂಕರ್

ನವದೆಹಲಿ (ಪಿಟಿಐ): ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಮಂಗಳವಾರ ಮಾಸ್ಕೋಗೆ ಮೂರು ದಿನಗಳ ಭೇಟಿಗೆ ತೆರಳಿದ್ದಾರೆ. ಭೇಟಿಯಲ್ಲಿ ಭಾರತ-ರಷ್ಯಾ ಸಂಬಂಧವನ್ನು ಮತ್ತಷ್ಟು ಬಲಪಡಿಸಲು ಉದ್ದೇಶಿಸಲಾಗಿದೆ.

ಭಾರತದ ರಷ್ಯಾ ಕಚ್ಚಾ ತೈಲ ಖರೀದಿಗೆ ಶೇ 25ರಷ್ಟು ಹೆಚ್ಚುವರಿ ದಂಡವನ್ನು ವಿಧಿಸುವ ಮೂಲಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಸರಕುಗಳ ಮೇಲಿನ ಸುಂಕವನ್ನು ಶೇ 50ಕ್ಕೆ ಏರಿಸಿದ್ದರು. ಇದರ ನಂತರ ಭಾರತ-ಅಮೆರಿಕ ಸಂಬಂಧದಲ್ಲಿ ಉಂಟಾದ ಒತ್ತಡದ ಹಿನ್ನೆಲೆಯಲ್ಲಿ ಈ ಭೇಟಿ ಮಹತ್ವದ್ದಾಗಿದೆ.


ಬುಧವಾರ ನಡೆಯಲಿರುವ 26ನೇ ಭಾರತ-ರಷ್ಯಾ ಅಂತರ ಸರ್ಕಾರ ಆಯೋಗದ (ಐಆರ್‌ಐಜಿಸಿ-ಟಿಇಸಿ) ಸಭೆಯ ಜಂಟಿ ಅಧ್ಯಕ್ಷತೆಯನ್ನು ಜೈಶಂಕರ್ ವಹಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ರಷ್ಯಾದ ಮೊದಲ ಉಪಪ್ರಧಾನಿ ಡೆನಿಸ್ ಮಂಟುರೊ ಜಂಟಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಈ ವರ್ಷದ ಕೊನೆಯಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದು, ಅದನ್ನು ಈ ಸಭೆಯು ಸುಗಮಗೊಳಿಸುವ ನಿರೀಕ್ಷೆ ಇದೆ.

ನಟ ಅಚ್ಯುತ್ ಪೋತ್ದಾರ್ ನಿಧನ

ಮುಂಬಯಿ (ಪಿಟಿಐ): ‘3 ಈಡಿಯಟ್ಸ್’, ‘ಪ್ರಧಾನ್ ಮಂತ್ರಿ’, ‘ಭಾರತ್ ಏಕ್ ಖೋಜ್’ ರೀತಿಯ ಸಿನಿಮಾ ಮತ್ತು ಟಿ.ವಿ. ಕಾರ್ಯಕ್ರಮಗಳಲ್ಲಿ ಪಾತ್ರ ನಿರ್ವಹಿಸಿ ಜನಪ್ರಿಯರಾಗಿದ್ದ ನಟ ಅಚ್ಯುತ್ ಪೋತ್ದಾರ್ (90) ಅವರು ಹೃದಯ ಸಂಬಂಧಿ ಸಮಸ್ಯೆಯಿಂದ ನಿಧನರಾಗಿದ್ದಾರೆ.

ಪೋತ್ದಾರ್ ಅವರನ್ನು ಸೋಮವಾರ ಸಂಜೆ 4 ಗಂಟೆಗೆ ಜುಪಿಟರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು ಮತ್ತು ರಾತ್ರಿ 10.30ಕ್ಕೆ ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಯಿತು. ‘ಉಸಿರಾಟ ಮತ್ತು ಹೃದಯ ಸಂಬಂಧಿ ಸಮಸ್ಯೆಯಿಂದಾಗಿ ಗಂಭೀರ ಸ್ಥಿತಿಯಲ್ಲಿ ಅವರನ್ನು ಸೋಮವಾರ ದಾಖಲಿಸಲಾಗಿತ್ತು. ಈ ವೇಳೆ ಐಸಿಯುನಲ್ಲಿ ಇಟ್ಟು ಚಿಕಿತ್ಸೆ ನೀಡಲಾಗುತ್ತಿತ್ತು’ ಎಂದು ಜುಪಿಟರ್ ಆಸ್ಪತ್ರೆಯ ವೈದ್ಯ ಡಾ. ರವೀಂದ್ರ ಘಾವತ್ ಹೇಳಿದ್ದಾರೆ.

‘ಕಾಂತಾರ’ದ ಕುಲಶೇಖರ



ಗುಲ್ಶನ್ ದೇವಯ್ಯ

ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ ‘ಕಾಂತಾರ’ ಪ್ರೀಕ್ವೆಲ್‌ನಲ್ಲಿ ‘ಕುಲಶೇಖರ’ ಎಂಬ ಪಾತ್ರದಲ್ಲಿ ಬಾಲಿವುಡ್ ನಟ ಗುಲ್ಶನ್ ದೇವಯ್ಯ ನಟಿಸಿದ್ದಾರೆ. ಅ.2ರಂದು ‘ಕಾಂತಾರ’ ಪ್ರೀಕ್ವೆಲ್ ರಿಲೀಸ್ ಆಗಲಿದೆ.



ಸಿರಿ ರವಿಕುಮಾರ್

ವೆಬ್ ಸರಣಿಯಲ್ಲಿ ಸಿರಿ ಹೊಸ ಹೆಜ್ಜೆ

• ಅಭಿಲಾಷ್ ಪಿ.ಎಸ್.

> ಸದ್ಯಕ್ಕೆ ಯಾವುದೇ ಸಿನಿಮಾ ಒಪ್ಪಿಕೊಂಡಿಲ್ಲ. ರಂಗಭೂಮಿಯಲ್ಲೇ ಹೆಚ್ಚು ತೊಡಗಿಸಿಕೊಂಡಿದ್ದೇನೆ. ಮೂರ್ನಾಲ್ಕು ಕನ್ನಡ ಸಿನಿಮಾ ಕಥೆಗಳನ್ನು ಕೇಳಿದ್ದೇನೆ. ಇವು ಮಾತುಕತೆ ಹಂತದಲ್ಲಿವೆ. **–ಸಿರಿ ರವಿಕುಮಾರ್,** ನಟಿ

‘ಸಕುಟುಂಬ ಸಮೇತ’, ‘ಸ್ವಾತಿ ಮುತ್ತಿನ ಮಳೆ ಹನಿಯೇ’, ‘ಬಿಸಿ ಬಿಸಿ ಐಸ್‌ಕ್ರೀಂ’, ‘ಬ್ಯಾಚುಲರ್ ಪಾರ್ಟಿ’ ಹೀಗೆ ಸಾಲು ಸಾಲು ಚಿತ್ರಗಳಲ್ಲಿ ಭಿನ್ನವಾದ ಪಾತ್ರಗಳನ್ನು ನಿಭಾಯಿಸಿದ ನಟಿ ಸಿರಿ ರವಿಕುಮಾರ್ ಇದೀಗ ಮತ್ತೊಮ್ಮೆ ವೆಬ್ ಸರಣಿಗೆ ಹೆಜ್ಜೆ ಇಟ್ಟಿದ್ದಾರೆ. ನಾಲ್ಕೈದು ವರ್ಷಗಳ ಹಿಂದೆ ‘ಕ್ಯಾಬ್ರೆ’ ಎಂಬ ವೆಬ್ ಸರಣಿಯಲ್ಲಿ ನಟಿಸಿದ್ದ ಸಿರಿ ಬಳಿಕ ‘ಬೈ ಮಿಸ್ಟೇಕ್’ ಎಂಬ ವೆಬ್ ಸರಣಿ ಮಾಡಿದ್ದರು. ಇದೀಗ ಸುನಿಲ್ ಮೈಸೂರು ನಿರ್ದೇಶನದ, ನಟ–ನಿರ್ದೇಶಕ ಪವನ್ ಕುಮಾರ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ‘ಶೋಧ’ ಎಂಬ ವೆಬ್ ಸರಣಿಯಲ್ಲಿ ಸಿರಿ ಬಣ್ಣಹಚ್ಚಿದ್ದಾರೆ. ಈ ಸರಣಿ ಆ.29ರಂದು ಜೀ5ನಲ್ಲಿ ರಿಲೀಸ್ ಆಗಲಿದೆ.

ತಮ್ಮ ಪಾತ್ರ, ವೆಬ್ ಸರಣಿಯ ಕುರಿತು ಮಾತಿಗಿಳಿದ ಸಿರಿ, ‘ರಂಗಭೂಮಿಯಿಂದ ಬಂದ ನನಗೆ ವೆಬ್ ಸರಣಿ ಎಂಬುವುದು ಹೊಸದೇನಲ್ಲ. ಈ ಹಿಂದೆ ಎರಡು ವೆಬ್ ಸರಣಿಗಳಲ್ಲಿ ನಟಿಸಿದ್ದೇನೆ. ಇದರಲ್ಲಿ ‘ಕ್ಯಾಬ್ರೆ’ ಎನ್ನುವುದು ಯುಟ್ಯೂಬ್‌ನಲ್ಲಿದೆ. ಇದರಲ್ಲಿನ ನನ್ನ ‘ಅರ್ಬೀನ್’ ಪಾತ್ರದ ಮುಖಾಂತರವೇ ಹಲವರು ನನ್ನನ್ನು ಈಗಲೂ ಗುರುತಿಸುತ್ತಾರೆ. ಸಿನಿಮಾಗಿಂತಲೂ ಹೆಚ್ಚಿನ ಖ್ಯಾತಿಯನ್ನು ಈ ಪಾತ್ರ ನನಗೆ ನೀಡಿತ್ತು. ಇದೀಗ ಕೆಆರ್‌ಜಿ ಸ್ಟುಡಿಯೊಸ್, ಜೀ5ನಂತಹ ದೊಡ್ಡ ಸಂಸ್ಥೆಯ ಮೂಲಕ ಬರುತ್ತಿರುವ ‘ಶೋಧ’ ಎಂಬ ವೆಬ್ ಸರಣಿಯಲ್ಲಿ ನಟಿಸಿದ್ದೇನೆ. ಕನ್ನಡ ವೆಬ್ ಸರಣಿ ನಿರ್ಮಾಣಕ್ಕೆ ಇದೀಗ ಹೆಚ್ಚಿನ ಅವಕಾಶ ತೆರೆದುಕೊಂಡಿದೆ. ಹಿಂದಿನ ವೆಬ್ ಸರಣಿಗಳಿಗಿಂತ ಹೆಚ್ಚಿನ ಪ್ರಚಾರ ಈ ಸರಣಿಗೆ ದೊರಕಿದೆ. ಈ ಹಿಂದೆ ಜನರಿಗೆ ದೊರಕದ ವೇದಿಕೆಗಳಲ್ಲಿ ಕನ್ನಡದ ವೆಬ್ ಸರಣಿಗಳು ಬರುತ್ತಿದ್ದವು. ಕನ್ನಡದ ವೆಬ್ ಸರಣಿಗಳು ಇದ್ದ ವೇದಿಕೆಗಳಿಗೆ ಹೆಚ್ಚಿನ ಚಂದಾದಾರರೂ ಇರಲಿಲ್ಲ. ಜೊತೆಗೆ ದೊಡ್ಡ ಒಟಿಟಿ ಕಂಪನಿಗಳು ಕನ್ನಡ ಕಾಂಟೆಂಟ್‌ಗಳನ್ನೇ ತೆಗೆದುಕೊ-ಳ್ಳುತ್ತಿರಲಿಲ್ಲ. ಹೀಗಾಗಿ ಕನ್ನಡದಲ್ಲಿ ವೆಬ್ ಸರಣಿ ನಿರ್ಮಾಣ ಪ್ರಯತ್ನ ಹೆಚ್ಚು ಇರಲಿಲ್ಲ’ ಎಂದರು.

‘ವೆಬ್ ಸರಣಿಗಳ ಕಥೆ ಚೆನ್ನಾಗಿದ್ದರೆ ಹಾಗೂ ಆ ಸರಣಿ ಜನರಿಗೆ ತಲುಪುವ ವೇದಿಕೆಗಳಲ್ಲಿ ಇದ್ದರೆ ಖಂಡಿತವಾಗಿಯೂ ಅವು ಯಶಸ್ವಿಯಾಗುತ್ತವೆ. ಇಂತಹ ಅವಕಾಶವನ್ನು ಜೀ5 ರೂಪಿಸುತ್ತಿದೆ. ಈ ಹಿಂದೆ ‘ಅಯ್ಯನ ಮನೆ’ಯನ್ನು ಪ್ರೇಕ್ಷಕರ ಎದುರಿಗೆ ಇಟ್ಟಿದ್ದ ಜೀ5 ಇದೀಗ ಮತ್ತೊಂದು ಆರು ಸಂಚಿಕೆಗಳ ವೆಬ್ ಸರಣಿಯನ್ನು ತಂದಿದೆ. ಕನ್ನಡ ವೆಬ್ ಸರಣಿ ಎನ್ನುವುದು ಮುಂದಿನ ಭವಿಷ್ಯ. ಎರಡು ವೆಬ್ ಸರಣಿಗಳ ಮೂಲಕ ಜೀ5 ಇದಕ್ಕೆ ಅಡಿಪಾಯ ಹಾಕಿದೆ. ಪ್ರತಿಯೊಂದು ಒಟಿಟಿ ಕಂಪನಿಗಳು ಧೈರ್ಯ ತೆಗೆದುಕೊಂಡು ನಿರಂತರವಾಗಿ ಕನ್ನಡ ವೆಬ್ ಸರಣಿಗಳನ್ನು ನಿರ್ಮಾಣ ಮಾಡಿಬೇಕು’ ಎನ್ನುತ್ತಾರೆ ಸಿರಿ.

ರಂಗಭೂಮಿಯಲ್ಲಿ ಸಕ್ರಿಯ

‘ಮೈಸೂರಿನಲ್ಲಿ ಆ.31ರಂದು ಹಾಗೂ ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಸೆ.13ರಂದು ‘ಲವ್ ಲೆಟರ್ಸ್’ ಪ್ರದರ್ಶನವಿದೆ. ಸೆಪ್ಟೆಂಬರ್ 5, 6 ಮತ್ತು 7ರಂದು ಬೆಂಗಳೂರಿನ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾಮಿಂಗ್ ಆರ್ಟ್ಸ್‌ನಲ್ಲಿ ‘ಪರ್ವ’ ಪ್ರದರ್ಶನವಿದೆ. ಇದು ಎಂಟು ಗಂಟೆಯ ಪ್ರದರ್ಶನ. ಹೀಗೆ ನಟನೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದೇನೆ’ ಎನ್ನುತ್ತಾರೆ ಸಿರಿ.

ಸಸ್ಪೆನ್ಸ್, ಥ್ರಿಲ್ಲರ್ ಕಥೆ

‘ಶೋಧ ಎನ್ನುವುದು ಕೊಡಗಿನ ಮಡಿಕೇರಿಯಲ್ಲಿರುವ ಸಣ್ಣ ಕುಟುಂಬದ ಕಥೆ. ಘಟನೆಯೊಂದರ ಬಳಿಕ ಗಂಡ ತನ್ನ ಹೆಂಡತಿಯನ್ನೇ ಮರೆಯುತ್ತಾನೆ. ಅವನ ನೆನಪುಗಳನ್ನು ಪುನಃ ತರುವ ಪ್ರಯತ್ನದಲ್ಲೇ ಕಥೆ ತೆರೆದುಕೊಳ್ಳುತ್ತದೆ. ಇದು ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನಲ್ಲಿದೆ’ ಎಂದರು ಸಿರಿ. ❖


‘ಕಲ್ಯಾಣಿ’ ಗುಂಗಿನಲ್ಲಿ ರಚಿತಾ



ರಚಿತಾ ರಾಮ್

ಸ್ಯಾಂಡಲ್‌ವುಡ್‌ನ ‘ಬುಲ್‌ಬುಲ್’ ರಚಿತಾ ರಾಮ್ ಸದ್ಯ ‘ಕೂಲಿ’ಯ ಕಲ್ಯಾಣಿಯಾಗಿ ಮಿಂಚುತ್ತಿದ್ದಾರೆ. ರಜನಿಕಾಂತ್ ನಟನೆಯ ‘ಕೂಲಿ’ ಸಿನಿಮಾದಲ್ಲಿನ ನೆಗೆಟಿವ್ ಪಾತ್ರ ರಚಿತಾ ರಾಮ್ ಸಿನಿಪಯಣಕ್ಕೆ ತಿರುವು ನೀಡುವಂತಿದೆ. ತಮ್ಮ ಪಾತ್ರಕ್ಕೆ ಸಿಕ್ಕಿರುವ ಪ್ರಶಂಸೆ, ಪಾತ್ರದ ವಿಮರ್ಶೆಯನ್ನು ಕಂಡು ರಚಿತಾ ರಾಮ್ ಖುಷಿಯಾಗಿದ್ದಾರೆ. ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ರಚಿತಾ, ‘ಕೂಲಿ ಸಿನಿಮಾದಲ್ಲಿನ ನನ್ನ ಕಲ್ಯಾಣಿ ಪಾತ್ರಕ್ಕೆ ಸಿಕ್ಕಿರುವ ಪ್ರತಿಕ್ರಿಯೆ ಅದ್ಭುತವಾಗಿದೆ. ನನ್ನ ಪಾತ್ರಕ್ಕೆ ಬಂದ ವಿಮರ್ಶೆ, ಟ್ರೋಲ್, ಮೀಮ್‌ಗಳನ್ನು ಹಾಗೂ ಪ್ರೀತಿಯನ್ನು ಕಂಡು ಖುಷಿಯಾಗಿದ್ದೇನೆ. ನನ್ನಲ್ಲಿ ನಂಬಿಕೆ ಇಟ್ಟು ಈ ಅವಕಾಶ ನೀಡಿದ ನಿರ್ದೇಶಕ ಲೋಕೇಶ್ ಕನಗರಾಜ್ ಅವರಿಗೆ ಧನ್ಯವಾದ. ಖ್ಯಾತ ನಟರ ಜೊತೆ ಕೆಲಸ ಮಾಡಿದ್ದು ಮರೆಯಲಾಗದ ಅನುಭವ’ ಎಂದಿದ್ದಾರೆ.

‘ಕೂಲಿ’ ಸಿನಿಮಾದಲ್ಲಿ ಮುಗ್ಧ ‘ಕಲ್ಯಾಣಿ’ಯಾಗಿ ಹಾಗೂ ವ್ಯಗ್ರ ಚಾಲಾಕಿ ‘ಕಲ್ಯಾಣಿ’ಯಾಗಿ ಎರಡು ಶೇಡ್‌ಗಳಲ್ಲಿ ನಟಿಸಿರುವ ರಚಿತಾ ರಾಮ್ ಕನ್ನಡದಲ್ಲೂ ಎರಡು ಸಿನಿಮಾಗಳ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಝೈದ್ ಖಾನ್ ನಟನೆಯ ‘ಕಲ್ಟ್’ ಹಾಗೂ ಸತೀಶ್ ನೀನಾಸಂ ನಟನೆಯ ‘ಅಯೋಗ್ಯ–2’ ರಚಿತಾ ಸಿನಿ ಬ್ಯಾಂಕ್‌ನಲ್ಲಿದೆ. ❖



ರಜನಿಕಾಂತ್ ಜೊತೆಗೆ ರಚಿತಾ

ವೇಷ.. ಧರಿಸಿದ ಶರತ್ ಲೋಹಿತಾಶ್ವ



ಶರತ್ ಲೋಹಿತಾಶ್ವ

ನಾಯಕನಾಗಿ, ಖಳನಾಯಕನಾಗಿ ತೆರೆ ಮೇಲೆ ಕಾಣಿಸಿಕೊಂಡಿರುವ ನಟ ಶ್ರೀನಗರ ಕಿಟ್ಟಿ ‘ವೇಷಗಳು’ ಸಿನಿಮಾ ಮೂಲಕ ಜೋಗತಿಯಾಗಿ ತೆರೆ ಮೇಲೆ ಬರಲಿದ್ದಾರೆ. ರವಿ ಬೆಳಗೆರೆ ಅವರ ‘ವೇಷಗಳು’ ಎಂಬ ಸಣ್ಣ ಕಥೆಯು ಸಿನಿಮಾ ರೂಪ ಪಡೆದಿದ್ದು, ಈ ಚಿತ್ರದಲ್ಲಿ ನಟ ಶರತ್ ಲೋಹಿತಾಶ್ವ ಅವರೂ ಮುಖ್ಯ ಪಾತ್ರವೊಂದನ್ನು ನಿಭಾಯಿಸ-ಲಿದ್ದಾರೆ.

ಗ್ರೀನ್ ಟ್ರೀ ಸ್ಟುಡಿಯೋಸ್ ಅಡಿಯಲ್ಲಿ ಕಿಶನ್ ರಾವ್ ದಳವಿ ಈ ಚಿತ್ರಕ್ಕೆ ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ‘ಸಿಂಹಣ್ಣ’ ಎನ್ನುವ ಪಾತ್ರಧಾರಿಯಾಗಿ ಅಭಿನಯಿಸುತ್ತಿರುವ ಶರತ್ ಲೋಹಿತಾಶ್ವ ಅವರ ಪೋಸ್ಟರ್ ಮತ್ತು ಟೀಸರ್ ಅನ್ನು ಚಿತ್ರತಂಡ ಇತ್ತೀಚೆಗೆ ಬಿಡುಗಡೆ ಮಾಡಿದೆ. ಮೂರು ವಿಭಿನ್ನ ಲುಕ್‌ಗಳಲ್ಲಿ ಶರತ್ ಅವರು ಕಾಣಿಸಿಕೊಂಡಿದ್ದು, ಪಾತ್ರ ಕುತೂಹಲ ಮೂಡಿಸಿದೆ.

ಭಾವನಾ ಬೆಳಗೆರೆ ಹಾಗೂ ಶ್ರೀನಗರ ಕಿಟ್ಟಿ ‘ವೇಷಗಳು’ ಚಿತ್ರವನ್ನು ಅರ್ಪಿಸುತ್ತಿದ್ದಾರೆ. ಚಿತ್ರದಲ್ಲಿ ಜೋಗತಿಯರ ಬಗ್ಗೆ ಹಾಗೂ ಅವರ ಜೀವನ ಶೈಲಿಯ ಬಗ್ಗೆ ಕಥೆಯಿದ್ದು, ಶ್ರೀನಗರ ಕಿಟ್ಟಿ ಅವರು ಬಸಪ್ಪ ಹಾಗೂ ಬಸಮ್ಮ ಜೋಗತಿಯಾಗಿ ಎರಡು ಗೆಟಪ್‌ಗಳಲ್ಲಿ ಇರಲಿದ್ದಾರೆ. ಮಧ್ಯಪ್ರದೇಶದ ಮಹಾಕಾಲೇಶ್ವರ, ಉತ್ತರ ಕರ್ನಾಟಕ, ಬೆಂಗಳೂರು ಹಾಗೂ ಮೈಸೂರಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆ. ಚಿತ್ರಕ್ಕೆ ಕೌಶಿಕ್ ಹರ್ಷ ಸಂಗೀತ, ರಾಜ್ ಗುರು ದತ್ತರಾಜ್ ಸಂಭಾಷಣೆ, ಅಕ್ಷಯ್ ಪಿ.ರಾವ್ ಸಂಕಲನವಿದೆ. ❖

‘ಮಧ್ಯಪ್ರದೇಶ 27 ಕ್ಷೇತ್ರಗಳಲ್ಲಿ ಮತ ಕಳವು’



ಭೋಪಾಲ್ (ಪಿಟಿಐ): ಮಧ್ಯ ಪ್ರದೇಶದಲ್ಲಿ 2023ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ 27ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮತ ಕಳವು ನಡೆದಿದೆ ಮತ್ತು ಬಿಜೆಪಿಯು ಇದರಿಂದ ‘ಅನೈತಿಕ ಅನುಕೂಲ’ ಪಡೆದಿದೆ ಎಂದು ಕಾಂಗ್ರೆಸ್ ನಾಯಕ ಉಮಂಗ್ ಸಿಂಘರ್ ಮಂಗಳವಾರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚುನಾವಣೆಗೆ ಕೆಲವೇ ತಿಂಗಳು ಇದ್ದಾಗ ಲಕ್ಷಾಂತರ ಮತದಾರರನ್ನು ಪಟ್ಟಿಗೆ ಸೇರ್ಪಡೆ ಮಾಡಲಾಯಿತು. ಹೀಗಾಗಿ ಕಾಂಗ್ರೆಸ್ ಅಭ್ಯರ್ಥಿಗಳು ಕಡಿಮೆ ಮತಗಳ ಅಂತರದಲ್ಲಿ ಪರಾಭವಗೊಂಡರು’ ಎಂದು ಹೇಳಿದರು.

2023ರ ಜನವರಿಯಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ರಾಜ್ಯದ ಮತದಾರರ ಸಂಖ್ಯೆ 4.64 ಲಕ್ಷ ಹೆಚ್ಚಾಗಿತ್ತು. ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ ಈ ಸಂಖ್ಯೆ 16.05 ಲಕ್ಷ ಹೆಚ್ಚಾಯಿತು. ಅದರರ್ಥ ಪ್ರತಿ ದಿನ 26,000 ಮತದಾರರನ್ನು ಸೇರ್ಪಡೆ ಮಾಡಲಾಗಿದೆ (ಆಗಸ್ಟ್–ಅಕ್ಟೋಬರ್) ಎಂದು ದೂರಿದರು.

ಮಧ್ಯಪ್ರದೇಶವೂ ಯೋಜಿತ ಚುನಾವಣಾ ಅಕ್ರಮದ ಸಂತ್ರಸ್ತ ರಾಜ್ಯ ಎಂದು ಅವರು ಹೇಳಿದರು.

‘ಮಹಾ’ ಮಳೆ: 10 ಮಂದಿ ಸಾವು

ಠಾಣೆ, ರಾಯಗಢ, ರತ್ನಗಿರಿ, ಸಿಂಧುದುರ್ಗ ಜಿಲ್ಲೆಗಳಲ್ಲಿ ಹೈ ಅಲರ್ಟ್





ಮುಂಬೈನಲ್ಲಿ ಮಳೆಯಿಂದಾಗಿ ಜಲಾವೃತಗೊಂಡ ರಸ್ತೆಯಲ್ಲಿ ಜನರು ಮಂಗಳವಾರ ನಡೆದುಕೊಂಡು ಹೋದರೆ, ವ್ಯಕ್ತಿಯೊಬ್ಬ ಕುರ್ಚಿಯಲ್ಲಿ ಕುಳಿತದ್ದು ಗಮನ ಸೆಳೆಯಿತು (ಎಡ). ಮುಂಬೈನ ಕುರ್ಲಾದಲ್ಲಿ ನೀರು ತುಂಬಿದ ರಸ್ತೆಯಲ್ಲಿ ನಿಂತಿದ್ದ ವಾಹನಗಳ ಮೇಲೆ ಏರಿ ಜನರು ಸಾಗಿದರು – ಪಿಟಿಐ ಚಿತ್ರಗಳು

ಮುಂಬೈ (ಪಿಟಿಐ): ‘ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯಲ್ಲಿ ಮೇಘಸ್ಫೋಟ-ದಂತಹ ಪರಿಸ್ಥಿತಿ ನಿರ್ಮಾಣಗೊಂಡು, ಪ್ರವಾಹ ಉಂಟಾಗಿದ್ದರಿಂದ 8 ಮಂದಿ ಸೇರಿದಂತೆ ರಾಜ್ಯದಲ್ಲಿ ಒಟ್ಟು 10 ಮಂದಿ ಮೃತಪಟ್ಟಿದ್ದಾರೆ’ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಿಳಿಸಿದ್ದಾರೆ.

‘ಮುಂಬೈ ಮಹಾನಗರದಲ್ಲಿ ಸೋಮವಾರ ಬೆಳಿಗ್ಗೆ 8ರಿಂದ ಮಂಗಳವಾರ ಬೆಳಿಗ್ಗೆ 8ರವರೆಗೆ ದಾಖಲೆ ಪ್ರಮಾಣದ 30 ಸೆಂ.ಮೀ. ಮಳೆಯಾಗಿದೆ’ ಎಂದರು.

‘ಮಳೆಯಿಂದಾಗಿ ಕಳೆದ ಐದು ದಿನಗಳಲ್ಲಿ ರಾಜ್ಯದಲ್ಲಿ 21 ಮಂದಿ ಮೃತಪಟ್ಟಿದ್ದಾರೆ’ ಎಂದು ರಾಜ್ಯ ತುರ್ತು ಕಾರ್ಯಾಚರಣಾ ಕೇಂದ್ರವು ತಿಳಿಸಿದೆ.

‘ಭಾರಿ ಮಳೆಯಿಂದ ರಾಜ್ಯದ ವಿವಿಧ ಭಾಗಗಳಲ್ಲಿ 12 ಲಕ್ಷದಿಂದ 14 ಲಕ್ಷ ಎಕರೆ ಕೃಷಿಭೂಮಿಯಲ್ಲಿ ಬೆಳೆ ಹಾನಿಯಾಗಿದೆ. ಸಾವಿರಾರು ಜಾನುವಾರುಗಳು ಮೃತಪಟ್ಟಿವೆ’ ಎಂದು ಸಂಪುಟ ಸಭೆಯ ಬಳಿಕ ಮಾಹಿತಿ ನೀಡಿದರು.

‘ರಾಜ್ಯದಾದ್ಯಂತ ಪರಿಸ್ಥಿತಿ ನಿಯಂತ್ರಣದಲ್ಲಿದೆ. ನಗರದ ಜೀವನಾಡಿ ಯಾದ ಉಪನಗರ ರೈಲುಗಳು ನಿಧಾನಗತಿಯಿಂದ ಸಂಚರಿಸುತ್ತಿದ್ದು, ಕೆಲವೆಡೆ ತಡವಾಗಿ ಸಂಚರಿಸಿದವು. ಮುಂಬೈನ ಮೀಠಿ ನದಿಯು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, 400ರಿಂದ 500 ಮಂದಿಯನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುತ್ತಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

ಶಿಕ್ಷಣ ಸಂಸ್ಥೆಗಳಿಗೆ ರಜೆ: ಮಳೆಯಿಂದ ರಾಜ್ಯದಾದ್ಯಂತ ಮಂಗಳವಾರ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಲಾಗಿತ್ತು. ಖಾಸಗಿ ಸಂಸ್ಥೆಯ ನೌಕರರು ಸಾಧ್ಯವಾದರೆ ಮನೆಯಿಂದಲೇ ಕೆಲಸ ಮಾಡಬೇಕು ಎಂದು ಫಡಣವೀಸ್ ಸೂಚಿಸಿದ್ದಾರೆ. ಸರ್ಕಾರಿ ಕಚೇರಿಗಳು ಮುಚ್ಚಿದ್ದವು. ಮಧ್ಯಾಹ್ನ 12 ಗಂಟೆಯ ನಂತರ ನ್ಯಾಯಾಲಯದಲ್ಲಿ ಕಲಾಪಗಳು ನಡೆಯಲಿಲ್ಲ. ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ವಿಮಾನ ನಿಲ್ದಾಣದಿಂದ ಹಾರಬೇಕಿದ್ದ ಹಲವು ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

‘ಪರಿಸ್ಥಿತಿ ನಿಯಂತ್ರಣದಲ್ಲಿದೆ. ರಾತ್ರಿ ವೇಳೆ ಭಾರಿ ಅಲೆಗಳು ದಡಕ್ಕೆ ಅಪ್ಪಳಿಸಿದ್ದು, ಸೂಕ್ಷ್ಮವಾಗಿ ಗಮನಿಸಿ ಪರಿಸ್ಥಿತಿ ನಿಯಂತ್ರಿಸಿದ್ದೇವೆ. ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್ ಎಫ್‌ಗೆ ಕಟ್ಟೆಚ್ಚರದಿಂದ ಇರುವಂತೆ ಸೂಚಿಸಲಾಗಿದೆ. ಅಣೆಕಟ್ಟುಗಳಿಂದ ಹೆಚ್ಚುವರಿ ನೀರು ಬಿಡಲಾಗುತ್ತಿದ್ದು, ನೆರೆ ರಾಜ್ಯಗಳ ಜೊತೆಗೂ ಸಂಪರ್ಕ ದಲ್ಲಿದ್ದೇವೆ’ ಎಂದು ಫಡಣವೀಸ್ ಹೇಳಿದ್ದಾರೆ.

ಮಂಗಳವಾರ ಏನೇನಾಯ್ತು..?

- ಮುಂಬೈನಲ್ಲಿ 30 ಸೆಂ.ಮೀ ಮಳೆ ದಾಖಲು
- ನಾಂದೇಡ್ ಜಿಲ್ಲೆಯಲ್ಲಿ 290 ಮಂದಿಯ ರಕ್ಷಣೆ
- ಮುಂದಿನ 48 ಗಂಟೆ ಭಾರಿ ಮಳೆಯ ನಿರೀಕ್ಷೆ
- ಉಕ್ಕಿ ಹರಿಯುತ್ತಿರುವ ಮಹಾರಾಷ್ಟ್ರದ ಪ್ರಮುಖ ನದಿಗಳು
- ಭೂಕುಸಿತ: ಕೊಲ್ಹಾಪುರ–ರತ್ನಗಿರಿ ನಡುವೆ ಹೆದ್ದಾರಿ ಬಂದ್

ವಿಶೇಷ ಪಠ್ಯ ಮಾದರಿಗೆ ಆಕ್ಷೇಪ



ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಇತ್ತೀಚೆಗೆ ಪ್ರಕಟಿಸಿರುವ ವಿಶೇಷ ಪಠ್ಯದ ಮಾದರಿ ವಿರುದ್ಧ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ (ಎನ್‌ಎಸ್‌ಯುಐ) ಮಂಗಳವಾರ ಪ್ರತಿಭಟನೆ ನಡೆಸಿತು.

ದೆಹಲಿ ವಿಶ್ವವಿದ್ಯಾಲಯದಲ್ಲಿ ಪ್ರತಿಭಟನೆ ನಡೆಸಿದ ಎನ್‌ಎಸ್‌ಯುಐ, ‘ಬಿಜೆಪಿ, ಆರ್‌ಎಸ್‌ಎಸ್ ಸೇರಿ ಎನ್‌ಸಿಇಆರ್‌ಟಿ ಪಠ್ಯ ಮಾದರಿಯನ್ನು ತಿರುಚಿವೆ’ ಎಂದು ಆರೋಪಿಸಿತು. ಭಾರತೀಯ ಸ್ವಾತಂತ್ರ್ಯ ಹೋರಾಟದ ನೈಜ ಪರಂಪರೆಯನ್ನು ರಕ್ಷಿಸಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸಿದರು.

ಎನ್‌ಸಿಇಆರ್‌ಟಿಯು ‘ದೇಶ ವಿಭಜನೆಯ ಕರಾಳ ದಿನ’ ಎಂಬ ವಿಶೇಷ ಪಠ್ಯ ಮಾದರಿಯನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ‘ಭಾರತ ವಿಭಜನೆಗೆ ಕಾಂಗ್ರೆಸ್, ಮಹಮ್ಮದ್ ಅಲಿ ಜಿನ್ನಾ ಮತ್ತು ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್ ಅವರೇ ಕಾರಣ’ ಎಂದು ಉಲ್ಲೇಖಿಸಿದೆ.

ಎನ್‌ಎಸ್‌ಯುಐ ರಾಷ್ಟ್ರೀಯ ಅಧ್ಯಕ್ಷ ವರುಣ್ ಚೌಧರಿ, ‘ಭಾರತದ ಇತಿಹಾಸವನ್ನು ಸುಳ್ಳು ಮತ್ತು ದ್ವೇಷದಿಂದ ಬರೆಯಲು ಸಾಧ್ಯವಿಲ್ಲ. ಭಾರತವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ, ‘ಇವರು’ ಬ್ರಿಟಿಷರ ಪರ ಇದ್ದರು’ ಎಂದು ಹೇಳಿದರು.

‘ಅದೇ ದೇಶದ್ರೋಹಿಗಳು ಇಂದು ಸುಳ್ಳು ಕತೆ ಕಟ್ಟಿ ಗಾಂಧಿ, ನೆಹರೂ ಮತ್ತು ಸರ್ದಾರ್ ಪಟೇಲ್ ಅವರನ್ನು ದೂರುತ್ತಿದ್ದಾರೆ. ದೇಶದ ಮುಗ್ಧ ಮಕ್ಕಳು ಆರ್‌ಎಸ್‌ಎಸ್ ಮತ್ತು ಬಿಜೆಪಿಯ ತಿರುಚಿದ ಇತಿಹಾಸ ಓದಿ, ಸಂತ್ರಸ್ತರಾಗಲು ಅವಕಾಶ ನೀಡುವುದಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆನ್‌ಲೈನ್ ಗೇಮಿಂಗ್ ನಿಯಂತ್ರಣ: ಮಸೂದೆಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆನ್‌ಲೈನ್ ಗೇಮಿಂಗ್ ವೇದಿಕೆಗಳನ್ನು ನಿಯಂತ್ರಿಸುವ ಉದ್ದೇಶದ ‘ಆನ್‌ಲೈನ್ ಗೇಮಿಂಗ್ ಮಸೂದೆ’ಗೆ ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

‘ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಮಸೂದೆ-2025’ ಅನ್ನು ಸಂಸತ್‌ನಲ್ಲಿ ಬುಧವಾರ ಮಂಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಸಂವಿಧಾನ ತಿದ್ದುಪಡಿ ಮಸೂದೆ ಮಂಡನೆ ಸಾಧ್ಯತೆ: ಕೇಂದ್ರ ಸರ್ಕಾರವು ಸಂವಿಧಾನ ತಿದ್ದುಪಡಿ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದ ಕಾನೂನಿನಲ್ಲಿ ತಿದ್ದುಪಡಿ ತರಲು ಬುಧವಾರ ಲೋಕಸಭೆಯಲ್ಲಿ ಮಸೂದೆಗಳನ್ನು ಮಂಡಿಸುವ ಸಾಧ್ಯತೆ ಇದೆ. ಮಂಗಳವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಎರಡೂ ಮಸೂದೆಗಳನ್ನು ಮಂಡಿಸುವ ನಿರ್ಣಯ ಕೈಗೊಳ್ಳಲಾಯಿತು ಎಂದು ತಿಳಿದುಬಂದಿದೆ.

ಬಿಹಾರ: ನೇಮಕಾತಿ ಪರೀಕ್ಷೆಗೆ ಏಕರೂಪದ ಶುಲ್ಕ

ಪಟ್ನಾ (ಪಿಟಿಐ): ರಾಜ್ಯದ ಎಲ್ಲ ನೇಮಕಾತಿಗಳ ಪೂರ್ವಭಾವಿ ಪರೀಕ್ಷೆಗಳಿಗೆ ಏಕರೂಪದ ₹100 ಶುಲ್ಕ ವಿಧಿಸುವ ಪ್ರಸ್ತಾವಕ್ಕೆ ಬಿಹಾರ ಸಚಿವ ಸಂಪುಟ ಮಂಗಳವಾರ ಒಪ್ಪಿಗೆ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದರು.

ಸಾರ್ವಜನಿಕ ಆಡಳಿತ ಇಲಾಖೆ (ಜಿಎಡಿ) ಪ್ರಸ್ತಾವಕ್ಕೆ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿತು. ಇದೇ ಸಂದರ್ಭದಲ್ಲಿ, ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಖ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ವಿಧಿಸದಿರಲೂ ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಪುನುಗು ಬೆಕ್ಕು ಮೂತ್ರದ ದುರ್ವಾಸನೆ ಹೈಕೋರ್ಟ್ ಕಲಾಪ ಸ್ಥಗಿತ

ಕೊಚ್ಚಿ (ಪಿಟಿಐ): ನ್ಯಾಯಾಲಯದ ಕೊಠಡಿಯಲ್ಲಿ ಪುನುಗು ಬೆಕ್ಕುಗಳು (ಸಿವೆಟ್) ಮೂತ್ರ ವಿಸರ್ಜನೆ ಮಾಡಿದ್ದರಿಂದ ದುರ್ವಾಸನೆ ಹರಡಿತು. ಹೀಗಾಗಿ ಮುಖ್ಯ ನ್ಯಾಯಮೂರ್ತಿ ಕಲಾಪವನ್ನು ಸ್ಥಗಿತಗೊಳಿಸಿದರು. ಕೇರಳ ಹೈಕೋರ್ಟ್‌ನಲ್ಲಿ ಮಂಗಳವಾರ ಈ ಘಟನೆ ನಡೆದಿದೆ.

ಮುಖ್ಯ ನ್ಯಾಯಮೂರ್ತಿ ನಿತಿನ್ ಜಾಮದಾರ್ ಅವರ ಪೀಠವು ವಿಚಾರಣೆಯನ್ನು ಬೇರೆ ದಿನಾಂಕಗಳಿಗೆ ನಿಗದಿಪಡಿಸಿತು.

ಶುಭಾಂಶು ಜೊತೆಗಿನ ಸಂವಾದದಲ್ಲಿ ಪ್ರಧಾನಿ ನರೇಂದ್ರ ಮೋದಿ

‘40–50 ಗಗನಯಾನಿಗಳ ತಂಡ ಬೇಕು’

ನವದೆಹಲಿ (ಪಿಟಿಐ): ‘ಭವಿಷ್ಯದ ಬಾಹ್ಯಾಕಾಶಯಾನ ಯೋಜನೆಗಳಿಗೆ ದೇಶದಲ್ಲಿ 40ರಿಂದ 50 ಮಂದಿ ಗಗನಯಾನಿಗಳ ತಂಡವನ್ನು ತಯಾರು ಮಾಡುವ ಅಗತ್ಯವಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ನಾಸಾದ ‘ಆಕ್ಸಿಯಂ–4’ ಬಾಹ್ಯಾಕಾಶ ಯೋಜನೆಯಲ್ಲಿ ಭಾಗ ವಹಿಸಿ ಭಾರತಕ್ಕೆ ಬಂದ ಶುಭಾಂಶು ಶುಕ್ಲಾ ಜೊತೆಗೆ ನಡೆಸಿದ ಸಂವಾದದಲ್ಲಿ ಅವರು ಈ ಅಭಿಪ್ರಾಯಪಟ್ಟಿದ್ದಾರೆ.

‘ಭಾರತದ ಗಗನಯಾನ ಯೋಜನೆ ಬಗ್ಗೆ ಜಗತ್ತಿನಾದ್ಯಂತ ಅಪಾರ ಆಸಕ್ತಿ ಇದೆ’ ಎಂದು ಪ್ರಧಾನಿ ತಿಳಿಸಿದರು.

ಶುಕ್ಲಾ ಅವರು ಸೋಮವಾರ ರಾತ್ರಿ ಪ್ರಧಾನಿ ಅವರನ್ನು ಭೇಟಿಯಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಕಳೆದ ಅನುಭವಗಳನ್ನು ಹಂಚಿಕೊಂಡರು. ಅಲ್ಪ ಗುರುತ್ವಾಕರ್ಷಣೆಯ ಶಕ್ತಿಗೆ ಹೊಂದಿಕೊಂಡಿದ್ದ ಬಗೆ ಹಾಗೂ ಕಕ್ಷೀಯ ಪ್ರಯೋಗಾಲ-ಯದಲ್ಲಿ ನಡೆದ ಹಲವು ಪ್ರಯೋಗಾ-ಲಯಗಳ ಕುರಿತು ವಿವರ ನೀಡಿದರು. ಇಬ್ಬರ ನಡುವಿನ ಸಂಭಾಷಣೆಯ ವಿವರ ಇರುವ ವಿಡಿಯೊವನ್ನು ಮಂಗಳವಾರ ಬಿಡುಗಡೆಗೊಳಿಸಲಾಗಿದೆ.

‘ಶುಕ್ಲಾ ಅವರ ಬಾಹ್ಯಾಕಾಶ ಪ್ರಯಾಣವು ಮುಂದಿನ ಯೋಜನೆಗಳಿಗೆ ಮೊದಲ ಹೆಜ್ಜೆಯಾಗಿದೆ. ಇದುವರೆಗೂ ಕೆಲವು ಮಕ್ಕಳಷ್ಟೇ ಗಗನಯಾನಿಗಳಾಗುವ ಇಚ್ಛೆ ವ್ಯಕ್ತಪಡಿಸುತ್ತಿದ್ದರು. ಶುಕ್ಲಾ ಅವರ ಪ್ರಯಾಣವು ಮುಂದಿನ ಜನಾಂಗದವರಲ್ಲಿ ಆತ್ಮವಿಶ್ವಾಸ ಹುಟ್ಟುಹಾಕಿದೆ’ ಎಂದು ತಿಳಿಸಿದರು.

ಧನ್ಯವಾದ ಹೇಳಿದ ಶುಕ್ಲಾ

‘ದೇಶದ ಎರಡು ಬಾಹ್ಯಾಕಾಶ ಯೋಜನೆಗಳು ಹಲವು ಅವಕಾಶಗಳನ್ನು ಸೃಷ್ಟಿಸಲಿವೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಸರ್ಕಾರಕ್ಕಿರುವ ಬದ್ಧತೆಯನ್ನು ಇದು ತೋರಿಸುತ್ತದೆ. ಚಂದ್ರಯಾನ–2 ಹಿನ್ನಡೆಯ ಹೊರತಾಗಿಯೂ ಭಾರತದ ಪ್ರಯತ್ನಕ್ಕೆ ವಿಶ್ವದಾದ್ಯಂತ ಮೆಚ್ಚುಗೆ ವ್ಯಕ್ತವಾಗಿದೆ’ ಎಂದು ಶುಭಾಂಶು ಶುಕ್ಲಾ ತಿಳಿಸಿದರು.

‘ಬಾಹ್ಯಾಕಾಶ ಯೋಜನೆಗಳಿಗೆ ಸರ್ಕಾರ ನೀಡಿದ ನಿರಂತರ ಬೆಂಬಲದಿಂದಾಗಿ ಚಂದ್ರಯಾನ–3 ಯಶಸ್ವಿಯಾಯಿತು. ವೈಫಲ್ಯದ ನಂತರವೂ ಸರ್ಕಾರವು ನಿರಂತರ ಪ್ರೋತ್ಸಾಹ ನೀಡಿತು’ ಎಂದರು.

‘ಭಾರತದ ಗಗನಯಾನ ಯೋಜನೆಯು ಇಡೀ ವಿಶ್ವದಾದ್ಯಂತ ಹೆಚ್ಚಿನ ಆಸಕ್ತಿಯನ್ನು ಹುಟ್ಟುಹಾಕಿತು. ನನ್ನ ಜೊತೆಗಿದ್ದ ಗಗನಯಾನಿ ನನ್ನಿಂದ ಟಿಪ್ಪಣಿಗಳನ್ನು ಪಡೆದುಕೊಂಡರು. ಭಾರತದ ಬಾಹ್ಯಾಕಾಶ ನೌಕೆಯಲ್ಲಿ ಪಯಣಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ’ ಎಂದು ಶುಕ್ಲಾ ತಿಳಿಸಿದರು.

ಪುಸ್ತಕ ಬಿಡುಗಡೆ



ಶುಭಾಂಶು ಶುಕ್ಲಾ

ಗಗನಯಾನಿ ಶುಭಾಂಶು ಶುಕ್ಲಾ ಅವರ ಜೀವನಗಾಥೆಯನ್ನು ಒಳಗೊಂಡ ‘ಸ್ಕೈ ವಾಸ್ ನೆವರ್ ದ ಲಿಮಿಟ್’ ಕೃತಿಯು ಬಿಡುಗಡೆಯಾಗಿದೆ.

ರೂಪಾ ಸಂಸ್ಥೆಯು ಹೊರತಂದಿರುವ ಕೃತಿಯನ್ನು ಸಾಕ್ಷ್ಯಚಿತ್ರ ನಿರ್ಮಾಪಕ ಆರ್. ನಾರಾಯಣ್ ಬರೆದಿದ್ದಾರೆ. ಕೃತಿಯ ಬೆಲೆ ₹295. ಆನ್‌ಲೈನ್ ಹಾಗೂ ಅಂಗಡಿಗಳಲ್ಲಿ ಖರೀದಿಗೆ ಲಭ್ಯವಿದೆ.

ಕೃತಿಯು ಏಳು ಅಧ್ಯಯನಗಳನ್ನು ಒಳಗೊಂಡಿದೆ. ಲಖನೌದಿಂದ ಭೂಕಕ್ಷೆ ತನಕ, ‘ಪರಂಪರೆಯಲ್ಲ, ಕೇವಲ ನಿರ್ಣಯ’, ನಾಯಕನ ಒಳಪಯಣ, ದೇಶದ ಹೆಮ್ಮೆ– ನೂರು ಕೋಟಿ ನಿರೀಕ್ಷೆ ಸೇರಿದಂತೆ, ಕುಟುಂಬ ಸದಸ್ಯರು, ಸ್ನೇಹಿತರು ಹಾಗೂ ಪತ್ನಿಯ ಅಭಿಪ್ರಾಯವನ್ನು ಕೃತಿಯು ಒಳಗೊಂಡಿದೆ.

ಕ್ರಿಸ್ಟಲ್ ಕನೆಕ್ಷನ್ಸ್ ಹಳೆಯ ವಿದ್ಯಾರ್ಥಿಗಳ ಸಭೆ–2025

ವಿಐಟಿ ಚೆನ್ನೈ: ಹಳೆ ವಿದ್ಯಾರ್ಥಿಗಳಿಗೆ ಶ್ರೇಷ್ಠತೆ ಪ್ರಶಸ್ತಿ



ಚೆನ್ನೈ: ಚೆನ್ನೈ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ)ಯು ಆ.15 ರಂದು ಹಳೆಯ ವಿದ್ಯಾರ್ಥಿಗಳಿಗಾಗಿ ‘ಶ್ರೇಷ್ಠತಾ ಪ್ರಶಸ್ತಿ ಪ್ರದಾನ’ ಸಮಾರಂಭ ಹಮ್ಮಿಕೊಂಡಿತ್ತು.

‘ಕ್ರಿಸ್ಟಲ್ ಕನೆಕ್ಷನ್ಸ್ ಹಳೆಯ ವಿದ್ಯಾರ್ಥಿಗಳ ಸಭೆ–2025’ ಹೆಸರಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಐಕಾನ್ ನಟ, ಸಂಸತ್ ಸದಸ್ಯ ಡಾ. ಕಮಲ್ ಹಾಸನ್ ಭಾಗವಹಿಸಿ ಮಾತನಾಡಿದರು

ಯುವಕರು ಜೀವನದಲ್ಲಿ ಕಾಣುವ ವೈಫಲ್ಯಗಳನ್ನು ಎದುರಿಸಿ ಯಶಸ್ಸಿನತ್ತ ಸಾಗಬೇಕು. "ನಾವು ಸ್ವಾತಂತ್ರ್ಯದ ಬಗ್ಗೆ ವಿರಳವಾಗಿ ಮಾತನಾಡುತ್ತೇವೆ - ವಿಫಲಗೊಳ್ಳುವ ಸ್ವಾತಂತ್ರ್ಯ, ಅದು ಇಲ್ಲದೆ ಯಾವುದೇ ಹೊಸತನ ಕಾಣಲು ಸಾಧ್ಯವಿಲ್ಲ. ವೈಫಲ್ಯಕ್ಕೆ ಹೆದರುವ ದೇಶ ಎಂದಿಗೂ ತನ್ನ ನಿಜವಾದ ಸಾಮರ್ಥ್ಯವ-ನ್ನು ಕಂಡುಕೊಳ್ಳುವುದಿಲ್ಲ. ಭಾರತದಲ್ಲಿ, ವೈಫಲ್ಯವನ್ನು ಸಹ ಜೀವಾವಧಿ ಶಿಕ್ಷೆಯಂತೆ ಪರಿಗಣಿಸಲಾಗುತ್ತದೆ ಮತ್ತು ಆ ಭಯ ಬಡತನಕ್ಕಿಂತ ಮೀರಿದ ಕನಸುಗಳನ್ನು ಕೊಲ್ಲುತ್ತದೆ" ಎಂದು ಪ್ರತಿಪಾದಿಸಿದರು.

ಮಾತು ಮುಂದುವರಿಸಿದ ಅವರು ಪ್ರತಿಯೊಂದು ಯಶಸ್ಸಿನ ಕಥೆಯಲ್ಲೂ ಜನರು ತಾವು ನೋಡಿರದ ವೈಫಲ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ನೀವು ಹೆಚ್ಚು ವಿಫಲರಾದಷ್ಟೂ, ನೀವು ಹೆಚ್ಚು ವಿದ್ಯಾವಂತರಾಗುತ್ತೀರಿ. ಸ್ವಾತಂತ್ರ್ಯ ಎಂಬುದಕ್ಕೆ ಏನಾದರೂ ಅರ್ಥವಿದ್ದರೆ, ಅದು ಭಯವಿಲ್ಲದೆ ಬೀಳೇಳುವ ಹಕ್ಕನ್ನು ಸೂಚಿಸುತ್ತದೆ ಎಂದು ಹೇಳಿದರು.

ವಿಐಟಿಯ ಸಂಸ್ಥಾಪಕ - ಕುಲಪತಿ ಡಾ. ಜಿ. ವಿಶ್ವನಾಥನ್ ಅವರು ಮಾತನಾಡಿ, ಶಿಕ್ಷಣ ಅದರಲ್ಲೂ ವಿಶೇಷವಾಗಿ ಉನ್ನತ ಶಿಕ್ಷಣ ಮಾತ್ರ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡಬಹುದು ಎಂಬುದನ್ನು ದೃಢವಾಗಿ ನಂಬುತ್ತೇನೆ. "ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕೆಂದು ನಾವೆಲ್ಲರೂ ಬಯಸುತ್ತೇವೆ. ಅದು ಉನ್ನತ ಶಿಕ್ಷಣದ ಸಹಾಯದಿಂದ ಹಾಗೂ ಸಹಜವಾಗಿ ಕೆಲಸ ಮಾಡುವ ಅವಕಾಶದಿಂದ ಮಾತ್ರ ಸಾಧ್ಯ" ಎಂದು ವಿವರಿಸಿದರು.

ವಿಐಟಿ ಉಪಾಧ್ಯಕ್ಷ ಡಾ. ಜಿ.ವಿ. ಸೆಲ್ವಂ, ವಿದ್ಯಾರ್ಥಿಗಳು ಉದ್ಯಮಿಗಳಾ-ಗುತ್ತಾರೆ ಮತ್ತು ಉದ್ಯೋಗ ಹುಡುಕುವ ಬದಲು ಇತರರಿಗೆ ಉದ್ಯೋಗ ಒದಗಿಸುತ್ತಾರೆ ಎಂದು ಹೇಳಿದರು. ಜೀವನೋಪಾಯಕ್ಕಾಗಿ ವಿದೇಶಕ್ಕೆ ಹೋಗುವವರಿಗೆ, ನಾನು ಒಂದು ಮಾತು ಹೇಳುತ್ತೇನೆ - ಅಲ್ಲಿಗೆ ಹೋಗಿ, ಅಲ್ಲಿ ಕಲಿಯಿರಿ, ಅಲ್ಲಿ ಗಳಿಸಿ ಮತ್ತು ಹಿಂತಿರುಗಿ ನಿಮ್ಮ ಮಾತೃ ದೇಶ ಭಾರತಕ್ಕೆ ಸೇವೆ ಮಾಡಿ. ಕೇವಲ ಉದ್ಯೋಗಾಕಾಂಕ್ಷಿ ಆಗಬೇಡಿ, ಉದ್ಯೋಗ ಸೃಷ್ಟಿಕರ್ತರಾಗಿರಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಐಟಿ ಉಪಕುಲಪತಿ ಡಾ. ವಿ.ಎಸ್. ಕಾಂಚನಾ ಭಾಸ್ಕರನ್, ವಿಐಟಿ ಚೆನ್ನೈನ ಪ್ರೊ ವೈಸ್ ಚಾನ್ಸೆಲರ್ ಡಾ.ಟಿ. ತ್ಯಾಗರಾಜನ್, ವಿಐಟಿ ಚೆನ್ನೈನ ನಿರ್ದೇಶಕ ಡಾ.ಕೆ ಸತ್ಯನಾರಾ-ಯಣನ್ ಹಾಗೂ ಹೆಚ್ಚುವರಿ ರಿಜಿಸ್ಟ್ರಾರ್ ಡಾ. ಪಿ.ಕೆ. ಮನೋಹರನ್ ಮತ್ತು ವಿಐಟಿಎಎ, ಇನ್‌ಸ್ಟಿಟ್ಯೂಷನಲ್ ಚೆನ್ನೈ ಚಾಪ್ಟರ್ ಡಾ. ಮನೋಜಕುಮಾರ್ ರಾಜಗೋಪಾಲ್ ಭಾಗವಹಿಸಿದ್ದರು.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಗಿಲ್ ಉಪನಾಯಕ; ಶ್ರೇಯಸ್‌ಗೆ ನಿರಾಸೆ

ಏಷ್ಯಾ ಕಪ್ ಟಿ20 ಕ್ರಿಕೆಟ್: 15 ಆಟಗಾರರ ತಂಡ ಆಯ್ಕೆ • ಬೂಮ್ರಾ, ಜಿತೇಶ್‌ಗೆ ಸ್ಥಾನ

ಪ್ರಮುಖ ಅಂಶಗಳು
- ಅಗರಕರ್ ನೇತೃತ್ವದ ಸಮಿತಿಯಿಂದ ತಂಡ ಪ್ರಕಟ
- ಉಪನಾಯಕರಾಗಿದ್ದ ಅಕ್ಷರ್ ಪಟೇಲ್‌ಗೂ ಸ್ಥಾನ
- ತಂಡವನ್ನು ಮುನ್ನಡೆಸಲಿರುವ ಸೂರ್ಯಕುಮಾರ್

ಮುಂಬೈ (ಪಿಟಿಐ): ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್ ಅವರನ್ನು ಟಿ20 ತಂಡದ ಉಪನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಏಷ್ಯಾ ಕಪ್ ಟೂರ್ನಿಗಾಗಿ ಬುಧವಾರ ಭಾರತ ತಂಡವನ್ನು ಪ್ರಕಟಿಸಲಾಯಿತು. ಸೂರ್ಯಕುಮಾರ್ ಯಾದವ್ ನಾಯಕತ್ವದಲ್ಲಿ 15 ಆಟಗಾರರ ತಂಡವನ್ನು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಪ್ರಕಟಿಸಿದರು.

2024ರಲ್ಲಿ ಶ್ರೀಲಂಕಾ ಎದುರಿನ ಟಿ20 ಕ್ರಿಕೆಟ್ ಪಂದ್ಯದಲ್ಲಿ ಗಿಲ್ ಆಡಿದ್ದರು. ನಂತರ ಅವರು ಟಿ20 ತಂಡದಲ್ಲಿ ಸ್ಥಾನ ಪಡೆದಿದ್ದು ಈಗಲೇ. ಕಳೆದ ಸರಣಿಯಲ್ಲಿ ಉಪನಾಯಕರಾಗಿದ್ದ ಅಕ್ಷರ್ ಪಟೇಲ್ ಅವರು ತಂಡಕ್ಕೆ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಂಗ್ಲೆಂಡ್‌ನಲ್ಲಿ ನಡೆದಿದ್ದ ಸರಣಿಯಲ್ಲಿ ಗಿಲ್ ಅವರು ನಾವು ನಿರೀಕ್ಷೆ ಮಾಡಿದ್ದಕ್ಕಿಂತಲೂ ಚೆನ್ನಾಗಿ ಆಡಿದ್ದಾರೆ' ಎಂದು ಅಗರಕರ್ ತಿಳಿಸಿದ್ದಾರೆ.

ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಆಯ್ಕೆ ಕುರಿತು ಇದ್ದ ಅನುಮಾನಗಳಿಗೂ ತೆರೆಬಿದ್ದಿದೆ. ಅಕ್ಟೋಬರ್‌ನಲ್ಲಿ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿಯಲ್ಲಿ ಆಡಲು ಅವರು ಫಿಟ್‌ನೆಸ್ ಕಾಯ್ದುಕೊಳ್ಳಲು ಏಷ್ಯಾ ಕಪ್‌ನಿಂದ ಬಿಡುವು ನೀಡಲಾಗುವುದು ಎನ್ನಲಾಗಿತ್ತು. ಆದರೆ, ಬೂಮ್ರಾ ಅವರಿಗೆ ಸ್ಥಾನ ನೀಡಲಾಗಿದೆ. ಹೋದ ವರ್ಷ ಟಿ20 ವಿಶ್ವಕಪ್ ನಂತರ ಅವರು ಚುಟುಕು ಮಾದರಿಯಲ್ಲಿ ಆಡಿರಲಿಲ್ಲ.


ಮುಂಬೈನಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ರಾಷ್ಟ್ರೀಯ ತಂಡದ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಇದ್ದಾರೆ ಪಿಟಿಐ ಚಿತ್ರ


ಜಸ್‌ಪ್ರೀತ್ ಬೂಮ್ರಾ

ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್, ಹೆಚ್ಚುವರಿ ವಿಕೆಟ್‌ಕೀಪರ್ ಆಗಿ ಜಿತೇಶ್ ಶರ್ಮಾ ಅವರೂ ತಂಡದಲ್ಲಿದ್ದಾರೆ. ಐವರು ಕಾಯ್ದಿಟ್ಟ ಆಟಗಾರರಲ್ಲಿ ಯಶಸ್ವಿ ಜೈಸ್ವಾಲ್ ಕೂಡ ಒಬ್ಬರಾಗಿದ್ದಾರೆ.

'ಜೈಸ್ವಾಲ್ ಅವರು ತಂಡಕ್ಕೆ ಆಯ್ಕೆಯಾಗದಿರುವುದು ದುರದೃಷ್ಟಕರ. ಅವರು ಇನ್ನೂ ಸ್ವಲ್ಪ ಕಾಲ ಕಾಯ ಬೇಕಾಗಬಹುದು' ಎಂದು ಅಗರಕರ್ ಹೇಳಿದರು.

ಈ ತಂಡದಲ್ಲಿ ಕಾಣಿಸಿಕೊಳ್ಳದ ಮತ್ತೊಂದು ಪ್ರಮುಖ ಹೆಸರು ಶ್ರೇಯಸ್ ಅಯ್ಯರ್ ಅವರದ್ದು. ಈ ವರ್ಷದ ಐಪಿಎಲ್‌ನಲ್ಲಿ ಶ್ರೇಯಸ್ ನಾಯಕತ್ವದ ಪಂಜಾಬ್ ಕಿಂಗ್ಸ್ ಫೈನಲ್ ಪ್ರವೇಶಿಸಿತ್ತು.

'ಬಹಳಷ್ಟು ಉತ್ತಮ ಆಟಗಾರರು ಇದ್ದಾಗ ಆಯ್ಕೆ ಪ್ರಕ್ರಿಯೆ ತಲೆನೋವಿನ ಸಂಗತಿಯಾಗುತ್ತದೆ. ಉತ್ತಮರಲ್ಲಿಯೇ ಶ್ರೇಷ್ಠರನ್ನು ಹುಡುಕುವುದು ಸುಲಭವಲ್ಲ' ಎಂದು ಅಗರಕರ್ ಅಭಿಪ್ರಾಯಪಟ್ಟರು.

ಏಷ್ಯಾ ಕಪ್ ಟೂರ್ನಿಯು ಸೆಪ್ಟೆಂಬರ್ 9ರಿಂದ ನಡೆಯಲಿದೆ. ಭಾರತ ತಂಡವು ಎ ಗುಂಪಿನಲ್ಲಿ ಆಡಲಿದೆ. ಪಾಕಿಸ್ತಾನ, ಒಮನ್ ಮತ್ತು ಯುಎಇ ತಂಡಗಳು ಈ ಗುಂಪಿನಲ್ಲಿವೆ.

ತಂಡ: ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್ (ಉಪನಾಯಕ), ಅಭಿಷೇಕ್ ಶರ್ಮಾ, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಜಿತೇಶ್ ಶರ್ಮಾ, ಶಿವಂ ದುಬೆ, ಅರ್ಷದೀಪ್ ಸಿಂಗ್, ಸಂಜು ಸ್ಯಾಮ್ಸನ್, ಹರ್ಷಿತ್ ರಾಣಾ, ತಿಲಕ್ ವರ್ಮಾ, ರಿಂಕು ಸಿಂಗ್, ವರುಣ್ ಚಕ್ರವರ್ತಿ, ಕುಲದೀಪ್ ಯಾದವ್.

ಮಹಿಳಾ ವಿಶ್ವಕಪ್: ಮರಳಿದ ರೇಣುಕಾ; ಶಫಾಲಿ ವರ್ಮಾಗೆ ಸಿಗದ ಅವಕಾಶ


ಹರ್ಮನ್‌ಪ್ರೀತ್


ರೇಣುಕಾ ಸಿಂಗ್

ಮುಂಬೈ (ಪಿಟಿಐ): ಫಿಟ್ನೆಸ್ ಪಡೆದಿರುವ ವೇಗದ ಬೌಲರ್ ರೇಣುಕಾ ಸಿಂಗ್ ಠಾಕೂರ್ ಅವರನ್ನು ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡಕ್ಕೆ ಸೇರ್ಪಡೆ ಮಾಡಲಾಗಿದೆ. ಆದರೆ, ಮಂಗಳವಾರ ಪ್ರಕಟವಾದ ತಂಡದಲ್ಲಿ ಬಿರುಸಿನ ಆರಂಭ ಆಟಗಾರ್ತಿ ಶಫಾಲಿ ವರ್ಮಾ ಅವರಿಗೆ ಸ್ಥಾನ ದೊರೆತಿಲ್ಲ.

ಅಗ್ರ ಸರದಿಯ ಬ್ಯಾಟರ್ ಪ್ರತಿಕಾ ರಾವ್ ಸಹ 15 ಆಟಗಾರ್ತಿಯರ ತಂಡದಲ್ಲಿದ್ದಾರೆ. ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ತಂಡಕ್ಕೆ ಸ್ಮೃತಿ ಮಂದಾನ ಉಪನಾಯಕಿ ಆಗಿದ್ದಾರೆ.

ವಿಶ್ವಕಪ್ ಸೆಪ್ಟೆಂಬರ್ 30ರಂದು ಆರಂಭವಾಗಲಿದೆ. ಭಾರತ ಆತಿಥ್ಯ ವಹಿಸಿದ್ದು, ಪಾಕಿಸ್ತಾನ ತನ್ನ ಪಂದ್ಯಗಳನ್ನು ಈ ಹಿಂದಿನ ಉಭಯ ತಂಡಗಳ ಕರಾರಿನಂತೆ ತಟಸ್ಥ ತಾಣ ಶ್ರೀಲಂಕಾದಲ್ಲಿ ಆಡಲಿದೆ.

ಸೆಪ್ಟೆಂಬರ್ 14ರಿಂದ ಆಸ್ಟ್ರೇಲಿಯಾ ವಿರುದ್ಧ ಮೂರು ಏಕದಿನ ಪಂದ್ಯಗಳನ್ನು ಆಡಲಿರುವ ತಂಡವನ್ನೂ ನೀತು ಡೇವಿಡ್ ನೇತೃತ್ವದ ಆಯ್ಕೆಸಮಿತಿ ಪ್ರಕಟಿಸಿದೆ.

ವಿಶ್ವಕಪ್ ತಂಡದಲ್ಲಿರುವ ಅಮನ್ಜೋತ್ ಕೌರ್ ಅವರು ಆಸ್ಟ್ರೇಲಿಯಾ ಪ್ರವಾಸ ಮಾಡುವ ತಂಡದಲ್ಲಿಲ್ಲ. ಅವರ ಬದಲು ಆಲ್‌ರೌಂಡರ್ ಸಯಾಲಿ ಸಾತ್ಘರೆ ಆಸ್ಟ್ರೇಲಿಯಾಕ್ಕೆ ತೆರಳಲಿದ್ದಾರೆ. ಗಾಯದಿಂದ ಪೂರ್ಣವಾಗಿ ಚೇತರಿಸಿಕೊಳ್ಳಲು ಕೌರ್ ಅವರಿಗೆ ಹೆಚ್ಚುವರಿ ವಿಶ್ರಾಂತಿ ನೀಡಲಾಗಿದೆ.

ಆಡಿರುವ 14 ಏಕದಿನ ಪಂದ್ಯಗಳಲ್ಲಿ ಗಮನ ಸೆಳೆದಿರುವ ಪ್ರತಿಕಾ ಅವರನ್ನು, ಬಿರುಸಿನ ಹೊಡೆತಗಳ ಆಟಗಾರ್ತಿ ಶಫಾಲಿ ಬದಲು ಆಯ್ಕೆ ಮಾಡಲಾಗಿದೆ. 'ಶಫಾಲಿ ಅವರನ್ನು ನಾವು ತಂಡದಿಂದ ದೂರ ಮಾಡಿಲ್ಲ. ಅವರು ಆಸ್ಟ್ರೇಲಿಯಾ 'ಎ' ಸರಣಿಯಲ್ಲಿ ಆಡಿದ್ದರು. ಅವರ ಮುಂದೆ ದೀರ್ಘ ವೃತ್ತಿಜೀವನವಿದೆ. ಅವರು ಅನುಭವ ಗಳಿಸಿದಲ್ಲಿ ಏಕದಿನ ಮಾದರಿಯಲ್ಲಿ ದೀರ್ಘಕಾಲ ಆಡಲು ಅವಕಾಶವಿದೆ' ಎಂದು ನೀತು ಹೇಳಿದರು.

ರೇಣುಕಾ ಜೊತೆ ತಂಡದಲ್ಲಿರುವ ಇನ್ನಿಬ್ಬರು ಮಧ್ಯಮ ವೇಗಿಗಳೆಂದರೆ– ಕ್ರಾಂತಿ ಗೌಡ್ ಮತ್ತು ಅರುಂಧತಿ ರೆಡ್ಡಿ.

ಯುವ ಸ್ಪಿನ್ನರ್ ಶ್ರೀ ಚರಣಿ ಅವರೂ ತಂಡದಲ್ಲಿ ಅವಕಾಶ ಗಿಟ್ಟಿಸಿಕೊಂಡಿದ್ದಾರೆ.

ವಿಶ್ವಕಪ್‌ಗೆ ತಂಡ (15): ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪ ನಾಯಕಿ), ಪ್ರತಿಕಾ ರಾವಲ್, ಹರ್ಲೀನ್ ಡಿಯೋಲ್, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ರೇಣುಕಾ ಸಿಂಗ್ ಠಾಕೂರ್, ಅರುಂಧತಿ ರೆಡ್ಡಿ, ರಿಚಾ ಘೋಷ್ (ವಿಕೆಟ್ ಕೀಪರ್), ಕ್ರಾಂತಿ ಗೌಡ್, ಅಮನ್ಜೋತ್ ಕೌರ್, ರಾಧಾ ಯಾದವ್, ಶ್ರೀಚರಣಿ, ಯಷ್ಟಿಕಾ ಭಾಟಿಯಾ, ಸ್ನೇಹ ರಾಣಾ.


ಮನು ಭಾಕರ್


ರಶ್ಮಿಕಾ ಸೆಹಗಲ್

ಶೂಟಿಂಗ್: ಭಾಕರ್‌ಗೆ ಕಂಚು

ಶೈಮ್ಕೆಂಟ್ (ಕಜಕಸ್ತಾನ) (ಪಿಟಿಐ): ಒಲಿಂಪಿಕ್ ಅವಳಿ ಪದಕ ವಿಜೇತೆ ಮನು ಭಾಕರ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು. ಜೂನಿಯರ್ ವಿಭಾಗದಲ್ಲಿ ರಶ್ಮಿಕಾ ಸೆಹಗಲ್ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಎಂಟು ಶೂಟರ್‌ಗಳನ್ನು ಒಳಗೊಂಡ ಫೈನಲ್ ಸುತ್ತಿನಲ್ಲಿ 23 ವರ್ಷದ ಭಾಕರ್ 219.7 ಪಾಯಿಂಟ್ಸ್‌ನೊಂದಿಗೆ ಮೂರನೇ ಸ್ಥಾನ ಗಳಿಸಿದರು. ಚೀನಾದ ಕ್ವಿಯಾಂಕೆ ಮಾ (243.2) ಮತ್ತು ಕೊರಿಯಾದ ಜಿಯಿನ್ ಯಂಗ್ (241.6) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು.

ಭಾಕರ್ (583) ಅವರು ತಂಡ ವಿಭಾಗದಲ್ಲೂ ಹಾಲಿ ಏಷ್ಯನ್ ಗೇಮ್ಸ್ ಚಾಂಪಿಯನ್ ಪಲಕ್ ಗುಲಿಯಾ (573) ಮತ್ತು ಸುರುಚಿ ಸಿಂಗ್ (574) ಅವರೊಂದಿಗೆ ಕಂಚಿನ ಪದಕ ಗೆದ್ದರು. ವೈಯಕ್ತಿಕ ಸ್ಪರ್ಧೆಯಲ್ಲಿ ಪಲಕ್ ಮತ್ತು ಸುರುಚಿ ಕ್ರಮವಾಗಿ ಮೂರು ಮತ್ತು ಎರಡು ಅಂಕಗಳ ಅಂತರದಿಂದ ಫೈನಲ್ ಪ್ರವೇಶಿಸಲು ವಿಫಲರಾದರು.

ರಶ್ಮಿಕಾಗೆ ಡಬಲ್ ಚಿನ್ನ: ಜೂನಿಯರ್ ವಿಭಾಗದ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ರಶ್ಮಿಕಾ ಡಬಲ್ ಚಿನ್ನದ ಸಾಧನೆ ಮೆರೆದರು.

ವೈಯಕ್ತಿಕ ಸ್ಪರ್ಧೆಯಲ್ಲಿ 241.9 ಅಂಕದೊಂದಿಗೆ ಚಾಂಪಿಯನ್ ಆದರು. ಅವರಿಗೆ ಪ್ರಬಲ ಸ್ಪರ್ಧೆ ನೀಡಿದ ಕೊರಿಯಾದ ಹಾನ್ ಸೆಯುಂಗ್‌ಹ್ಯುನ್ (237.6) ಬೆಳ್ಳಿ ಪದಕ ಗೆದ್ದರು. ತಂಡ ವಿಭಾಗದಲ್ಲಿ ರಶ್ಮಿಕಾ (582), ವಂಶಿಕಾ ಚೌಧರಿ (573) ಮತ್ತು ಮೋಹಿನಿ ಸಿಂಗ್ (565) ಅವರು ಚಿನ್ನ ಗೆದ್ದರು.

ಕೂಟದಲ್ಲಿ ಭಾರತದ ಶೂಟರ್‌ಗಳು ಸೀನಿಯರ್, ಜೂನಿಯರ್ ಮತ್ತು ಯೂತ್ ವಿಭಾಗದಲ್ಲಿ ಇದುವರೆಗೆ ಐದು ಚಿನ್ನ, ಎರಡು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ಗೆದ್ದಿದ್ದಾರೆ.

ಪ್ರಜ್ಞಾನಂದಗೆ ಮಣಿದ ಗುಕೇಶ್


ಪ್ರಜ್ಞಾನಂದ

ಸೇಂಟ್ ಲೂಯಿ (ಅಮೆರಿಕ) (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಸಿಂಕ್‌ಫೀಲ್ಡ್ ಕಪ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರನ್ನು ಸೋಲಿಸಿದರು. ಇದರೊಂದಿಗೆ ಫಿಡೆ ಲೈವ್ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅವರು ಮೂರನೇ ಸ್ಥಾನಕ್ಕೇರಿದರು.

ಅಮೋಘ ಲಯದಲ್ಲಿರುವ ಅಮೆರಿಕದ ಆಟಗಾರ ಲೆವೋನ್ ಅರೋನಿಯನ್ ಸೋಮವಾರ ನಡೆದ ಮೊದಲ ಸುತ್ತಿನಲ್ಲಿ ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಅವರನ್ನು ಮಣಿಸಿದರು.

'ಆರಂಭದಿಂದಲೇ ಗುಕೇಶ್ ಎಂದಿನ ಲಹರಿಯಲ್ಲಿ ಆಡಿದಂತೆ ಕಾಣಲಿಲ್ಲ. ಎಂಡ್ ಗೇಮ್ ಅವರಿಗೆ ಸಮಾಧಾನದ ರೀತಿಯಲ್ಲಿರಲಿಲ್ಲ' ಎಂದು ಟೂರ್ನಿಯಲ್ಲಿ ಶುಭಾರಂಭ ಮಾಡಿದ ಬಳಿಕ ಪ್ರಜ್ಞಾನಂದ ಪ್ರತಿಕ್ರಿಯಿಸಿದರು. ಅವರು 36 ನಡೆಗಳಲ್ಲಿ ಜಯಗಳಿಸಿದರು.

ಈ ಗೆಲುವಿನಿಂದ ಪ್ರಜ್ಞಾನಂದ ಮತ್ತು ಗುಕೇಶ್ ಕ್ಲಾಸಿಕಲ್ ಚೆಸ್ ಮುಖಾಮುಖಿಯಲ್ಲಿ ಸಮಬಲ ಸಾಧಿಸಿದ್ದಾರೆ. ಇಬ್ಬರೂ ಆರು ಬಾರಿ ಎದುರಾಗಿದ್ದು ತಲಾ ಮೂರರಲ್ಲಿ ಜಯಗಳಿಸಿದ್ದಾರೆ.

ಮೊದಲ ಸುತ್ತಿನ ಇತರ ಪಂದ್ಯಗಳಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರು ಪೋಲೆಂಡ್‌ನ ಡುಡಾ ಯಾನ್– ಕ್ರಿಸ್ಟೋಫ್ ಜೊತೆ ಡ್ರಾ ಮಾಡಿಕೊಂಡರು. ವೈಲ್ಡ್ ಕಾರ್ಡ್ ಪ್ರವೇಶ ಪಡೆದ ಸಾಮುಯೆಲ್ ಸಾವಿಯಾನ್, ಸ್ವದೇಶದ ವೆಸ್ಲಿ ಸೊ ಜೊತೆ ಡ್ರಾ ಮಾಡಿಕೊಂಡರು. ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಮತ್ತು ಅದೇ ದೇಶದ ಅಲಿರೇಜಾ ಫಿರೋಜ ನಡುವಣ ಪಂದ್ಯವೂ ಡ್ರಾ ಆಯಿತು.

ಟಿ.ಟಿ ಕೋಚ್ ಪುರುಷೋತ್ತಮ ರಾವ್ ನಿಧನ



ಬೆಂಗಳೂರು/ಹುಬ್ಬಳ್ಳಿ: ಟೇಬಲ್ ಟೆನಿಸ್ ಕೋಚ್, ರೆಫರಿ ಮತ್ತು ರೈಲ್ವೆ ತಂಡದ ಮಾಜಿ ಆಟಗಾರ ಜೆ.ಪುರುಷೋತ್ತಮ ರಾವ್ (90) ಸೋಮವಾರ ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

80ರ ದಶಕದಲ್ಲಿ ಅವರು ಅಖಿಲ ಭಾರತ ರೈಲ್ವೆ ತಂಡವನ್ನು ಪ್ರತಿನಿಧಿಸಿದ್ದರು. ನಿವೃತ್ತಿಯ ನಂತರ ತರಬೇತುದಾರರಾಗಿ ಹಲವು ಪ್ರತಿಭಾನ್ವಿತರಿಗೆ ಮಾರ್ಗದರ್ಶನ ನೀಡಿದ್ದರು.

'ನನಗೆ ಪುರುಷೋತ್ತಮ್ ಅವರು 1974ರಿಂದಲೂ ಪರಿಚಯ. ಟೇಬಲ್ ಟೆನಿಸ್ ಎಂದರೆ ಅವರಿಗೆ ಅಪಾರ ಪ್ರೀತಿ. ರೈಲ್ವೆ ಉದ್ಯೋಗಿಯಾಗಿದ್ದರು. ಅವರು ಟೇಬಲ್ ಟೆನಿಸ್ ಕಲಿಯಲು ಹುಬ್ಬಳ್ಳಿಯಿಂದ ಧಾರವಾಡಕ್ಕೆ ಸೈಕಲ್‌ನಲ್ಲಿ ಹೋಗುತ್ತಿದ್ದರು. ರಾಷ್ಟ್ರೀಯ ಟೂರ್ನಿಯಲ್ಲಿ ಅವರು ಶ್ರೇಯಾಂಕರಹಿತ ಆಟಗಾರರಾಗಿಯೂ 1 ರಿಂದ 8 ರ್‍ಯಾಂಕ್‌ನಲ್ಲಿರುವ ಎಲ್ಲ ಆಟಗಾರರ ವಿರುದ್ಧವೂ ಮೇಲುಗೈ ಸಾಧಿಸಿದ್ದರು. ಅವರ ಮಾರ್ಗದರ್ಶನದಲ್ಲಿ ಬೆಳೆದ ರವಿ ವರ್ಮಾ, ರೂಪೇಶ್ ಸಿಂಘಾಲ್ ಮತ್ತಿತರರು ರಾಜ್ಯ ತಂಡದಲ್ಲಿ ಆಡಿದರು. ಪ್ರಸ್ತುತ ಧಾರವಾಡ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯ (ಡಿಡಿಟಿಟಿಎ) ಜೀವಮಾನ ಗೌರವ ಅಧ್ಯಕ್ಷರಾಗಿದ್ದರು' ಎಂದು ಡಿಡಿಟಿಟಿಎ ಸಂಸ್ಥಾಪಕ ಕಾರ್ಯದರ್ಶಿ ಟಿ.ಜಿ. ಉಪಾಧ್ಯೆ 'ಪ್ರಜಾವಾಣಿ'ಗೆ ತಿಳಿಸಿದರು.

ಮಹಾರಾಜ ಟ್ರೋಫಿ: ಶಿವಮೊಗ್ಗ ಲಯನ್ಸ್‌ಗೆ ಸತತ ನಾಲ್ಕನೇ ಸೋಲು

ಸ್ಮರಣ್ ಅಬ್ಬರ: ಗುಲ್ಬರ್ಗಗೆ ಜಯ

• ಮೋಹನ್‌ಕುಮಾರ ಸಿ.

ಮೈಸೂರು: ಆರ್.ಸ್ಮರಣ್ ಅವರ (ಔಟಾಗದೆ 53; 30 ಎಸೆತ, 4x3, 6x4) ಅಮೋಘ ಅರ್ಧಶತಕದ ಬಲದಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಮಂಗಳವಾರ ಶಿವಮೊಗ್ಗ ಲಯನ್ಸ್ ವಿರುದ್ಧ 7 ವಿಕೆಟ್‌ಗಳ ಜಯ ಸಾಧಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ–20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ, ಸ್ಮರಣ್ ಆರಂಭಿಕ ಬ್ಯಾಟರ್ ನಿಕಿನ್ ಜೋಸ್ (40; 42 ಎಸೆತ, 4x3) ಜೊತೆ ಉಪಯುಕ್ತ ಇನ್ನಿಂಗ್ಸ್ ಕಟ್ಟಿದರು.

ಕಾಡಿದ ಕಾಂಬ್ಳೆ: ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಶಿವಮೊಗ್ಗ ಲಯನ್ಸ್‌ಗೆ ಪಿ.ಧ್ರುವ್ (18) ಹಾಗೂ ನಾಯಕ ನಿಹಾಲ್ ಉಳ್ಳಾಲ್ (18) ಉತ್ತಮ ಆರಂಭ ಒದಗಿಸಿದರು. ಧ್ರುವ್ ಅವರನ್ನು ತಮ್ಮ ಬೌಲಿಂಗ್‌ನಲ್ಲಿ ಔಟ್ ಮಾಡಿದ ಶಶಿಕುಮಾರ್ ಕಾಂಬ್ಳೆ (20ಕ್ಕೆ 2), ನಿಹಾಲ್ ಅವರನ್ನು ಚುರುಕಿನ ಕ್ಷೇತ್ರರಕ್ಷಣೆ ಮೂಲಕ ರನ್‌ಔಟ್ ಮಾಡಿದರು. ಅಲ್ಲಿಂದ ರನ್ ವೇಗ ಕಡಿಮೆಯಾಯಿತು. ಶಿವಮೊಗ್ಗ ತಂಡವು 16ನೇ ಓವರ್‌ನಲ್ಲಿ 100ರ ಗಡಿ ದಾಟಿತು. ಬೌಲಿಂಗ್‌ನಲ್ಲಿ ಶಶಿ ಜೊತೆ ಪೃಥ್ವಿರಾಜ್ (22ಕ್ಕೆ 2) ಕಾಡಿದರು.

ತುಷಾರ್ ಸಿಂಗ್ (32; 25 ಎಸೆತ, 4x4), ಹಾರ್ದಿಕ್ ರಾಜ್ (23), ಡಿ.ಅವಿನಾಶ್ (16) ಹೊರತು ಶಿವಮೊಗ್ಗದ ಯಾರೊಬ್ಬರೂ ಎರಡಂಕಿ ರನ್ ಗಳಿಸಲಿಲ್ಲ. 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 133 ರನ್ ಗಳಿಸಿತು.

ಸ್ಮರಣ್ ಆಸರೆ: ಲವ್‌ನಿತ್ ಸಿಸೋಡಿಯಾ (7) ಹಾಗೂ ಪ್ರಜ್ವಲ್ ಪವನ್ (20) ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಗುಲ್ಬರ್ಗ ತಂಡಕ್ಕೆ ಸ್ಮರಣ್ ಆಸರೆ ಆದರು. ನಿಕಿನ್ ಜೋಸ್ ಜೊತೆಗೆ 3ನೇ ವಿಕೆಟ್‌ಗೆ 74 ರನ್‌ಗಳ (51 ಎಸೆತ) ಅದ್ಭುತ ಇನ್ನಿಂಗ್ಸ್ ಕಟ್ಟಿದ ಅವರು, ಸತತ ಎರಡನೇ ಅರ್ಧಶತಕ ದಾಖಲಿಸಿದರು. ತಾಳ್ಮೆಯಿಂದ ಆಡಿದ ಜೋಸ್ ವಿಕೆಟ್ ಬೀಳದಂತೆ ಗೋಡೆಯಾಗಿ ನಿಂತರು. ಗೆಲುವಿಗೆ 10 ರನ್ ಬಾಕಿ ಇದ್ದಾಗ ಅವರು ಕೌಶಿಕ್ ಬೌಲಿಂಗ್‌ಗೆ ಔಟಾದರೂ ಸ್ಮರಣ್ ತಂಡವನ್ನು ಗೆಲುವಿನ ದಡ ಸೇರಿಸಿದರು. ಶಿವಮೊಗ್ಗ ಆಡಿದ ಐದು ಪಂದ್ಯಗಳಲ್ಲಿ ಸತತ ನಾಲ್ಕನೇ ಸೋಲು ಕಂಡಿತು.

ಸಂಕ್ಷಿಪ್ತ ಸ್ಕೋರ್: ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 7ಕ್ಕೆ 133 ರನ್ (ತುಷಾರ್ ಸಿಂಗ್ 32 ಶಶಿಕುಮಾರ್ ಕಾಂಬ್ಳೆ 20ಕ್ಕೆ 2, ಪೃಥ್ವಿರಾಜ್ 22ಕ್ಕೆ 2)

ಗುಲ್ಬರ್ಗ ಮಿಸ್ಟಿಕ್ಸ್: 17 ಓವರ್‌ಗಳಲ್ಲಿ 3ಕ್ಕೆ 135 (ಆರ್.ಸ್ಮರಣ್ ಔಟಾಗದೆ 53, ನಿಕಿನ್ ಜೋಸ್ 40. ವಿ.ಕೌಶಿಕ್ 15ಕ್ಕೆ 1, ಹಾರ್ದಿಕ್ ರಾಜ್ 26ಕ್ಕೆ 1)

ಪಂದ್ಯದ ಆಟಗಾರ: ಆರ್.ಸ್ಮರಣ್

ಇಂದಿನ ಪಂದ್ಯಗಳು:
- **ಗುಲ್ಬರ್ಗ ಮಿಸ್ಟಿಕ್ಸ್– ಮೈಸೂರು ವಾರಿಯರ್ಸ್, ಮಧ್ಯಾಹ್ನ 3.15**
- **ಹುಬ್ಬಳ್ಳಿ ಟೈಗರ್ಸ್– ಬೆಂಗಳೂರು ಬ್ಲಾಸ್ಟರ್ಸ್, ಸಂಜೆ 7.15**



ಶಿವಮೊಗ್ಗ ಲಯನ್ಸ್ ವಿರುದ್ಧ ಆಕರ್ಷಕ ಅರ್ಧಶತಕ ಸಿಡಿಸಿದ ಗುಲ್ಬರ್ಗ ಮಿಸ್ಟಿಕ್ಸ್‌ನ ಆರ್.ಸ್ಮರಣ್ ಅವರ ಬ್ಯಾಟಿಂಗ್ ವೈಖರಿ ಚಿತ್ರ: ಅನೂಪ್ ರಾಘ .ಟಿ.

ಕಾರಿಯಪ್ಪ ಸ್ಪಿನ್‌ಗೆ ನಲುಗಿದ ಡ್ರ್ಯಾಗನ್ಸ್

ಮೈಸೂರು: ನಾಯಕನ ಆಟವಾಡಿದ ದೇವದತ್ತ ಪಡಿಕ್ಕಲ್ (63; 45 ಎಸೆತ, 4x6, 6x2) ಹಾಗೂ ಕೆ.ಸಿ.ಕಾರಿಯಪ್ಪ (9ಕ್ಕೆ3) ಸ್ಪಿನ್ ಮೋಡಿ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ತಂಡವು 23 ರನ್‌ಗಳಿಂದ ಮಂಗಳೂರು ಡ್ರ್ಯಾಗನ್ಸ್ ಅನ್ನು ಮಣಿಸಿತು.

ಹುಬ್ಬಳ್ಳಿ ತಂಡ ನೀಡಿದ 153 ರನ್ ಗುರಿ ಬೆನ್ನಟ್ಟಿದ ಮಂಗಳೂರು ಡ್ರ್ಯಾಗನ್ಸ್, ಕಾರಿಯಪ್ಪ ಹಾಗೂ ಯಶ್‌ರಾಜ್ ಪೂಂಜ (29ಕ್ಕೆ3) ಬೌಲಿಂಗ್ ದಾಳಿ ಎದುರು 129ಕ್ಕೆ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 7ಕ್ಕೆ 152 (ದೇವದತ್ತ ಪಡಿಕ್ಕಲ್ 63, ಅಭಿನವ್ ಮನೋಹರ್ 36, ಕ್ರಾಂತಿಕುಮಾರ್ 40ಕ್ಕೆ3, ರೋಣಿತ್ ಮೋರೆ 18ಕ್ಕೆ2) **ಮಂಗಳೂರು ಡ್ರ್ಯಾಗನ್ಸ್:** 18.3 ಓವರ್‌ಗಳಲ್ಲಿ 129 (ಮೆಕ್ನೀಲ್ ನರೋನ್ಹಾ 35, ಕೆ.ಸಿ.ಕಾರಿಯಪ್ಪ 9ಕ್ಕೆ3, ಯಶ್‌ರಾಜ್ ಪೂಂಜ 29ಕ್ಕೆ3)

ಪಂದ್ಯದ ಆಟಗಾರ: ಕೆ.ಸಿ.ಕಾರಿಯಪ್ಪ

ಚೆನ್ನೈ: ಅಂತರ ರಾಜ್ಯ ಅಥ್ಲೆಟಿಕ್ಸ್ ಇಂದಿನಿಂದ


ಅನಿಮೇಶ್ ಕುಜೂರ್

ಚೆನ್ನೈ (ಪಿಟಿಐ): ಲಾಂಗ್‌ಜಂಪ್ ತಾರೆ ಮುರಳಿ ಶ್ರೀಶಂಕರ್, ಸ್ಪ್ರಿಂಟರ್ ಅನಿಮೇಶ್ ಕುಜೂರ್ ಮತ್ತು ಜಾವೆಲಿನ್ ಥ್ರೋಪಟು ಅನ್ನುರಾಣಿ ಅವರು ಬುಧವಾರ ಇಲ್ಲಿ ಆರಂಭವಾಗಲಿರುವ ರಾಷ್ಟ್ರೀಯ ಅಂತರ ರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಐದು ದಿನ ನಡೆಯುವ ಈ ಕೂಟವು ಮುಂದಿನ ತಿಂಗಳು ಟೋಕಿಯೊದಲ್ಲಿ ನಡೆಯುವ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಲು ಕೊನೆಯ ವೇದಿಕೆಯಾಗಿದೆ.

ಈ ಕೂಟದಲ್ಲಿ ಎರಡು ಬಾರಿ ಒಲಿಂಪಿಕ್ ಪದಕ ವಿಜೇತ ಜಾವೆಲಿನ್ ಥ್ರೋಪಟು ನೀರಜ್ ಚೋಪ್ರಾ, ಸ್ಟೀಪಲ್ ಚೇಸರ್‌ಗಳಾದ ಅವಿನಾಶ್ ಸಾಬ್ಳೆ ಮತ್ತು ಪಾರುಲ್ ಚೌಧರಿ, ಹರ್ಡಲ್ಸ್ ಓಟಗಾರ್ತಿ ಜ್ಯೋತಿ ಯರ್ರಾಜಿ ಮತ್ತು ದೂರ ಅಂತರದ ಓಟಗಾರ ಗುಲ್ವೀರ್ ಸಿಂಗ್ ಮುಂತಾದ ಖ್ಯಾತನಾಮ ಅಥ್ಲೀಟ್‌ಗಳು ಭಾಗವಹಿಸುತ್ತಿಲ್ಲ.

ಜಾವೆಲಿನ್ ಥ್ರೋ ಪಟುಗಳಾದ ಕಿಶೋರ್ ಜೇನಾ, ಸಚಿನ್ ಯಾದವ್, ರೋಹಿತ್ ಯಾದವ್, ಯಶ್ವೀರ್ ಸಿಂಗ್ ಸ್ಪರ್ಧಾ ಕಣದಲ್ಲಿದ್ದಾರೆ. ಪುರುಷರ ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರವೀಣ್ ಚಿತ್ರವೇಲ್, ಶಾಟ್‌ಪಟ್ ಅಥ್ಲೀಟ್ ತಜಿಂದರ್‌ಪಾಲ್ ಸಿಂಗ್ ತೂರ್ ಉತ್ತಮ ಪ್ರದರ್ಶನದ ಗುರಿ ಹೊಂದಿದ್ದಾರೆ.

ಮಹಿಳಾ ಚೆಸ್: ಅರುಷಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟವಾಡಿದ ಮಂಗಳೂರಿನ ಅರುಷಿ ಸೆವೆರಿನ್ ಹೆಲೆನ್ ಡಿಸಿಲ್ವ ಅವರು ನಗರದಲ್ಲಿ ಭಾನುವಾರ ಮುಕ್ತಾಯಗೊಂಡ ಫಿಡೆ ರೇಟೆಡ್ ರಾಜ್ಯ ಮಹಿಳಾ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಅವರು 9 ಸುತ್ತುಗಳಿಂದ 8 ಪಾಯಿಂಟ್ಸ್ ಸಂಗ್ರಹಿಸಿದರು.

ಮಲ್ಲೇಶ್ವರದ ಎಂಎಲ್ಎ ಕಾಲೇಜಿನಲ್ಲಿ ನಡೆದ ಮೂರು ದಿನಗಳ ಈ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರು ನಗರದ ಸಿದ್ಧಿ ರಾವ್ (7.5 ಅಂಕ) ಮತ್ತು ಆದ್ಯಾ ಗೌಡ (7) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು. ಉತ್ತರ ಕನ್ನಡದ ಅಕ್ಷಯಾ ಎಸ್. ಮತ್ತು ಬೆಂಗಳೂರಿನ ಕೃಪಾ ಎಸ್.ಉಕ್ಕಲಿ (ತಲಾ 7) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನಗಳನ್ನು ಗಳಿಸಿದರು.

ಅಗ್ರಸ್ಥಾನ ಪಡೆದ ಅರುಷಿ ಟ್ರೋಫಿ ಮತ್ತು ₹8,000 ಬಹುಮಾನ ಪಡೆದರು. ಎರಡು, ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದ ಆಟಗಾರ್ತಿಯರು ಕ್ರಮವಾಗಿ ₹7,000, ₹6,000 ಮತ್ತು ₹5,000 ನಗದು ಬಹುಮಾನ ತಮ್ಮದಾಗಿಸಿಕೊಂಡರು.


ಅರುಷಿ ಡಿಸಿಲ್ವ

ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ವತಿಯಿಂದ ನಡೆದ ಈ ಟೂರ್ನಿಯನ್ನು ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿತ್ತು. ದಾಖಲೆಯ 178 ಮಂದಿ ಕಣದಲ್ಲಿದ್ದು, ಮೊದಲ ಬಾರಿ ಚಾಂಪಿಯನ್‌ಷಿಪ್ ಫಿಡೆ ರೇಟೆಡ್ ಆಗಿ ನಡೆಯಿತು.

ಏಷ್ಯಾ ಕಪ್: ಪಾಕ್, ಒಮನ್ ಬದಲು ಬಾಂಗ್ಲಾ, ಕಜಕಸ್ತಾನ



ರಾಜಗೀರ್ (ಪಿಟಿಐ): ಪುರುಷರ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಪಾಕಿಸ್ತಾನ ಮತ್ತು ಒಮನ್ ತಂಡಗಳ ಸ್ಥಾನದಲ್ಲಿ ಬಾಂಗ್ಲಾದೇಶ ಮತ್ತು ಕಜಕಸ್ತಾನ ತಂಡಗಳು ಆಡಲಿವೆ. ಮಂಗಳವಾರ ವೇಳಾಪಟ್ಟಿ ಬಿಡುಗಡೆ ಮಾಡಲಾಗಿದ್ದು, ಟೂರ್ನಿಯು ನಿಗದಿಯಂತೆ ಇದೇ 29 ರಿಂದ ಸೆಪ್ಟೆಂಬರ್ 7ರತನಕ ನಡೆಯಲಿದೆ.

ಆತಿಥೇಯ ಭಾರತವು, ಚೀನಾ, ಜಪಾನ್ ಮತ್ತು ಕಜಕಸ್ತಾನ ತಂಡಗಳೊಂದಿಗೆ 'ಎ' ಗುಂಪಿನಲ್ಲಿದೆ. ಹಾಲಿ ಚಾಂಪಿಯನ್ ಕೊರಿಯಾ, ಮಲೇಷ್ಯಾ, ಚೀನಾ ತೈಪಿ ಮತ್ತು ಬಾಂಗ್ಲಾದೇಶ ತಂಡಗಳು 'ಬಿ' ಗುಂಪಿನಲ್ಲಿವೆ.

ಎಂಟು ತಂಡಗಳ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ತಂಡವು, ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್‌ನಲ್ಲಿ ನಡೆಯಲಿರುವ 2026ರ ವಿಶ್ವಕಪ್‌ನಲ್ಲಿ ಆಡುವ ಅರ್ಹತೆ ಸಂಪಾದಿಸಲಿದೆ. ಗುಂಪು ಹಂತದ ಪಂದ್ಯಗಳ ನಂತರ ಸೆ. 3 ರಿಂದ 6ರವರೆಗೆ ಸೂಪರ್ ಫೋರ್ ಹಂತದ ಪಂದ್ಯಗಳು ನಡೆಯಲಿವೆ. ಇದರಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಫೈನಲ್ ಆಡಲಿವೆ. ಫೈನಲ್ ಪಂದ್ಯ ಸೆ. 7ರಂದು ನಿಗದಿಯಾಗಿದೆ. ಸೂಪರ್ ಫೋರ್‌ನಲ್ಲಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆಯುವ ತಂಡಗಳ ನಡುವಣ ಪಂದ್ಯ ಮತ್ತು 5 ಮತ್ತು 6ನೇ ಸ್ಥಾನಕ್ಕೆ ಕ್ಲಾಸಿಫಿಕೇಷನ್ ಪಂದ್ಯವೂ ಅಂದೇ ನಡೆಯಲಿದೆ.

ಪಾಕ್ ತಂಡದ ಆಟಗಾರರಿಗೆ ವೀಸಾ ನೀಡುವುದಾಗಿ ಭಾರತ ಸರ್ಕಾರ ತಿಳಿಸಿತ್ತು. ಆದರೆ ಪಾಕಿಸ್ತಾನ ಹಾಕಿ ಫೆಡರೇಷನ್, ತಂಡದ ಭದ್ರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿ ಭಾರತದಲ್ಲಿ ಆಡಲು ನಿರಾಕರಿಸಿತು. ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಯ ನಂತರ ಪಾಕ್ ತಂಡದ ಪಾಲ್ಗೊಳ್ಳುವಿಕೆ ಅನಿಶ್ಚಿತವಾಗುಳಿದಿತ್ತು.

ಕೊರಿಯಾ ಈ ಟೂರ್ನಿಯ ಯಶಸ್ವಿ ತಂಡ ಎನಿಸಿದ್ದು, ಐದು ಬಾರಿ ಚಾಂಪಿಯನ್ ಆಗಿದೆ. ಭಾರತ ಮತ್ತು ಪಾಕಿಸ್ತಾನ ತಂಡಗಳು ತಲಾ ಮೂರು ಬಾರಿ ಪ್ರಶಸ್ತಿ ಗೆದ್ದಿವೆ.

ಆಟಗಾರರ ಅನುಭವಕ್ಕಿಂತ ಪ್ರತಿಭೆಗೆ ಒತ್ತು: ರಮೇಶ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹೊಸ ಕೋಚ್, ಹೊಸ ಆಟಗಾರರು ಹಾಗೂ ಹೊಸ ಹುರುಪಿನೊಂದಿಗೆ ಬೆಂಗಳೂರು ಬುಲ್ಸ್ ತಂಡವು 12ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್‌ನಲ್ಲಿ ಕಣಕ್ಕಿಳಿಯಲು ಸಜ್ಜಾಗಿದೆ. 2018ರ ಚಾಂಪಿಯನ್ ತಂಡ ಇದೇ 29ರಂದು ಪುಣೇರಿ ಪಲ್ಟನ್ ವಿರುದ್ಧ ಅಭಿಯಾನ ಆರಂಭಿಸಲಿದೆ.

2019ರ ಚಾಂಪಿಯನ್ ಬೆಂಗಾಲ್ ವಾರಿಯರ್ಸ್ ಮತ್ತು 2023ರ ಚಾಂಪಿಯನ್ ಪುಣೇರಿ ಪಲ್ಟನ್ ತಂಡಗಳ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕನ್ನಡಿಗ ಬಿ.ಸಿ. ರಮೇಶ್ ಆರು ವರ್ಷಗಳ ಬಳಿಕ ತಮ್ಮ ತವರು ಬೆಂಗಳೂರು ತಂಡಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ. ಅನುಭವಿ ಕೋಚ್ ರಮೇಶ್ ಗರಡಿಯಲ್ಲಿ ಪಳಗುತ್ತಿರುವ ಬುಲ್ಸ್ ತಂಡವು ಎರಡನೇ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದೆ.

ಬುಲ್ಸ್ ತಂಡದ ಸಂಯೋಜನೆ, ತಂತ್ರಗಾರಿಕೆ, ಆಟಗಾರರ ಸಿದ್ಧತೆ ಕುರಿತು ಮಂಗಳವಾರ 'ಜಿಯೊ ಸ್ಟಾರ್' ವರ್ಚುವಲ್ ಮಾಧ್ಯಮ ಸಂವಾದದಲ್ಲಿ ರಮೇಶ್ ಮುಕ್ತವಾಗಿ ಮಾತನಾಡಿದರು.

'ಕಳೆದ ಎರಡು ಆವೃತ್ತಿಗಳಲ್ಲಿ ಬೆಂಗಳೂರು ತಂಡದ ಪ್ರದರ್ಶನ ನಿರೀಕ್ಷಿತ ಮಟ್ಟದಲ್ಲಿರಲಿಲ್ಲ. ಹೀಗಾಗಿ, ಅನುಭವಿ ಆಟಗಾರರನ್ನು ಕೈಬಿಟ್ಟು, ಹೊಸ ಪ್ರತಿಭೆಗಳ ಮೇಲೆ ವಿಶ್ವಾಸವಿಟ್ಟು ತಂಡವನ್ನು ಸಂಯೋಜಿಸಲಾಗಿದೆ. 23 ವರ್ಷ ಮೀರಿದವರು ನಮ್ಮ ತಂಡದಲ್ಲಿಲ್ಲ. ಪ್ರತಿ ಆವೃತ್ತಿಯಲ್ಲಿ ಅನುಭವಿಗಳಿಗಿಂತ ಹೊಸ ಆಟಗಾರರೇ ಮಿಂಚುತ್ತಿದ್ದಾರೆ. ಹೀಗಾಗಿ, ಬಿಸಿರಕ್ತದ ತರುಣರು ನನ್ನ ನಿರೀಕ್ಷೆ ಹುಸಿ ಮಾಡುವುದಿಲ್ಲ' ಎಂದು ರಮೇಶ್ ವಿಶ್ವಾಸ ವ್ಯಕ್ತಪಡಿಸಿದರು.

'ಉಳಿದ ವಿಭಾಗಕ್ಕೆ ಹೋಲಿಸಿದರೆ ಬುಲ್ಸ್ ತಂಡದ ಟ್ಯಾಕಲ್ ವಿಭಾಗ ಬಲಿಷ್ಠವಾಗಿದೆ. ಅಂಕುಶ್ ರಾಥಿ, ಲಕ್ಕಿಕುಮಾರ್, ಸಂಜಯ್ ಮುಂತಾದ ಯಶಸ್ವಿ ಡಿಫೆಂಡರ್‌ಗಳು ಪಂದ್ಯದ ಸ್ಥಿತಿಗತಿಯನ್ನೇ ಬದಲಾಯಿಸುವ ತಾಕತ್ತು ಹೊಂದಿದ್ದಾರೆ. ರೈಡಿಂಗ್ ವಿಭಾಗದಲ್ಲಿ ಅನುಭವಿಗಳ ಕೊರತೆ ಇರುವುದು ನಿಜ. ಆದರೆ, ಉದಯೋನ್ಮುಖ ರೈಡರ್‌ಗಳಾದ ಆಕಾಶ್ ಶಿಂದೆ, ಆಶಿಶ್ ಮಲಿಕ್, ಗಣೇಶ್, ಪಂಕಜ್ ಮೇಲೆ ಭರವಸೆಯಿದೆ. ಕಾರ್ನರ್ ಮತ್ತು ಕವರ್ಸ್‌ನಲ್ಲೂ ನಮ್ಮ ತಂಡ ಪ್ರಬಲವಾಗಿದೆ' ಎಂದರು.

'ಲೀಗ್ ಆರಂಭವಾದ ಬಳಿಕ ಬಹುತೇಕ ಕೋಚ್‌ಗಳು ಆಟಗಾರರಿಗೆ ವಿರಾಮ ನೀಡದೆ ತರಬೇತಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಇದರಿಂದಲೇ ಆಟಗಾರರು ಗಾಯಾಳಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದರೆ, ನಮ್ಮ ತಂಡದಲ್ಲಿ ಕೌಶಲ ತರಬೇತಿಗೆ ಒತ್ತು ನೀಡುತ್ತೇವೆ. ಆಟಗಾರನಿಗೆ ಫಿಟ್‌ನೆಸ್ ಜೊತೆಗೆ ಏಕಾಗ್ರತೆ, ವಿಶ್ರಾಂತಿಯೂ ಬೇಕಾಗುತ್ತದೆ. ದೈಹಿಕ ಶ್ರಮ ಬಯಸುವ ಈ ಕ್ರೀಡೆಯಲ್ಲಿ ಆಟಗಾರರು ಗಾಯಗೊಳ್ಳುವುದು ಸಹಜ. ಆದರೆ, ಅದು ಕನಿಷ್ಠ ಪ್ರಮಾಣದಲ್ಲಿ ಇರಬೇಕೆಂಬುದು ನಮ್ಮ ಯೋಚನೆ' ಎಂದು ಹೇಳಿದರು.

ಚೀನಾದಲ್ಲಿ ಬಾತುಕೋಳಿ ಬಿಟ್ಟು ಹಂದಿ ಮಾಂಸ ಬಳಕೆ ಹೆಚ್ಚಳ

'ಶಟಲ್ ಹಾರಾಟ'ಕ್ಕೆ ಪುಕ್ಕಗಳ ಕೊರತೆ!

ನವದೆಹಲಿ (ಪಿಟಿಐ): ಚೀನಾ ದೇಶದಲ್ಲಿ ಕುಕ್ಕುಟೋದ್ಯಮ ನೆಲಕಚ್ಚಿದೆ. ಅದರ ಪರಿಣಾಮ ಬ್ಯಾಡ್ಮಿಂಟನ್ ಕ್ರೀಡೆಯ ಮೇಲಾಗುತ್ತಿದೆ!

ಹೌದು; ಚೀನಾದಲ್ಲಿ ಹಂದಿ ಮಾಂಸ ಖಾದ್ಯಗಳ ಸೇವನೆ ಹೆಚ್ಚುತ್ತಿದ್ದು, ಬಾತುಕೋಳಿಗಳ ಖಾದ್ಯಗಳ ಬೇಡಿಕೆ ಕುಸಿದಿದೆ. ಇದರಿಂದಾಗಿ ಬಾತುಕೋಳಿಗಳ ಪುಕ್ಕಗಳ ಲಭ್ಯತೆ ಗಣನೀಯವಾಗಿ ಕುಸಿದಿದ್ದು, ಬ್ಯಾಡ್ಮಿಂಟನ್ ಆಟದಲ್ಲಿ ಬಳಸಲಾಗುವ ಶಟಲ್ ಕಾಕ್‌ಗಳ ತಯಾರಿಕೆಗೆ ಹಿನ್ನಡೆಯಾಗುತ್ತಿದೆ ಎಂದು ಫ್ರೆಂಚ್ ಸುದ್ದಿ ಪತ್ರಿಕೆ 'ಲಾ ಎಕ್ವಿಪ್' ಈಚೆಗೆ ವರದಿ ಮಾಡಿದೆ.

ಬಾತುಕೋಳಿ ಅಥವಾ ಇನ್ನಿತರ ಪ್ರಾಣಿ, ಪಕ್ಷಿಗಳಿಂದ ಶಟಲ್ ತಯಾರಿಕೆಯ ಕಚ್ಚಾವಸ್ತುಗಳ ಮೇಲೆ ಅವಲಂಬಿತರಾಗುವುದನ್ನು ಬಿಡುವ ಕಾಲ ಇದು. ಅದಕ್ಕಾಗಿ ಈಗ ಪರ್ಯಾಯ ಮಾರ್ಗ ಹುಡುಕಬೇಕು ಎಂದು ಭಾರತದ ಶಟಲ್ ತಯಾರಕರು ಅಭಿಪ್ರಾಯಪಟ್ಟಿದ್ದಾರೆ.

'ಈಗ ಅಥವಾ ಮುಂದಿನ ದಿನಗಳಲ್ಲಿ ಪುಕ್ಕಗಳ ಬಳಕೆಯನ್ನು ಬಿಟ್ಟು ಬೇರೆ ಮಾರ್ಗದತ್ತ ನಾವು ಸಾಗಬೇಕಿದೆ. ನಮ್ಮ ಕ್ರೀಡೆಯು ಅಗಾಧವಾಗಿ ಬೆಳೆದಿದೆ. ಚೀನಾ, ಇಂಡೊನೇಷ್ಯಾ ಮತ್ತು ಭಾರತ ದೇಶಗಳು ಶಟಲ್‌ಗಳ ಬಳಕೆಯಲ್ಲಿ ಸಿಂಹಪಾಲು ಹೊಂದಿವೆ' ಎಂದು ಭಾರತದ ರಾಷ್ಟ್ರೀಯ ಮುಖ್ಯ ಕೋಚ್ ಪುಲ್ಲೇಲ ಗೋಪಿಚಂದ್ ಅಭಿಪ್ರಾಯಪಟ್ಟಿದ್ದಾರೆ.

'ಶಟಲ್‌ಗಳ ಕೊರತೆಗೆ ಕೇವಲ ಬಾತುಕೋಳಿ ಅಥವಾ ಹೆಬ್ಬಾತುಗಳ ಮಾಂಸದ ಬಳಕೆ ಕುಂಠಿತವಾಗಿರುವುದಷ್ಟೇ ಕಾರಣವಲ್ಲ. ಬ್ಯಾಡ್ಮಿಂಟನ್ ಆಡುವವರ ಸಂಖ್ಯೆಯಲ್ಲಿಯೂ ಹೆಚ್ಚಳವಾಗಿರುವುದು ಒಂದು ಕಾರಣ. ಇದು ಒಳ್ಳೆಯದೇ. ಆದರೆ ಪ್ರಯೋಗಾಲಯದಲ್ಲಿ ನಿರ್ಮಿತ ಅಥವಾ ಸಿಂಥೆಟಿಕ್ ವಸ್ತು ಬಳಸಿ ಶಟಲ್ ಬಳಸುವ ಸಾಧ್ಯತೆಗಳನ್ನು ಪರಿಶೀಲಿಸಬೇಕಿದೆ. ಮುಂದಿನ ಐದು ವರ್ಷಗಳಲ್ಲಿ ಈ ಸಮಸ್ಯೆಗೆ ಪರಿಹಾರ ಸಿಗಲಿದೆ' ಎಂದೂ ಗೋಪಿಚಂದ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹೈದರಾಬಾದಿನಲ್ಲಿರುವ ಗೋಪಿಚಂದ್ ಅಕಾಡೆಮಿಯಲ್ಲಿರುವ ಶಟಲ್‌ಗಳ ದಾಸ್ತಾನು ಮುಂದಿನ ಎರಡು ವಾರಗಳಿಗೆ ಸಾಕಾಗಲಿದೆ ಎಂದು ವರದಿಯಾಗಿತ್ತು.

ಈ ಕುರಿತು ಪ್ರತಿಕ್ರಿಯಿಸಿದ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಕಾರ್ಯದರ್ಶಿ ಸಂಜಯ್ ಮಿಶ್ರಾ, 'ರಾಷ್ಟ್ರೀಯ ಶಿಬಿರಗಳಿಗೆ ಶಟಲ್‌ಗಳ ಪೂರೈಕೆಯನ್ನು ಈ ವಾರ ಸಮರ್ಪಕವಾಗಿ ನಿರ್ವಹಿಸಬಹುದು. ಆದರೆ ದೀರ್ಘ ಅವಧಿಯಲ್ಲಿ ಇದು ಸವಾಲಿನದ್ದಾಗಲಿದೆ' ಎಂದರು.

'ಯಾನೆಕ್ಸ್ ಸಂಸ್ಥೆಯು ಅ. 20ರ ನಂತರ ದಾಸ್ತಾನು ಕಳಿಸಲಿದೆ. ಶಟಲ್‌ಗಳ ಕೊರತೆಯಿಂದ ತರಬೇತಿ ಶಿಬಿರ ಅಥವಾ ಯಾವುದೇ ಟೂರ್ನಿಗಳ ಮೇಲೆ ಪರಿಣಾಮ ಬೀರಿಲ್ಲ' ಎಂದು ಅವರು ಹೇಳಿದರು.

'ಈ ಸಮಸ್ಯೆಯ ತ್ವರಿತ ಪರಿಹಾರಕ್ಕಾಗಿ ನಾವು ಕಾರ್ಯನಿರ್ವಹಿಸುತ್ತಿದ್ದೇವೆ. ಒಂದೆರಡು ದಿನಗಳಲ್ಲಿ ಹೈದರಾಬಾದಿಗೆ ಶಟಲ್‌ಗಳನ್ನು ಕಳಿಸುತ್ತಿದ್ದೇವೆ' ಎಂದು ಯಾನೆಕ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಕರಣ್ ಧಾರ್ ತಿಳಿಸಿದ್ದಾರೆ.

'ಕಚ್ಚಾ ಸಾಮಗ್ರಿಗಳ ಕೊರತೆಯಿಂದಾಗಿ ಶಟಲ್ ಉತ್ಪಾದನೆ ಕುಂಠಿತವಾಗಿದೆ. ಪುಕ್ಕಗಳ ಸರಬರಾಜು ಸಮರ್ಪಕವಾಗಿಲ್ಲ. ಅದರಿಂದಾಗಿ ಕಡಿಮೆ ಪ್ರಮಾಣದಲ್ಲಿ ತಯಾರಾಗುತ್ತಿರುವ ಉತ್ತಮ ಗುಣಮಟ್ಟದ ಶಟಲ್‌ಗಳು ದುಬಾರಿಯಾಗಿವೆ' ಎಂದೂ ಅವರು ಹೇಳಿದರು.



ಡುರಾಂಡ್ ಕಪ್: ಫೈನಲ್‌ಗೆ ನಾರ್ತ್‌ಈಸ್ಟ್

ಶಿಲ್ಲಾಂಗ್ (ಪಿಟಿಐ): ಹಾಲಿ ಚಾಂಪಿಯನ್ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವು 134ನೇ ಆವೃತ್ತಿಯ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಸತತ ಎರಡನೇ ಬಾರಿ ಫೈನಲ್‌ಗೆ ಲಗ್ಗೆ ಇಟ್ಟಿತು.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮೊದಲ ಸೆಮಿಫೈನಲ್‌ನಲ್ಲಿ ನಾರ್ತ್‌ಈಸ್ಟ್ ತಂಡವು 1–0 ಗೋಲಿನಿಂದ ಆತಿಥೇಯ ಶಿಲ್ಲಾಂಗ್ ಲಾಜೊಂಗ್ ಎಫ್‌ಸಿ ತಂಡವನ್ನು ಸೋಲಿಸಿತು. ಕಳೆದ ಆವೃತ್ತಿದಲ್ಲೂ ನಾರ್ತ್‌ಈಸ್ಟ್ ತಂಡವು ಇದೇ ತಂಡವನ್ನು 3–0ಯಿಂದ ಮಣಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿತ್ತು.

ಪಂದ್ಯದ 36ನೇ ನಿಮಿಷ ದಲ್ಲಿ ರೆಡೀಮ್ ಟ್ಲಾಂಗ್ ಅವರು ನಾರ್ತ್‌ಈಸ್ಟ್ ಪರ ಗೆಲುವಿನ ಗೋಲು ದಾಖಲಿಸಿದರು.

ಈಸ್ಟ್ ಬೆಂಗಾಲ್‌ಗೆ ಡೈಮಂಡ್ ಸವಾಲು: 16 ಬಾರಿಯ ಚಾಂಪಿಯನ್ ಈಸ್ಟ್ ಬೆಂಗಾಲ್ ತಂಡ ಬುಧವಾರ ಎರಡನೇ ಸೆಮಿಫೈನಲ್‌ನಲ್ಲಿ ಡೈಮಂಡ್ ಹಾರ್ಬರ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಕೋಲ್ಕತ್ತದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ವಿಜೇತ ತಂಡವು ಶನಿವಾರ (ಆ.23) ಇದೇ ತಾಣದಲ್ಲಿ ನಡೆಯುವ ಫೈನಲ್‌ನಲ್ಲಿ ನಾರ್ತ್‌ಈಸ್ಟ್ ತಂಡವನ್ನು ಎದುರಿಸಲಿದೆ.


ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ (ಬಿಳಿ) ಮತ್ತು ಶಿಲ್ಲಾಂಗ್ ಲಾಜೊಂಗ್ ಎಫ್‌ಸಿ ತಂಡದ ಆಟಗಾರರ ಸೆಣಸಾಟ

ಅಮೆರಿಕ ಓಪನ್: ಮಿಶ್ರ ಡಬಲ್ಸ್‌ನಿಂದ ಹಿಂದೆಸರಿದ ಸಿನ್ನರ್

ನ್ಯೂಯಾರ್ಕ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಮತ್ತು ಅವರ ಡಬಲ್ಸ್ ಜೊತೆಗಾತಿ ಕ್ಯಾತೆರಿನಾ ಸಿನಿಯಾಕೊವಾ ಅವರು ಅಮೆರಿಕ ಓಪನ್ ಮಿಶ್ರ ಡಬಲ್ಸ್‌ನಿಂದ ಹಿಂದೆಸರಿದಿದ್ದಾರೆ ಎಂದು ಆಯೋಜಕರು ಮಂಗಳವಾರ ದೃಢಪಡಿಸಿದ್ದಾರೆ.

ಸಿನ್ನರ್ ಅವರು ಸೋಮವಾರ ನಡೆದ ಸಿನ್ಸಿನಾಟಿ ಓಪನ್ ಫೈನಲ್‌ನಲ್ಲಿ ಕಾರ್ಲೋಸ್ ಅಲ್ಕರಾಜ್ ವಿರುದ್ಧ ಅನಾರೋಗ್ಯದ ಕಾರಣ ಮೊದಲ ಸೆಟ್‌ನ ಅರ್ಧದಲ್ಲೇ (0–5ರಲ್ಲಿದ್ದಾಗ) ಹಿಂದೆಸರಿದಿದ್ದರು.

ಮಿಶ್ರ ಡಬಲ್ಸ್ ಮಂಗಳವಾರ ಆರಂಭವಾಗಿದ್ದು, 16 ತಂಡಗಳಷ್ಟೇ ಭಾಗವಹಿಸುತ್ತಿವೆ. ಸಿಂಗಲ್ಸ್ ರ್‍ಯಾಂಕಿಂಗ್ ಆಧಾರದಲ್ಲಿ ಎಂಟು ಜೋಡಿಗೆ ನೇರ ಪ್ರವೇಶ ನೀಡಲಾಗಿದ್ದು, ಉಳಿದ ಎಂಟು ಜೋಡಿಗೆ ವೈಲ್ಡ್ ಕಾರ್ಡ್ ನೀಡಲಾಗಿದೆ.